
ಸೆಪ್ಟೆಂಬರ್ 1999 ರೂ. 10


ಬಿಸಿಲ

ಒನಾಕು



ಕಣ್ಮರೆಯಾದ ಕೆನಡಿ

ಅಂತೂ ಇಂತೂ ಕಾಂಗ್ರೆಸ್‌ಗೆ ಕುರ್ಚಿ ಇಲ್ಲ
-ರಾಮು



ರಜನೀಶ್ ಕಥೆಗಳು

ನಿಮಗೆ ಗೊತ್ತೇ ಈ ಸೋನಿಯಾ?
-ಸುಹಾಸ

ಕ್ಷಮಿಸಿ, ಸ್ವಲ್ಪ ಪೆನ್ ಕೊಡ್ತೀರಾ?
-ಎಚ್. ಡುಂಡಿರಾಜ್

ಸುಕ್ಕು ನಿವಾರಕ ಕ್ರೀಂ ಉಪಯುಕ್ತವೆ?
-ಡಾ|| ಆರತಿ ವೆಂಕಟೇಶ್



ಕ್ಕ ಹುಡುಗಿಯ ದೊಡ್ಡ ಸಾಧನೆ

ಸತ್ತವರಿಗೆ ಸ್ಮಶಾನವಿಲ್ಲ - ಬದುಕಿದವರಿಗೆ ಆಸ್ಪತ್ರೆ ಇಲ್ಲ
-ಪ್ರಕಾಶ ಬಾಳಕ್ಕನವರ


ಮುಳುಗಡೆಯ ಹಾದಿಯಲ್ಲಿ ನನ್ನ ಬಾಲ್ಯದ ನೆನಪು
-ರೇಖಾ ಕಾಖಂಡಕಿ

ಅಪರಾಧಿಗಳ ಹೊಸ ಸಂಗಾತಿ 'ಕಂಪ್ಯೂಟರ್'
-ಮನೋಜ್



ಬಾಗಲಕೋಟೆ

ಸತ್ತವರಿಗೆ ಸ್ಮಶಾನವಿಲ್ಲ
ಬದುಕಿದವರಿಗೆ ಆಸ್ಪತ್ರೆಯಿಲ್ಲ



ದೀಪಾವಳಿ ಸ್ಪರ್ಧೆ
ರೂ. 15000
ಬಹುಮಾನ



ಬದುಕು

ದೀಪಾವಳಿ ವಿಶೇಷಾಂಕ

1999

BADUKU DEEPAWALI SPECIAL ISSUE 1999



ಸಹಸ್ರಮಾನದ ಕೊನೆಯ

ದೀಪಾವಳಿ

ಚಿರಸ್ಮರಣೀಯ ಆಗಿ
ನಿಮ್ಮೆಲ್ಲರ ಮನಸಲ್ಲಿ
ಉಳಿಯುವಂತೆ
ರೂಪಿಸಲಾಗಿದೆ ಈ ಸಂಚಿಕೆ.

ಜೊತೆಗೆ
ನೀವೆಲ್ಲ ಪಾಲ್ಗೊಳ್ಳಬಹುದಾದ
ವಿವಿದ ಸ್ಪರ್ಧೆಗಳು.

ವಿವರ ಇದೇ ಸಂಚಿಕೆಯ 25ನೇ ಪುಟದಲ್ಲಿ

ಬದುಕು

ಸೆಪ್ಟೆಂಬರ್ 1999 ಸಂಪುಟ 3 ಸಂಚಿಕೆ 3

- ಜಗತ್ತು ಬುದ್ಧಿವಂತನ ಮರಣಕ್ಕಾಗಿ ಮತ್ತು ಅಜ್ಞಾನಿಯ ಜೀವನಕ್ಕಾಗಿ ಕಣ್ಣೀರಿಡುತ್ತದೆ.

ಪ್ಲೇಟೋ

- ಬುದ್ಧಿಗೆ ಮೇರೆ ಇರುತ್ತದೆ. ಬುದ್ಧಿ ಹೀನತೆಗೆ ಮೇರೆಯೇ ಇರುವುದಿಲ್ಲ.

ಎಮರ್ಸನ್

- ಯಾರಿಗೂ ಬುದ್ಧಿ ಹೇಳಬೇಡಿರಿ. ಏಕೆಂದರೆ ಬುದ್ಧಿ ಹೀನನು ಅದಕ್ಕೆ ಕಿವಿಗೊಡುವುದಿಲ್ಲ. ಬುದ್ಧಿವಂತನಿಗೆ ಅದರ ಅಗತ್ಯವಿಲ್ಲ.

ಬರ್ನಾರ್ಡ್‌ಷಾ

- ಲೋಕವು ಅವನನ್ನು ಬಿಡುವುದಕ್ಕೆ ಮುಂಚೆಯೇ, ಲೋಕವನ್ನು ಬಿಟ್ಟು ಬಿಡುವವನೇ ಬುದ್ಧಿವಂತನು.

ಶಫೀಕ್‌ಬಲ್‌ಕಿ

- ನಿಮ್ಮ ಬುದ್ಧಿಯೇ ನಿಮ್ಮ ಗುರು.

ಶೇಕ್ಸ್‌ಪಿಯರ್

- ಬುದ್ಧಿವಂತನು ತನಗೆ ಏನೂ ಗೊತ್ತಿಲ್ಲವೆನ್ನುತ್ತಾನೆ. ಮೂರ್ಖನು ತನಗೆ ಎಲ್ಲವೂ ಗೊತ್ತಿದೆ ಎನ್ನುತ್ತಾನೆ.

ಉಸ್ಮಾನ್ ಗನೀ

- ಬುದ್ಧಿ ಪರಿಪೂರ್ಣವಾದಾಗ ಮಾತು ಕಡಿಮೆಯಾಗುತ್ತದೆ.

ಅಲೀ

- ಬುದ್ಧಿವಂತನು ಮೊದಲು ಮನಸ್ಸಿನೊಡನೆ ಕೇಳುತ್ತಾನೆ. ನಂತರ ಬಾಯಿಂದ ಹೇಳುತ್ತಾನೆ.

ಸಂಗ್ರಹ : **ಸಂಗಮೇಶ ನಾ. ಪೊಲೇಶಿ**

ಸಂಪಾದಕ
ಚಂದ್ರಕಾಂತ ವಡ್ಡು
ಕಾರ್ಯ ನಿರ್ವಾಹಕ ಸಂಪಾದಕ
ಎಂ.ಎಲ್. ದೇಶಿಕರ್
ಸಹಕಾರ
ಲಿಂಗರಾಜು
ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager:9622 738638 Mobile:98440 87433 Editor : Chandrakanta Vaddu

ವ್ಯತ್ಯಾಸ

ಕಡಲು ರಾತ್ರಿ ಇಡೀ ಮೊರೆಯುತ್ತದೆ. ಬೆಳಗಾಗುವಾಗ ಮೊರೆತ ನಿಲ್ಲುತ್ತದೆ. ಅಲೆಗಳು ರಾತ್ರಿ ದಂಡೆಗೆ ಏನೆಲ್ಲ ತಂದು ಬಿಸುಡುತ್ತವೆ. ಏಡಿ ಮುಂತಾದವು ನಡೆದು ಪುನಃ ನೀರು ಸೇರುತ್ತವೆ. ನಕ್ಷತ್ರ ಮೀನು ಹಾಗಲ್ಲ. ದಂಡೆಗೆ ಬಿದ್ದ ಮೇಲೆ ಒದ್ದಾಡುತ್ತದೆ. ಸೂರ್ಯನ ಕಿರಣ ಪ್ರಖರವಾದಂತೆ ಅಸು ನೀಗುತ್ತವೆ. ಹಾಗೆ ದಂಡೆಗೆ ಅಸಂಖ್ಯಾತ ನಕ್ಷತ್ರ ಮೀನು ಬಂದು ಬೀಳುತ್ತವೆ.

ಆತ ಸಾಮಾನ್ಯ. ಬೆಳಿಗ್ಗೆ ಕಡಲ ದಂಡೆಯಲ್ಲಿ ವಾಕಿಂಗ್ ಬರುತ್ತಿದ್ದ. ಸಮುದ್ರದ ಚೆಲುವು, ಸೂರ್ಯನ ಮೊದಲ ಕಿರಣದ ಬಿಸುಪು ಎಲ್ಲಕ್ಕೆ ಮೈ ಒಡ್ಡಿಕೊಂಡಂತೆ ಸುಖದಿಂದ ನಡೆಯುತ್ತಿದ್ದ. ಜೊತೆಗೆ, ದಂಡೆಗೆ ಬಿದ್ದ ನಕ್ಷತ್ರ ಮೀನು ಕಂಡರೆ ಬೆರಳಿಂದ ಹಗುರಾಗಿ ಎತ್ತಿ ಸಮುದ್ರದ ನೀರಿಗೆ ಚೆಲ್ಲುತ್ತಿದ್ದ. ಅದು ಬದುಕಿಕೊಳ್ಳುತ್ತಿತ್ತು. ಇದು ನಿತ್ಯದ ಪಾಡು.

ಇನ್ನೊಬ್ಬ; ಇವನ ಹಾಗೇ ವಾಕಿಂಗ್ ಬರುತ್ತಿದ್ದ. ದಿನಾ ಇವನು ಮಾಡುವ ಕೆಲಸ ನೋಡುತ್ತಾ ಇದ್ದ. ಅವನದು ಕಡು ಮೂರ್ಖತನ. ಸಮುದ್ರದ ದಂಡೆ ಎಂದರೆ ಸುಮ್ಮನೆಯೇ! ಸಾವಿರಾರು ಮೈಲು ಉದ್ದ. ಪ್ರತಿ ಬೆಳಿಗ್ಗೆ ಲಕ್ಷಾಂತರ ನಕ್ಷತ್ರ ಮೀನು ದಂಡೆಗೆ ಬೀಳುತ್ತವೆ. ಅವನ್ನೆಲ್ಲ ಎತ್ತಿ ಮತ್ತೆ ನೀರಿಗೆ ಹಾಕಲು ಮನುಷ್ಯ ಮಾತ್ರರಿಂದ ಸಾಧ್ಯವೇ! ಇವನೇನೋ ಕಣ್ಣಿಗೆ ಬಿದ್ದ ನಕ್ಷತ್ರ ಮೀನು ಎತ್ತಿ ನೀರಿಗೆ ಚೆಲ್ಲುತ್ತಾನೆ. ಇದರಿಂದ ಏನು ಬಂದ ಹಾಗಾಯಿತು? ಸಮುದ್ರದ ನೀರಲ್ಲಿ ಒಂದು ಬೊಗಸೆ ಕಮ್ಮಿ ಆದರೆ ನಷ್ಟವೇನು! ನಾಲ್ಕು ಜೀವ ಮರಳ ಮೇಲೆ ಬಿದ್ದು ಸತ್ತರೆ ಗಂಟು ಹೋಗುವುದೇನು? ಇವನು ಕೈಗೆ ಸಿಕ್ಕಿದ ನಾಲ್ಕು ನಕ್ಷತ್ರ ಮೀನು ಎತ್ತಿ ಮರಳಿ ಸಮುದ್ರಕ್ಕೆ ಚೆಲ್ಲಿದರೆ ಮಹಾ ವ್ಯತ್ಯಾಸ ಆಗಿಬಿಡುತ್ತದೆಯೇ? ಇದು ಈತನ ತರ್ಕ ಸರಣಿ.

ಒಂದು ದಿನ ತಡೆಯಲಾಗದೆ, ಎದುರಿಂದ ಬರುತ್ತಾ ಇದ್ದ ಸಾಮಾನ್ಯನನ್ನು ನೋಡಿದ. ತನ್ನ ತರ್ಕ ವಿವರಿಸಿದ. ಅವನಾದರೋ ಇವನೆಲ್ಲ ತರ್ಕ ಕೇಳಿಸಿಕೊಳ್ಳುತ್ತಲೇ, ಮರಳ ದಂಡೆಯ ಮೇಲೆ ಕಣ್ಣಿಟ್ಟು ನಡೆಯುತ್ತಾ ಹೋದ. ''ಇದರಿಂದ ಏನೋ ಭಾರಿ ವ್ಯತ್ಯಾಸ ಆಗಿಬಿಡುತ್ತಾ?'' ತರ್ಕಗಾರ ಪ್ರಶ್ನಿಸಿದ.

ಅಷ್ಟು ಹೊತ್ತಿಗೆ ದಂಡೆಯ ಮೇಲೆ ಬಿದ್ದ ನಕ್ಷತ್ರ ಮೀನೊಂದು ಕಾಣಿಸಿತು. ಅದನ್ನು ಹಗುರಾಗಿ ಬೆರಳ ತುದೀಲಿ ಎತ್ತಿ ಹಿಡಿದು ''ಇದರ ಮಟ್ಟಿಗೆ ಅದು ಭಾರೀ ವ್ಯತ್ಯಾಸಾನೇ'' ಎಂದು ಸಮುದ್ರದ ನೀರಿಗೆ ಚೆಲ್ಲಿ ಮುಂದೆ ನಡೆಯುತ್ತಾ ಹೋದ. ಅವನ ಕಣ್ಣು ಇನ್ನೊಂದು ನಕ್ಷತ್ರ ಮೀನಿಗಾಗಿ ಹುಡುಕುತ್ತಾ ಇದ್ದವು.

■ ಮೀರಾ ಎನ್.ವಿ.

ನಾನು ಸಾಲಿಗ್ರಾಮದಿಂದ ಕೊಕ್ಕಡ ಎಂಬ ಹಳ್ಳಿಗೆ ಹೊರಟಿದ್ದೆ. ಅಲ್ಲಿ ಹಿಂದಣ ದಿನ ಇಂದಿರಾ ಗಾಂಧಿ ಆಗಮನವಾಗಿತ್ತು. ಈ ಮಹಾಮಾಯೆ ಎಂಥವಳು ಎಂದು ನೋಡುವುದಕ್ಕೆ ಸಾವಿರಾರು ಜನ ಕಲೆತಿದ್ದರಂತೆ. ಆ ಸಭೆಯಲ್ಲಿ ನಮ್ಮ ಜಿಲ್ಲೆಯ ಒಬ್ಬ ಪ್ರಮುಖರು, ಮಂತ್ರಿ ಸ್ಥಾನದಲ್ಲಿದ್ದವರು, ಅಪ್ಪಣೆ ಕೊಡಿಸಿದರೆಂಬ ಒಂದು ಮಾತು ನನ್ನನ್ನು ಚಕಿತಗೊಳಿಸಿತು. ಅವರೆಂದರಂತೆ 'ಈ ಜನತಾ ಪಕ್ಷದವರಿಗೆ ಇಂದಿರಾಗಾಂಧಿಯ ಮೆಟ್ಟನ್ನು ಸಹ ಹೊರುವ ಯೋಗ್ಯತೆಯೂ ಇಲ್ಲ' ಎಂದು. ಅನಿವಾರ್ಯವಾಗಿ ನಾನು ಆ ಮಾತನ್ನು ಎತ್ತಿಕೊಂಡು ಸಭಿಕರ ಮುಂದೆ 'ತೀರ ನಿಜ ಆ ಮಾತನ್ನಾಡಿದವರಿಗೆ ಮಾತ್ರವೇ ಅಂಥ ಯೋಗ್ಯತೆ ಇರುವುದು. ಉಳಿದವರು ಅಷ್ಟು ಕೆಳಕ್ಕಿಳಿಯಲಾರರು' ಎಂದೆ. ನಮ್ಮ ರಾಜಕೀಯ ಧುರೀಣರ ಮನಸ್ಸು ಎಷ್ಟು ಕೀಳು ಮಟ್ಟಕ್ಕೆ ಇಳಿದಿದೆ ಎಂಬುದಕ್ಕೆ ಇದು ಸಾಕ್ಷಿ.

■ ಶಿವರಾಮ ಕಾರಂತ

(ಹುಚ್ಚು ಮನಸ್ಸಿನ ಹತ್ತು ಮುಖಗಳು ಕೃತಿಯಲ್ಲಿ)

ಬದುಕು ಹೀಗೇ ಇರಲಿ

ನಾನು ಬಹುದಿನಗಳಿಂದ 'ಬದುಕು' ಓದುತ್ತಿದ್ದೇನೆ. ಬಹುಶಃ 'ಬದುಕು' ಈ ರೀತಿ ಬರುತ್ತದೆ ಎಂದು ನಾನು ಊಹಿಸಿರಲಿಲ್ಲ.

ದಯವಿಟ್ಟು ಇದೇ ಅಂಕಣ ಗಳನ್ನು ಮುಂದುವರೆಸಿಕೊಂಡು ಹೋಗಿ. ವಯಸ್ಕರ ಸಂದೇಹ, ಆಪ್ತ ಸಮಾಲೋಚನೆಯಂತಹ ಅಂಕಣ ನೋಡಿ ಬೇಜಾರಾ ಗಿತ್ತು. ವಸುಂಧರ ಭೂಪತಿಯ ವರ ಬೊಜ್ಜು ಕರಗಿಸಲು, ಸುಲಭ ಉಪಾಯ ತುಂಬಾ ಚೆನ್ನಾಗಿತ್ತು. ಇಂತಹ ಆರೋಗ್ಯ ಕುರಿತ ಅಂಕಣ ಗಳನ್ನು ಇನ್ನೂ ಹೆಚ್ಚುಗೊಳಿಸಿ.

ಉಷಾ ನವರತ್ನಾರಾಂ ರವರು 80ರ ದಶಕದಲ್ಲಿ 'ರಾಗ ಸಂಗಮ' ಪತ್ರಿಕೆಗೆ ಪ್ರಶ್ನೋತ್ತರ ವಿಭಾಗದಲ್ಲಿ ಉತ್ತರಿಸುತ್ತಿದ್ದರು. ಅವರನ್ನು ನಿಮ್ಮ ಪತ್ರಿಕೆಯ ಪ್ರಶ್ನೋತ್ತರ ವಿಭಾಗಕ್ಕೆ ಉತ್ತರಿಸಲು ನಾನು ಕೇಳಿ ಕೊಳ್ಳುತ್ತಿದ್ದೇನೆ.

ಈ ಸಾರಿಯ ಮನ ಸೆಳೆದ ಮತ್ತು ಈ ಪತ್ರಿಕೆಯ ಅಂದ ಹೆಚ್ಚಿಸುವ ಅಂಕಣಗಳೆಂದರೆ, ವಿಚಿತ್ರ ಜಗತ್ತು, ಮರೆಯಬಾರದ ಚರಿತ್ರೆ, ಕ್ರೀಡೆ, ತಿಳಿದಿರಲಿ, ಮಾತಿನ ಬುತ್ತಿ, ದೊರೆತನಕ ದೂರು, ಇದರ ಜೊತೆಗೆ ತಿಂಗಳ ಭವಿಷ್ಯ, ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ ಅಂಕಣ ಮೂಡಿ ಬರಲಿ. ದಯವಿಟ್ಟು ಆಗಸ್ಟ್ ತಿಂಗಳಂತೆಯೇ ಮುಂದೆ 'ಬದುಕು' ಮೂಡಿ ಬರಲೆಂದು ಆಶಿಸುತ್ತೇನೆ.

- ಎಂ. ಪರಮೇಶ್ವರ, ಮದ್ದಿಹಳ್ಳಿ

ಗಮನಾರ್ಹ

ಇಂದಿನ ಟಿ.ವಿ. ನಾಳಿನ ಕಂಪ್ಯೂಟರ್ ವಸುಧೇಂದ್ರ ಅವರು ನೀಡಿದ ಸಚಿತ್ರ ಲೇಖನವು ಗಮನಾರ್ಹ ಮಾಹಿತಿ ಯೊಂದಿಗೆ ಉಪಯುಕ್ತ ವಿಷಯವನ್ನು ನೀಡಿತು. ಲೇಖಕರಿಗೂ ಪ್ರಕಟಿಸಿದ ತಮ ಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

- ಶ್ರೀಪಾದ ವಿ. ಜೋಶಿ, ಅನವಾಲ.

ವೈವಿಧ್ಯಮಯ

ಬಹು ನಿರೀಕ್ಷೆಯಂತೆ ಆಗಸ್ಟ್ ತಿಂಗಳ ಬದುಕು ವೈವಿಧ್ಯಮಯ ವಿಷಯಗಳನ್ನೊಳಗೊಂಡು ಸೊಗ ಸಾಗಿ ಮೂಡಿ ಬಂದಿದೆ. ವಿಶೇಷ ಲೇಖನಗಳು, ರಾಜಕೀಯ, ಪ್ರಸ್ತುತ ವಿದ್ಯಮಾನಗಳು ಹಾಗೂ ಕಥೆಗಳು ಪತ್ರಿಕೆಯ ಸೊಬಗನ್ನು ಹೆಚ್ಚಿಸಿವೆ.

- ಸುರೇಶ ಅಂಗಡಿ, ಹೂವಿನ ಹಡಗಲಿ



ಟಪಾಲು

ಹೀಗೇ ಇರಲಿ

ಆಗಸ್ಟ್ 'ಬದುಕು' ಸಂಚಿಕೆ ತಲುಪಿತು. ಸಂಪೂರ್ಣವಾಗಿ ಬದಲಾಗಿರುವ 'ಬದುಕು' ಅನ್ನು ನೋಡಿ ಆಶ್ಚರ್ಯವಾಯಿತು. ಹೀಗೇ ಮುಂದು ವರೆಯಲಿ.

-ಎಂ. ವೀರೇಶ್, ಹೊಸಮೋಕಾ

ಮದುಮಗನೇ ಇಲ್ಲ

ಆಗಸ್ಟ್ ತಿಂಗಳ ನಿಮ್ಮ ಪತ್ರಿಕೆ ವಿದ್ಯಾರ್ಥಿಗಳು ಓದುವ ಹಾಗಿಲ್ಲ. ಬರಿ ರಾಜಕಾರಣಿಗಳದ್ದೆ ಇದೆ. ಮೊದಲಿನ ಹಾಗೆ ಕಥೆ, ರಸಪ್ರಶ್ನೆ, ಮತ್ತು ಲೇಖನ ಗಳನ್ನು ಪ್ರಕಟಿಸಿಲ್ಲ. ನೀವು ತಪ್ಪದೆ ಮೊದಲಿನ ಹಾಗೆ ಪ್ರಕಟಿಸಿದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ.

ಈ ತಿಂಗಳ ಪತ್ರಿಕೆ 'ಮದುವೆಯಲ್ಲಿ ಮದು ಮಗ ಕಳೆದುಹೋಗಿದ್ದಾನೆ' ಅಂದ ಹಾಗೆ ಆಗಿದೆ. ಹಾಗೆ ಮಾಡಬೇಡಿರಿ.

-ರಾಘವೇಂದ್ರ ದಿ. ಸಂಗನಗೌಡ್ರು, ಸುರೇಬಾನ.

ಹೃದಯ ತುಂಬಿ ಬಂತು

'ಬಿಸಿಲ ಬದುಕು' ಆಗಸ್ಟ್ 99ರ ಸಂಚಿಕೆ ತುಂಬಾ ಸಮಗ್ರ ವಿಷಯಗಳ ಮೌಲಿಕ ಸಂಚಿಕೆ. ಬಾಯಿಬಿಡದ ಗಂಡನೊಂದಿಗೆ ಹಾಗೂ ನಾನು ಮತ್ತು ಗಾಂಧಿ ಸಚಿತ್ರ ಲೇಖನಗಳು ಸಂಗ್ರಹ ಯೋಗ್ಯ. ಒಟ್ಟಾರೆ, ಪತ್ರಿಕೆ ಓದು ತ್ತಿದ್ದಂತೆ ಹೃದಯ ತುಂಬಿ ಬಂತು.

- ಹನುಮಂತರಾವ್ ಭಜಂತ್ರಿ, ತುಳಸಿಗಿರಿ.

ಹಪ್ಪಳ, ಸಂಡಿಗೆ ಇಲ್ಲ

'ಪುನರ್ಜನ್ಮ' ಪಡೆದ 'ಬದುಕು' ರೂಪ ಮೊದಲಿನಂತಿ ದ್ದರೂ ತುಂಬಾ ತುಂಬಾ ಬದಲಾವಣೆಯಾಗಿದೆ. ಪತ್ರಿಕೆ ನೋಡಿದ ಕೂಡಲೇ ತುಂಬಾ ವ್ಯಥೆಯಾಯಿತು. ಊಟ ಇದ್ದರೂ, ಜೊತೆಗೆ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಇಲ್ಲದೆ ಹೊಟ್ಟೆ ತುಂಬಲಾರದೆ ಹೋಯ್ತು. ಸ್ಥಿರ ಶೀರ್ಷಿಕೆ ಗಳಾದ ಆಪ್ತಸಮಾಲೋಚನೆ, ಅಡುಗೆಮನೆ ಪ್ರಕಟಿಸಿರಿ.

- ವಿಶಾಲ ಲದ್ವಾ, ಗುಳೇದಗುಡ್ಡ

ಸಮಯೋಚಿತ

ಆಗಸ್ಟ್ 1999ರ 'ಬದುಕು' ಹೊಸ ವಿನ್ಯಾಸದೊಂದಿಗೆ ಆಕರ್ಷಕ ಮುಖಪುಟ ಹೊಂದಿ ಮೂಡಿ ಬಂದಿದ್ದು ಸಂತೋಷದ ವಿಷಯ. ಇತ್ತೀಚಿನ ದಿನಗಳಲ್ಲಿ ಒಂದು ಪತ್ರಿಕೆಯ ಯಶಸ್ಸನ್ನು, ಇನ್ನೊಂದು ಪತ್ರಿಕೆ ಸಹಿಸದೇ, ಪರಸ್ಪರ ಟೀಕೆಯನ್ನು ಮಾಡುತ್ತ ಕಾಲ ಕಳೆಯುತ್ತಿರುವ ಈ ಸಂದರ್ಭದಲ್ಲಿ 'ಬದುಕು' ಯಾವುದೇ ಸ್ಪರ್ಧಾತ್ಮಕ ಮನೋಭಾವವಿಲ್ಲದೇ ಇನ್ನೊಂದು ಪತ್ರಿಕೆಯ ಯಶೋಗಾಥೆಯನ್ನು ಪ್ರಕಟಿಸಿರುವುದು ಪತ್ರಿಕೆಯ ಸೌಜನ್ಯವೇ ಸರಿ. ಕನ್ನಡ ಪತ್ರಿಕೆ ಬೆಳವಣಿಗೆ ಹಾಗೂಯಶಸ್ಸಿಗೆ ಇಂಥ ಸೌಜನ್ಯಶೀಲತೆ ನಿಜಕ್ಕೂ ಅತ್ಯಗತ್ಯ. ಧನ್ಯವಾದಗಳು.

-ಎಚ್. ಆರ್. ವಸ್ತ್ರದ, ಕುಕನೂರು.

ವೈವಿಧ್ಯ

'ಬಿಸಿಲ ಬದುಕು' ಆಗಸ್ಟ್ ಸಂಚಿಕೆ ತನ್ನ ವಿಷಯ ವೈವಿಧ್ಯದಿಂದ ಇಷ್ಟವಾಯಿತು. ಅಭಿನಂದನೆಗಳು.

- ಮುದೇನೂರು ಸಂಗಣ್ಣ, ಚಿಗಟೇರಿ.

ಮೆಚ್ಚುಗೆ

ಆಗಸ್ಟ್ -99ರ 'ಬಿಸಿಲ ಬದುಕು' ಮಾಸಪತ್ರಿಕೆಯ ಪ್ರತಿಯೊಂದು ಅಂಕಣ ಮೆಚ್ಚುಗೆಯಾದವು. ಅವುಗಳಲ್ಲಿಯೂ ಹೆಗಡೆ, ಗಾಂಧೀಜಿ, ಕ್ಲೂಸ್ನರ್ ಇವರನ್ನು ಕುರಿತು ಬರೆದ ಲೇಖನಗಳು ಮೆಚ್ಚಿಗೆಯಾದವು.

-ಶರಣಪ್ಪ ಚ. ಮುಳ್ಳೂರ ವಿರುಪಾಪುರ

417 ಪೈಸೆಗೆ 'ಬದುಕು'

ಹಿಂದೆಂದೂ ಕಾಣದ ರಿಯಾಯಿತಿ !

ಬದಲಾದ 'ಬದುಕು' ಹೊಸತನದಿಂದ ಕಂಗೊಳಿಸುವುದನ್ನು ನೀವು ಗಮನಿಸಿದ್ದೀರಿ.
ಇದೀಗ ಕಂಡುಕೇಳರಿಯದ ರಿಯಾಯಿತಿ ದರದಲ್ಲಿ 'ಬದುಕು' ಪತ್ರಿಕೆಯನ್ನು ನಿಮ್ಮದಾಗಿಸಿಕೊಳ್ಳಿ.

ಈಗ 'ಬದುಕು' ಬೆಲೆ ಕೇವಲ 4 ರೂಪಾಯಿ 17 ಪೈಸೆ !

[ಒಂದು ಪ್ಲೇಟ್ ಇಡ್ಲಿ ಬೆಲೆಯಲ್ಲಿ ಮನೆ ಮಂದಿಯೆಲ್ಲಾ ಓದುವ ಪತ್ರಿಕೆ !]

ಈ ಬಂಪರ್ ಕೊಡುಗೆ ಪಡೆಯಲು ನೀವು **ರೂ. 250** ಕಳಿಸಿದರೆ ಸಾಕು. ಐದು ವರ್ಷಗಳ ಕಾಲ ನಿರಂತರ 60 **'ಬದುಕು'** ಸಂಚಿಕೆಗಳು ನಿಮ್ಮ ಮನೆಗೇ ಅಂಚೆ ಮೂಲಕ ತಲಪುತ್ತವೆ. **ರೂ.250**ನ್ನು **'ಅಂಕುರ ಪ್ರಕಾಶನ'**ದ ಹೆಸರಿನಲ್ಲಿ ಡಿ.ಡಿ. ಅಥವಾ ಎಂ.ಓ. ಮೂಲಕ ಕಳಿಸಿರಿ. ಎಂ.ಓ. ಫಾರ್ಮ್‌ನಲ್ಲಿ ಸಂದೇಶಕ್ಕಾಗಿ ಬಿಟ್ಟ ಸ್ಥಳದಲ್ಲಿ ನಿಮ್ಮ ಪೂರ್ಣ ವಿಳಾಸ ಬರೆಯಲು ಮರೆಯಬೇಡಿ.

- ಮೊದಲ 100 ಚಂದಾದಾರರಿಗೆ ಆಶ್ಚರ್ಯಕರ ಗಿಫ್ಟ್ ಕೂಡಾ ಇದೆ.
- ಈ ಗಿಫ್ಟ್ ಪಡೆಯುವ 100 ಓದುಗರಲ್ಲಿ ನೀವೂ ಒಬ್ಬರಾಗಬಾರದೇಕೆ?

ಈ ಬಂಪರ್ ಕೊಡುಗೆ 25.9.1999 ರಂದು ಕೊನೆಗೊಳ್ಳುತ್ತದೆ.

ವಿಳಾಸ : **ಅಂಕುರ ಪ್ರಕಾಶನ,** 473, 1 ನೇ ಬ್ಲಾಕ್, 3ನೇ ಸ್ಟೇಜ್, ಬಸವೇಶ್ವರನಗರ, ಬೆಂಗಳೂರು - 560 079. ✆ 3307810.

ನಂಬಿದರೆ ನಂಬಿ ! ಬಿಟ್ಟರೆ ಬಿಡಿ !!

ಓದುಗರಿಗೆ ಬಂಪರ್ ಕೊಡುಗೆ !

96 ಪೈಸೆಗೆ 'ದಾರಿ'

ಓದುಗರ ಅನುಕೂಲಕ್ಕಾಗಿ 'ದಾರಿ' ವಾರಪತ್ರಿಕೆಯ ಬೆಲೆಯನ್ನು
ಕೇವಲ 2 ರೂಪಾಯಿ ನಿಗದಿ ಮಾಡಿದಾಗ ಎಲ್ಲರೂ ಹುಬ್ಬೇರಿಸಿದರು.

ಈಗ 'ದಾರಿ' ಬೆಲೆ ಕೇವಲ 96 ಪೈಸೆ !

[ಒಂದು ಸಿಗರೇಟಿನ ಬೆಲೆಗಿಂತಲೂ ಕಡಿಮೆ !]

ನಂಬಿಕೆ ಬರುತ್ತಿಲ್ಲವೇ? ನಿಜವಾಗಿಯೂ 'ದಾರಿ' ನಿಮಗೆ 96 ಪೈಸೆಗೆ ಲಭಿಸುತ್ತದೆ.

ಈ ಬಂಪರ್ ಕೊಡುಗೆ ಪಡೆಯಲು ನೀವು **ರೂ. 250** ಕಳಿಸಿದರೆ ಸಾಕು. ಐದು ವರ್ಷಗಳ ಕಾಲ ನಿರಂತರವಾಗಿ ಒಟ್ಟು 260 'ದಾರಿ' ಸಂಚಿಕೆಗಳು ನಿಮ್ಮ ಮನೆಗೇ ವಿಳಾಸಕ್ಕೆ ಅಂಚೆ ಮೂಲಕ ತಲುಪುತ್ತವೆ. **ರೂ.250**ನ್ನು **'ಅಂಕುರ ಪ್ರಕಾಶನ'**ದ ಹೆಸರಿನಲ್ಲಿ ಡಿ.ಡಿ. ಅಥವಾ ಎಂ.ಓ. ಮೂಲಕ ಕಳಿಸಿರಿ. ಎಂ.ಓ. ಫಾರ್ಮ್‌ನಲ್ಲಿ ಸಂದೇಶಕ್ಕಾಗಿ ಬಿಟ್ಟ ಸ್ಥಳದಲ್ಲಿ ನಿಮ್ಮ ಪೂರ್ಣ ವಿಳಾಸ ಬರೆಯಲು ಮರೆಯಬೇಡಿ.

ಈ ಬಂಪರ್ ಕೊಡುಗೆ 25.9.1999 ರಂದು ಕೊನೆಗೊಳ್ಳುತ್ತದೆ.

ವಿಳಾಸ : **ಅಂಕುರ ಪ್ರಕಾಶನ,** 473, 1 ನೇ ಬ್ಲಾಕ್, 3ನೇ ಸ್ಟೇಜ್, ಬಸವೇಶ್ವರನಗರ, ಬೆಂಗಳೂರು - 560 079. ✆ 3307810.

ಒಳ ನೋಟ

ಮುಂದಿನ ಸಂಚಿಕೆಯಲ್ಲಿ

'ಸೋನಿ' ಬೆಳೆದ ಕಥೆ

ನಿಮಗೆ ಗೊತ್ತೇ?



ಈ ಸೋನಿಯಾ

ಈಕೆ ಸಾಮಾನ್ಯ ಇಟಾಲಿಯನ್ ಕುಟುಂಬದ ಹೆಣ್ಣು ಮಗಳು. ತನ್ನ ಪುಟ್ಟ ಹಕ್ಕಿ ಗೂಡಿನಂಥ ಸಂಸಾರ ಕಟ್ಟಿಕೊಂಡು ಸುಖವಾಗಿ ಇದ್ದವಳು. ಆಕೆಯ ಗಂಡ ರಾಜೀವ್ ಪ್ರಧಾನಿ ಪಟ್ಟ ಒಂದು ಸವಾಲೆಂಬಂತೆ ಸ್ವೀಕರಿಸಲು ತಯಾರಾಗಿ ನಿಂತಿದ್ದಾಗ ಅಡ್ಡ ನಿಂತು ಬೇಡಿಕೊಂಡಿದ್ದಳು. ಈಗ ಬದುಕು ಕಲ್ಪಿಸಿದ ಶೂನ್ಯದಲ್ಲಿ ಹೊಸದೊಂದು ಕನಸು ಹಮ್ಮಿಕೊಳ್ಳಬೇಕಿದೆ ಆಕೆ.

ನಿಮಗೆಲ್ಲ ಸೋನಿಯಾ ಗೊತ್ತು

ಆಕೆಯ ವಿದೇಶೀ ಹುಟ್ಟು, ರಾಜೀವ್‌ಗಾಂಧಿ ಜೊತೆ ಮದುವೆ, ಆತನ ಸಾವಿನ ಏಳು ವರ್ಷಗಳ ನಂತರ ಈಗ ಆಕೆ ಕಾಂಗ್ರೆಸ್ ನಾಯಕಿ. ಕರ್ನಾಟಕದ ಬಳ್ಳಾರಿಯಿಂದ ಲೋಕಸಭೆಗೆ ಅಭ್ಯರ್ಥಿ. ಜಗತ್ತಿನ ಎಲ್ಲರ ಕಣ್ಣು ಈಗ ಇತ್ತ.

ನಿಮಗೆ ಗೊತ್ತೇ?

1984ರ ಅಕ್ಟೋಬರ್ 31ರ ಸಂಜೆ. ದಿಲ್ಲಿಯ ಮನೆಯಿಂದ ರಾಜೀವ್ ರಾಷ್ಟ್ರಪತಿ ಭವನಕ್ಕೆ ತೆರಳಬೇಕು. ಅಲ್ಲಿ ದೇಶದ ಪ್ರಧಾನಿಯ ಕಿರೀಟ ತಲೆಯ ಮೇಲೆ ಹೊತ್ತು, ಹಿಂದೆ ಬರಬೇಕು. ಕೋಣೆಯ ಹೊರಗೆ ಕಾಯುತ್ತಾ ನಿಂತಿದ್ದರು ಅವರ ಕಾರ್ಯದರ್ಶಿ ಪಿ.ಸಿ. ಅಲೆಕ್ಸಾಂಡರ್.

ಥಟ್ಟಂತ ಸೋನಿಯಾ ಗಂಡನ ಎರಡೂ ಕೈ ಹಿಡಿದು ಬೇಡಿಕೊಂಡರು. ''ಬೇಡ ರಾಜೀವ್. ನಮ್ಮ ಪಾಡಿಗೆ ನಾವು ಇರೋಣ. ಈ ದೇಶ ನಡೆಸುವ ಗಂಡಾಂತರಕ್ಕೆ ಗುಂಡಿಗೆ ಒಡ್ಡುವುದು ಬೇಡ. ಇಷ್ಟೆಲ್ಲ ದಿವಸ ಈ ರಾಜಕೀಯ ಬೇಡ ಅಂತ ದೂರಾನೇ ಇದ್ದೆವು. ವರ್ಷದ ಹಿಂದೆ ಕಾಂಗ್ರೆಸ್ ಸೇರೋವಾಗಲೂ ನಾನು ಹೇಳಿದೆ ಬೇಡ ಅಂತ. ಈಗಲೂ ಸಮಯ ಮೀರಿಲ್ಲ ರಾಜೀವ್. ನನ್ನದು ಇದೊಂದು ಮಾತು ಕೇಳು. ನಾನು ಯಾವತ್ತೂ ಏನನ್ನೂ ಕೇಳಿಲ್ಲ... ಕೇಳಿದೀನಾ ಹೇಳು.... ಪ್ಲೀಸ್ ರಾಜೀವ್....''

ರಾಜೀವ್ ಗಾಂಧಿ ಎರಡೂ ಕೈಗಳನ್ನು ಕೊಡವಿ ಈಚೆಗೆ ಥಟ್ಟಂತ ಹೊರಬಂದುಬಿಟ್ಟರು. ಆಕೆಯ ಕಣ್ಣು ತುಂಬಿದ ನೀರು. ಅದು ಯಾರಿಗೂ ಕಾಣಬಾರದೆಂದು ಆ ಹೆಣ್ಣು ಮಗಳು ಮುಖ ತಿರುಗಿಸಿಕೊಂಡಳು. ದುಃಖ ನುಂಗಿಕೊಂಡಳು.

ಅವತ್ತು ಆಕೆ ನಮ್ಮ, ನಿಮ್ಮ ಮನೆಯ ಸಾಮಾನ್ಯ ಹೆಣ್ಣುಮಗಳ ಹಾಗೆ, ಬದುಕು ಚೆಲ್ಲಿಕೊಡಲು ಹೊರಟು ನಿಂತಿದ್ದ ಗಂಡನನ್ನು ಸೆರಗೊಡ್ಡಿ ಬೇಡಿದ್ದಳು.

'ಸಣ್ಣದೊಂದು ಗೂಡು ಕಟ್ಟಿಯಾಗಿದೆ. ಇದ ಕೆಡುವುವುದು ಬೇಡ' ಎಂದು ಅಂಗಲಾಚಿ ಬೇಡಿದ್ದರು. ಆಕೆಯೊಳಗೊಂದು ಅಂತರ್‌ಪ್ರಜ್ಞೆ ಮುನ್ಸೂಚನೆ ನೀಡಿತ್ತು. ಅದು ಏಳು ವರ್ಷದ ನಂತರ ನಿಜವಾಗಿ ಬಿಟ್ಟಿತು.

★

1991 ಮೇ 22ರ ಸಂಜೆ. ಮದಾರಾಸಿನಿಂದ ಬಂದಿದ್ದ ಪತಿಯ ಶವ, ಅದನ್ನು ತಂದವರು ರಾಜೀವ್‌ನ ಆಪ್ತ ಗೆಳೆಯರಾದ ಸುಮನ್ ದುಬೆ, ಸತೀಶ್ ಶರ್ಮಾ ಮುಂತಾದವರು.

ರಾಜೀವ್ ಗಾಂಧಿಯ ದೇಹದ ತುಂಡುಗಳನ್ನು ತುಂಬಿಕೊಂಡ ಶವಪೆಟ್ಟಿಗೆ ಒಳಗಿನ ಕೋಣೆಯಲ್ಲಿ ಇರಿಸಲಾಗಿತ್ತು. ಅಲ್ಲಿ ಆಗಲೇ ದೊಡ್ಡ ಸಂತೆ. 'ಒಂದು ನಿಮಿಷ ಎಲ್ಲರೂ ಸ್ವಲ್ಪ ಆಚೆ ಇರ್ತೀರಾ?' ಸೋನಿಯಾ ಕೇಳಿದರು.

ಬಾಗಿಲು ಮುಚ್ಚಿಕೊಂಡ ಸೋನಿಯಾ, ಆ ಕೋಣೆಯಲ್ಲಿ ಅರ್ಧ ತಾಸು ಒಬ್ಬರೇ ಇದ್ದರು. ಹೊರಗೆ ಬಂದಾಗ ಕಣ್ಣು ಮುಚ್ಚಿದ ಕಪ್ಪು ಕನ್ನಡಕ. ಆಕೆ ಅತ್ತರೇ, ಗಂಡನ ಶವದೆದುರು ರೋದಿಸಿದರೇ, 'ಅವತ್ತು ಹೇಳಿದ್ದು ಒಂದು ಮಾತು ಕೇಳಿದ್ದಿದ್ದರೆ ಹೀಗಾಗುತ್ತಾ ಇತ್ತಾ?' ಎಂದೆಲ್ಲ ಜಗಳ ಮಾಡಿದರೇ!

ಯಾರಿಗೆ ಗೊತ್ತು?

ಹದಿಹರೆಯದ ಎರಡು ಮಕ್ಕಳು. ಸಂಸಾರದ ಚಿಪ್ಪಿನೊಳಗೆ ಆಕೆ ಹುದುಗಿಬಿಟ್ಟರು. ಆಗೀಗ ರಾಜೀವ್ ಗಾಂಧಿ ಪ್ರತಿಷ್ಠಾನದ ಕಾರ್ಯಕ್ರಮ ಬಿಟ್ಟರೆ, ಮತ್ತೊಂದು ಕಡೆ ಬಹಿರಂಗವಾಗಿ ಆಕೆ ಕಾಣಿಸಿಕೊಂಡಿದ್ದು ಇಲ್ಲ.

ಮತ್ತೆ ಏಳು ವರ್ಷ.

ಬೆಂಗಳೂರು ನ್ಯಾಷನಲ್ ಹೈಸ್ಕೂಲು ಮೈದಾನದಲ್ಲಿ ಬಹಿರಂಗ ಸಭೆ. ಆಕೆ ಆಡಿದ ಕೊನೆಯ ಮಾತು. ''ಸರ್ಕಾರ ಬೋಫೋರ್ಸ್ ವ್ಯವಹಾರದ ದಾಖಲೆ ಬಹಿರಂಗಗೊಳಿಸಲಿ....'

ರಾಜಕೀಯ ರಣರಂಗದಲ್ಲಿ ಆಕೆ ಕಹಳೆ ಊದಿದ್ದು ಆಗ.

★

ಇಟಲಿಯ ಟ್ಯೂರಿನ್‌ನ ಸಾಮಾನ್ಯ ಕುಟುಂಬದ ಸೋನಿಯಾ ಕೇಂಬ್ರಿಡ್ಜ್‌ನಲ್ಲಿದ್ದಾಗ ರಾಜೀವ್ ಪರಿಚಯ. ಅಲ್ಲಿನ ಇಟಾಲಿಯನ್ ರೆಸ್ಟುರಾದಲ್ಲಿ ಇಬ್ಬರ ನಿತ್ಯ ಭೇಟಿ. ಪ್ರೇಮ ಚಿಗುರೊಡೆದು ಗಟ್ಟಿಯಾಗುವಾಗ ತಾಯಿ ಇಂದಿರಾಗಾಂಧಿ ಹೇಳಿದ್ದರು. ''ಈ ಮದುವೆ ಖಂಡಿತ ಬೇಡ ರಾಜೀವ್''.

ಮದುವೆ ನಡೆಯಿತು. ಭಾರತದ ಪ್ರಧಾನಿಗೆ ಇಟಾಲಿಯನ್ ಸೊಸೆ ಬಂದಳು. ಆಕೆಯ ಗಂಡ ಏರ್ ಇಂಡಿಯಾದಲ್ಲಿ ಪೈಲಟ್. ಬಿಡುವಿನ ವೇಳೆಯಲ್ಲಿ ಗಂಡ ಹೆಂಡತಿ ದೆಹಲಿಯ ಕನಾಟ್ ಪ್ಲೇಸ್‌ನ ಇಟಾಲಿಯನ್ ರೆಸ್ಟುರಾಗಳಿಗೆ ಹೋಗುತ್ತಿದ್ದರು. ಜೊತೆಗೆ ಇಬ್ಬರು ಮುದ್ದಾದ ಮಕ್ಕಳು ಪ್ರಿಯಾಂಕ ಮತ್ತು ರಾಹುಲ್. ರಾಜೀವ್‌ಗೆ ಸಿಹಿ ಕಂಡರೆ ತುಂಬಾ ಇಷ್ಟ. ಆಕೆಗೆ ಇಟಾಲಿಯನ್ ತಿನಿಸು ಬೇಕು. ಅದೊಂದು ಅಚ್ಚುಕಟ್ಟಾದ ಸಂಸಾರ. ಯಾರೂ ಮತ್ಸರಪಡಬಹುದಾದಷ್ಟು ಸುಂದರ.

ಅದು ಕದಡಿದ್ದು 1981ರಲ್ಲಿ. ರಾಜೀವ್‌ನ ತಮ್ಮ ಸಂಜಯಗಾಂಧಿ ಹೆಲಿಕಾಪ್ಟರ್ ಅಪಘಾತದಲ್ಲಿ ಅಸು ನೀಗಿದಾಗ ಎಲ್ಲ ಅಲ್ಲೋಲಕಲ್ಲೋಲ. ಆದಾದ ಎರಡುವರ್ಷದ ನಂತರವೇ, ತಾಯಿಗೆ ನೆರವಾಗಲೆಂದು ರಾಜೀವ್ ಪೈಲಟ್ ಹುದ್ದೆಗೆ ರಾಜೀನಾಮೆ ನೀಡಿ ಬಂದರು. ಕಾಂಗ್ರೆಸ್ ಸೇರಿದರು.

★

1984ರ ಅಕ್ಟೋಬರ್ 30.

ಬೆಳಗಿನ ಒಂಬತ್ತು ದಾಟುವ ಹೊತ್ತು. ಎಲ್ಲೋ ಪಟಾಕಿ ಹಚ್ಚಿದ ಸದ್ದು. ಜೊತೆಗೆ ಚೀರಾಟ. ಒಳಗಿದ್ದ ಸೋನಿಯಾಗೆ ಯಾರೋ ಹೇಳಿದರು. ''ಇಂದಿರಾಜೀ ಕೋ ಮಾರ್ ದಿಯಾ........'' ಮೈಯೆಲ್ಲ ಗುಂಡಿನ ಏಟಿಂದ ಜರಡಿಯಂತಾಗಿದ್ದ ಇಂದಿರಾ ಗಾಂಧಿಯ ದೇಹ, ಚೆಲ್ಲಾಡಿದ ರಕ್ತ......

''ಈಗಲೂ ಸಣ್ಣದೊಂದು ಸರಣಿ ಪಟಾಕಿಯ ಸದ್ದಾದರೂ ನನಗೆ ಬೆಚ್ಚಿ ಕೂರುವಂತಾಗುತ್ತದೆ' ಎಂದಿದ್ದರು ಸೋನಿಯಾ.


ಇಟಾಲಿಯ ಟ್ಯೂರಿನ್‌ನಿಂದ ಇಂಗ್ಲೆಂಡಿನ ಕೇಂಬ್ರಿಜ್‌ಗೆ, ಅಲ್ಲಿಂದ ದೆಹಲಿಯ ಮನೆಯೆಂಬ ಗೂಡು ಸೇರಿದ ಸೋನಿಯಾ ಒಬ್ಬ ಹೆಣ್ಣು ಮಗಳಾಗಿ ಕಂಡ ದುರಂತ ಒಂದೊಂದಲ್ಲ. ಪಟಾಕಿಯ ಸದ್ದಿಗೂ ಬೆಚ್ಚಿ ಬಿಡುತ್ತಿದ್ದ ಆಕೆ ಈಗ ಕಾಂಗ್ರೆಸ್ ನಾಯಕಿ. ಸಲ್ವಾರ್ ಕಮೀಜ್ ಬಿಟ್ಟು ಸೀರೆ ತೊಟ್ಟವಳ ಮುಖದಲ್ಲಿ ಆಗೊಮ್ಮೆ, ಈಗೊಮ್ಮೆ ಸಣ್ಣಗೆ ಸುಳಿದು ಮಾಯವಾಗುವ ಮಂದಹಾಸ. ಮೃದು ಮಾತು.... ಅದೂ ತೀರಾ ಕಮ್ಮಿ.

''ಭಾಯಿಯೋ ಔರ್ ಬೆಹನೋ...'' ಎಂದು ಭಾಷಣಕ್ಕೆ ತೊಡಗುವಾಗ ಥಟ್ಟನೆ ಕಾಡುವ ಇಂದಿರಾಗಾಂಧಿಯ ನೆನಪು......

ದುಃಖ, ಇನ್ನೆಂದೂ ಸರಿಪಡಿಸಲಾಗದಂತೆ ಭಗ್ನಗೊಂಡ ಕನಸುಗಳನ್ನು ಎದೆಯ ಬಟ್ಟಲೊಳಗೆ ತುಂಬಿಟ್ಟುಕೊಂಡ ಈ ಹೆಣ್ಣುಮಗಳು ಈಗ ಜನರೆದುರು ನಿಂತು ನಾಯಕತ್ವದ ಚುಕ್ಕಾಣಿ ಹಿಡಿದುಬಿಟ್ಟಿದ್ದಾಳೆ.

ಆಕೆಯನ್ನು ಒಪ್ಪುವುದು, ಬಿಡುವುದು ಈಗ ನಿಮಗೆ ಸೇರಿದ್ದು. ಹಲವು ಪರೀಕ್ಷೆ ದಾಟಿ ಬಂದ ಸೋನಿಯಾಗೆ ಈ ಚುನಾವಣೆ ನಿಜಕ್ಕೂ ಅಗ್ನಿ ಪರೀಕ್ಷೆ.

■ ಸುಹಾಸ.



ತೀರಾ ಹೊರೆಯಾದ ನಾಯಕತ್ವದ ಭಾರ

ಅಂತೂ ಇಂತೂ ಕಾಂಗ್ರೆಸ್‌ಗೆ ಕುರ್ಚಿ ಇಲ್ಲ

ಸೋನಿಯಾ ಗಾಂಧಿ ಪಕ್ಷದ ಅಧ್ಯಕ್ಷೆ ಆಗುತ್ತಿದ್ದಂತೆ, ಇನ್ನೇನು ಕುರ್ಚಿ ಕೈಗೆಟುಕಿಯೇ ಬಿಟ್ಟಿತು ಎಂದು ಬೀಗುತ್ತಿದ್ದ ಕಾಂಗ್ರೆಸ್ಸಿಗರು ಈಗ ತಲ್ಲಣದಲ್ಲಿದ್ದಾರೆ. ಇರುವ ಪಕ್ಷ ಬಿಟ್ಟು ಹೋಗುವಂತಿಲ್ಲ. ಇದ್ದಕಡೆ ಇದ್ದರೆ ಅಧಿಕಾರ ಸದ್ಯಕ್ಕೆ ಕೈಗೆ ಸಿಗುವಂತಿಲ್ಲ. ಈ ಮಧ್ಯೆ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದಲ್ಲಿಯೂ ಎಲ್ಲವೂ ಸರಿಯಾಗಿಲ್ಲ. ದಿನ ನಿತ್ಯ ಕಚ್ಚಾಟ, ರಗಳೆ. ಇದರ ನಡುವೆಯೂ ಅವರು ಆರಿಸಿ ಬರುವುದು ಹೆಚ್ಚೂ ಕಡಿಮೆ ಖಚಿತವಾದಂತಾಗಿದೆ.


ಕಾಂಗ್ರೆಸ್‌ನ ಮಿತ್ರ ಪಕ್ಷವಾದ ಎಐಡಿಎಂಕೆ ನಾಯಕಿ ಜಯಲಲಿತ ದಿನಕ್ಕೊಂದು ಬಣ್ಣ ತಳೆಯುತ್ತಿದ್ದು, ಸೋನಿಯಾಗೆ ಇದೊಂದು ಅಗ್ನಿ ಪರೀಕ್ಷೆ ಕೂಡ

ಅದೊಂದು ಕಾಲವಿತ್ತು. ತುಂಬ ಹಿಂದೆಯಲ್ಲ, ಕೆಲವೆ ತಿಂಗಳ ಹಿಂದೆ. ವಾಜಪೇಯಿ ಸರ್ಕಾರ ಇನ್ನೂ ಬಿದ್ದಿರಲಿಲ್ಲ. ಆದರೆ ಡಿಸೆಂಬರ್ ತನಕ ಬದುಕಿರಲಿ, ಏನವಸರ ಎಂದು ಎಲ್ಲ ವಿರೋಧ ಪಕ್ಷಗಳೂ ಸಿಂಪತೆಟಿಕ್ ಆಗಿ ಆಲೋಚಿಸುತ್ತಿದ್ದವು.

ಕಾಂಗ್ರೆಸ್ಸಂತೂ ಅಧಿಕಾರ್ಕೆ ಬರುವುದು ಖಂಡಿತ ಎಂದು ಮನಸ್ಸಿನಲ್ಲಿ ಖಚಿತವಾಗಿಬಿಟ್ಟು ಹಣಮಾಡಿ ನಿರಾಳವಾಗಿದ್ದು ತಮ್ಮ ಜತೆಯಿಲ್ಲಿದ್ದು ಇನ್ನೂ ಒದ್ದಾಡುತ್ತಿರುವವರ ಬಗ್ಗೆ ಮನಸಿನಲ್ಲೇ ಮುಗಳ್ನಕ್ಕು ಮುಂದೆ ಸಾಗುವವರಂತೆ ಬೀಗುತ್ತಿದ್ದರು. ವಾಜಪೇಯಿ ಸರ್ಕಾರ ಬಿದ್ದಾಗಲೂ ಕಾಂಗ್ರೆಸ್ ತನ್ನ ವರ್ಚಸ್ಸಿಗೆ ಏನೂ ಮುಕ್ಕಾಗಿಲ್ಲ ಎಂದೇ ತಿಳಿದಿತ್ತು. ಒಂದು ಸರ್ಕಾರ ಬೀಳಿಸಿ ಅಧಿರಕಾರಕ್ಕೆ ಬಂದ ಪಕ್ಷ ಎಂಬ ಅಪವಾದ ಅಂಟಿಸಿಕೊಂಡು ಅಧಿಕಾರಕ್ಕೆ ಬರುವ ಆಸೆಯೂ ಇರಲಿಲ್ಲ. ಜಯಲಲಿತ, ಚಂದ್ರಬಾಬು ನಾಯ್ಡು, ದೇವೇಗೌಡ, ಜ್ಯೋತಿ ಬಸು ಹೀಗೆ ಯಾರಾದರೂ ಅಧಿಕಾರಕ್ಕೆ ಆಸೆ ಪಟ್ಟರೆ, ಅವರಿಗೆ ಬೆಂಬಲನೀಡಿ ಡಿಸೆಂಬರ್ ತನಕ ಕಾಲಕಳೆಯುವ ಹುನ್ನಾರದಲ್ಲಿತ್ತು.

ಆದರೆ ವಿಧಿ ಎನ್ನುವುದು ತನ್ನ ಪಾಡಿಗೆ ಎಷ್ಟು ಸೂಕ್ಷ್ಮವಾಗಿ ಕೆಲಸ ಮಾಡುತ್ತೆ ಎಂದರೆ, ಬಿಜೆಪಿ, ಆರೆಸ್ಸೆಸ್, ಕಾಂಗ್ರೆಸ್ ಇರಲಿ, ಆ ದೇವರಿಗೂ ಅದರ ಸುಳಿವಿರಲಿಲ್ಲ.

ವಾಜಪೇಯಿ ಸರ್ಕಾರ ಒಂದು ವೋಟಿನಲ್ಲಿ ಸೋತಾಗ, ತಮ್ಮ ತಮ್ಮ ಶಕ್ತಿಯ ಪ್ರಖರತೆ ಬಯಲಾಯಿತು. ಹುಡುಗಾಟಿಕೆಯಲ್ಲಿಯೇ ಜಯಲಲಿತ, ಮತ್ತಿತರರು ಅಧಿಕಾರಕ್ಕೆ ಬರುವ ಪ್ರಯತ್ನಮಾಡಿ ಸೋತಾಗ, ಅಧಿಕಾರಕ್ಕೆ ಬರುವ ತಾಕತ್ತಿಲ್ಲದಿದ್ದರೆ, ಇರುವ ಸರ್ಕಾರ ಏಕೆ ಉರುಳಿಸಬೇಕು ಎಂಬ ಪ್ರಶ್ನೆಗೆ ಸೋನಿಯಾ ಗಾಂಧಿ ಉತ್ತರಿಸಬೇಕಾಯಿತು. ರಾಷ್ಟ್ರಾಧ್ಯಕ್ಷ ನಾರಾಯಣ್ ಬಳಿ ಹೋಗಿ ತಮಗೆ 273 ಲೋಕಸಭೆ ಸದಸ್ಯರ ಬೆಂಬಲವಿದೆ ಎಂದು ಬರೆದು ಪ್ರಮಾಣ ಮಾಡಿದಾಗ ಸೋನಿಯಾ ಅವರಿಗೆ ರಾಜಕೀಯದಲ್ಲಿ ತಾನಿನ್ನೂ ಎಂಥ ಅಪ್ರಬುದ್ಧೆ ಎಂದು ಸಾರಿ, ಸಾರಿ ತಮ್ಮ ಬಣ್ಣವೆಲ್ಲ ಬಯಲಾದೀತು ಎಂಬ ಪರಿವೆ ಇರಲಿಲ್ಲ.





ಸೋನಿಯಾ ಅವರನ್ನು ಕೂಡ ಬದಿಗೊತ್ತಿ ನಿಲ್ಲಬಹುದಾದ ಭಾರೀ ವ್ಯಕ್ತಿತ್ವ ಜಯಾದು

ಆ ಒಂದು ತಪ್ಪು, ಸರಕಾರ ಮಾಡುವ ಪ್ರಯತ್ನದಲ್ಲಾದ ಸೋಲಿಗೆ, ಇನ್ನೂ 5 ವರ್ಷ ಬೆಲೆ ತೆರಬೇಕಾಗಿದೆ. ಏನನ್ನಾದರೂ ಸಾಧಿಸಬಲ್ಲ ದೇವತೆ ಎಂಬ ಇಮೇಜಿನಿಂದ, ಇವರನ್ನು ಕಟ್ಟಿಕೊಂಡು ನಾವು ಹಾಳಾದೆವು ಎಂಬ ಭಾವನೆ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಮೂಡಿತು.

ಇದು ಸಾಲದೆಂಬಂತೆ, ಮಧ್ಯಮ ವರ್ಗದವರು ದೀಪಾವಳಿ, ಉಗಾದಿ ಹಬ್ಬಕ್ಕಿರಲಿ ಎಂದು ವರ್ಷದ ಆದಿಯಿಂದಲೇ ಪ್ಲಾನ್ ಮಾಡುವಂತೆ, ಚುನಾವಣೆ ಸಮಯಕ್ಕಾಗಲಿ ಎಂದು ಕಾರ್ಗಿಲ್ ಯುದ್ಧವನ್ನು ಪ್ಲಾನ್ ಮಾಡಿ, ಯಥಾವತ್ತಾಗಿ ಆಚರಿಸಿಯೂ ಬಿಟ್ಟರು. ಸರ್ಕಾರ ಮಾಡಲಾಗದ ಸೋಲು, ಕಾರ್ಗಿಲ್ ರಾಜಕೀಯದಿಂದ ಕಾಂಗ್ರೆಸ್ಸಿಗೆ ಮುಳುವಾಗಲು, ಇಷ್ಟೇ ಸಾಕಾಯಿತು.

ಕರ್ನಾಟಕದಲ್ಲೂ ಹಾಗೆ ಸುಲಭವಾಗಿ 170- 180 ಸೀಟುಗಳನ್ನು ಪಡೆದು ಅಧಿಕಾರದತ್ತ ದಾಪುಗಾಲು ಹಾಕುತ್ತಿದ್ದ ಕಾಂಗ್ರೆಸ್ಸಿಗರಿಗೆ, ಚುನಾವಣೆ ಭಾರತ-ಕೀನ್ಯ ಒಂದು ದಿನದ ಕ್ರಿಕೆಟ್ ಪಂದ್ಯದಂತೆ ಕಂಡುಬಂದಿತು. ತುಸುವೇ ತುಸು ಅಂಜಿಕೆ ಆದದ್ದು ದಳ ಹಿಂದುಳಿದ ವರ್ಗದ ಸಿದ್ದರಾಮಯ್ಯ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡಿದಾಗ.

ಕಾರ್ಗಿಲ್ ರಾಜಕೀಯದಿಂದ ದೆಹಲಿಯಲ್ಲಿ ಬಿಜೆಪಿ, ಕರ್ನಾಟಕದಲ್ಲಿ ಕಾಂಗ್ರೆಸ್ ಎಂಬ ಸುಳಿವಿತ್ತು.

ಬಿಜೆಪಿಗೊಂದು 50 ಸೀಟು, ಲೋಕಶಕ್ತಿ, ದಳ (ಸಂಯುಕ್ತ) ತಲಾ 20 ಸೀಟು ಪಡೆದು, ಹೆಚ್ಚು ಕಡಿಮೆ 90- 100 ಸೀಟು ಪಡೆಯಬಹುದಾದ ಕಾಂಗ್ರೆಸ್ ದೇವೇಗೌಡರ ಬೆಂಬಲದಿಂದ ರಾಜ್ಯದಲ್ಲಿ ಸರ್ಕಾರ ಮಾಡಬಹುದೆಂದೇ ಎಲ್ಲರೂ ತಿಳಿದಿದ್ದರು.

ಆದರೆ ಎಷ್ಟೇ ಕಚ್ಚಾಡಿದರೂ, ಎಲ್ಲರೂ ಸೇರಿ ಒಂದಾಗಿರುವ ಎನ್‌ಡಿಎ ಸಂಯುಕ್ತ ರಂಗ ನೂರು ಸೀಟು ಪಡೆಯುವ ಸಂಭವವೇ ಹೆಚ್ಚಾಗಿ ಕಂಡು ಬರುತ್ತಿದೆ.

ಅಂತು ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲವೆಂಬಂತೆ ಕಾಂಗ್ರೆಸ್ ಇನ್ನು ಐದು ವರ್ಷ ವಿರೋಧ ಪಕ್ಷದ ಕುರ್ಚಿಗಳಲ್ಲೆ ಕೂರಬೇಕಾದ ಪರಿಸ್ಥಿತಿ ಇರುವಂತಿದೆ.

ಕೊನೆ ಗುಟುಕು

ತಮಿಳರ 'ಅಮ್ಮ' ಸೋನಿಯಾ ಮೇಲೆ ಮುನಿದಿದ್ದಾಳೆ. ವಿಲ್ಲುಪುರಂನಲ್ಲಿ ಇಬ್ಬರೂ ಬಹಿರಂಗ ಸಭೆಯಲ್ಲಿ ಮಾತಾಡಬೇಕಿತ್ತು. ತಾಸುಗಟ್ಟಲೇ ಕಾಯಿಸಿದ ಜಯಾ ಕೊನೆಗೂ ಬರಲೇ ಇಲ್ಲ. ಬಂಡೇಳಲು ಸಿದ್ಧರಾಗಿದ್ದ ತಮಿಳುನಾಡು ಕಾಂಗ್ರೆಸ್ಸಿಗರಿಗೆ ಸಮಾಧಾನ ತೋರಲು ಸೋನಿಯಾ ಸೂಚಿಸಿದ್ದಾರೆ. ಜಯಾಗೆ ಸೋನಿಯಾ ಕಂಡರೆ ಹೆದರಿಕೆ ಇರಬಹುದು. ಇಬ್ಬರೂ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರೆ, ಜನಕ್ಕೆ ಸೋನಿಯಾ ಹೆಚ್ಚು ಇಷ್ಟವಾಗಬಹುದು ಎಂಬ ಆತಂಕ. ತಮಿಳುನಾಡಲ್ಲಿ ಮಹಾರಾಣಿಯಂತೆ ಮೆರೆಯುತ್ತಿರುವ ಆಕೆಗೆ, ಇನ್ನೊಬ್ಬರು ತನಗೆ ಸರಿ ಸಮಾನವಾಗಿ ನಿಲ್ಲುವುದು ಬೇಕಿಲ್ಲ.


ವಿಲ್ಲುಪುರಂ ಘಟನೆಯ ಎರಡು ದಿನದ ನಂತರ ಸೋನಿಯಾ ಮತ್ತೆ ಚೆನ್ನೈಗೆ ಬಂದಿದ್ದರು. ಆಂಧ್ರದ ನೆಲ್ಲೂರಿಗೆ ಹೋಗುವ ಹಾದಿಯಲ್ಲಿ ಹತ್ತು ನಿಮಿಷ ಅಲ್ಲಿ ತಂಗಿದ್ದರು. ಆಗ ಖುದ್ದಾಗಿ ಬಂದು ಭೇಟಿ ಮಾಡಬಹುದಿದ್ದ ಜಯಾ ಮತ್ತೆ ತಪ್ಪಿಸಿಕೊಂಡದ್ದೂ ಸುದ್ದಿಯಾಯಿತು.

'ಅಮ್ಮ'ನ ಆಪ್ತರಾದ ಮುತ್ತಯ್ಯ ಮತ್ತು ಸತ್ತಿಯಮೂರ್ತಿ ರಾಯಭಾರಿ ಕಾರ್ಯ ನಿರ್ವಹಿಸಿದ್ದಾರೆ. ತಪ್ಪುಗಾಣಿಕೆ ಎಂಬಂತೆ ಜಯಾ ಕಳುಹಿಸಿದ ಪುಷ್ಪಗುಚ್ಛ, ಶಾಲು ನೀಡಿದ್ದಲ್ಲದೆ, ವಿಲ್ಲುಪುರಂಗೆ ನಾಯಕಿ ಜಯಲಲಿತಾ ಬರಲು ಸಾಧ್ಯ ಆಗದುದಕ್ಕೆ ಕಾರಣ ವಿವರಿಸಿದ್ದಾರೆ.

ಕರ್ನಾಟಕದಲ್ಲಿ ಜಿ. ಮಾದೇಗೌಡರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿ ಬಹುದೊಡ್ಡ ಬಾಂಬ್ ಸ್ಫೋಟಿಸಿದ್ದಾರೆ.

■ ರಾಮು

ಸತ್ತವರಿಗಿಲ್ಲಿ ಸ್ಮಶಾನವಿಲ್ಲ - ಬದುಕಿದವರಿಗೆ ಆಸ್ಪತ್ರೆ ಇಲ್ಲ



ಚಿತ್ರದಲ್ಲಿ ಇರುವುದು ಬಾಗಲಕೋಟೆಯ ಹೊಳೆದಂಡೆಯ ಅಡವೀ ಸ್ವಾಮಿಮಠ. ಭಾಗಶಃ ನೀರಿನಲ್ಲಿ ಮಠ ಮುಳುಗಿದ ಹಾಗೆ ಇನ್ನೇನು ಕೆಲವೇ ದಿನಗಳಲ್ಲಿ ಇಡೀ ಊರು ಮುಳುಗಲಿದೆ. ಆಗ ಜನರ ಬದುಕು ಕಂಗೆಡಿಸುವ ನಿಜವಾದ ಚಂಡಮಾರುತ ಬೀಸಲಿದೆ. ಬಾಗಲಕೋಟೆ ಭಾಗದ ಅತ್ಯಂತ ಜನಪ್ರಿಯ ಕವಿ ಮಧುರಚನ್ನ ಅವರ ಅಂತ್ಯ ಸಂಸ್ಕಾರಕ್ಕೆ ಬಂದು ಕಂಗೆಟ್ಟು ನಿಂತಿದ್ದ ಜನಕ್ಕೆ ಅವತ್ತು ಬೇಂದ್ರೆ ಹೇಳಿದ್ದರು ''ನಮ್ಮ ಚನ್ನಪ್ಪನ್ನ ಹುಗಿದಿಲ್ಲ, ಬಿತ್ಯಾರೆ....'' ಎಂದು. ಅಂಥ ಸಾವಿರ ಸಾವಿರ ಮಧುರ ಚೆನ್ನರು ಹುಟ್ಟಿಬರಲಿ, ಹುಟ್ಟಿಬರುತ್ತಾರೆ ಈ ನೆಲದ ಮಣ್ಣಿಂದ ಎಂಬ ಆಶಯವಿತ್ತು ಅವರ ದನಿಯಲ್ಲಿ. ಹಲವು ಕನಸುಗಳನ್ನು ತನ್ನೊಳಗೆ ಅವಿತಿಟ್ಟುಕೊಂಡ ಭೂಮಿಯೇ ಈಗ ಜಲಸಮಾಧಿ ಆಗುತ್ತಿದ

ರಾಷ್ಟ್ರೀಯ ಹಿತಾಸಕ್ತಿಗಾಗಿ ಮನೆ, ಆಸ್ತಿ, ಇದೆಲ್ಲಕ್ಕೂ ಮಿಗಿಲಾಗಿ ನೂರಾರು ವರ್ಷಗಳ ಬಾಂಧವ್ಯ ಕಳಚಿಕೊಂಡು ಬೇರೆಯಾಗಿ ಹೋಗಬೇಕಾದ ಪರಿಸ್ಥಿತಿಯಲ್ಲಿರುವ ಬಾಗಲಕೋಟೆ ನಗರದ ತ್ಯಾಗಜೀವಿ ಜನತೆಗೆ ಸರಕಾರ ತೋರುವ ಕಳಕಳಿ ಎಷ್ಟು? ಇದಕ್ಕೆ ಈಗ ಸಂತ್ರಸ್ತರು ಅನುಭವಿಸುತ್ತಿರುವ ಸಮಸ್ಯೆಗಳೇ (ನೋವು) ಸಾಕ್ಷಿ.

ವಿಜಾಪೂರ ಹಾಗೂ ಗುಲಬರ್ಗ ಜಿಲ್ಲೆಗಳಿಗೆ ನೀರುಣಿಸಲು ರೂಪಗೊಂಡ ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯ ನಿರ್ಮಾಣ ಕಾರ್ಯ ಆರಂಭವಾದಂದಿನಿಂದ ಮುಳುಗಡೆಯ ಭೀತಿಯಲ್ಲಿರುವ ಬಾಗಲಕೋಟೆ ನಗರದ ಸಂತ್ರಸ್ತರಿಗೆ ಸರಕಾರದ ಯಾವ ನೆರವೂ ದೊರಕದೇ ಅತಂತ್ರ ಸ್ಥಿತಿಯಲ್ಲಿ ಬದುಕುವ ಸ್ಥಿತಿ ಬಂದೊದಗಿದೆ.

ಸ್ಥಳಾಂತರದ ಸಮಸ್ಯೆ ಒಂದೆಡೆ, ಅಕ್ರಮಕಟ್ಟಡ, ಅತಿಕ್ರಮ ಪ್ರವೇಶ, ಮತ್ತೆ ಈಗ ಕೇಂದ್ರ ಸರಕಾರ ಹೊರಡಿಸಿರುವ ಹೊಸ ಆದೇಶ, ಪರಿಹಾರ ಧನಕ್ಕೆ ಶೇ. ಹತ್ತರಷ್ಟು ಆದಾಯಕರ ಹೇರಿಕೆ. ಇವೆಲ್ಲ ಸಮಸ್ಯೆಗಳಿಂದ ಸಂತ್ರಸ್ತರು ತೊಳಲಾಡುತ್ತಿದ್ದು, ಇತ್ತ ಪ್ರತಿವರ್ಷ ಕೃಷ್ಣೆಗೆ ನೀರು ಬಂದಾಗ ಓಡಿ ಹೋಗಿ ತಗಡಿನ ಶೆಡ್ (ಚಪ್ಪರ)ನಲ್ಲಿರುವ ಪ್ರಕ್ರಿಯೆ ನಿರಂತರವಾಗಿ ನಡೆದಿದೆ. ಇದಕ್ಕೆಲ್ಲ ಕಾರಣ ಸ್ಥಳಾಂತರ ಕಾರ್ಯದಲ್ಲಿ ಆಗಿರುವ ವಿಳಂಬ ಹೊರತು ಮತ್ತೊಂದಿಲ್ಲ.

ಒಟ್ಟಾರೆ, ಈ ಸಂತ್ರಸ್ತರು ಇತ್ತ ಬದುಕಲು ಆಗದೇ, ಅತ್ತ ಸಾಯಲೂ ಆಗದ ಸ್ಥಿತಿಯಲ್ಲಿದ್ದಾರೆ. 1993ರಲ್ಲಿಯೇ ಪರಿಹಾರ ಧನ ನೀಡಿಕೆ, ನಿವೇಶನ ಹಂಚಿಕೆಯ ಕಾರ್ಯ ಆರಂಭವಾಗಿದ್ದರೂ ಈ ತನಕ ಅದು ಆಮೆ ವೇಗದಲ್ಲಿ ನಡೆದು ಈಗೇನೊ ಅತಿ ಚುರುಕಿನಿಂದ ನಡೆಯುತ್ತಿದೆ. ಆದರೆ ಇದು ಕ್ರಿ.ಶ. 2000 ಹೊತ್ತಿಗೆ ಪೂರ್ಣಗೊಂಡು ಸಂತ್ರಸ್ತರು ನವನಗರದಲ್ಲಿ ಜೀವನ ಸಾಗಿಸುವಂತಾದೀತೆ ಎಂಬ ಪ್ರಶ್ನೆ ಇನ್ನೂ ಮುಂದುವರೆದಿದೆ.

ಭೂಸ್ವಾಧೀನ : ಆಲಮಟ್ಟಿ ಜಲಾಶಯದ ಎತ್ತರ 524 ಮೀಟರಗಳಷ್ಟಾಗಿ ನಗರದ 2/3 ಭಾಗ ಮುಳುಗಡೆಯಾಗಲಿದೆ ಎಂದು ಅಂದಾಜು ಮಾಡಿ 11,200 ಕಟ್ಟಡಗಳು, 50 ಸಾವಿರ ಜನಸಂಖ್ಯೆ ಮುಳುಗಡೆಗೆ ತುತ್ತಾಗಲಿದ್ದಾರೆಂದು 1983ರಲ್ಲಿ ಅಂದಾಜು ಮಾಡಲಾಗಿತ್ತು. ಇದರಲ್ಲಿ ಅನಧಿಕೃತ ಕಟ್ಟಡಗಳು ಸೇರಿರಲಿಲ್ಲ. ಮುಳುಗಡೆಯ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡು ಇಲ್ಲಿರುವ ಕುಟುಂಬಗಳನ್ನು ಸ್ಥಳಾಂತರಿಸಲು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿತು. ನವನಗರ ನಿರ್ಮಾಣಕ್ಕೆ ಮುಚಖಂಡಿ-ಸೀಮಿಕೇರಿ ಮಧ್ಯದ 4500 ಎಕರೆ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಲಾಯಿತು. ಈ 4500 ಎಕರೆ 46 ಸೆಕ್ಟರಗಳನ್ನು ಬೇರೆ ಬೇರೆ ಪ್ಲಾಟುಗಳಾಗಿ ವಿಂಗಡಿಸಿ ಹೊಸ ನಗರವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಈ ಕಾರ್ಯ ಈಗಷ್ಟೆ ಚುರುಕಿನಿಂದ ನಡೆದಿದೆ. ಉಳಿದಿರುವ ಒಂದು ವರ್ಷದಲ್ಲಿ ಪೂರ್ಣಗೊಳ್ಳ ಬೇಕಾಗಿರುವ ಸ್ಥಳಾಂತರದ ಕಾರ್ಯ ಅತ್ಯಂತ ದಯನೀಯ ಸ್ಥಿತಿ ತಲುಪಿದೆ.

512 ಮೀಟರ್ ಕೌಂಟರ್ ವ್ಯಾಪ್ತಿಯಲ್ಲಿ ಬರುವ ನಗರದ ಕಿಲ್ಲಾ, ಜೈನಪೇಟೆಯ 750 ಕಟ್ಟಡಗಳು, 521 ಮೀಟರ್ ವ್ಯಾಪ್ತಿಯ ಹಳಪೇಟೆ, ವೆಂಕಟ ಪೇಟೆ, ಕಿಲ್ಲಾ, ಕಾರಿಹಳ್ಳ ಮುಂತಾದ ಪ್ರದೇಶದ 3250 ಕಟ್ಟಡಗಳನ್ನು ಸ್ವಾಧೀನ ಪಡಿಸಿಕೊಂಡು ಪರಿಹಾರ ಧನ ನೀಡುವುದು ಹಾಗೂ ನಿವೇಶನ ಹಂಚಿಕೆ ಕಾರ್ಯ ಬಹುತೇಕ ಪೂರ್ಣಗೊಂಡಿದ್ದರೂ ನವನಗರ ಪ್ರದೇಶ ದಲ್ಲಿ ಸಂತ್ರಸ್ತರ ಮನೆಗಳೇ ನಿರ್ಮಾಣ ಗೊಳ್ಳುತ್ತಿಲ್ಲ. ಇದಕ್ಕೆ ಕಾರಣ ಅಲ್ಲಿ ಎಲ್ಲವೂ ಪೂರ್ಣಗೊಂಡಿಲ್ಲದಿರುವುದು.

ಅನಧಿಕೃತ ಕಟ್ಟಡಗಳ ಸಮಸ್ಯೆ : 1984ರಲ್ಲಿ ಹಳೇ ನಗರದಲ್ಲಿ ಕಟ್ಟಡ ನಿರ್ಮಾಣಕ್ಕೆ ಸರಕಾರ ನಿಷೇಧ ಹೇರಿತು. ಆದರೆ ಜನತೆಗೆ ಬದುಕಲು ಸೂರು ಬೇಕಲ್ಲ! ಇದಕ್ಕಾಗಿ ಜನರು ಅನುಮತಿ ಪಡೆಯದೇ ಮನೆ ನಿರ್ಮಿಸಿಕೊಂಡರು. ಈಗ ಅವಕ್ಕೆ ಪರಿಹಾರಧನ ನಿರಾಕರಿಸಲಾಗಿದೆ.

ಮಾನವೀಯ ದೃಷ್ಟಿಯಿಂದ ಅನುಕಂಪದ ಪರಿಹಾರಧನ ಇವರಿಗೆ ನೀಡುತ್ತಿದ್ದರೂ ಇದಕ್ಕೆ ಸರಕಾರ ಕೋರ್ಟಿಗೆ ಮೇಲ್ಮನವಿ ಹೋಗದಂತೆ ಅವರಿಂದ ಮುಚ್ಚಳಿಕೆ ಬರೆಸಿಕೊಳ್ಳುತ್ತಿರುವದು ನೋವಿನ ಸಂಗತಿ.


ಕೆಲವು ವಾರ್ಡುಗಳಲ್ಲಿ ನೂರಾರು ವರ್ಷಗಳಿಂದ ಮನೆ ಕಟ್ಟಿಕೊಂಡಿರುವ ಜನರಿಗೆ ಈಗ ಹೊಸತೊಂದು ಸಮಸ್ಯೆ ಎದುರಾಗಿದೆ. ತಾವಿರುವ ಜಾಗೆಗೆ ಬೇರೆ ಮಾಲಿಕರು ಇದ್ದಾರೆಂಬುದು ಕಂಡು ಬಂದಿದೆ. ಅದೂ ಭೂಸ್ವಾಧೀನ ಕಾರ್ಯ ಆರಂಭವಾದಾಗ. ಹೀಗಾಗಿ ಈಗ ಅವರ ಸ್ಥಿತಿ ಚಿಂತಾಜನಕ. ಇತ್ತ ಪರಿಹಾರ ಧನವೂ ಇಲ್ಲ. ಅತ್ತ ನಿವೇಶನವೂ ಇಲ್ಲದಂತಾಗಿ ಸಮಸ್ಯೆ ಕೋರ್ಟ್‌ಕಟ್ಟೆ ಹತ್ತಿದೆ. ಕಟ್ಟಿಕೊಂಡಿರುವ ಕಟ್ಟಡಕ್ಕಾದರೂ ಪರಿಹಾರಧನ ಕೊಡಿ ಎಂಬುದು ಈ ಜನರ ಅಳಲು. ಇವರ ಈ ಕೂಗು ಕೇಳುವವರಿಲ್ಲದೇ ಇವರು ನೀರಿನಲ್ಲಿ ನಿಲ್ಲಬೇಕಾದ ಸ್ಥಿತಿ ಬಂದೊದಗಿದೆ.

ಗಾಯದ ಮೇಲೆ ಬರೆ : ಹಲವಾರು ಸಮಸ್ಯೆಗಳಲ್ಲಿ ಸಿಕ್ಕು ನಲುಗಿರುವ ಸಂತ್ರಸ್ತರ ನೋವಿನ ಗಾಯದ ಮೇಲೆ ಕೇಂದ್ರ ಸರಕಾರ ಮತ್ತೆ ಬರೆ ಎಳೆದು ಮತ್ತಷ್ಟು ಘಾಸಿಗೊಳಿಸಿದೆ. ಸದ್ಯಕ್ಕೆ ಬಂದಷ್ಟು ಹಣ ತೆಗೆದುಕೊಂಡರಾಯಿತು ಎನ್ನುತ್ತಿರುವಾಗಲೇ ಸಂತ್ರಸ್ತನಿಗೆ ಶ್ರೀಮಂತಪಟ್ಟ, ಈತ ಪಡೆಯುವ ಪರಿಹಾರಧನದ ಮೇಲೆ ಶೇ. ಹತ್ತುರಷ್ಟು ಆದಾಯಕರ ಕಡಿತ. ನೋಡಿ! ಸಂತ್ರಸ್ತನ ಸ್ಥಿತಿ ಎಲ್ಲಿಗೆ ಬಂದಿದೆ! ತನ್ನ ಮನೆ, ಆಸ್ತಿ ಕಳೆದುಕೊಂಡರೂ ಆತ ಆದಾಯಕರ ಕಟ್ಟಬೇಕು. ಇದು ಬಾಗಲಕೋಟೆ ಮುಳುಗಡೆ ಸಂತ್ರಸ್ತರ ತ್ಯಾಗಕ್ಕೆ ಸರಕಾರ ಕೊಟ್ಟಿರುವ ಗೌರವದ ಕಾಣಿಕೆ. ಅಂತೆಯೇ ಕೆಲವು ಸಂತ್ರಸ್ತರು 'ಬಹುಶಃ ನಾವು ಹಿಂದಿನ ಜನ್ಮದಲ್ಲಿ ಏನೋ ಪಾಪ ಮಾಡಿದ್ದೀವಿ' ಎಂದು ಹಲುಬುತ್ತಾರೆ.

ಆಸ್ಪತ್ರೆಯ ಭೀತಿ : ಬಾಗಲಕೋಟೆ ನಗರದಲ್ಲಿ 521 ಮೀಟರ್ ಎತ್ತರಕ್ಕೆ ನೀರು ನುಗ್ಗಿದರೆ ಈಗಿರುವ ಜಿಲ್ಲಾ (ಜನರಲ್) ಆಸ್ಪತ್ರೆ ನೀರಿನಲ್ಲಿ ನಿಲ್ಲುವ ಸ್ಥಿತಿ ಬರುತ್ತದೆ. ಇದು ಸರ್ಕಾರಕ್ಕೆ ಗೊತ್ತಿದ್ದರೂ ಸಹ, ನವನಗರದಲ್ಲಿ ಪರ್ಯಾಯ ಆಸ್ಪತ್ರೆ ನಿರ್ಮಾಣ ಕಾರ್ಯ ಆರಂಭವಾಗಿರಲಿಲ್ಲ. ಈಗ ಮೂರು ತಿಂಗಳಿಂದ ಇದಕ್ಕಾಗಿ ತರಾತುರಿ ಕೆಲಸ ನಡೆದಿದೆ. ಆದರೂ ಇದಕ್ಕೆ ಬೇಕಾಗಬಹುದಾದ ಅವಧಿ ಕನಿಷ್ಠ 15 ತಿಂಗಳು. ಆದರೆ ನೀರು ಬರಲು ಉಳಿದಿರುವ ಸಮಯ ಇದಕ್ಕಿಂತಲೂ ಕಡಿಮೆ. ಹೀಗಾಗಿ ಹೊಸ ಆಸ್ಪತ್ರೆಯ ನಿರ್ಮಾಣ ತ್ವರಿತವಾಗಬೇಕಿದೆ. ಇಲ್ಲದಿದ್ದರೆ ಹಳೆ ನಗರದ ಆಸ್ಪತ್ರೆ ನೀರಲ್ಲಿ ಮುಳುಗಿ ಇಡೀ ಜಿಲ್ಲೆಯ ಜನತೆ ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗಬೇಕಾಗುತ್ತದೆ.

ಸ್ಮಶಾನಕ್ಕೂ ಗತಿಯಿಲ್ಲ : ಮುಳುಗಡೆಯಾಗಲಿರುವ ನಗರದ ವ್ಯಾಪ್ತಿಯಲ್ಲಿ ಹಿಂದು ಹಾಗೂ ಮುಸ್ಲಿಂ ಜನಾಂಗದವರ ಎರಡು ಸ್ಮಶಾನಗಳು ಬರುತ್ತವೆ. ಇವೆರಡೂ ಸ್ಮಶಾನ ಇಲ್ಲವಾದರೆ ಸತ್ತವರಿಗೂ ಜಾಗ ಇಲ್ಲದಂತಾಗುತ್ತದೆ. ಆದರೆ ನವನಗರದಲ್ಲಿಯೂ ಕೂಡ ಸ್ಮಶಾನಕ್ಕೆ ಜಾಗವಿಲ್ಲ. ಹೀಗಾಗಿ ಸತ್ತರೆ ಸ್ಮಶಾನವಿಲ್ಲ, ರೋಗ ಬಂದರೆ ಚಿಕಿತ್ಸೆಗೆ ಆಸ್ಪತ್ರೆಯಿಲ್ಲ ಎನ್ನುವ ಸ್ಥಿತಿ ಬರಬಹುದಾಗಿದೆ.

ಡಾ. ಜಾಮದಾರ ಶ್ರಮ



ಯಾವುದೇ ಒಂದು ಕೆಲಸ ನಿಗದಿತ ಸಮಯಕ್ಕೆ ಪೂರ್ಣಗೊಳ್ಳಬೇಕಾದರೆ ಅದಕ್ಕೆ ಮನಸ್ಸು ಮತ್ತು ಪ್ರಯತ್ನದ ಅವಶ್ಯಕತೆ ಮುಖ್ಯ. ಕೆಲಸದಲ್ಲಿ ಆಸಕ್ತಿ ಇರುವವರ ಜೊತೆಗೆ ಆ ಬಗ್ಗೆ ಕಳಕಳಿ ಇರಬೇಕು. ಇದಕ್ಕೆ ಕೃ.ಮೇ.ಯೋ. ಪುನರ್ವಸತಿ ಆಯುಕ್ತ ಡಾ.ಎಸ್.ಎಂ.ಜಾಮದಾರರು ಶ್ರೇಷ್ಠ ಉದಾಹರಣೆ. ಮಂದಗತಿಯಲ್ಲಿ ನಡೆದಿದ್ದ ಪುನರ್‌ವಸತಿ ಕಾರ್ಯಕ್ಕೆ ಚುರುಕಿನ ಚಾಲನೆ ಸಿಕ್ಕಿದ್ದು ಇವರಿಂದಲೇ. ಸಂತ್ರಸ್ತರ ವಿಷಯದಲ್ಲಿ ಕಳಕಳಿ ಹೊಂದಿರುವ ಅವರು ಸಂತ್ರಸ್ತರ ನೋವಿಗೆ ಸ್ಪಂದಿಸಿದ್ದಾರೆ. ಅಂತೆಯೇ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಮುಳುಗಡೆಯಾಗಲಿರುವ 95 ಗ್ರಾಮಗಳ ಪುನರ್ವಸತಿ ಕಾರ್ಯ ಚುರುಕುಗೊಂಡಿದೆ.

ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿರುವ ಹಿನ್ನಲೆಯಲ್ಲಿ ಆಲಮಟ್ಟಿ ಆಣೆಕಟ್ಟಿಗೆ ಅಳವಡಿಸಿರುವ 26 ಕ್ರಸ್ಟ್‌ಗೇಟ್‌ಗಳಿಗೆ ಸ್ಕಿನ್ ಪ್ಲೇಟ್ ಜೋಡಿಸುವದು ಹಾಗೂ 509 ಮೀಟರ್ ಮೇಲೆ ನೀರು ಸಂಗ್ರಹಿಸಲು ಸಾಧ್ಯವಾಗದ ಕಾರಣ, 524 ಮೀಟರ್ ಎತ್ತರದ ವಿಷಯ ನೆನೆಗುದಿಗೆ ಬಿದ್ದಿದ್ದರೂ 521 ಮೀಟರ್‌ವರೆಗಿನ ಸ್ವಾಧೀನತೆ ಕಾರ್ಯ ಹಾಗೂ ಈ ವ್ಯಾಪ್ತಿಯೊಳಗೆ ಮುಳುಗಡೆಯಾಗುವ ಪ್ರದೇಶಗಳ ಸ್ಥಳಾಂತರ, ಪುನರ್‌ವಸತಿ ಕಾರ್ಯಕ್ಕೆ ತಡೆಯಿಲ್ಲದೇ ಕೆಲಸ ನಡೆದಿದೆ.

ಸದ್ಯಕ್ಕೆ 41 ಗ್ರಾಮಗಳ ಪುನರ್‌ವಸತಿ ಕಾರ್ಯ ನಡೆಯುತ್ತಿದ್ದು, ಎರಡು ವರ್ಷಗಳ ಹಿಂದೆ ಜಲಾವೃತಗೊಂಡ 36 ಹಳ್ಳಿಗಳು ಸ್ಥಳಾಂತರವಾಗಿವೆ. ಭಾಗಶಃ ಜಲಾವೃತಗೊಂಡ 24 ಹಳ್ಳಿಗಳು ಮತ್ತು 521 ಮೀಟರ್ ಕೌಂಟರ್‌ವರೆಗಿನ ಬಾಧಿತಗೊಳ್ಳುವ ಗ್ರಾಮಗಳಿಗೆ ಪುನರ್‌ವಸತಿ ಕೇಂದ್ರಗಳು ನಿರ್ಮಾಣಗೊಳ್ಳುತ್ತಿವೆ. ನಿರ್ಮಾಣಗೊಂಡ ಬಹುತೇಕ ಕೇಂದ್ರಗಳಲ್ಲಿ ಜನರು ವಾಸಿಸುತ್ತಿದ್ದಾರೆ. ಒಟ್ಟಾರೆ ಕಾರ್ಯ ಚುರುಕಿನಿಂದ ನಡೆದಿದ್ದು ಡಾ.ಎಸ್.ಎಂ. ಜಾಮದಾರರ ಉಸ್ತುವಾರಿ ಪ್ರಶಂಸನೀಯ ಎಂದು ಹೇಳಬಹುದು.

ನೀರಿನಲ್ಲಿ ಸೇವಾದಳ ಕಟ್ಟಡ

ಬಾಗಲಕೋಟೆ ನಗರದ ಅನೇಕ ಐತಿಹಾಸಿಕ ಪುರಾವೆಗಳು, ದೇವಸ್ಥಾನಗಳು, ಸಂಸ್ಕೃತಿ ಬಿಂಬಿಸುವ ಕಲಾಕೃತಿಗಳು, ಭವ್ಯಕಟ್ಟಡಗಳು ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಮುಳುಗಡೆ ಆಗುತ್ತಿರುವಂತೆಯೇ 1928ರಲ್ಲಿ ನಿರ್ಮಾಣವಾಗಿ ಸೈನಿಕರನ್ನು, ಸ್ವಯಂ ಸೇವಕರನ್ನು ತರಬೇತುಗೊಳಿಸಿ ದೇಶಸೇವೆಗೆ ಅಣಿಗೊಳಿಸಿದ ಶ್ರೇಯಸ್ಸು ಹೊಂದಿರುವ ಭಾರತ ಸೇವಾದಳ ಕಟ್ಟಡವೂ ಕೃಷ್ಣಾರ್ಪಣವಾಗಲಿದೆ. ಬಾಗಲಕೋಟೆ ಸೇವಾದಳದ ರೂವಾರಿ ಡಾ. ನಾ.ಸು. ಹರ್ಡೀಕರ ಅವರು ಇಲ್ಲಿ ಸ್ವಯಂ ಸೇವಕರ ತರಬೇತಿ ನಡೆಸಿ, ಸೇವಾದಳದ ಎಲ್ಲ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಅನೇಕ ಸೈನಿಕರಿಗೆ ಇಲ್ಲಿ ತರಬೇತಿ ದೊರೆತಿದೆ. ಇಂತಹ ಶಿಸ್ತು, ಸಾಹಸಿ ವೀರರ ತರಬೇತಿ ಕೇಂದ್ರವಾಗಿ ನಿಂತಿದ್ದ ಈ ಕಟ್ಟಡ ಕೆಲವೇ ದಿನಗಳಲ್ಲಿ ನೀರಿನಲ್ಲಿ ಮುಳುಗುತ್ತಿರುವದು ನಷ್ಟದ ಸಂಗತಿಯೇ ಸರಿ.



ಇದು ನವನಗರದ ಸ್ಥಿತಿ. ನೆಟ್ಟ ಅಡಿಗಲ್ಲು ಕೂಡ ಈಗ ಕಿತ್ತು ಹೋಗುತ್ತಿವೆ.




ಹೆಸರಿಗೆ ನವನಗರ, ಒಂದು ಹಳ್ಳಿಗೆ ಆಗುವಷ್ಟಾದರೂ ಅಲ್ಲಿ ಮನೆಗಳಿಲ್ಲ.

ಕನಸಾಗೇ ಉಳಿದ ಚಂಡೀಗಡ ಮಾದರಿ ನಗರ : 1983ರಲ್ಲಿ ಮುಳುಗಡೆಯಾಗುವ ಬಾಗಲಕೋಟೆ ಪಟ್ಟಣವನ್ನು ನವನಗರಕ್ಕೆ ಸ್ಥಳಾಂತರಿಸುವ ಜೊತೆಗೆ ಚಂಡೀಗಡ ಮಾದರಿ ನಗರವನ್ನು ನಿರ್ಮಿಸಬೇಕೆಂಬ ತೀರ್ಮಾನ ಅಂದಿನ ಜನತಾಪಕ್ಷದ್ದಾಗಿತ್ತು. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ನೀರಾವರಿ ಮಂತ್ರಿ ಎಚ್.ಡಿ.ದೇವೇಗೌಡ ಅವರನ್ನೊಳಗೊಂಡ ಸ್ಥಳೀಯ (ಜಿಲ್ಲೆಯ) ಪ್ರತಿನಿಧಿಗಳೂ, ಸಂಘಟನೆಗಳ ಮುಖಂಡರುಗಳು ಸಮಾಲೋಚನೆ ಸಭೆಯಲ್ಲಿ ಚಂಡೀಗಡ ನಗರದ ಕಲ್ಪನೆ ಹೊರಬಿದ್ದು ಚಾರ್ಲ್ಸ್ ಕೊರಿಯಾ ಅವರ ನೀಲನಕ್ಷೆಯೂ ಸಿದ್ಧವಾಯಿತು. ಆದರೆ ಆ ನಗರದ ಕನಸು ಈ ತನಕವೂ ಈಡೇರಿಲ್ಲ. ಅದು ಕನಸಾಗಿಯೇ ಉಳಿದಿದೆ. 4500 ಎಕರೆ ಪ್ರದೇಶದಲ್ಲಿ ನಿವೇಶನ, ಶಾಲೆ, ಆಸ್ಪತ್ರೆ, ಆಟದ ಮೈದಾನ, ಉದ್ಯಾನವನ ಸೇರಿದಂತೆ ಮೂಲಭೂತ ಸೌಲಭ್ಯಗಳು



ಎಲ್ಲಾ ಸಮಸ್ಯೆಗಳ ಮೂಲವಾಗಿರುವ ಆಲಮಟ್ಟಿ ಆಣೆಕಟ್ಟು

ದೊರೆಯುವಂತಾಗಬೇಕಾಗಿದೆ. ಇದರ ಜೊತೆಗೆ ಸಂತ್ರಸ್ತರೂ ಕೂಡಾ ತಮ್ಮ ನಿವೇಶನದಲ್ಲಿ ಮನೆ ನಿರ್ಮಿಸಿಕೊಳ್ಳಬೇಕಾಗಿದೆ. ಅಲ್ಲಿಗೆ ಹೋಗಿ ಜೀವನ ಆರಂಭಿಸಬೇಕಿದೆ.



ಏಳುವುದೋ ಬೇಡವೋ ಎಂಬಂತೆ ಎದ್ದು ನಿಲ್ಲಲು ಯತ್ನಿಸುತ್ತಿರುವ ಹೈಟೆಕ್ ಆಸ್ಪತ್ರೆ

ಮನೆಯೂ ಇಲ್ಲ - ಜನರೂ ಇಲ್ಲ : ನಗರದ ನದಿ ದಂಡೆಯ ಜನತೆಗೆ ಅಂದರೆ ಈಗಾಗಲೇ ಪರಿಹಾರ ಧನ, ನಿವೇಶನ ಪತ್ರ ಪಡೆದ ಸತ್ರಸ್ತರಿಗೆ ಮುಳುಗಡೆಯ ಸೂಚನೆ ನೀಡಿ ಸ್ಥಳಾಂತರಗೊಳ್ಳಲು ತಿಳಿಸಿದ್ದರೂ ಕೂಡಾ ಬಹಳಷ್ಟು ಜನರು ಇನ್ನೂ ತನಕ ಮನೆ ಕಟ್ಟಿಸಿಕೊಂಡಿಲ್ಲ. ಕಟ್ಟಿಸಿದ ಕೆಲವರು ತಮ್ಮ ಮನೆಗಳಲ್ಲಿ ಹೋಗಿ ನೆಲೆಸದೇ ಅದನ್ನು ಬಾಡಿಗೆಗೆ ನೀಡಿ ತಾವು ಹಳೆಯ ಮನೆಯಲ್ಲಿ ವಾಸಿಸುತ್ತಿದ್ದಾರೆ. ಇದು ಸರಕಾರಕ್ಕೂ ಕೂಡ ಸಮಸ್ಯೆ ತಂದೊಡ್ಡಿದೆ. ಇವರು ಸುರಕ್ಷಿತ ಸ್ಥಳಕ್ಕೆ ಹೋಗುವಂತೆ ಪದೇ ಪದೇ ಮನವಿ ಮಾಡಿಕೊಳ್ಳುವದೇ ಇಲಾಖೆಯ ಕೆಲಸವಾಗಿಹೋಗಿದೆ. ಹೀಗಾಗಿ ನವನಗರದಲ್ಲಿ ಜನರ ವಾಸ ಆಗಬೇಕಾದ ಸಂಖ್ಯೆಯಲ್ಲಿ ಆಗಿಲ್ಲ.

ಡಾ. ಜಾಮಾದಾರ ಪರಂಪರೆ : ನವನಗರಕ್ಕೆ ಮೊದಲು ನಾವೇ ಹೋದರೆ ಜನರು ತ್ವರಿತಗತಿಯಲ್ಲಿ ಬರಬಹುದೆಂಬ ಕಲ್ಪನೆಯಿಂದ ಕೃಷ್ಣಾ ಮೇಲ್ದಂಡೆ ಯೋಜನೆಯ ಪುನರ್‌ವಸತಿ ಆಯುಕ್ತ ಡಾ.ಎಸ್.ಎಂ.ಜಾಮದಾರ ಅವರು ತಮ್ಮ ಕಚೇರಿಯನ್ನು ಹಳೇ ನಗರದಿಂದ ಸ್ಥಳಾಂತರಿಸಿದರು. ಜೊತೆ ಜೊತೆಗೆ ಅನೇಕ ಇಲಾಖೆಗಳ ಕಚೇರಿಗಳು ಅಲ್ಲಿ ಆರಂಭವಾದವು. ಆದರೂ ಜನರು ಇನ್ನೂ ಮನಸ್ಸು ಮಾಡುತ್ತಿಲ್ಲ. ಕೆಲವು ಸಂತ್ರಸ್ತರು ಅಲ್ಲಿಗೆ ಹೋಗದಿರುವದಕ್ಕೂ ಕೆಲ ಕಾರಣಗಳಿವೆ. ಪರಿಹಾರಧನದಲ್ಲಿ ವಿಳಂಬ, ಪೂರ್ಣಪ್ರಮಾಣದ ಪರಿಹಾರ ದೊರೆಯದೇ ಇರುವದು. ಸಿಗಬೇಕಾದಷ್ಟು ಪರಿಹಾರ ಸಿಕ್ಕದೇ ಕೋರ್ಟ್ ಮೊರೆಹೋಗಿರುವ ಸಮಸ್ಯೆಗಳಿರುವದರಿಂದ ಸ್ಥಳಾಂತರಗೊಳ್ಳುವ ಕಾರ್ಯದಲ್ಲಿ ಮಂದಗತಿ ಉಂಟಾಗಿರುವದು ಸ್ಪಷ್ಟ. ಆದರೆ ರಕ್ಷಣೆ ಮಾಡಿಕೊಳ್ಳಬೇಕಲ್ಲವೆ?

ವಾಣಿಜ್ಯ ಚಟುವಟಿಕೆ ಇಲ್ಲದಿರುವಿಕೆ : ಈಗಿರುವ ನಗರದಲ್ಲಿ ಅನೇಕ ಅಂಗಡಿ ಮುಂಗಟ್ಟುಗಳು ಮುಳುಗಡೆಗೆ ಒಳಪಡಲಿವೆ. ಇವರಿಗೆ ನವನಗರದಲ್ಲಿ ವಾಣಿಜ್ಯ ಚಟುವಟಿಕೆಗೆ ಅವಕಾಶಬೇಕು. ಈಗ ಅದು ಇನ್ನೂ ಪ್ರಾಪ್ತವಾಗಿಲ್ಲ. ಹೀಗಾಗಿ ಅಂಗಡಿಗಳ ಮಾಲಿಕರೂ, ಅಲ್ಲಿಗೆ ಹೋಗಿಲ್ಲ. ಅವರಿಗೆ ವ್ಯವಸ್ಥೆಯಾದರೂ ವ್ಯವಹಾರಕ್ಕೆ ಜನರು ಬೇಕಲ್ಲ? ಹೀಗಾಗಿ ಒಂದಕ್ಕೊಂದು ಸಂಬಂಧ ಇದ್ದು ಎಲ್ಲವೂ ಒಮ್ಮೆಲೆ ಆಗಬೇಕಾದ ಅನಿವಾರ್ಯತೆ ಬಂದಿದೆ. ಇದೆಲ್ಲ ಆಗಬೇಕಿರುವದು 2000 ಇಸ್ವಿ ಪೂರ್ಣಗೊಳ್ಳುವುದರೊಳಗೆ.

ಹದಿನಾರು-ಹದಿನೇಳು ವರ್ಷಗಳಿಂದ ನವನಗರ ನಿರ್ಮಾಣ, ಸಂತ್ರಸ್ಥರ ಸ್ಥಳಾಂತರಕ್ಕೆ ಸಿದ್ಧತೆಗಳು ನಡೆಯುತ್ತಾ ಬಂದಿದ್ದರೂ ಈ ತನಕ ಚುರುಕುಗೊಳ್ಳದ ಕಾರ್ಯ ಈಗ ಅತಿಚುರುಕುಗೊಂಡು ಒಂದು ಅಂತಿಮ ರೂಪಕ್ಕೆ ಬಂದಿರುವಂತಿದೆ. ರಸ್ತೆ, ವಿದ್ಯುತ್, ನೀರು, ಒಳಚರಂಡಿ, ಉದ್ಯಾನವನ ಸೌಲಭ್ಯಗಳಿಗೆ ತೊಂದರೆ ಇಲ್ಲವಾಗಿದ್ದರೂ, ಮುಳುಗಡೆಗೆ ತುತ್ತಾಗುವ 50 ಸಾವಿರ ಜನರು ಹೊಸ ನಗರಕ್ಕೆ ಬಂದು ನೆಲೆಸಲು ಪರಿಪೂರ್ಣ ವ್ಯವಸ್ಥೆ ಆಗಬೇಕು. ಯೋಗ್ಯ ಪರಿಹಾರ, ಸವಲತ್ತು ಸಿಗಬೇಕು. ಅಂದಾಗ ಮಾತ್ರ ಎಲ್ಲವೂ ಸುಸೂತ್ರವಾಗಿ ನಡೆದು ಸರಕಾರದ ಕೆಲಸ, ಅದಕ್ಕಾಗಿ ಶ್ರಮಪಟ್ಟವರ ಕೆಲಸ ಪೂರ್ಣಗೊಳ್ಳುತ್ತದೆ. ತ್ಯಾಗಜೀವಿ ಸಂತ್ರಸ್ತನಿಗೂ ನೆಮ್ಮದಿಯ ಬದುಕು ಸಾಗಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇಲ್ಲದಿದ್ದರೆ ಬರುವ ಕೆಲವೇ ದಿನಗಳಲ್ಲಿ ಸಂತ್ರಸ್ತ ಇತ್ತ ಸಾಯಲು ಆಗದೇ ಅತ್ತ ಬದುಕಲು ಆಗದೇ ನೀರಿನಲ್ಲಿ ನಿಲ್ಲುವ ಪರಿಸ್ಥಿತಿ ಬರಬಹುದಾಗಿದೆ. ಇದಕ್ಕೆ ಯಾರು ಹೊಣೆಗಾರರು ?

■ ಪ್ರಕಾಶ ಬಾಳಕ್ಕನವರ

ಮುಳುಗಡೆಯ ಹಾದಿಯಲ್ಲಿ ನನ್ನ ಬಾಲ್ಯದ ನೆನಪು



■ ರೇಖಾ ಕಾಖಂಡಕಿ

ನೂರ ಮೂವತ್ತೆರಡು ಹಳ್ಳಿಗಳು ಮುಳುಗುವಾಗ ಒಂದೇ ಪರಿಸರದಲ್ಲಿ ಒಟ್ಟಾಗಿ ಬದುಕಿದವರು ತನಗೆ ನೀಡಿದ್ದ ನೆಲದಲ್ಲಿ, ಹಣದಲ್ಲಿ ಚದುರಿಹೋಗಿ ನಿರ್ವಿಣ್ಣವಾಗಿ ಬದುಕುವದನ್ನು ಕಂಡೆ. ಹತ್ತು-ಹನ್ನೊಂದು ಸಮಸ್ಯೆಗಳು. ಮುಳುಗುವುದು ಬರಿ ಊರೊಂದೇ ಅಲ್ಲ, ಅಲ್ಲಿಯ ಸಂಸ್ಕೃತಿ, ಅಲ್ಲಿಯ ನಾಗರಿಕತೆ. ನೆಲದೊಡನೆ ಬೆಳೆದು ಬಂದ ಅವರ ಸಂಬಂಧ, ಅವರ ಕನಸು, ಕಾಣಲಾಗದ ಭವಿಷ್ಯ,

ಬಾಲ್ಯ ಯಾವಾಗಲೂ ಮನುಷ್ಯನ ಭವಿಷ್ಯಕ್ಕೆ ಗಿಡದ ಬೇರಿದ್ದಂತೆ. ಭದ್ರಬುನಾದಿಯಂತೆ. ಬದುಕಿನ ದಿವ್ಯ ಸೆಲೆಯಂತೆ. ಹಾಗೆಯೇ ನನ್ನ ಬಾಲ್ಯ. ನನ್ನೂರು, ನನ್ನೂರಿನ ಜನ, ನನ್ನ ಸಾಹಿತ್ಯಕ್ಕೆ ಪ್ರೇರಣೆ ಕೂಡ. ನನ್ನ ಬಾಲ್ಯ ನೆನಪಾದರೆ ನೆನಪಾಗುತ್ತದೆ ನಾನು ಹುಟ್ಟಿದ ಊರು ಬಾಗಲಕೋಟೆ. ಘಟಪ್ರಭಾ ನದಿ, ಕಿಲ್ಲೆ. ಮಲ್ಲಯ್ಯನ ಗುಡ್ಡ, ನದಿಯಂಚಿಗಿರುವ ಕೋಟೆ, ಬಾಜಾರ, ಪಂಖಾಮಸೂಕಿಲೆ ಎಲ್ಲ-ಈ ಪರಿಸರ, ನದಿ-ಗುಡ್ಡ ಈಗಲೂ ನನ್ನ ಮನದಲ್ಲಿ ಹಸಿರಿನಂತೆ ನಿಂತಿದೆ ನಾನು ಸಣ್ಣವಳಿದ್ದಾಗ ಯಾವಾಗಲೂ ಹೇಳುತ್ತಿದ್ದರು ''ಬಾಗಲಕೋಟಿ ಮುಳುಗ್ತದಂತ.... ಬಾಗಲಕೋಟಿ ಮುಳುಗ್ತದಂತ'' ಎಂದು, ಅಬೊಧ ವಯಸ್ಸು ನಮ್ಮದು. ಅಮಾಯಕ ಮನಸ್ಸು ಕೂಡ. ಎಲ್ಲಿ ಮುಳುಗುತ್ತದೆ, ಯಾಕೆ ಮುಳುಗುತ್ತದೆ ಎಂಬ ಪ್ರಜ್ಞೆ ಕೂಡ ಇರಲಿಲ್ಲ. ನಾನು ಹೈಸ್ಕೂಲು ಮುಗಿಸಿ ಬೆಂಗಳೂರಿಗೆ ಬಂದ ಹೊಸದು. ಹುಟ್ಟಿದೂರಿನ ಸೆಳೆತ ಸದಾ ನನ್ನನ್ನು ಸೆಳೆಯುತ್ತಿತ್ತು. ನನ್ನ ಬದುಕಿನ ಬೇರಿರುವದೆ ಅಲ್ಲಿ ಎನಿಸುತ್ತಿತ್ತು. ಎಷ್ಟು ವಿಚಿತ್ರ ಈ ಬದುಕು ಎನ್ನುವದು ! ಎಲ್ಲಿಯೋ ಹುಟ್ಟುತ್ತೇವೆ, ಎಲ್ಲಿಯೋ ಬೆಳೆಯುತ್ತೇವೆ, ಎಲ್ಲಿಯೋ ಬಂದು ನೆಲೆಸುತ್ತೇವೆ ಅದೇ ಜೀವನವೆಂದು ಅಪ್ಪಿಕೊಳ್ಳುತ್ತೇವೆ. ಆ ಪರಿಸರಕ್ಕೆ, ಆ ತಾಣಕ್ಕೆ, ಆ ನೆಲಕ್ಕೆ, ಆದರೂ ನಾವು ಹುಟ್ಟಿ-ಬೆಳೆದ ಮಣ್ಣಿನ ಗುಣ ಮಾತ್ರ ನಮ್ಮಲ್ಲಿ ಜೀವ ಸತ್ವವಾಗಿರುತ್ತದೆ. ಬದುಕಿನ ದ್ರವ್ಯಕೂಡ ಆಗಿರುತ್ತದೆ. ನನಗೆ ಆದದ್ದು ಕೂಡ ಹಾಗೇ. ಬೆಂಗಳೂರಿಗೆ ಬಂದು ನೆಲಸಿ, ಕಾಲೇಜು ಮುಗಿಸಿದರೂ, ನನ್ನ ಅತ್ತೆಯ ಮನೆಯೂ ಕೂಡ ಬಾಗಲಕೋಟೆಯೇ ಆದದ್ದು. ನಾನು ನನ್ನ ಗಂಡ ಒಂದೇ ಓಣಿಯಲ್ಲಿ ಹುಟ್ಟಿ-ಬೆಳೆದು ಬಾಲ್ಯ ಕಳೆದವರು. ಮತ್ತೆ ನೆಲೆಸಿದ್ದು ಬೆಂಗಳೂರೇ, ಆದರೂ ವರ್ಷಕ್ಕೊಮ್ಮೆ ಬಾಗಲಕೋಟೆಗೆ ಹೋಗುವದಿದೆ. ದಾಸ ಪರಂಪರೆಯಲ್ಲಿ ಪ್ರಸಿದ್ಧರಾದ ಶ್ರೀ ಪ್ರಸನ್ನವೆಂಕಟ ದಾಸರ ಮನೆತನಕ್ಕೆ ಸೊಸೆಯಾಗಿ ಹೋದವಳು ನಾನು. ಇಂಥ ಪ್ರಸಿದ್ಧರು ಹುಟ್ಟಿ ಬಾಳಿದ ಮನೆ ಕೂಡ ಇವತ್ತು ಮುಳುಗಿ ಹೋಗುವಾಗ ಮನಸ್ಸಿಗೆ ಆಗುವ ವ್ಯಥೆ ಕೂಡ ಅಷ್ಟಿಷ್ಟಲ್ಲ.

ನನ್ನೂರಿನ ಪರಿಸರ, ವಾತಾವರಣ, ಬಾಲ್ಯದ ನೆನೆಪುಗಳು ನನ್ನ ಸಾಹಿತ್ಯದ ಪ್ರೇರಣೆಯಾಗಿದ್ದವು. ಅನಂತ ಅನುಭವದ ಜೀವದ್ರವ್ಯವಾಗಿದ್ದವು. ಇತ್ತೀಚಿನ ವರ್ಷಗಳಲ್ಲಿ 'ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನನ್ನೂರು ಕೂಡ ಮುಳುಗುತ್ತದೆ' ಎಂಬ ಸುದ್ದಿ ನಿಖರವಾಗಿತ್ತು. ದಿನ ಬೆಳಗಾದರೆ ಪೇಪರಿನಲ್ಲಿ ಆ ಕುರಿತು ಹಲವಾರು ಸುದ್ದಿಗಳು ಅದರ ಮೇಲೆ ಬೀರಿದ ರಾಜಕೀಯ ಪ್ರಭಾವ, ಸಾಮಾಜಿಕವಾಗಿ ಜನಗಳ ಅತಂತ್ರ ಬದುಕು, ಅಸ್ತವ್ಯಸ್ತ ದಿನಚರಿ. ಇವತ್ತು ಜೈನಪ್ಯಾಟಿಗೆ ನೀರು ಬಂತು, ಓಣಿಯ ಅಂಚಿಗೆ ನೀರು ಬಂತು ಎಂದು ಓದುವಾಗ ನನ್ನ ಮನಸ್ಸಿನ ವಿಪ್ಲವ, ತಳಮಳ, ಹೋರಾಟ, ಹೇಳತಿರದು. ಭಾವನಾತ್ಮಕವಾಗಿ ನನ್ನೊಳಗೆ ಸೇರಿ ಹೋಗಿದ್ದ ನನ್ನೂರು, ಇನ್ನು ಎಂದೆಂದಿಗೂ ನೋಡಲಾಗುವುದಿಲ್ಲ. ಆ ಬದುಕು, ಆ ಬಾಲ್ಯ, ಆ ಜನಜೀವನ, ನಾನು ಓಡಾಡಿದ ಕಿಲ್ಲೆ, ಸಂದಿಗೊಂದಿಗಳು, ನಾನು ಓದಿದ ವಾಣಿಮಹಲ್ ಸಾಲೆ, ಸಕ್ರಿ ಹೈಸ್ಕೂಲು, ಘಟಪ್ರಭಾನದಿ, ಮಲ್ಲಯ್ಯನಗುಡ್ಡ, ನದಿ ಅಂಚಿಗಿರುವ ಕೋಟೆ, ಕೊತ್ಲಪ್ಪನ ಗುಡಿ, ಪಂಖಾಮಸೂ ಕಿಲೆ, ಬಾಜಾರ ನನ್ನ ಕೆಲವು ಕೃತಿಗಳಲ್ಲಿ ಅಭೂತಪೂರ್ವವಾಗಿ ಸೇರಿಕೊಂಡ ಈ ಸ್ಥಳಗಳು ಇನ್ನು ಮುಂದೆ ಬರಿ ಅವಶೇಷಗಳಾಗಿ ಉಳಿಯುತ್ತವೆ. ಎಂದಿಗೂ ಇವುಗಳನ್ನು ನಾನು ಕಾಣಲಾಗುವುದಿಲ್ಲ. ಆ ಮೇಲೆ ನನ್ನ ಬಾಲ್ಯದ ಪರಿಸರವನ್ನು, ನಾನು ಓಡಾಡಿದ



ಹದಗೆಟ್ಟ ರಸ್ತೆಯಂತೆ ಕಂಡರೂ ಹುಟ್ಟಿದ ಊರಿನ ಮೋಹ ಮಾಸುವುದಿಲ್ಲ




ಬಾಗಲಕೋಟೆಯ ಓಣಿಯೊಂದರಲ್ಲಿ ಸಾಗುತ್ತಲೇ ಇರುವ ದೈನಂದಿನ ಬದುಕು

ಹೆಜ್ಜೆ ಗುರುತುಗಳನ್ನು ಹುಡುಕುವದೆಲ್ಲಿ? ಎನಿಸಿದಾಗ ಮನಸ್ಸಿಗೆ ಖೇದವಾಗುತ್ತಿತ್ತು. ಭಾವನಾತ್ಮಕವಾಗಿ ನಾನು ತೋಳಲಾಡುತ್ತಿದ್ದೆ. ಅದರೆ ಅಲ್ಲಿಯೇ, ಬೇರುಬಿಟ್ಟು, ಬದುಕಿನ ಮೂಲ ಹಿಡಿದುಕೊಂಡು, ಹಗಲು-ರಾತ್ರಿ ಅದೇ ಭೂಮಿಯಲ್ಲಿ ದುಡಿದು ಜೀವನ ಸಾಗಿಸಿ, ಅದೇ ತಮ್ಮ ಭವಿಷ್ಯದ ಹಾದಿ ಎಂದುಕೊಂಡ ಜನಗಳ ಹತಾಶ ಹೋರಾಟದ ಭಾವನೆಗಳನ್ನು ನಾನಾದರೂ ಹೇಗೆ ಅಳೆಯಲಿ? ವೈಜ್ಞಾನಿಕವಾಗಿ ದೇಶದ ಪ್ರಗತಿಗೆ ಕಾರಣರಾದ ಈ ಜನಗಳ ತ್ಯಾಗ ದೊಡ್ಡದೇ ಇದನ್ನು ದೇಶ ಪರಿಗಣಿಸೀತೆ? ಇವತ್ತು ಅವರಿಗಾಗಿ ಸಂತ್ರಸ್ತರಿಗಾಗಿ ಪುನರ್ವಸತಿ ನಿರ್ಮಿಸಬಹುದು, ಅನುಕೂಲಗಳನ್ನು ಒದಗಿಸಬಹುದು. ಆದರೆ ಕಳೆದು ಹೋದ ನಿಜವಾದ ಬದುಕಿನ ಮೌಲ್ಯವನ್ನು, ಮುಳುಗಿಹೋಗಲಿರುವ ಸಂಸ್ಕೃತಿಯನ್ನು, ಹರಿದು ಹಂಚಿಹೋಗಲಿರುವ ವೃತ್ತಿ-ಧರ್ಮಗಳನ್ನು, ನಿರಾಳವಾದ ಬದುಕನ್ನು ಮತ್ತೆ ಕೊಡಲು ಸಾಧ್ಯವೇ? ಮುಳುಗಡೆಯ ಹಾದಿಯಲ್ಲಿ 'ಕಳೆದುಹೋದ ಬಾಲ್ಯವನ್ನು ಮತ್ತೆ ನಾನು ಕಾಣಲು ಸಾಧ್ಯವಿಲ್ಲ' ಎಂದು ನಾನು ಪರಿತಪಿಸುವಾಗ, ಹರಿದು-ಹಂಚಿ ಹೋಗಲಿದ್ದ ಭವಿಷ್ಯದ ಹಾದಿಯನ್ನು ಕಾಣಲಾಗದ ಆ ನನ್ನ ಜನ ಹೇಗೆ ತಳಮಳಿಸುತ್ತಿರಬಹುದು. ಇದೆಲ್ಲ ದ್ವಂದ್ವ ನನ್ನಲ್ಲಿ ಹುಟ್ಟುತ್ತಿತ್ತು. ಭಾವನಾತ್ಮಕವಾಗಿ ಬೆಸೆದುಹೋದ ನನ್ನ ತೊಳಲಾಟಕ್ಕೆ ಒಂದು ರೂಪ ಕೊಡಲೆಂದೆ ನಾನು ಬಾಗಲಕೋಟೆಯ ಪರಿಸರ, ಅಲ್ಲಿಯ ಜನಜೀವನ, ರೀತಿ-ನೀತಿ, ಸಂಪ್ರದಾಯ, ಹಬ್ಬ ಹುಣ್ಣಿಮೆಗಳ ವಿಶೇಷತೆ, ನಾನು ಬಾಲ್ಯದಲ್ಲಿ ಕಂಡಂಥ ವಿಶಿಷ್ಟ ವ್ಯಕ್ತಿಗಳು ಮತ್ತು ಈಗಿನ ಹಂತದಲ್ಲಿರುವ ಜನರ ಅಸ್ತವ್ಯಸ್ತ ಬದುಕು, ಪರಿಹಾರ ನಿಧಿಗಾಗಿ ಹೋರಾಟ, ಅದಕ್ಕಾಗಿ ಒಡೆದ ಕುಟುಂಬಗಳು ಎಲ್ಲವನ್ನು ದಾಖಲಿಸಿ ''ಇದ್ದು-ಇಲ್ಲದ ಸಂಬಂಧಗಳು'' ಎನ್ನುವ ಕಾದಂಬರಿ ಕೂಡ ಬರೆದಿದ್ದೇನೆ. ಕೆಲವು ತಿಂಗಳ ಹಿಂದೆ ಬಾಗಕೋಟೆಗೆ ಹೋಗಿ ಕೆಲವು ದಿನ ಅದೇ ಬಾಲ್ಯದ ನೆನಪು ಕಟ್ಟಿಕೊಂಡು ಊರತುಂಬ ಓಡಾಡಿದೆ. ಕೆಲವು ಸಂತ್ರಸ್ತರನ್ನು ಕಂಡೆ. ಪುನರ್ವಸತಿಯಲ್ಲಿ ಸುತ್ತ ಹಳ್ಳಿಗಳಲ್ಲಿ ಮತ್ತೆ ಬದುಕನ್ನು ನಿರ್ಮಿಸಿಕೊಂಡವರನ್ನು ಕಂಡೆ. ಸುತ್ತ ನೂರ ಮೂವತ್ತೆರಡು ಹಳ್ಳಿಗಳು ಮುಳುಗುವಾಗ ಒಂದೇ ಪರಿಸರದಲ್ಲಿ ಒಟ್ಟಾಗಿ ಬದುಕಿದವರು ತನಗೆ ನೀಡಿದ್ದ ನೆಲದಲ್ಲಿ, ಹಣದಲ್ಲಿ ಚದುರಿಹೋಗಿ ನಿರ್ವಿಣ್ಣವಾಗಿ ಬದುಕುವದನ್ನು ಕಂಡೆ. ಹತ್ತು-ಹನ್ನೊಂದು ಸಮಸ್ಯೆಗಳು. ಮುಳುಗುವುದು ಬರಿ ಊರೊಂದೇ ಅಲ್ಲ, ಅಲ್ಲಿಯ ಸಂಸ್ಕೃತಿ, ಅಲ್ಲಿಯ ನಾಗರಿಕತೆ. ನೆಲದೊಡನೆ ಬೆಳೆದು ಬಂದ ಅವರ ಸಂಬಂಧ, ಅವರ ಕನಸು, ಕಾಣಲಾಗದ ಭವಿಷ್ಯ, ಸಮಸ್ಯೆಯಾದ ವರ್ತಮಾನದ ಹಾದಿ ಇವೆಲ್ಲ ಕಂಡಾಗ ಖೇದ ಕೂಡ ಆಗುತ್ತದೆ. ಆದರೆ ಏನು ಮಾಡುವದು ದೇಶದ ಪ್ರಗತಿಗೆ ಇನ್ನೊಂದು ಹೊಸ ಸಂಸ್ಕೃತಿಯನ್ನು ಬೆಳೆಸಲು ನಾವು ಸಿದ್ಧರಾಗಬೇಕಲ್ಲ! ■

ಜನರ ಕಾಳಜಿ ಇರಬೇಕಾದ್ದು ತಾವು ಏನು ಮಾಡಬೇಕು ಎಂದಲ್ಲ. ತಾವು ಏನು ಎಂಬ ಬಗ್ಗೆ.

– ಮಾಸ್ಟರ್ ಎಡ್‌ಹಾರ್ಟ್



ಹದವರಿತ ಜಾಹೀರಾತು ಮನುಷ್ಯ
ಓಗಿಲ್‌ವಿ

ಜಾಹೀರಾತು ಸೃಜನಶೀಲ ನಿಜ. ಆದರೆ ಅದರಿಂದ ಉತ್ಪನ್ನಗಳ ಬೇಡಿಕೆ ಹೆಚ್ಚದೇ ಇದ್ದರೆ ಪ್ರಯೋಜನ ಏನು? ಸೃಜನಶೀಲತೆಗಾಗಿ ಅವಾರ್ಡು ತೆಗೆದುಕೊಂಡ ಹಲವಾರು ಜಾಹೀರಾತು ಏಜೆನ್ಸಿಗಳು ಬಾಗಿಲು ಮುಚ್ಚಿದ್ದಿದೆ. ಇನ್ನು ಕೆಲವು ಮುಚ್ಚುವ ಹಾದಿಯಲ್ಲಿವೆ. ಸೃಜನಶೀಲತೆಗಿಂತ ಹೆಚ್ಚಾಗಿ ಸೌಂದರ್ಯ, ಅದರಲ್ಲೂ ಆಕರ್ಷಕ ಸೌಂದರ್ಯ ಬಳಸಿ ಜನರನ್ನು ತಲುಪುವುದೇ ಡೇವಿಡ್ ಓಗಿಲ್‌ವಿಯ ಯಶಸ್ಸಿನ ಗುಟ್ಟಾಗಿತ್ತು ಎಲ್ಲಕ್ಕಿಂತ ಹೆಚ್ಚಾಗಿ ಆತ ಒಳ್ಳೆಯ ಮನುಷ್ಯ. ಹಲವಾರು ನಂಬಿಕೆ, ಆದರ್ಶಗಳಿಗೆ ಅಂಟಕೊಂಡು ನಡೆದವರು

ಒಮ್ಮೆ ಲಂಡನ್‌ನ ಜಾಹೀರಾತು ಏಜೆನ್ಸಿಯೊಂದಕ್ಕೆ ಬಂದ ವ್ಯಕ್ತಿಯೊಬ್ಬ ಮಾಲೀಕನನ್ನು ನೋಡಲು ಬಯಸಿದ. ಆತ ಹಳ್ಳಿಯೊಂದರ ಮನೆ ಖರೀದಿಸಿದ್ದ. ಅದನ್ನು ಹೋಟೆಲು ಮಾಡುವುದು ಉದ್ದೇಶ. ಹೋಟೆಲಿಗೆ ಜನ ಬರುವಂತೆ ಮಾಡಲು ಜಾಹೀರಾತು ರೂಪಿಸಲು ಸಾಧ್ಯವೇ? ಎಂದು ತಿಳಿಯಲು ಬಯಸಿದ್ದ. ಅದಕ್ಕಾಗಿ ಐದು ನೂರು ಡಾಲರ್‌ನಷ್ಟು ವೆಚ್ಚ ಮಾಡಲು ತಯಾರಿದ್ದ.

ಮಾಲೀಕ 'ಇಲ್ಲ' ಎಂದೇನೂ ಹೇಳಲಿಲ್ಲ. ತನ್ನ ಆಫೀಸಿನ ಹುಡುಗನೊಬ್ಬನನ್ನು ತೋರಿಸಿ, ಅವನು ಜಾಹೀರಾತು ತಯಾರಿಸಿಕೊಡುತ್ತಾನೆ ಎಂದ. ಹಾಗೆ ಮಾಲೀಕ ತೋರಿಸಿದ ಹುಡುಗ ಬೇರ್‍ಯಾರೂ ಅಲ್ಲ. ಮುಂದೆ ಜಗತ್ತಿನಾದ್ಯಂತ ಜಾಹೀರಾತು ರಂಗದಲ್ಲಿ ಹೆಸರು ಮಾಡಿದ O & M ಸಂಸ್ಥೆಯ ಡೇವಿಡ್ ಓಗಿಲ್‌ವಿ. ಆತ ಜುಲೈ ತಿಂಗಳಲ್ಲಿ ನಿಧನರಾದರು.

ನ್ಯೂಯಾರ್ಕಿನಲ್ಲಿ ಸಣ್ಣದೊಂದು ಸೃಜನಶೀಲ ಬೊಟಿಕ್‌ನಂತೆ 1949ರಲ್ಲಿ ಅಸ್ತಿತ್ವಕ್ಕೆ ಬಂದ ಓಗಿಲ್‌ವಿ ಅಂಡ್ ಮ್ಯಾಥರ್ ಈಗ ಜಗತ್ತಿನ ಪ್ರಮುಖ ನಾಲ್ಕು ಜಾಹೀರಾತು ಸಂಸ್ಥೆಗಳಲ್ಲಿ ಒಂದು. ಪ್ರಪಂಚದ ನಲವತ್ತು ದೇಶಗಳಲ್ಲಿ 140 ಕಚೇರಿಗಳಿವೆ.

ಕೆಲವು ಸಣ್ಣ ಸೂತ್ರಗಳೊಂದಿಗೆ ಆರಂಭವಾದ ಜಾಹೀರಾತು ಸಂಸ್ಥೆ ಇಂದಿಗೂ ಆ ತತ್ವಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಬಂದಿಲ್ಲ. O & M ಆರಂಭವಾಗಿ ಐವತ್ತು ವರ್ಷ ಸಂದಮೇಲೆ, ಟೆಲಿವಿಷನ್ ಬಂದಿದೆ ಎಂಬುದು ಬಿಟ್ಟರೆ ಜಾಹೀರಾತು ಸಾಧನಗಳಲ್ಲಿ ಹೆಚ್ಚಿನ ಬದಲಾವಣೆ ಏನೂ ಆಗಿಲ್ಲ. ಮುಂದೆ ಕೂಡ, ಸದ್ಯದಲ್ಲಿ ಅಂಥ ಕ್ರಾಂತಿಕಾರಕ ಬದಲಾವಣೆ ಕಾಣುತ್ತಿಲ್ಲ.

'ಡೋವ್' ಎಂಬ ಡಿಟರ್ಜೆಂಟ್, ಸಿಯರ್ಸ್‌ನ ಸಿದ್ಧ ಉಡುಪುಗಳಿಂದ ಹಿಡಿದು ಅಮೇರಿಕಾದ ಚುನಾವಣೆಯರವರೆಗೆ ಈ ಜಾಹೀರಾತು ಸಾಮ್ರಾಜ್ಯ ಹರಡಿಕೊಂಡಿದೆ. ಇದಕ್ಕೆ ಕಾರಣ ತಿಳಿಸುತ್ತಾ ಆತ ಹೇಳುವ ಸಣ್ಣದೊಂದು ಮಾತಿದೆ. 'ಈಸ್ಕನಿಸ್ ಮಾತಾಡಿದರೂ ಈತ ಎಷ್ಟು ಚೆನ್ನಾಗಿ ಮಾತಾಡುತ್ತಾನಲ್ಲ ಎಂದರಂತೆ ಜನ. ಅದೇ ಡೆಮಾಸ್ತನೀಸ್ ಮಾತಾಡಿ ಮುಗಿಸಿದ್ದೇ ನಾವು ಫಿಲಿಪ್ ಮೇಲೆ ದಾಳಿ ಮಾಡಲೇಬೇಕು ಎಂದು ತಯಾರಾಗಿ ನಿಂತುಬಿಟ್ಟರಂತೆ.'

ಇಬ್ಬರ ಮಾತಿನ ಉದ್ದೇಶ ಒಂದೇ. ಮೆಚ್ಚುಗೆ ಬೇರೆ, ಕಾರ್ಯಪ್ರವೃತ್ತರಾಗಲು ಪ್ರಚೋದಿಸುವುದು ಬೇರೆ. ಎರಡನೆಯ ಕೆಲಸ ಜಾಹೀರಾತು ಮಾಡಬೇಕು ಎನ್ನುತ್ತಾರೆ ಓಗಿಲ್‌ವಿ.

ಈತ ಲಂಡನ್ನಿನ ಏಜೆನ್ಸಿಯಲ್ಲಿ ಆಫೀಸು ಹುಡುಗನಾಗಿದ್ದಾಗ ನಡೆದ ಘಟನೆ




ಕಾಂಡಂ ಜಾಹೀರಾತಿಗೆ ಓಗಿಲ್‌ವಿ ರೂಪಿಸಿದ ಜಾಹೀರಾತು

ಮೊದಲೇ ಪ್ರಸ್ತಾಪಿಸಿದೆನಲ್ಲ! ಹಳ್ಳಿಯಲ್ಲಿ ಹೋಟೆಲು ಆರಂಭಿಸುವಾತ ಕೊಟ್ಟ ಹಣದಲ್ಲಿ ಒಂದೇ ಒಂದು ಪತ್ರಿಕಾ ಜಾಹೀರಾತು ಹಾಕುವುದೂ ಸಾಧ್ಯವಿರಲಿಲ್ಲ. ಅಂದು ಆತ ಕುಳಿತು, ಒಂದು ಶಿಲಿಂಗ್ ಬೆಲೆಯ ಪೋಸ್ಟ್ ಕಾರ್ಡುಗಳಲ್ಲಿ ಆಕರ್ಷಕ ಆಹ್ವಾನ ಪತ್ರ ಬರೆದು ಲಂಡನ್ನಿನ ಪ್ರತಿಷ್ಠಿತರಿಗೆ ಕಳಿಸಿಕೊಟ್ಟ. ಹೋಟೆಲು ಆರಂಭದ ದಿನ ನಿರೀಕ್ಷೆಗೂ ಮೀರಿ ನೂಕು ನುಗ್ಗಲು. ಅಂದಿನ ದಿನವೇ ನನಗೆ ರಕ್ತದ ರುಚಿ ಹತ್ತಿತು' ಎಂದು ಓಗಿಲ್‌ವಿ ತಮ್ಮ ಇತ್ತೀಚಿನ ಕೃತಿಯಲ್ಲಿ ಹೇಳಿಕೊಂಡಿದ್ದಾರೆ.

ಆರಂಭದಲ್ಲಿ ಸಂಸ್ಥೆ ಸಣ್ಣದು. ಬಂದ ಗ್ರಾಹಕರನ್ನು ನಿರಾಕರಿಸುವಷ್ಟು ಶಕ್ತಿ ಇರಲಿಲ್ಲ. ಆಗ ಆಫೀಸು ಬಾಡಿಗೆ ಕಟ್ಟಲು ಹಣ ಬಂದರೇ ದೊಡ್ಡದು. ಅಂಥ ಮನುಷ್ಯ ರಾಥ್‌ಮನ್ಸ್ ಸಿಗರೇಟನ್ನು ಅಮೇರಿಕಾಕ್ಕೆ ಪರಿಚಯಿಸುವ ಜಾಹೀರಾತು ಒಪ್ಪಿಕೊಳ್ಳಲು ನಿರಾಕರಿಸಿದ್ದ. ಸಿಗರೇಟು ಕಂಪೆನಿಯ ಮಾಲೀಕ ಡಾ.ಆಂಟನ್ ರೂಪರ್ಟ್ ಆಗೊಂದು ಮಾತು ಹೇಳಿದ್ದ. 'ಮುಂದೊಮ್ಮೆ ಖಂಡಿತ ಭೇಟಿಯಾಗೋಣ. ಆಗ ನೀನು ಅವನತಿಯ ಹಾದಿಯಲ್ಲಿರುತ್ತೀಯ'

ಇಪ್ಪತ್ತೈದು ವರ್ಷಗಳ ನಂತರ ಇಬ್ಬರೂ ವಿಶ್ವ ವನ್ಯ ಜೀವಿ ನಿಧಿಯ ಸಭೆಯಲ್ಲಿ ಭೇಟಿಯಾದದ್ದು ನಿಜ. ಆದರೆ ರೂಪರ್ಟ್ ಹೇಳಿದ ಸ್ಥಿತಿಯಲ್ಲಿ ಓಗಿಲ್‌ವಿ ಇರಲಿಲ್ಲ. ಆತನಷ್ಟೇ ಶ್ರೀಮಂತ, ಪ್ರಭಾವಿಯಾಗಿ ಸಭೆಯಲ್ಲಿ ಓಗಿಲ್‌ವಿ ಪಾಲ್ಗೊಂಡಿದ್ದ. ಹಾಗಂತ ಆತ ಹೆಮ್ಮೆಪಟ್ಟುಕೊಳ್ಳುವುದಿಲ್ಲ. 'ರೂಪರ್ಟ್ ನಿಜಕ್ಕೂ ದೊಡ್ಡ ಮನುಷ್ಯ' ಎಂದು ಮೆಚ್ಚಿ ಔದಾರ್ಯ ತೋರುತ್ತಾರೆ.



O & M ರೂಪಿಸಿದ ಜಾಹೀರಾತಿನ ಒಂದು ಮಾದರಿ
ಜಾಹೀರಾತಿನಲ್ಲಿ ಸೌಂದರ್ಯಕ್ಕೆ ಬಹಳ ಮಹತ್ವ

ಕೇವಲ ಹಣ ಮಾಡಬೇಕು ಎಂಬ ಮಹತ್ವಾಕಾಂಕ್ಷೆಯಿಂದ ಅಲ್ಲದೇ, ಆತ್ಮಸಂತೋಷಕ್ಕೆ, ತನ್ನ ಕಾಲದ ಬದುಕು ಇನ್ನಷ್ಟು ಸುಂದರವಾಗಬೇಕು, ಸರಳ ಹಾಗೂ ಸಹಜವಾಗಬೇಕು ಎಂದು ಬಯಸಿದ್ದ ಓಗಿಲ್‌ವಿ.

ಫ್ರೆಂಚ್ ಪತ್ರಿಕೆಯೊಂದು ಕೈಗಾರಿಕಾ ಕ್ರಾಂತಿಗೆ ಕಾಣಿಕೆ ನೀಡಿದವರಲ್ಲಿ ಓಗಿಲ್‌ವಿ ಒಬ್ಬರು ಎಂದು ಹೆಸರಿಸಿತು. ಉಳಿದವರೆಂದರೆ ಆಡಂ ಸ್ಮಿತ್, ಎಡಿಸನ್, ಕಾರ್ಲ್ ಮಾರ್ಕ್ಸ್, ರಾಕ್‌ಫೆಲರ್, ಫೋರ್ಡ್ ಮತ್ತು ಕೀನ್ಸ್. ಇವರಲ್ಲಿ ಬದುಕಿ ಉಳಿದದ್ದು ಓಗಿಲ್‌ವಿ ಮಾತ್ರ. ಅದನ್ನು ಪ್ರಸ್ತಾಪಿಸುತ್ತಾ ನಾನು ತೀರಾ ಮುದುಕನಾದೆನೇನೋ ಅನ್ನಿಸುತ್ತದೆ' ಎಂದು ತಮಾಷೆಯಾಗಿ ಆತ ಹೇಳಿಕೊಂಡಿದ್ದು ಉಂಟು.

ಓಗಿಲ್‌ವಿ ಎಂದೂ ಜೀವನ ಚರಿತ್ರೆ ಬರೆಯಕೊಂಡಿದ್ದು ಇಲ್ಲ. ಅವರು ಬರೆದ ಮೊದಲ ಪುಸ್ತಕ ಜಾಹೀರಾತು ಮನುಷ್ಯನೊಬ್ಬನ ಬಿಚ್ಚು ನುಡಿಗಳು (Confessions of an advertising man) ಮತ್ತು ಇತ್ತೀಚಿನ ಹಾಗೂ ಎರಡನೆಯ ಕೃತಿ ಜಾಹೀರಾತು ಕುರಿತು ಓಗಿಲ್‌ವಿ (Ogilvy on Advertising). ಎರಡೂ ವೃತ್ತಿಯ ಕುರಿತಾದವು.

ಐವತ್ತು ವರ್ಷಕ್ಕೂ ಹೆಚ್ಚು ಕಾಲ ಪ್ರಪಂಚದ ಜಾಹೀರಾತು ರಂಗದ ಮೇಲೆ ತನ್ನ ಮುದ್ರೆ ಒತ್ತಿದ್ದ ಈತ, ಕಾಲ ಹೀಗೇ ಇರುವುದಿಲ್ಲ, ಜಾಹೀರಾತು ರಂಗದ ಅಮೇರಿಕನ್ ಮೊಲವನ್ನು ಮುಂದೊಂದು ದಿನ ಬೇರೆ ರಾಷ್ಟ್ರದ ಆಮೆಯೊಂದು ಹಿಂದೊತ್ತಬಹುದು ಎಂದೂ ಸ್ಪಷ್ಟ ಸೂಚನೆ ನೀಡಿದ್ದಾರೆ. ಹಾಗೆಯೇ ಟಿವಿ ಮತ್ತು ವಿವಿಧ ಕೇಬಲ್ ಜಾಲಗಳೆದುರು ತತ್ತರಿಸಿದಂತೆ ಕಾಣುತ್ತಿರುವ ಪತ್ರಿಕಾ ಜಾಹೀರಾತು ಮುಂದೊಂದು ದಿನ ಪುನರುತ್ಥಾನ ಕಾಣುತ್ತದೆ, ಟಿವಿ ಜಾಹೀರಾತುಗಳ ಮೇಲೆ ನಿಯಂತ್ರಣ ಹೇರುವ ಕಾಲವೂ ಬರುತ್ತದೆ ಎಂದು ಮುನ್ಸೂಚನೆ ನೀಡುತ್ತಾರೆ.

ಶಿಸ್ತು, ಕಟ್ಟುನಿಟ್ಟಿಗೆ ಹೆಸರಾಗಿದ್ದ ಓಗಿಲ್‌ವಿ ಬಗ್ಗೆ ಹಲವಾರು ತಪ್ಪು ಕಲ್ಪನೆಗಳೂ ಇದ್ದದ್ದು ನಿಜ. ಆತ ಮಹಾ ಕಠೋರ ಮನುಷ್ಯ ಎಂದು ಹಲವರು ಭಾವಿಸಿದ್ದರು. ವಿಚಿತ್ರವೆಂದರೆ ನಿಯಮಗಳನ್ನು ರೂಪಿಸಿಕೊಂಡು ಎಂದೂ ಆತ ಕಟ್ಟು ಬೀಳುತ್ತಾ ಇರಲಿಲ್ಲ. ಆತನದು ತೀರಾ ಸರಳ ವಿಚಾರ. ತಾನು ಜಾಹೀರಾತು ಮಾಡುತ್ತಿದ್ದ ಸಾಮಗ್ರಿಗಳನ್ನೇ ಆತ ಕೊಳ್ಳುತ್ತಿದ್ದ. ಆಪ್ತರು, ಸ್ನೇಹಿತರು, ಬಂಧುಗಳನ್ನು ತನ್ನ ವ್ಯವಹಾರದಲ್ಲಿ ಸೇರಿಸುತ್ತಾ ಇರಲಿಲ್ಲ. ಇಂಥ ಸರಳ - ನಿಯಮಗಳೂ ಕೆಲವರಿಗೆ ವಿಚಿತ್ರವಾಗಿ ತೋರುತ್ತವೆ. ಕಠೋರ ನಿಯಮ ಅನ್ನಿಸುತ್ತವೆ.

ಜೀವನದಲ್ಲಿ ಮೇಲೆ ಬರಬೇಕೆಂಬ ಆಕಾಂಕ್ಷೆಯ ಹಾಗೇ ಅದನ್ನು ಸಾಧಿಸುವ ಮಾರ್ಗವೂ ಮುಖ್ಯ ಎಂದು ನಂಬಿದವರು ಓಗಿಲ್‌ವಿ. ಸೌಂದರ್ಯ, ಆಕರ್ಷಣೆ ಹಾಗೂ ಮೌಲ್ಯಗಳು ಹದವಾಗಿ ಬೆರೆತು ಮೂಡಿಬರುತ್ತಿದ್ದ ಜಾಹೀರಾತುಗಳಿಂದಾಗಿಯೇ ಆತ ಯಶಸ್ಸು ಸಾಧಿಸಿದರು. ತಮ್ಮ ಹೆಜ್ಜೆ ಗುರುತು ಮೂಡಿಸಿ ಇತ್ತೀಚೆಗೆ ಕಣ್ಮರೆಯಾದರು.

■ ಸದಾನಂದ. ಜಿ.

ಕಥೆ



ಚಾಕು ಮಾರಲು ಬಂದ ಹುಡುಗ

ಮನುಷ್ಯನ ಕ್ರೌರ್ಯಕ್ಕೆ ಹಲವು ಮುಖ. ಕೊಲೆಯ ಸಾಧನವಾದ ಚಾಕು ಏನೆಲ್ಲ ಆತಂಕಕ್ಕೆ, ಹಾಗೇ ಅಮಾಯಕ ಹುಡುಗನೊಬ್ಬನ ಸಾವಿಗೂ ಕಾರಣ. ಅಂತಿಮವಾಗಿ ಇಂಥ ಎಲ್ಲ ಘಟನೆಗಳಲ್ಲೂ ಬಲಿಯಾಗುವವರು ಅಮಾಯಕರೇ....

ಅವಸರಿಸಬೇಕು, ಈಗಾಗಲೇ ಸಾಕಷ್ಟು ತಡವಾಗಿದೆ. ಅವಳಿಲ್ಲವೆಂದರೆ ಮನೆಯಲ್ಲಿ ಒಂದೂ ವಸ್ತು ಸಿಗುವುದಿಲ್ಲ. ಚಾಳೀಸು ಎಲ್ಲಿಟ್ಟಿರುವೇನೋ ನೆನಪಾಗುತ್ತಿಲ್ಲ. ಆಫೀಸಿನಲ್ಲಿ ಬಿಟ್ಟು ಬಂದಿರಬಹುದು, ಅದೂ ನೆನಪಿಲ್ಲ. ರಾತ್ರಿ ಊಟಕ್ಕೆ ಖಾನಾವಳಿಗೆ ಹೋದಾಗ ಅಲ್ಲಿಯೇ ಮರೆತಿರಬಹುದು.

ಆಫೀಸಿಗೆ ಹೋಗುವ ದಾರಿಯಲ್ಲಿ ಖಾನಾವಳಿಯವನನ್ನು ಕೇಳಿಕೊಂಡೇ ಹೋಗಬೇಕು. ಸ್ಕೂಟರ್ ಬೇರೆ ಕೈಕೊಟ್ಟಿದೆ. ಖಾನಾವಳಿಯಲ್ಲಿ ವಿಚಾರಿಸಿ ಮತ್ತೊಂದು ಬಸ್ಸು ಹಿಡಿಯಬೇಕೆಂದರೆ ಇನ್ನೂ ತಡವಾಗುತ್ತದೆ. ಹಾಗೊಂದು ವೇಳೆ ತಡವಾದರೆ ಮರಗುಳಿ ಸ್ವಭಾವಕ್ಕಾಗಿ ನಿತ್ಯವೂ ಫೈರ್ ಮಾಡುತ್ತಿರುವ ಮ್ಯಾನೇಜರ ಫೈರಿಂಗ್ ದ್ವಿಗುಣಗೊಳಿಸುತ್ತಾನೆ.

ಮರಗುಳಿತನಕ್ಕೆ ಮಾನಸಿಕ ಒತ್ತಡ ಮುಖ್ಯ ಕಾರಣವೆಂದು ಯಾವುದೋ ಪತ್ರಿಕೆಯಲ್ಲಿ ಓದಿದ ನೆನಪು. ಇತ್ತೀಚೆಗೆ ನಡೆಯುವಾಗ ಆಗಾಗ ಅರಿವಿಲ್ಲದಂತೆ ಜೋಲಿ ಹೋಗುತ್ತದೆ. ಈಸೀಜಿ ರಿಪೋರ್ಟ್ ನಾರ್ಮಲ್ ಇದೆ. ಏನಾದರೂ ಮಾನಸಿಕ ಒತ್ತಡವಿದೆಯೇ ಎಂದು ಡಾಕ್ಟರ್ ಕೇಳುತ್ತಾರೆ. ಹೌದು ಎಂದು ಹೇಳುವಷ್ಟು ಮನಸ್ಸು ಕಲ್ಲಾಗಿಲ್ಲದಿರಬಹುದು.

ಆರನೆಯ ವರ್ಗದಲ್ಲಿ ಓದುತ್ತಿದ್ದ ಮಗ ಮೈ ಬಿಸಿಯೆಂದು ಏಕಾಏಕಿ ಮಲಗಿಕೊಂಡ. ಸಣ್ಣ ಪುಟ್ಟ ಔಷಧಿಗೆ ಮಣಿಯಲಿಲ್ಲ. ಎಕ್ಸರೇ ಮಾಡಿಸಿದಾಗ ಪುಪ್ಪಸದಲ್ಲಿ ತೂತು, ತುಂಬ ತಡವಾಗಿದೆ, ಆದರೂ ಪ್ರಯತ್ನಿಸೋಣ ಎಂದಿದ್ದಾರೆ. ಕಳೆದ ಆರು ತಿಂಗಳಿಂದ ಮಗುವಿನೊಂದಿಗೆ ಮಡದಿ ತವರು ಮನೆಯಲ್ಲಿಯೇ ಇದ್ದಾಳೆ. ಈ ದರಿದ್ರ ಊರಿನಲ್ಲಿ ಒಳ್ಳೆಯ ಡಾಕ್ಟರ್ ಕೂಡ ಇಲ್ಲ.

ತುಂಬ ತಡವಾಯಿತು. ಆಟೊ ತೆಗೆದುಕೊಂಡು ಹೋಗದೇ ವಿಧಿಯಿಲ್ಲ. ಅವಸರವಸರವಾಗಿ ಕೀಲಿ ಹಾಕಿದೆ. ಕಾಂಪೌಂಡಿನ ಬದಿಯಲ್ಲಿ ಯಾರೋ ಹುಡುಗ. ಹಿತ್ತಲ ಬಾಗಿಲು ಹಾಕಿದೆನೋ ಇಲ್ಲವೋ ನೆನಪಾಗಲಿಲ್ಲ. ಮತ್ತೆ ಕೀಲಿ ತೆಗೆದು ಒಳಬರುತ್ತಿದ್ದಂತೆ, ಟಿವ್ಹಿ ಬಂದ ಮಾಡಿರಲಿಲ್ಲ. ದರಿದ್ರ ಮರೆವು. ನನ್ನನ್ನೇ ಬೈದುಕೊಂಡೆ. ಹಿತ್ತಲ ಬಾಗಿಲು ಹಾಕಿದ್ದೆ. ನೆನಪಿನಿಂದ ಹಾಕಿ ಬಂದಿದ್ದೇನಲ್ಲವೆಂದು ಹೆಮ್ಮೆ.

ನಿನ್ನೆ ರವಿವಾರವೇ ಮಗನನ್ನು ನೋಡಲು ಹೋಗಬೇಕಾಗಿತ್ತು. ಕೋ - ಆಪರೇಟಿವ್ ಬ್ಯಾಂಕ್ ಸಿಬ್ಬಂದಿಗಳೆಂದರೆ ಒಣಗಿ ಬಿದ್ದ ಕೊರಡುಗಳೆಂದು ತಿಳಿದುಕೊಂಡಿದ್ದಾರೆ. ಜಿ.ಬಿ. ಮೀಟಿಂಗ್ ಇದೆ. ಮಹತ್ವದ ವಿಷಯ ಚರ್ಚಿಸಲಿದ್ದಾರೆ. ಯಾರೂ ಗೈರು ಹಾಜರಿಯಿರಕೂಡದೆಂದು ಎರಡು ದಿವಸದ ಹಿಂದೆಯೇ ಮ್ಯಾನೇಜರ ಸರ್‌ಕ್ಯೂಲರ್ ಹೊರಡಿಸಿದ್ದ. ಅವನ ದೂರಾಲೋಚನೆ ಅಗಾಧವಾದುದು. ಕೆಲವೇ ತಿಂಗಳಲ್ಲಿ ನನಗೂ ಬ್ರ್ಯಾಂಚ್ ಮ್ಯಾನೇಜರ್ ಪ್ರಮೋಶನ್ ಕೊಡುವವರಿದ್ದಾರಂತೆ. ಇಂಥ ದೂರಾಲೋಚನೆ ನನಗೆ ಸಾಧ್ಯವೇ?

ಅವಸರವಸರವಾಗಿ ಕೀಲಿ ಹಾಕಿ ಹೊರಗೆ ಬಂದರೆ ಹುಡುಗ ಇನ್ನೂ ಅಲ್ಲಿಯೇ ನಿಂತಿದ್ದಾನೆ. ಹಿತ್ತಲ ಬಾಗಿಲು ಭದ್ರವಾಗಿದೆ. ಕಾಂಪೌಂಡ್ ಗೇಟ್

ತೆರೆಯುತ್ತಿದ್ದಂತೆ ಬಗಲಚೀಲದಿಂದ ಚಾಕು ಹೊರತೆಗೆದು ಬಟನ್ ಒತ್ತಿ ಮುಂದೆ ಹಿಡಿದ. ಎದೆ ಗಡಗಡ ನಡುಗಿತು. ಎದೆಯಲ್ಲಿ ಇರಿದರೆ ಬೆನ್ನಲ್ಲಿ ಹೊರ ಹಾಯುವಷ್ಟು ದೊಡ್ಡದು. ಚೀರುತ್ತ ಓಡಿಹೋಗಬೇಕೆನ್ನಿಸಿತು. ಹುಡುಗನ ಮುಖದಲ್ಲಿ ಕ್ರೌರ್ಯವಿರಲಿಲ್ಲ.

'ಐವತ್ತು ರೂಪಾಯಿ' ಅಂದ. ಚಕಚಕ ಹೊಳೆಯುವ ಚಾಕು. ಗಿಳಿ ಮೂಗಿನಂಥ ತುದಿ. ಸುಂದರವಾದ ಹಿಡಿಕೆ, ಮೇಡ್ ಇನ್ ಅಮೇರಿಕಾ ಬರೆದಿರಬಹುದು. ಐವತ್ತು ರೂಪಾಯಿಗೆ ಕೊಂಡರೆ ನಷ್ಟವಿಲ್ಲ.

ನಮ್ಮಂಥವರಿಗೆಲ್ಲಾ ಇದ್ಯಾಕಪ್ಪಾ. ಕಾಯಿಪಲ್ಲೆ ಹೆಚ್ಚಿಕೊಳ್ಳುವುದಕ್ಕೆ ಇಷ್ಟು ತುಟ್ಟಿ ಚಾಕು ಬೇಕೇ?

'ಇನ್ನೊಂದು ಹತ್ತು ರೂಪಾಯಿ ಕಡಿಮೆ ಕೊಡ್ರಿ'

ಬೇಕಾದರೆ ದವಾಖಾನೆಯಲ್ಲಿರುವ ಮಗನಿಗೆ ಸೇಬು ಕತ್ತರಿಸಿಕೊಳ್ಳಲು ಅನುಕೂಲವಾಗಬಹುದು.

ಹಿಡಿಕೆಯಲ್ಲಿ ಒಂದು ಪೆನ್ ಶೆಲ್ಲಿದೆ.

ಚಾಕುವಿನ ತುದಿ ತನ್ನ ಕಡೆಗೆ ಹಿಡಿದುಕೊಂಡು ಬಟನ್ ಒತ್ತಿದ. ದಿನದ ಬೆಳಕಿನಲ್ಲಿ ಕ್ಷೀಣವಾದ ಕಿರಣ. ಒಣಗಿದ ರಕ್ತದಂಥ ಬಣ್ಣ. ದವಾಖಾನೆಯಲ್ಲಿ ರಾತ್ರಿ ಬೇಸರವಾದಾಗ ಬಟನ್ ಒತ್ತಿ ಆರಿಸಿ ಆಟವಾಡಿಕೊಳ್ಳಬಹುದು.

ಈ ಹುಡುಗನಿಗೆ ಏನೋ ಅಡಚಣೆ ಇರಬಹುದು. ಇನ್ನೂ ಹತ್ತು ರೂಪಾಯಿ ಕಡಿಮೆ ಬೆಲೆಗೆ ಕೊಡಬಹುದು.

ಬ್ಯಾಂಕ್ ಸಹೋದ್ಯೋಗಿ ಜೋರಾಗಿ ಸ್ಕೂಟರ್ ಓಡಿಸುತ್ತಾ ಹೋದ. ಹೇಳಿದನೋ ಇಲ್ಲವೋ ಅನ್ನುವಷ್ಟು ಅಸ್ಪಷ್ಟವಾಗಿ ಹಲೋ ಅಂದಂತಾಯಿತು.

ಅರೆ, ಚಾಕುವಿನ ಯೋಚನೆಯಲ್ಲಿ ಮರೆತೆಬಿಟ್ಟೆನಲ್ಲ. ಅವನನ್ನು ನಿಲ್ಲಿಸಬಹುದಾಗಿತ್ತು. ಸಮಯಕ್ಕೆ ಸರಿಯಾಗಿ ಬ್ಯಾಂಕ್ ಸೇರುತ್ತಿದ್ದೆ. ಹಾಳು ಮರೆವು. ಚಾಕು ಕೊಂಡೇ ತೀರಬೇಕೆನ್ನುವ ಹಂಬಲವೇನಾದರೂ...... ಕೈ ಮಾಡಿದ್ದರೂ ನಿಲ್ಲುತ್ತಿರಲಿಲ್ಲ. ಮಹಾ ಜಾತಿವಾದಿ ಸೂ...ಮಗ. ತನ್ನ ಜಾತಿಯವರ್‍ಯಾರಾದರೂ ಇದ್ದರೆ ಕಾಳಜಿ ಮಾಡಿ ಕರೆದು ಒಯ್ಯುತ್ತಿದ್ದ. ಆಫೀಸಿನಲ್ಲಿ ಇರುವ ಎರಡೇ ಪಿಳ್ಳೆಗಳಲ್ಲಿ ಎಂಥ ಅನ್ಯೋನ್ಯತೆ! ನನ್ನ ಸ್ಕೂಟರ್ ಕೈಕೊಟ್ಟ ಸುದ್ದಿ ನಿನ್ನೆ ಬ್ಯಾಂಕಿನಲ್ಲಿ ಚರ್ಚೆಯಾಗಿದೆ. ಆಫೀಸಿಗೆ ಹೋದ ನಂತರ ಖಂಡಿತವಾಗಿಯೂ ಅನ್ನುತ್ತಾನೆ. ನಿಮ್ಮ ಸ್ಕೂಟರ್ ಕೈ ಕೊಟ್ಟಿದ್ದು ನನಗೆ ನೆನಪೇ ಆಗಲಿಲ್ಲ.

ನೀಚ ಸೂ... ಮಗ. ನೆನಪು ಹಾರಲು ಸಾಧ್ಯವೇ ಇಲ್ಲ. ಎಲ್ಲವನ್ನು ದಿವಸ, ತಾರೀಖು, ತಿಂಗಳ, ವರ್ಷಗಳ ನಿರ್ದಿಷ್ಟತೆಯಿಂದ ನೆನಪಿಟ್ಟುಕೊಂಡಿರುತ್ತಾನೆ. ಎಷ್ಟು ಜನರ ಅಕೌಂಟ್ ನಂಬರುಗಳು ಅವನ ತುದಿ ನಾಲಿಗೆಯ ಮೇಲಿಲ್ಲ? ನಮ್ಮ ಬ್ಯಾಂಕಿನ ಕಂಪ್ಯೂಟರ್ ಎಂದು ಮ್ಯಾನೇಜರ ಮೇಲಿಂದ ಮೇಲೆ ಶಹಬ್ಬಾಸ್‌ಗಿರಿ ಕೊಡುತ್ತಿರುತ್ತಾನೆ.

ಏನು ವುಡ್‌ಬಿ ಮ್ಯಾನೇಜರ್ ಸಾಹೇಬರು ಚಾಕು ಖರೀದಿ ಮಾಡಾಕತ್ತೀರಿ? ಮಾಡ್ರಿ, ಮಾಡ್ರಿ. ಕಾಲ ಸುಮಾರ ಐತಿ. ನೋಡ್ರಿ. ಯಾವ ಟಾಯಿಮನ್ಯಾಗ ಏನ ಪ್ರಸಂಗ ಬರುತ್ತೆ ಹೇಳಾಕ ಆಗುವುದಿಲ್ಲ ನೋಡ್ರಿ.

ಸಿಕ್ಕಬಿಟ್ಟ ಸರಿಯಾದ ಸಮಯಕ್ಕೆ ಬ್ಯಾಂಕ್ ತಲುಪಬಹುದು. ಚಾಕುವಿಗೆ ಬೆಂಕಿ ಹಚ್ಚಲಿ. ಹಿತ್ತಲ ಬಾಗಿಲಂತೂ ಭದ್ರವಾಗಿದೆ.

'ಕರೆಕ್ಟ ಟಾಯಿಮಕ ಬಂದ್ರಿ ಬರ್ರಿ. ಆಟೋ ತೊಗೊಂಡು ಆಫೀಸಿಗೆ ಹೋಗಬೇಕಂತ ಮಾಡಿದ್ದೆ ನೋಡ್ರಿ. ದೇವರ ಬಂದಂಗ ಬಂದ್ರಿ.

'ನಂದ ಇವತ್ತ ರಜಾ ಐತ್ರಿ. ಸುದ್ದಿ ಕೇಳಿಲ್ಲನ ನೀವು? ಬೂದ್ಯಾಗೀನ ಕೆಂಡಪಾ. ಯಾವಾಗ ಭಗ್ ಅಂತೈತಿ ಹೇಳಾಕ ಬರೂದಿಲ್ಲ.



ನಮ್ಮ ಕನ್ನಡ ಮೇಷ್ಟ್ರು ಎಷ್ಟು ಒಳ್ಳೆಯವರು ಗೊತ್ತಾ? ನಾನು ಯಾವುದೇ ತಪ್ಪು ಮಾಡಿದ್ರು ಹೊರಗೆ ಹಾಕಿ ಬಿಡ್ತಾರೆ....

'ಹೋದರ ಒಂದು ರಜಾ ಹೋದೀತು. ಜೀವ ಒತ್ತಿ ಇಟ್ಟು ನೌಕರಿ ಮಾಡಂತ ಯಾಂವ ಹೇಳ್ಯಾನ್ರಿ? ನೀವಾರ ಮ್ಯಾನೇಜರ ಆಗವರದೀರಿ. ಮರ್ಜಿ ಕಾಯ್ಬೇಕಾಗತದ. ನಾನಂತೂ ಮೆಡಿಕಲ್ಹಚ್ತೀನಿ. ಏನ ಮಾಡ್ಕೋತಾರ? ಬಾಳಂದ್ರ ಒಂದ ಇನ್‌ಕ್ರಿಮೆಂಟ್ ಹಿಡೀತಾರ.

ಹೌದಲ್ಲ. ನಿನ್ನೆಯ ಜಿ.ಬಿ. ಮೀಟಿಂಗ್ ಅಪೂರ್ಣವಾಗಿ ಇವತ್ತನೂ ಮುಂದವರದೈತಿ. ಇಂದೂ ರಜಾ ಹಾಕಬಾರದ್ಯಾರೂ ಅಂತ ನಿನ್ನೆ ಹೇಳಿದ್ರಲ್ಲ. ಇಲ್ಲಂದ್ರ ರಜಾ ಹಾಕಿ ಮಗನನ್ನು ನೋಡಲು ಹೋಗಬಹುದಾಗಿತ್ತು.

ಬೂದ್ಯಂತ, ಕೆಂಡಂತ, ಭಗ್ ಅಂತೈತಂತ. ಮಹಾ ಪುಕ್ಕಲ.

'ಏನಪಾ, ಹುಡುಗ. ಇದನ್ನ ಬಿಟ್ಟು ಬ್ಯಾರೆ ವರೈಟಿ ಚಾಕು ಇದ್ರ ತೋರಿಸಲಾ. ಆ ಭೈರಕ್ ಈ ಭೈರಕ್ ಅಂತ ಓಡ್ಯಾಡತೀರತಾರಾ ವುಡ್‌ಬಿ ಮ್ಯಾನೇಜರ ಸಾಹೇಬರು'

'ಇದ, ಒಂದರಿ ನನ್ನ ಹಂತೇಲಿ ಇರೋದು.'

'ಎಲ್ಲೆರ ಕಳುವ ಮಾಡಿಕೊಂಡ ಬಂದೀ ಏನಲ್ಲೇ ತಮ್ಮ?'

ಅರೆ, ನನಗೆ ಈ ವಿಷಯ ಹೊಳೆಯಲೇ ಇಲ್ಲ ಹುಡುಗ ಗಡ ಗಡ ನಡುಗುತ್ತಿದ್ದ.

ಆಫೀಸಿಗೆ ತುಂಬ ತಡವಾಯಿತು.

ಆಟೊ ಬಂತು. ಕೈಮಾಡಿದೆ. ಪರಿಚಿತ ಮುಖ. ನೇರವಾಗಿ ಆಫೀಸ್ ತಲುಪಿದೆ. ಮ್ಯಾನೇಜರ ಸಿಟ್ಟಿಗೆದ್ದಿರಲಿಲ್ಲ. ಆಶ್ಚರ್ಯ. ಮೃದುವಾಗಿದ್ದ.

ಫೋನ್ ಬಂದಿತ್ತಂತೆ. ಮಗುವಿಗೆ ತುಂಬಾ ಸೀರಿಯಸ್, ತಕ್ಷಣ ಬರಬೇಕಂತೆ. ಊರಿನಲ್ಲಿ ಉದ್ಭವಿಸಬಹುದಾದ ಗಲಭೆಯನ್ನು ನಿರೀಕ್ಷಿಸಿ ಜಿಬಿ ಮೀಟಿಂಗ್ ಮತ್ತೆ ಪೋಸ್ಟಪೋನ್ ಮಾಡಿದ್ದರು.

ಎಂ.ಆರ್. ಮೇಲೆ ಸಹಿ ಹಾಕುವಾಗ ಎದೆ ಢವ ಢವ ಹೊಡೆದುಕೊಂಡಿತ್ತು. ಮಗುವಿಗೆ ಏನಾಗಿದೆಯೋ, ತಕ್ಷಣ ಬರಬೇಕೆಂದರೆ ಏನರ್ಥ? ದೇವರೇ ಅಂಥ ಅನ್ಯಾಯ ಮಾಡದಿರು. ಸಹಿಸಿಕೊಳ್ಳುವ ಶಕ್ತಿ ನನಗಿಲ್ಲ. ಡಾಕ್ಟರು ಏನಾದರೂ ಮಾನಸಿಕ ಒತ್ತಡವೇ ಎಂದು ಕೇಳಿದಾಗ ಇಲ್ಲವೆಂದಿದ್ದೇನೆ. ಮಗನನ್ನು ಉಳಿಸಿಕೊಳ್ಳಲು ಮಾಡಿದ ಸಾಲಕ್ಕೆ ಮಾನಸಿಕ ಒತ್ತಡ ಮಾಡಿಕೊಂಡಿದ್ದೇನೆ ಎಂದು ಹೇಗೆ ಹೇಳಲಿ? ನಾ ಮಾಡಿದ ಸಾಲದಷ್ಟು ಹಣದಲ್ಲಿ ಸಹೋದ್ಯೋಗಿಗಳೆಲ್ಲ ಮನೆ ಕಟ್ಟಿಸಿಕೊಂಡಿದ್ದಾರೆ. ಮಗು ಉಳಿದರೆ ಸಾಕು. ಬಾಡಿಗೆ ಮನೆಯಲ್ಲಿಯೇ ಸುಖವಾಗಿರಬಹುದು.

ಆ ಹುಡುಗ ಚಾಕುವಿನ ಬಟನ್ ಒತ್ತಿದ ರೀತಿಯ ನೆನಪಾಯಿತು. ಆ ರಭಸವನ್ನು ನೋಡಿದರೆ ಇರಿಯಲು ಬಂದಿರಲಿಲ್ಲವೆಂದು ಹೇಗೆ ನಂಬುವುದು? ಕ್ರೌರ್ಯಕ್ಕೆ ಅನಂತ ಮುಖಗಳು. ಅಷ್ಟು ಉತ್ತಮವಾದ ಚಾಕು, ಅಷ್ಟು ಕಡಿಮೆ ಬೆಲೆಗೆ ಮಾರಲು ಸಾಧ್ಯವೆ? ಮಾರಾಟ ಒಂದು ನೆವ. ಸಮಯ ಸಿಕ್ಕಿದ್ದರೆ ಚಾಕು ಹಾಕಿಯೇ ಬಿಡುತ್ತಿದ್ದ. ಬ್ಯಾಂಕ್ ಸಹೋದ್ಯೋಗಿ ಸರಿಯಾದ ಸಮಯಕ್ಕೆ ಅಲ್ಲಿ ಹಾದು ಹೋದ. ಇಲ್ಲವಾಗಿದ್ದರೆ ಅದು ತಕ್ಕ ಸಮಯವಾಗಿತ್ತು. ಜಾತಿವಾದಿ ಸಹೋದ್ಯೋಗಿಯೇ ನಿನಗೆ ಅನಂತ ಕೃತಜ್ಞತೆಗಳು.

ರಜೆ ಹಾಕಿ ಈಗಿಂದೀಗಲೇ ಊರಿಗೆ ಹೋಗಬೇಕು. ನಾಲ್ಕೈದು ದಿನ ನಿಶ್ಚಿಂತವಾಗಿ ಅಂಕಿ ಸಂಖ್ಯೆ, ಅಸಲು ಬಡ್ಡಿ, ನೋಟಿನ ವಾಸನೆ, ಅಸಹನೆ, ಸ್ಪರ್ಧೆ, ಈರ್ಷೆಯಿಂದ ದೂರವಿರಬೇಕು.

ವುಡ್‌ಬಿ ಮ್ಯಾನೇಜರ ಎಂದು ಎಷ್ಟು ಚುಚ್ಚಿ ಚುಚ್ಚಿ ಮಾತನಾಡಿದನಲ್ಲ. ಮಾತಿನೊಳಗಿನ ಕಹಿ ನನಗೆ ಆಗ ಅರ್ಥವಾಗಲೇ ಇಲ್ಲ. ಜಾತಿವಾದಿ ಸಹೋದ್ಯೋಗಿಗಿಂತ ಅಪಾಯ

ಕಾರಿ ಈ ಮನುಷ್ಯ. ನನಗಿಂತ ಎರಡೇ ದಿವಸ ತಡವಾಗಿ ಆತ ನೌಕರಿ ಸೇರಿಕೊಂಡದ್ದು ನನ್ನ ತಪ್ಪಲ್ಲ.

ಆ ಹುಡುಗನ ಕಣ್ಣಲ್ಲಿ ನಿಜವಾಗಿಯೂ ಏನೂ ಇರಲಿಲ್ಲ. ಜಾತಿವಾದಿ ಸಹೋದ್ಯೋಗಿ, ಅವನಿಗಿಂತಲೂ ಅಪಾಯಕಾರಿಯಾದ ಆ ಮನುಷ್ಯ ಅವರಿಬ್ಬರೂ ಅವನ ಹೊಳೆಯುವ ಆ ನಿರ್ಮಲ ಕಣ್ಣುಗಳಲ್ಲಿ ಹಾಗೆ ಪ್ರತಿಫಲನ ಆಗಿರಬಹುದು.

ಎಂಥ ಸುಂದರ ಗುಂಗುರು ಕೂದಲು ಆ ಹುಡುಗನಿಗೆ. ನನ್ನ ಮಗನದೇ ವಯಸ್ಸು. ಚಾಕು ಕದ್ದು ತಂದಿರಲಿಕ್ಕಿಲ್ಲ. ಎಲ್ಲಿಯಾದರೂ ಸಿಕ್ಕಿರಬಹುದು. ಅಷ್ಟು ಚಿಕ್ಕ ವಯಸ್ಸಿನ ಹುಡುಗ ಗೇಟಿನ ಬಳಿ ನಿಂತು ನನಗಾಗಿಯೇ ದಾರಿ ಕಾಯ್ದು ಇರಿಯಲು ಬಂದಿರಬಹುದೆಂದು ಊಹಿಸಿದೆನಲ್ಲ, ಪಾಪಿ.

ಸಂಶಯವೇ ಇಂಥ ಭೀಕರ ಭ್ರಮೆಗಳನ್ನು ಸೃಷ್ಟಿ ಮಾಡದಿರು. ಶೂನ್ಯದ ಬಯಲಿಗೆ ಅಸಹ್ಯ ಭೂತಗಳ ಚಿತ್ರಗಳನ್ನು ಕಲ್ಪಿಸದಿರು.

ಗೇಟಿನ ಬಳಿ ನಿಂತಿದ್ದಾಗ ಆ ಹುಡುಗನ ಗುಂಗುರು ಕೂದಲು ನನ್ನನ್ನು ಸೆಳೆದಿರಲೇ ಇಲ್ಲ. ಅರೆ, ಥಟ್ಟನೆ ಈಗೇಕೆ ನನ್ನ ಗೆಳೆಯ ಬರೆದ ಪತ್ರದ ನೆನಪಾಯಿತು. ನನ್ನ ಮಗನದೇ ವಯಸ್ಸಂತೆ. ನಸುಗೆಂಪು ಬಣ್ಣ. ಎಡಗಣ್ಣಿನ ಕೆಳಗೆ ಒಂದು ಮಚ್ಚೆ. ಚೌಕಳಿ ಅಂಗಿ. ಆ ಹುಡುಗ ಇಂದು ಎಂಥ ಅಂಗಿ ಧರಿಸಿದ್ದ, ನೆನಪೇ ಆಗುತ್ತಿಲ್ಲ. ನಾನು ಅದನ್ನು ಗಮನಿಸಲೇ ಇಲ್ಲ. ಆರು ತಿಂಗಳ ಹಿಂದೆ ಮನೆಬಿಟ್ಟು ಹೋದ ಹುಡುಗ ಅದೇ ಅಂಗಿಯನ್ನು ಧರಿಸಿಕೊಂಡಿರುತ್ತಾನೆಂದು ಏಕೆ ಭ್ರಮಿಸಬೇಕು? ಆದರೆ ಅವನು ತಿಳಿಸಿದ ಗುಂಗುರು ಕೂದಲು. ಹೌದು ಆ ಹುಡುಗನೇ ಇರಬೇಕು. ಯಾರೋ ಭವಿಷ್ಯ ನುಡಿಯುವವರು ಹೇಳಿದ್ದಾರಂತೆ. ಹುಡುಗ ಉತ್ತರದ ಕಡೆ ಹೋಗಿದ್ದಾನೆ. ತಂದೆಯ ಸ್ನೇಹಿತರನನ್ನು ಭೆಟ್ಟಿಯಾಗುತ್ತಾನೆ. ಅವರೇ ಗುರುತು ಹಿಡಿದು ತಂದು ಒಪ್ಪಿಸುತ್ತಾರೆ.

ಅಂಥ ಸ್ನೇಹಿತ ನಾನೇ ಏಕಾಗಿರಬಾರದೆಂದು ನನ್ನಂಥಹ ಹಲವಾರು ಗೆಳೆಯರಿಗೆ ಪತ್ರ ಬರೆದಿರಬಹುದು. ಈ ಜಗತ್ತಿನಲ್ಲಿ ಯಾರು ಸುಖಿಯಾಗಿದ್ದಾರೆ? ಜಾತಿವಾದಿ ಸಹೋದ್ಯೋಗಿ, ಅಸೂಯೆ ಪಡುವ ಸಹೋದ್ಯೋಗಿ, ಮಗುವನ್ನು ಕಳೆದುಕೊಂಡ ಗೆಳೆಯ, ಸ್ವತಹ ನಾನು?

ಬೇಗನೆ ಊರಿಗೆ ಹೋಗಬೇಕು, ಮಗನನ್ನು ನೋಡಬೇಕು. ಅದಕ್ಕೂ ಮೊದಲು ಮನೆಗೆ ಹೋಗಿ ಅಲ್ಲಿ ಗುಂಗುರು ಕೂದಲು ಹುಡುಗನೇನಾದರೂ ಇದ್ದಾನೆಯೋ, ಹೇಗೋ, ಇದ್ದರೆ ಅವನ ಊರಾವುದು, ಸುಳ್ಳು ಹೇಳುತ್ತಾನೋ ಹೇಗೋ ಪರೀಕ್ಷಿಸಬೇಕು. ಸಣ್ಣ ಪುಟ್ಟ ವಿಷಯಗಳನ್ನು ಮನಸ್ಸಿಗೆ ಹಚ್ಚಿಕೊಂಡು, ಹೀಗೆ ಊರು ಬಿಟ್ಟು ತಲೆ ತಪ್ಪಿಸಿಕೊಂಡು ತಂದೆ ತಾಯಿಗಳಿಗೆ ದುಃಖ ಕೊಡಬಾರದೆಂದು ಬುದ್ಧಿ ಹೇಳಬೇಕು.

ಅಸೂಯೆಪಡುವ ಆ ಸಹೋದ್ಯೋಗಿ ತಾನೇ ಚಾಕು ಖರೀದಿ ಮಾಡಿರಬೇಕು. ಇಂಥ ವಿಷಯದಲ್ಲಿ ತುಂಬಾ ವ್ಯವಹಾರಿಕ. ಕಳ್ಳತನದ ಮಾಲಿರಬಹುದೆಂದು ನನ್ನಲ್ಲಿ ಅಂಜಿಕೆಯನ್ನು ಉದ್ದೇಶ ಪೂರ್ವಕವಾಗಿ ಹುಟ್ಟಿಸಿದ.

ನಾನು ಮನೆಗೆ ಹೋದಾಗಲೂ ಆ ಹುಡುಗ ಇನ್ನೂ ಅಲ್ಲಿಯೇ ಇರಬೇಕು. ಜಾಣತನದಿಂದ ಆತನನ್ನು ಪ್ರಶ್ನಿಸಬೇಕು. ಒಂದು ವೇಳೆ ಸ್ನೇಹಿತನ ಮಗನಾಗಿರದಿದ್ದರೆ ಸಾಧ್ಯವಾದಷ್ಟು ಕಡಿಮೆ ಬೆಲೆಗೆ ಚಾಕು ಲಪಟಾಯಿಸಬೇಕು.

ಹೋದ ಸಾರಿ ಊರಿಗೆ ಹೋದಾಗ ಡಾಕ್ಟರ್ ನಿಮ್ಮ ಹುಡುಗ ಔಷಧಿಗೆ ಚೆನ್ನಾಗಿ ಪ್ರತಿಕ್ರಿಯಿಸುತ್ತಿದ್ದಾನೆ ಎಂದಿದ್ದರು. ಬಹುಷಃ ಈಗ ಎದ್ದು ಓಡಾಡುತ್ತಿರಬಹುದು. ಅದಕ್ಕೆಂತಲೆ ಹಿಗ್ಗಿನಿಂದ ಫೋನ್ ಮಾಡಿರಬೇಕು. ನಾನಿನ್ನೂ ದೂರವಿರುವಾಗಲೇ ಓಡೋಡಿ ಬಂದು ನನ್ನನ್ನು ಅಪ್ಪಿಕೊಳ್ಳುತ್ತಾನೆ. ಅಷ್ಟು ಜೋರಾಗಿ, ಓಡಿ ಬಂದರೂ ಉಸಿರಾಟದ ಯಾವುದೇ ತೊಂದರೆ ಇಲ್ಲ. ಡಾಕ್ಟರ್ ನನ್ನ ಮಗು ಪಾಲಿಗೆ ದೇವರು ನೀವು ಅನ್ನಬೇಕು.

ಸಹೋದ್ಯೋಗಿಗಳೆಲ್ಲ ಏನೇನೋ ಗುಸುಗುಸು ಮಾತಾಡಿಕೊಳ್ಳುತ್ತಿದ್ದಾರೆ. ನನ್ನ ಎದೆ ಧಸಕ್ ಎನ್ನುತ್ತಿದೆ. ಹಾಗಾಗಲು ಸಾಧ್ಯವೇ ಇಲ್ಲ. ಡಾಕ್ಟರರು ಈ ಭಾಗದಲ್ಲಿಯೇ ಪ್ರಸಿದ್ಧರು. ಎಂಥೆಂಥ ರೋಗಿಗಳನ್ನು ಸಾವಿನ ದವಡೆಯಿಂದ ಹೊರ ತಂದವರು. ಅಂಥ ಡಾಕ್ಟರರ ಸಂಖ್ಯೆ ನೂರಾಗಲಿ. ಅವರೆಲ್ಲ ಅದೇ ದವಾಖಾನೆಯಲ್ಲಿಯೇ ಇರಲಿ. ಸಾಲ ಮಾಡಲು, ನಾನೇನು ಹೆದರುವುದಿಲ್ಲ. ಮೂರು ಜನರ ಒಂದು ಕುಟುಂಬ ನಡೆಸಲು ಪ್ರತಿ ತಿಂಗಳು ಎಷ್ಟು ಖರ್ಚು?

ಇಂದು ನಾನು ಕಡಿಮೆ ಬೆಲೆಯಲ್ಲಿ ಚಾಕು ಖರೀದಿ ಮಾಡುವವನಿದ್ದೆನಲ್ಲ. ಹಾಗೆ ಉಳಿದ ವ್ಯವಹಾರದಲ್ಲೂ ಅದೇ ನಿಪುಣತೆ ತೋರಿಸಿ ಜೀವನ ಸಾಗಿಸಬಹುದು.

ಚಾಕುವನ್ನು ಯಾರೂ ಖರೀದಿಸಿರಲಿಕ್ಕಿಲ್ಲ. ಅಷ್ಟು ಒಳ್ಳೆಯ ಚಾಕುವನ್ನು ಅಷ್ಟು ಕಡಿಮೆ ಬೆಲೆಗೆ ಕೊಳ್ಳಲು ಯಾರಿಗೂ ಸಂಶಯ ಬರುತ್ತದೆ. ನನ್ನ ಸ್ನೇಹಿತನ ಮಗನೆ ಆಗಿರುವುದರಿಂದ ನನಗೆ ಮೋಸ ಮಾಡಲಿಕ್ಕಿಲ್ಲ.

ಇನ್ನೇನು ಬ್ಯಾಂಕಿನಿಂದ ಹೊರಬೀಳಬೇಕು ಅನ್ನುವಷ್ಟರಲ್ಲಿ ಪೋಲೀಸ್ ಜೀಪೊಂದು ಮೈಕ್ ಹಚ್ಚಿಕೊಂಡು ಏನೋ ಎಚ್ಚರಿಕೆ ಕೊಡುತ್ತ ಹಾದು ಹೋಯಿತು ಬ್ಯಾಂಕಿನೆದುರಿಗೆ.

ಸಾಯಂಕಾಲ ನಾಲ್ಕು ಗಂಟೆಯವರೆಗೆ ನಗರದಲ್ಲಿ ಕರ್ಫ್ಯೂ ವಿಧಿಸಲಾಗಿದೆ. ಯಾರೂ ರಸ್ತೆಯಲ್ಲಿ ಸಂಚರಿಸಕೂಡದು.

ಬ್ಯಾಂಕಿನ ಬಾಗಿಲು ಧಡಕ್ಕನೆ ಮುಚ್ಚಿಕೊಂಡಿತು. ಕೌಂಟರಿನ ಎದುರಿಗೆ ನಿಂತವ, ಪೋಸ್ಟ್ ಆಫೀಸಿನ ಸಮೀಪದಲ್ಲಿ ಯಾರೋ ಒಬ್ಬನನ್ನು ಇರಿದು ಕೊಂದಿದ್ದಾರೆ ಅಂತ ಹೇಳಿದ. ಅವನ ಮಾತಿನಲ್ಲಿಯ ನಿರ್ಲಿಪ್ತತೆಯನ್ನು ನೋಡಿ ಆ ಕೊಲೆಗಾರ ಇವನೇ ಇರಬಹುದೇ ಎಂದು ಸಂಶಯ ಬಂದಿತು. ಇಂಥದೊಂದು ಘಟನೆ ನಡೆದೇ ತೀರುತ್ತದೆಂದು ನನಗೆ ಒಂದು ವಾರದಿಂದಲೇ ತಿಳಿದಿತ್ತು ಅಂದ. ಮತ್ತೆ ಮೊದಲೇ ಯಾಕೆ ಪೋಲೀಸರಿಗೆ ತಿಳಿಸಲಿಲ್ಲೋ ಬೋ...... ಮಗನೆ ಅನ್ನಬೇಕೆಂದೆ.

'ಹನ್ನೆರಡು ವರ್ಷದ ಎಳೆಮಗು. ಮುಖ ಬೋರಲಾಗಿ ಬಿದ್ದಿತ್ತು. ಯಾರ ಹುಡುಗನೋ ಏನೋ. ಪಾಲಕರಿಗೂ ಬುದ್ಧಿ ಇಲ್ಲ. ಬೂದಿಯೊಳಗಿರುವ ಕೆಂಡವನ್ನು ಗುರುತಿಸಿ ಮಕ್ಕಳನ್ನು ಹೊರಗೆ ಬಿಡಬಾರದಾಗಿತ್ತು.

ರಜೆ ಹಾಕಿ ಮನೆಯಲ್ಲಿಯೆ ಉಳಿದ ಸಹೋದ್ಯೋಗಿಗೂ ಇವನಿಗೂ ಏನಾದರೂ ರಹಸ್ಯವಾದ ಸಂಬಂಧವಿರಬೇಕು.

'ಎಂಥ ಸರಳ ಕೊಲೆ ಅಂತೀರಿ. ಬೆನ್ನಲ್ಲಿ ನೆಟ್ಟ ಚಾಕುವಿನ ಗಾಯವೊಂದನ್ನು ಬಿಟ್ಟರೆ ಮತ್ತೇನೂ ಗಾಯವಿಲ್ಲ. ತೊಟ್ಟ ಬಿಳಿ ಅಂಗಿಯೆಲ್ಲ ರಕ್ತಮಯವಾಗಿತ್ತು,

ಚೌಕಳಿ ಅಂಗಿ ಅಲ್ಲವಲ್ಲ. ಅದೇ ಸಮಾಧಾನ. ಬಟ್ಟೆಯಲ್ಲಾ ರಕ್ತವಾದ ಮೇಲೆ ಬಿಳಿಯದೋ, ಚೌಕಳಿಯದೋ ಗುರುತಿಸಲು ಹೇಗೆ ಸಾಧ್ಯ. ಕೊಲೆ ನೋಡಿ ಬಂದ ಭೀತಿಯಲ್ಲಿ ಏನೇನೋ ಬಡಬಡಿಸುತ್ತಿರಬಹುದು.

ಕೊಲೆಯಾದ ಹುಡುಗ ಗುಂಗುರು ಕೂದಲಿನವ ಎಂದು ಹೇಳುವ ಮೊದಲೇ ಇಲ್ಲಿಂದ ಜಾಗ ಖಾಲಿ ಮಾಡಬೇಕು. ಆ ಹುಡುಗ ಸಾಯಂಕಾಲದವರೆಗೂ ನನ್ನ ಮನೆಯ ಸುತ್ತಮುತ್ತಲಿನಲ್ಲಿಯೇ ತಿರುಗಾಡಿಕೊಂಡಿರಬೇಕಾಗಿತ್ತು. ನಾನು ಖಂಡಿತವಾಗಿಯೂ ಚಾಕು ಖರೀದಿಸುತ್ತಿದ್ದೆ. ಬೆಲೆ ಸ್ವಲ್ಪ ಜಾಸ್ತಿಯಾಗಿದ್ದರು ಹೆದರುತ್ತಿರಲಿಲ್ಲ.

ಬ್ಯಾಂಕಿನ ಬಾಗಿಲು ತೆರೆದು ನಾನು ಹೊರ ಹೊರಟಿದ್ದನ್ನು ಕಂಡ ಒಬ್ಬ ಸಹೋದ್ಯೋಗಿ 'ಕರ್ಫ್ಯೂ ಐತಿ ಹೊರಗೆ ಹೋಗಬೇಡ' ಅಂದ.

ಹೋಗಲಿ ಬಿಡ್ರಿ. ಈಗs ತಡ ಮಾಡ್ಯಾರ. ಫೋನ್ ಬಂದು ಯವತ್ತಾತು, ಏನ ಸುದ್ದಿ. ಇನ್ನೊಬ್ಬನ ಮಾತು.

ರಸ್ತೆ ಹೆಣದಂತೆ ಸ್ತಬ್ದವಾಗಿ ಬಿದ್ದಿತ್ತು. ರಸ್ತೆಯ ಮೇಲೆ ಮರದ ನೆರಳಿನ ಹೆಣಗಳ ರಾಶಿ. ಕಣ್ಣಿಗೆ ಕತ್ತಲೆ ಕವಿದಂತಾಯಿತು. ಮತ್ತೆ ಜೋಲಿ ಹೋಗುತ್ತಿದೆ. ಈಸೀಜಿ ರಿಪೋರ್ಟ್ ಸರಿಯಾಗಿದೆ. ಆದರೂ ಹೀಗೇಕೆ ಎಂದು ಡಾಕ್ಟರನ್ನೂ ಕೇಳಬೇಕು.

ನನಗೆ ಗೊತ್ತಿಲ್ಲದಂತೆ ಪೋಸ್ಟ್ ಆಫೀಸಿನ ಹತ್ತಿರ ಬಂದಿದ್ದೆ. ನಾನು ಬಂದದ್ದನ್ನು ಏನೋ ಹುಡುಗಾಟಿಕೆಯಲ್ಲಿ ತೊಡಗಿ ಜೋರಾಗಿ ನಗುತ್ತಿದ್ದ ಪೋಲೀಸರು ಗಮನಿಸಲಿಲ್ಲ.

ಸಮೀಪ ಹೋಗಿ ನೋಡಿದೆ. ಹುಡುಗ ಮಾರಲು ತಂದಿದ್ದ ಅದೇ ಚಾಕು. ಚೌಕಳಿ ಅಂಗಿ. ಗುಂಗುರು ಕೂದಲು. ನನ್ನ ಕಾಂಪೌಂಡಿನ ಬಳಿ ನಿಂತಿದ್ದ ಹುಡುಗನಿಗೆ ನಿಜವಾಗಿಯೂ ಗುಂಗುರು ಕೂದಲು ಇತ್ತೆ? ನನ್ನ ನೆನಪಿನ ಶಕ್ತಿಯ ಮೇಲೆ ನಂಬಿಕೆ ಬರಲಿಲ್ಲ. ಮೈ ತುಂಬ ಬೆವರು.

ಕಣ್ಣಲ್ಲಿ ನೀರು.

ಕಣ್ಣೀರೊ ಅಥವಾ ಅಂಜಿ ಹಣೆಯ ಮೆಲಿಂದ ಇಳಿದ ಬೆವರೋ?

■ ಚನ್ನಪ್ಪ ಕಟ್ಟಿ



ಪ್ರಾಣಿ ಹಾಗೂ ಪಕ್ಷಿ ಸಂಕುಲದ ಸ್ವಯಂವರ ವಿಶಿಷ್ಟವಾದುದು. ಮನುಷ್ಯರಲ್ಲಿ ಪರಸ್ಪರ ಗಂಡು-ಹೆಣ್ಣಿನ ಆಯ್ಕೆಯಂತೆಯೇ ಅಲ್ಲಿಯೂ 'ಸ್ವಯಂವರದ' ವಿವಿಧ ಮಜಲುಗಳಿವೆ. ಅವು ಕೌತುಕಮಯ ಹಾಗೂ ಪ್ರಕೃತಿದತ್ತವೂ ಆಗಿವೆ.

ಪ್ರಾಣಿ ಪ್ರಪಂಚದಲ್ಲೂ 'ಸ್ವಯಂವರ'

ಯಾವುದೇ ಜೀವಿಯ ಅಂತಿಮ ಗುರಿ ವಂಶಾಭಿವೃದ್ಧಿ. ಬದುಕಿನ ಉದ್ದೇಶವೇ ಅದು. ಆದುದರಿಂದ ತನ್ನ ವಂಶವಾಹಿನಿಯನ್ನು ಚಿರಂತನಗೊಳಿಸುವ ಕಾಯಕಕ್ಕೆ ಪ್ರತಿ ಜೀವಿಯೂ ಹೆಚ್ಚಿನ ಮಹತ್ವ ನೀಡಿದೆ.

ಸಂತಾನಾಭಿವೃದ್ಧಿಗೆ ಹೆಣ್ಣು - ಗಂಡಿನ ಸಂಯೋಗ ಅವಶ್ಯಕ. ಸಸ್ಯಗಳಲ್ಲಿ ಈ ಲೈಂಗಿಕ ಸಂಯೋಗ ಅಷ್ಟು ಕುತೂಹಲ ಕೆರಳಿಸದು. ಪ್ರಾಣಿಗಳಲ್ಲಿನ ಚಲನಶೀಲತೆ ಸಂತಾನಾಭಿವೃದ್ಧಿ ಕಾರ್ಯವನ್ನು ವೈವಿಧ್ಯಗೊಳಿಸಿದೆ.

ಸಂತಾನಾಭಿವೃದ್ಧಿ ಇತರ ಕ್ರಿಯೆಗಳಂತೆ ಯಾಂತ್ರಿಕವಲ್ಲ. ಮುಂದಿನ ಪೀಳಿಗೆಗೆ ಶಕ್ತ ಸಂತಾನವನ್ನು ಬಿಟ್ಟುಹೋಗಬೇಕಿರುವುದರಿಂದ ಉತ್ತಮ ಮಕ್ಕಳನ್ನು ಪಡೆವ ಉದ್ದೇಶ ಅದರಲ್ಲಿ ಮಿಳಿತವಾಗಿದೆ. ಆದುದರಿಂದ ಸಂತಾನಾಭಿವೃದ್ಧಿ ಪೂರ್ವದಲ್ಲಿ ಯಾವ ಗಂಡು ಯಾವ ಹೆಣ್ಣನ್ನು ಕೊಡಬೇಕೆಂಬ ಪ್ರಕ್ರಿಯೆ ಜರಗುತ್ತದೆ. ಈ ಪ್ರಕ್ರಿಯೆ ಅನೇಕ ಕುತೂಹಲಗಳಿರುವ ಗಂಟನ್ನು ಬಿಚ್ಚುತ್ತದೆ. ಅನೇಕ ಮಹಾಕಾವ್ಯಗಳು, ರಮ್ಯ ಜಾನಪದ ಕತೆಗಳು, ಯಶಸ್ವೀ ಚಲನಚಿತ್ರಗಳು ಸಂತಾನಾಭಿವೃದ್ಧಿ ಪೂರ್ವದಲ್ಲಿ ಗಂಡು-ಹೆಣ್ಣು ಜೋಡಿಯಾಗುವ ಪ್ರಕ್ರಿಯೆಯನ್ನೇ ಆಧರಿಸಿವೆ.

ಮಗಳಿಗೆ 'ಅಂತಸ್ತಿ'ಗೆ ತಕ್ಕ ವರನನ್ನು ಹುಡುಕಲು ಹಿಂದೆ ರಾಜರು ಬಾಹುಬಲ-ಬುದ್ಧಿಬಲಗಳ ಸ್ಪರ್ಧೆ ಏರ್ಪಡಿಸುತ್ತಿದ್ದರು. ಸ್ಪರ್ಧೆಯಲ್ಲಿ ಗೆದ್ದವರಿಗೆ ರಾಜಕುವರಿ ದಕ್ಕುತ್ತಿದ್ದಳು. ಗಂಡಿನ ಹಿನ್ನೆಲೆ ಮತ್ತು ಸಾಧನೆಗಳ ಮಾಹಿತಿ ಮೇಲೆ ತನ್ನ ಗಂಡನನ್ನು ಆಯ್ಕೆ ಮಾಡಿಕೊಳ್ಳುವ 'ಸ್ವಯಂವರ' ಪದ್ಧತಿ ಕೂಡ ಜಾರಿಯಲ್ಲಿತ್ತು. ಇದು ತನ್ನ ಮನಕೊಪ್ಪುವ ಗಂಡನ್ನು ಆಯ್ಕೆ ಮಾಡಲು ಹೆಣ್ಣಿಗೆ ಸ್ವಾತಂತ್ರ್ಯ ನೀಡುತ್ತಿತ್ತು. ಜತೆಗೆ ಸ್ಪರ್ಧೆಯಿಂದ ಉಂಟಾಗುವ ಸೋಲು, ಸಾವು, ಅಪಮಾನಗಳನ್ನು ತಪ್ಪಿಸುತ್ತಿತ್ತು.

ಈ ಸ್ವಯಂವರ ಪದ್ಧತಿ ಕೇವಲ ಮನುಷ್ಯ ಸಮಾಜಕ್ಕೆ ಮಾತ್ರ ಸೀಮಿತವಲ್ಲ. ಮನುಷ್ಯ ವಿಕಾಸವಾಗುವುದಕ್ಕೆ ಮುನ್ನ ಲಕ್ಷಾಂತರ ವರ್ಷಗಳ ಹಿಂದಿನಿಂದಲೂ ಪ್ರಾಣಿ ಪ್ರಪಂಚದಲ್ಲಿ ಈ ಪದ್ಧತಿ ಅನೂಚಾನವಾಗಿ ನಡೆದುಬಂದಿದೆ. ಇಲ್ಲಿ ಗಂಡನ್ನು ಆಯ್ಕೆ ಮಾಡುವ ಲೈಂಗಿಕ ಸ್ವಾತಂತ್ರ್ಯ ಹೆಣ್ಣಿನದು. ಆದುದರಿಂದ ಒಂದು ಹೆಣ್ಣನ್ನು ಪಡೆಯಲು ಗಂಡುಗಳು ನಿರಂತರವಾಗಿ ಹೋರಾಡುತ್ತವೆ. ಹೆಣ್ಣಿನ ಕೃಪಾಕಟಾಕ್ಷ ಅಥವಾ ಆಯ್ಕೆಗೆ ಬೀಳದ ಗಂಡುಗಳು ಸಂತಾನಭಾಗ್ಯವಿಲ್ಲದೇ ಸಾಯುತ್ತವೆ.

ಹೆಣ್ಣಿನ ಒಲುಮೆಗೆ ಪಾತ್ರವಾಗಲು ಪ್ರಾಣಿ ಪ್ರಪಂಚದ ಗಂಡುಗಳು ಅನೇಕ ಬಗೆಯ ಹೋರಾಟ ನಡೆಸುತ್ತವೆ. ಕುತೂಹಲಕರವಾದ ಕೆಲವಷ್ಟು



ಸಂಗತಿಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಪ್ರಥಮವಾಗಿ ಬಲಾಬಲ ಸ್ಪರ್ಧೆ. ಇಲ್ಲಿ ಹೆಣ್ಣನ್ನು ಪಡೆಯಲು ಗಂಡುಗಳು ತಮ್ಮ ಬಲವನ್ನು ನಿಕಷಕ್ಕೆ ಒಡ್ಡಿಕೊಳ್ಳುತ್ತವೆ. ಮೊಸಳೆ ಜಾತಿಯ ಕೆಲವು ಸಂಕುಲಗಳಲ್ಲಿ ಎರಡು ಗಂಡುಗಳ ನಡುವೆ ಸೆಣಸಾಟ ಏರ್ಪಡುತ್ತದೆ. ಗಂಡುಗಳು ಮುಖಾಮುಖಿಯಾಗಿ ವೃತ್ತಾಕಾರದಲ್ಲಿ ತಿರುಗುತ್ತಾ, ಕೂಗುತ್ತಾ ಯುದ್ಧ ಮಾಡುತ್ತವೆ. ಸೋತ ಗಂಡು ಹೆಚ್ಚು ಕಡಿಮೆ ಸತ್ತಂತೆ. ವಿಜಯೀ ಗಂಡನ್ನು ಹೆಣ್ಣು ಮೊಸಳೆ ಕೂಡಿಕೊಳ್ಳುತ್ತದೆ.

ಸಾಲ್ಮನ್ ಗಂಡು ಮೀನುಗಳು ದಿನವಿಡೀ ಹೋರಾಡುತ್ತವೆ. ಗೆದ್ದ ಮೀನುಗಳು ಹೆಣ್ಣುಗಳ ಜತೆ ಸಂಸಾರ ಹೂಡುತ್ತವೆ. ಕೆಲವು ಜಾತಿಯ ಜೀರುಂಡೆಗಳು ತಮ್ಮ ದವಡೆಯನ್ನೇ ಆಯುಧವನ್ನಾಗಿ ಬಳಸಿ ಕಾದಾಡುತ್ತವೆ. ಹೈಮೆನಾಪ್ಟೆರಾ (Hymenoptera) ವರ್ಗದ ಕೆಲವು ಕೀಟಗಳಲ್ಲಿ ಗಂಡು-ಗಂಡುಗಳ ಸ್ಪರ್ಧೆಯು ಬಹು ವ್ಯವಸ್ಥಿತವಾಗಿ ನಡೆಯುತ್ತದೆ. 'ಸ್ವಯಂವರ'ದ ದಿನ ಹೆಣ್ಣು ಕೀಟ ಮೂಕ ಪ್ರೇಕ್ಷಕನಂತೆ ಗಂಡುಗಳ ಕಾದಾಟವನ್ನು ಗಮನಿಸುತ್ತದೆ. ಗೆದ್ದ ಗಂಡಿನ ಜತೆ ಸಂತಾನಾಭಿವೃದ್ಧಿಗೆ ಅಣಿಯಾಗುತ್ತದೆ.



ಬಹುತೇಕ ಪ್ರಾಣಿಗಳಲ್ಲಿ ಗಂಡನ್ನು ವರಿಸುವ ಆಧಾರ ಹೋರಾಟದಲ್ಲಿನ ಗೆಲುವನ್ನೇ ಅವಲಂಬಿಸಿರುತ್ತದೆ.

ಹಕ್ಕಿಗಳಲ್ಲಿ ನಡೆಯುವ 'ಸ್ವಯಂವರ' ಶಾಂತಿಯುತ ಹಾಗೂ ವೈವಿಧ್ಯಪೂರ್ಣ. ಇಲ್ಲಿ ದೈಹಿಕ ಬಲ ಸ್ಪರ್ಧೆಗೆಬಾರದು. ಗಂಡಿನ ಕೌಶಲ್ಯದ ಮೇಲೆ ಹೆಣ್ಣು ನಿರ್ಧಾರ ತಾಳುತ್ತದೆ. ಗಂಡನ್ನು ಆರಿಸುವ ವಿಧಾನ ಎಷ್ಟು ಶಾಂತಿಯುತ ಮತ್ತು ನಾಗರೀಕವೆಂದರೆ ಅದನ್ನು ಅರಿತ ನಂತರ ಶ್ಲಾಘಿಸದಿರಲು ಸಾಧ್ಯವೇ ಇಲ್ಲ.

ಕೆಲವು ಹಕ್ಕಿಗಳು ಮಧುರ ಸ್ವರದಿಂದ ಹೆಣ್ಣನ್ನು ಆಕರ್ಷಿಸುತ್ತವೆ. ಹೆಣ್ಣಿನ ಚಿತ್ತವನ್ನು ಆಕರ್ಷಿಸಬಲ್ಲ ಕೊರಳಿನ ಗಂಡುಗಳು ಮಾತ್ರ ಸಂತಾನ ಭಾಗ್ಯ ಪಡೆದಿರುತ್ತವೆ. ಗಂಡು ಮರಕುಟಿಗ ಒಣ ರೆಂಬೆಯನ್ನು ಡೋಲಿನಂತೆ ಬಾರಿಸಿ ಹೆಣ್ಣನ್ನು ಕರೆಯುತ್ತದೆ. ಹಳದಿ ಬುಲ್‌ಬುಲ್‌ಗಳು ಪೋಕರಿ ಹುಡುಗರಂತೆ ಸೀಟಿ ಹೊಡೆಯುತ್ತವೆ.

ಗಯಾನ ಪ್ರದೇಶದಲ್ಲಿ ರಾಕ್‌ಥ್ರಷ್ (Rock thrush) ಮತ್ತು ಬರ್ಡ್ ಆಫ್ ಪ್ಯಾರಡೈಸ್ ಹಕ್ಕಿಯ ಕೆಲವು ಸಂಕುಲಗಳಿವೆ. 'ಸ್ವಯಂವರ' ಕಾಲದಲ್ಲಿ ಅವು ಒಂದು ನಿರ್ದಿಷ್ಟ ಜಾಗಕ್ಕೆ ಬಂದು ಸೇರುತ್ತವೆ. ಹೆಣ್ಣು ಹಕ್ಕಿಗಳು ಸುತ್ತಲೂ ನಿಶ್ಶಬ್ದದಿಂದ ನೆರೆಯುತ್ತವೆ. ಗಂಡುಗಳು ಸರದಿಯ ಮೇಲೆ ತಮ್ಮ ಬಹುವರ್ಣದ ಉಜ್ವಲ ಗರಿಗುಚ್ಛಗಳನ್ನು (ಫ್ಯಾಷನ್ ಷೋಗಳಲ್ಲಿ ರೂಪದರ್ಶಿಗಳ ಹಾಗೆ) ವಯ್ಯಾರದಿಂದ ಪ್ರರ್ಶಿಸುತ್ತವೆ ವಿಚಿತ್ರ ಲಾಗಗಳನ್ನು ಹಾಕುತ್ತಾ ದೊಂಬರಾಟ ನಡೆಸುತ್ತವೆ. ಪ್ರದರ್ಶನ ಮುಗಿದ ನಂತರ ಹೆಣ್ಣುಗಳು ತಮ್ಮ ಮನಸ್ಸಿಗೆ ಆಕರ್ಷಣೀಯವಾದ ಗಂಡುಗಳನ್ನು ಆರಿಸಿಕೊಳ್ಳುತ್ತವೆ. ಬಹುತೇಕ ಹಕ್ಕಿಗಳಲ್ಲಿ ಗಂಡಿನ ನೆತ್ತಿಯ ಗರಿ, ಪುಕ್ಕದ ಗರಿ, ಅದರ ಬಣ್ಣ, ಬಾಸಿಂಗ ಮುಂತಾದವು ಹೆಣ್ಣನ್ನು ಆಕರ್ಷಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಹಕ್ಕಿಗಳಲ್ಲಿ ಇರುವ ವರ್ಣ ವೈವಿಧ್ಯಕ್ಕೆ ಈ ಲೈಂಗಿಕ ಆಯ್ಕೆಯೇ ಪ್ರಮುಖ ಕಾರಣ.

ಹೆಣ್ಣು ನವಿಲಿಗೆ ಗರಿಯ ಸೊಬಗಿಲ್ಲ. ದೊಡ್ಡ ಕಾಡು ಕೋಳಿಯಂತಿರುತ್ತದೆ. ಕುಣಿಯುವುದು ಗಂಡು ನವಿಲು. ಕವಿಗಳು ಹೇಳುವಂತೆ ಅದು ಮಳೆಗಾಗಿ ನರ್ತಿಸುವುದಿಲ್ಲ : ಪ್ರಿಯತಮೆಯ ಒಲುಮೆ ಸಂಪಾದನೆಗೆ. ಗಂಡು ಆಕರ್ಷಣೀಯ ವರ್ಣ ಸಂಯೋಜನೆಯಿಂದ ಕೂಡಿದ ನೂರಾರು ಗರಿಗಳ ತೋಕೆಯನ್ನು ಒಮ್ಮೆಲೇ ಅಗಲಿಸಿ ಶ್ರವ್ಯಾತೀತ ಸಂಗೀತಕ್ಕೆ ಹೆಜ್ಜೆ ಹಾಕುತ್ತಾ ಕುಣಿಯುತ್ತದೆ. ಈ ಕುಣಿತಕ್ಕೆ ಅಗಾಧ ಶಕ್ತಿ ಬೇಕು. ಗಂಡು ಅಷ್ಟು ಕಷ್ಟಪಟ್ಟು ಕುಣಿಯುತ್ತಿದ್ದರೂ ಹೆಣ್ಣು ನವಿಲು ಅನಾಸಕ್ತಿಯಿಂದ ಹುಳ ಹುಪ್ಪಟೆ ಹೆಕ್ಕುವ ಕಾರ್ಯದಲ್ಲಿ ನಿರತವಾಗಿರುತ್ತದೆ. ಋಷಿಯ ಏಕಾಗ್ರತೆಯನ್ನು ಮೀರಿಸಿದ ಮಗ್ನತೆಯಲ್ಲಿ ಗಂಡು ಕುಣಿಯುತ್ತಾ ಗರಿಗಳನ್ನು ಪಟಪಟನೆ ಅಲ್ಲಾಡಿಸಿ ಕುಪ್ಪಳಿಸಿ ಕೊನೆಗೆ ಹೆಣ್ಣನ್ನು ಸಂಪೂರ್ಣವಾಗಿ ಗರಿಗಳಿಂದ ಮುಚ್ಚುವ ದೃಶ್ಯ ನಯನಮನೋಹರ. ಇಂಥ ಸಮಯದಲ್ಲಿ ಶತ್ರುಗಳು ಬಂದರೂ ಎಚ್ಚರವಿರದು. ಅಪಾಯವನ್ನು ಗ್ರಹಿಸಿ ಹೆಣ್ಣು ಕರೆಕೊಟ್ಟಾಗ ಮಾತ್ರ ಅದು ವಾಸ್ತವ ಸ್ಥಿತಿಗೆ ಮರಳುತ್ತದೆ. ಕಾಡುಕೋಳಿಯಂತಿರುವ ಹೆಣ್ಣು ನವಿಲನ್ನು ಆಕರ್ಷಿಸಲು ಗಂಡು ಇಷ್ಟೊಂದು ನರ್ತಿಸಬೇಕು.

ಗೀಜುಗ ಅಥವಾ ನೇಕಾರ ಹಕ್ಕಿಗಳಲ್ಲಿ (Weaver Bird) ಗಂಡಿನ ಆಯ್ಕೆ ಅದು ಗೂಡು ಕಟ್ಟುವ ಕೌಶಲ್ಯವನ್ನು ಅವಲಂಬಿಸಿರುತ್ತದೆ. ಗಂಡುಗಳು ಕೆಲವು ಬಾರಿ ಬಲವಾದ ನಾರುಗಳನ್ನು ತಂದು ಗೂಡು ಹೆಣೆಯುತ್ತವೆ. ಹೆಣ್ಣು ಹಕ್ಕಿ ಅದರ ಕಾರ್ಯವನ್ನು ವೀಕ್ಷಿಸುತ್ತಾ ಕುಳಿತುಕೊಳ್ಳುತ್ತದೆ. ಗೂಡು ಸಂಪೂರ್ಣ ಸಿದ್ಧವಾದ ಮೇಲೆ ಅದರ ವಾಸ್ತುಶಿಲ್ಪ, ನಿರ್ಮಾಣ ಮನಸ್ಸಿಗೆ ಒಪ್ಪಿದರೆ ಹೆಣ್ಣು ಸಂಸಾರ ಹೂಡುತ್ತದೆ. ಇಲ್ಲದಿದ್ದರೆ ಮತ್ತೊಂದು 'ಉತ್ತಮ' ಗಂಡಿನ ಅನ್ವೇಷಣೆಗೆ ಹೊರಡುತ್ತದೆ.

ಮನುಷ್ಯ ಸಮಾಜದಲ್ಲಿ ಸೌಂದರ್ಯ ಮತ್ತು ಲಾಲಿತ್ಯದ ಗುಣಗಳನ್ನು ಹೆಣ್ಣುಗಳಿಗೆ ಆರೋಪಿಸಲಾಗುತ್ತದೆ. ಒರಟುತನ ಮತ್ತು ದೈಹಿಕ ಬಲ ಗಂಡಿನ ಪ್ರಧಾನ ಲಕ್ಷಣಗಳು ಆದರೆ ಅದೇ ಹಕ್ಕಿಗಳಲ್ಲಿ ಉಜ್ವಲ ವರ್ಣ ಸೌಂದರ್ಯ, ಮಧುರ ಗಾಯನ, ಮೋಹಕ ನರ್ತನ, ಸುಂದರ ಗೂಡು ನಿರ್ಮಾಣ ಕೌಶಲ್ಯ ಗಂಡು ಪಡೆಯಲೇಬೇಕಾದ ಗುಣಗಳು. ಈ ಗುಣಗಳಿಲ್ಲದ ಗಂಡುಗಳು ಸಂತಾನಾಭಿವೃದ್ಧಿಗೆ ಅನರ್ಹವಾಗುತ್ತವೆ.

ಪ್ರಾಣಿ ಪ್ರಪಂಚದ ಲೈಂಗಿಕ ಆಯ್ಕೆ ಒಂದು ಉತ್ತಮ ಸಂತಾನವನ್ನು ಪಡೆಯುವ ವಿಧಾನವೇ ಆಗಿದೆ. ಅಲ್ಲದೆ ಗಂಡುಗಳ ನಡುವೆ ಅನಗತ್ಯ ಸ್ಪರ್ಧೆಯನ್ನು ಅದು ತಪ್ಪಿಸುತ್ತದೆ. ಮುಖ್ಯವಾಗಿ ಹೆಣ್ಣುಗಳ ದೃಷ್ಟಿಯಲ್ಲಿ 'ದುರ್ಬಲ' ಎಂದು ತೀರ್ಮಾನವಾದ ಗಂಡಿಗೆ ಲೈಂಗಿಕ ಸಂಯೋಗದ ಅವಕಾಶ ತಪ್ಪುವುದರಿಂದ ದುರ್ಬಲ ಸಂತಾನ ಹುಟ್ಟುವುದೂ ತಪ್ಪುತ್ತದೆ. ಲೈಂಗಿಕ ಆಯ್ಕೆಯ ಹಿಂದಿರುವ ಉದ್ದೇಶವೇ ಅದು.

■ ಕೆ. ಪುಟ್ಟಸ್ವಾಮಿ
ಕೃಪಾಕರ ಸೇನಾನಿ

ನಿಜಕ್ಕೂ ನಮ್ಮ ಬಗ್ಗೆ ಮತ್ತು ಇತರರ ಬಗ್ಗೆ ತಿಳಿದಿರುವ ಸಂಗತಿಗಳ ಪ್ರಜ್ಞಾಪೂರ್ವಕ ಅರಿವು ನಮ್ಮಲ್ಲಿ ಇದ್ದಿದ್ದರೆ; ಹೀಗೆ ಈ ರೀತಿಯ ಸುಳ್ಳುಗಳನ್ನು ಒಪ್ಪಿಕೊಂಡು ನಾವಿರಬೇಕಾದ ಅಗತ್ಯ ಇರುತ್ತಿರಲಿಲ್ಲ.

■ ಎರಿಕ್ ಫ್ರಾಂ

ಗುರು : ಜೀವನದಲ್ಲಿ ವ್ಯಕ್ತಿಗೆ ಮಾನ ಮರ್ಯಾದೆ ಮುಖ್ಯವಾದುದು; ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.
ಶಿಷ್ಯ : ಸಿಂಹ ಕೊಟ್ಟರೆ ಬರಬಹುದೇ ಗುರುಗಳೇ?



ಮಹಿಳೆಯರ ಮೇಲುಗೈ

ಅದಕ್ಕೆ ಕಾರಣಗಳೂ ಹಲವು

ಮಹಿಳೆಯರು ಓದಿನಲ್ಲಷ್ಟೇ ಮುಂದು. ಅವರಿಗೆ ಬೇರೆ ಕೆಲಸ ಇಲ್ಲ. ಓದುವುದು ಒಂದೇ ಎಂದೆಲ್ಲ ಸಮಾಧಾನ ಪಡೆಯುತ್ತೇವೆ. ನಿಜಕ್ಕೂ ಮಹಿಳೆಯರು ಹಲವಾರು ರಂಗಗಳಲ್ಲಿ ಸಹಜವಾಗಿಯೇ ಮುಂದಿದ್ದಾರೆ. ಅದಕ್ಕೆ ಮನೋದೈಹಿಕ ಕಾರಣಗಳು ಇವೆ. ಅಂಥ ಹಲವು ವಿಚಾರ ಗಳ ಪರಿಚಯ ಈ ಲೇಖನ

'ಬಾಲಕಿಯರ ಮೇಲುಗೈ' ಎಸ್‌ಎಸ್‌ಎಲ್‌ಸಿ ಅಥವಾ ಪ್ರಿಯೂನಿವರ್ಸಿಟಿ ಫಲಿತಾಂಶದ ಜೊತೆಗೆ ಕಾಣಿಸಿಕೊಳ್ಳುವ ಪತ್ರಿಕೆಗಳ ಮಾಮೂಲು ಶೀರ್ಷಿಕೆ ಇದು. ಭಾರತದಂಥ ದೇಶದಲ್ಲಿ ಹೆಣ್ಣು ಮಕ್ಕಳು ವಿದ್ಯಾಭ್ಯಾಸಕ್ಕೆ ಮುಂದಾದ್ದು ತೀರಾ ಇತ್ತೀಚೆಗೆ. ಒಂದು ಎಸ್‌ಎಸ್‌ಎಲ್‌ಸಿಯಾದರೂ ಮಾಡಿಕೊಂಡಿರಬೇಕು ಎಂಬ ಮನೋಭಾವ ಹೆಚ್ಚುತ್ತಿದೆ. ಮುಂದುವರಿದ ಶಿಕ್ಷಣದಲ್ಲಿಯೂ ಅವರ ಸಂಖ್ಯೆ ವರ್ಷ ವರ್ಷ ಜಾಸ್ತಿ ಆಗುತ್ತಿದೆ. ದುಡಿಮೆಯ ಎಲ್ಲ ರಂಗಗಳಲ್ಲೂ ಅವರೀಗ ಕಾಣಿಸಿಕೊಳ್ಳುತ್ತಾ ಇದ್ದಾರೆ.

ಕೆಲವು ರಂಗಗಳಲ್ಲಿ ಮಹಿಳೆಯರು ಪುರುಷರಿಗಿಂತ ಚೆನ್ನಾಗಿ ಕಾರ್ಯ ನಿರ್ವಹಿಸುವವರೆಂಬುದು ಸಾಬೀತಾಗಿದೆ. ಈ ಕುರಿತು ನಮ್ಮಲ್ಲಿ ಹೆಚ್ಚು ಅಧ್ಯಯನ, ಸಂಶೋಧನೆ ಆಗಿಲ್ಲ. ಆದರೆ ಬೇರೆ ದೇಶಗಳಲ್ಲಿ ಮಹಳೆಯರು ಯಾವ ರಂಗಗಳಲ್ಲಿ ಪುರುಷರಿಗಿಂತ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಾರೆ ಎಂದು ನಿಖರವಾಗಿ ಅಧ್ಯಯನ ಮಾಡಿದ್ದಾರೆ.

ಭಾಷೆಯ ಕಲಿಕೆ : ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ಬೇಗ ಮಾತು ಕಲಿಯುತ್ತಾರೆ. ಇದು ಸಾಮಾನ್ಯ. ಬೇಗ ಭಾಷೆ ಕಲಿಯುವ ಇವರು ಭಾಷೆಯ ಬಳಕೆಯಲ್ಲಿಯೂ ಹೆಚ್ಚು ಸಮರ್ಥರು. ಅವರಲ್ಲಿ ಶೀಘ್ರ ಪದ ಸಂಪತ್ತು ಬೆಳೆಯುತ್ತದೆ. ಆದ್ದರಿಂದ ವೈವಿಧ್ಯಪೂರ್ಣ ಮತ್ತು ಕರಾರುವಕ್ಕಾದ ವಾಕ್ಯಗಳ ರಚನೆ ಸುಲಭವಾಗುತ್ತದೆ.

ಬರಹ ಮತ್ತು ಓದುವ ವಿಚಾರದಲ್ಲಿ ಹುಡುಗಿಯರು ಸಾಮಾನ್ಯವಾಗಿ ಹುಡುಗರಿಗಿಂತ ಮುಂದಿರುತ್ತಾರೆ ಎಂಬುದನ್ನು ಅಂಕಿ ಅಂಶಗಳು ಸಾಬೀತು ಮಾಡುತ್ತವೆ.

ಇದರ ಪರಿಣಾಮವಾಗಿ, ಬೆಳೆದ ಹಾಗೆ ಅವರಲ್ಲಿ ಭಾಷೆ, ಪದ ಪ್ರಯೋಗ ಹೆಚ್ಚು ಅಚ್ಚುಕಟ್ಟಾಗುತ್ತದೆ. ಹಾಗೆ, ಮಹಿಳೆಯರು ಪುರುಷರಿಗಿಂತ ಬೇಗ ಮತ್ತು ಚೆನ್ನಾಗಿ ವಿದೇಶೀ ಭಾಷೆಗಳನ್ನು ಕಲಿಯಬಲ್ಲರು ಎಂದು ಅಧ್ಯಯನದಿಂದ ದೃಢವಾಗಿದೆ.

ಕರಾರು ವಾಕ್ಕು : ಸೂಕ್ಷ್ಮವಾದ ಜೋಡಣೆ, ಪದಾರ್ಥಗಳನ್ನು ವಿಂಗಡಿಸಿ ಆಯಾ ವಸ್ತುವಿನ ಖಾನೆಯಲ್ಲಿ ಇಡುವ ಕೆಲಸದಲ್ಲಿಯೂ ಹೆಂಗಸರು ಚುರುಕು. ಕೈಗಡಿಯಾರದ ಯಂತ್ರಗಳ ಜೋಡಣೆ, ಎಲೆಕ್ಟ್ರೋಡ್‌ಗಳ ಜೋಡಣೆಯಂಥ ಕರಾರುವಕ್ಕಾಗಿ ನಿರ್ವಹಿಸಬೇಕಾದ ಕೆಲಸಗಳನ್ನು ಅವರು ತುಂಬಾ ಚುರುಕಾಗಿ ನಿರ್ವಹಿಸಬಲ್ಲರು.

ಪರಿಮಳಗಳನ್ನು ಗುರುತಿಸುವ ವಿಚಾರದಲ್ಲಿಯೂ ಅಷ್ಟೇ. ಗಂಡಸರಿಗಿಂತ ಹೆಂಗಸರು ಸೂಕ್ಷ್ಮ ಎಂಬುದು 1955ರಲ್ಲಿ ಪೆನ್ಸಿಲ್ವೇನಿಯಾದ ವಾಸನೆ ಮತ್ತು ರುಚಿ ಗ್ರಹಣ ಕೇಂದ್ರ ನಡೆಸಿದ ಅಧ್ಯಯನದಿಂದ ತಿಳಿದು ಬಂದಿದೆ. ಅಷ್ಟೇನೂ ಗಾಢವಲ್ಲದ ಸುಗಂಧಗಳನ್ನು ಕೂಡ ಅವರು ಗುರುತಿಸಬಲ್ಲರು.

ಅವರ ಗ್ರಹಣ ಶಕ್ತಿಯೂ ಜೋರು. ಮೇಜಿನ ಮೇಲೆ ಹಲವು ವಸ್ತುಗಳ ಜೊತೆಯೇ ಕರ್ಚೀಫು ಕಣ್ಣಿಗೆ ಕಾಣುವಂತಿದ್ದರೂ, ಅದನ್ನು ನೋಡುತ್ತಿರುವ ಗಂಡಸಿಗೆ ತನಗೆ ಬೇಕಾದ್ದು ಧಟ್ಟನೆ ಗುರುತಿಸುವುದಾಗದೇ "ಕರ್ಚೀಫು ಎಲ್ಲಿ?" ಎಂದು ಕೇಳಿ, ಅಲ್ಲೇ ಇದ್ದ ಕರ್ಚೀಫು ಹೆಂಡತಿಯೋ, ಸಹೋದರಿಯೋ ತೆಗೆದುಕೊಟ್ಟಾಗ 'ಅಲ್ಲೇ ಇದ್ದರೂ ಅದು ತನ್ನ ಕಣ್ಣಿಗೇಕೆ ಕಾಣಲಿಲ್ಲ!' ಅಂದುಕೊಳ್ಳುವುದುಂಟು. ರೆಫ್ರಿಜರೇಟರು, ಅಡುಗೆ ಮನೆಯಲ್ಲಿ ಇಟ್ಟ ವಸ್ತುಗಳನ್ನು ಸುಲಭವಾಗಿ ಹುಡುಕುವುದು ಹೆಂಗಸಿರಿಗೇ ಸಾಧ್ಯ. ಗಂಡಸರು ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತೆ ಆಡುತ್ತಾರೆ.

ಶ್ರವಣ ಶಕ್ತಿಯೂ ಅವರಲ್ಲಿ ಹೆಚ್ಚು ಹಾಗೂ ಸೂಕ್ಷ್ಮ. ಗಂಡಸರಿಗೆ ಬೇಗ ಕಿವಿ ಮಂದ ಆಗುತ್ತದೆ. ಹೆಂಗಸರಿಗೆ ಹಾಗಲ್ಲ. ಅವರು ಸಣ್ಣ, ಪುಟ್ಟ ಸದ್ದುಗಳನ್ನು ಕೂಡ ಆಲಿಸಿ ಗ್ರಹಿಸಬಲ್ಲರು.

ಅನ್ಯೋನ್ಯತೆ : ಹೆಂಗಸರು ಮುಗುಳ್ನಗಲು ಹಿಂಜರಿಯುವುದಿಲ್ಲ. ಗಂಡಸರು ಹೀಗೆ ನಕ್ಕು ಹಗುರಾಗುವುದು ಕಮ್ಮಿ. ನಕ್ಕರೆ, ಮುಖ ಸಡಿಲಿಸಿದರೆ ನಾವು ಹಗುರಾಗಿ ಬಿಡುತ್ತೇವೆ ಎಂಬ ಭಾವನೆ ಅವರಿಗೆ. ಹೆಂಗಸರು ಒಬ್ಬರಿಗೊಬ್ಬರು ಹತ್ತಿರವಾಗುವಂತೆ, ಗಂಡಸರು ಹತ್ತಿರವಾಗುವುದಿಲ್ಲ. ಸಾರ್ವಜನಿಕ ಸಮಾರಂಭ, ಸಭೆಗಳಲ್ಲಿ, ಬಸ್‌ಗಳಲ್ಲಿ ಹೆಣ್ಣುಮಕ್ಕಳು ಒತ್ತಾಗಿ ನಿಂತ ಹಾಗೆ ಗಂಡಸರು ಎಂದೂ ಒತ್ತಿಕೊಂಡು ನಿಲ್ಲುವುದಿಲ್ಲ. ವಿವಿಧ ಸಮಾರಂಭ, ಸಭೆಗಳಲ್ಲಿ ತೆಗೆದ ಇಪ್ಪತ್ತು ವಿಡಿಯೋ ಟೇಪ್‌ಗಳನ್ನು ಅಧ್ಯಯನ ಮಾಡಿದ ಮೇಲೆ ಈ ವಿಚಾರ ಹೆಚ್ಚು ಸ್ಪಷ್ಟವಾಗಿದೆ. ಇಂಥ ಕಾರಣಗಳಿಂದಾಗಿಯೇ ಹೆಂಗಸರು ಬೇಗ ಹಾಗೂ ಗಾಢವಾಗಿ ಬೇರೆಯವರ ಜೊತೆ ಪ್ರತಿಕ್ರಿಯಿಸಬಲ್ಲರು. ಅವರಲ್ಲಿ ತಾಳ್ಮೆ ಹೆಚ್ಚು. ಶಾಂತವಾಗಿ ಕೇಳಿಸಿಕೊಳ್ಳುವ ಗುಣ ಇದೆ. ತೀರಾ ವಿರೋಧ ವ್ಯಕ್ತಪಡಿಸುವಾಗಲೂ, ಇನ್ನೊಬ್ಬರಿಗೆ ನೋವಾಗದಂತೆ ಹೇಳಬಲ್ಲರು." ನೀವು ಹೇಳೋವಿಚಾರ ಸರಿ ಆದರೆ...." ಎಂದು ತಾವು ಸರಿ ಎಂದು ತಿಳಿದದ್ದನ್ನು ಮನವರಿಕೆ ಮಾಡಿಕೊಡಬಲ್ಲರು.

ನಾಯಕತ್ವದಲ್ಲಿ : ಆಡಳಿತ ನಿರ್ವಹಣೆಯ ಉನ್ನತ ಹುದ್ದೆಗಳಲ್ಲಿ ಮಹಿಳೆಯರು ಸಮರ್ಥರು ಎಂಬುದು ಸಾಬೀತಾಗುತ್ತಾ ಇದೆ. ಅವರು ಅಧಿಕಾರ ಹಂಚಿಕೊಳ್ಳಲು ಸಿದ್ಧ, ಬೇರೆಯವರೂ ನಾನಾ ರೀತಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬಲ್ಲರು ಹಾಗೂ ಕೈಕೆಳಗಿನ ಸಿಬ್ಬಂದಿಯಲ್ಲಿ ತನಗೂ ಮಹತ್ವ ಇದೆ ಎಂಬ ಭಾವನೆ ಮೂಡಿಸಬಲ್ಲರು.

ಈಜಿನಲ್ಲಿ : ಬಹಳ ದೂರ ಈಜುವ ವಿಚಾರದಲ್ಲಿ ಮಹಿಳೆಯರದೇ ಇವತ್ತಿಗೂ ಮೇಲುಗೈ, ಇದಕ್ಕೆ ಸಹಜ ಕಾರಣ ಇದೆ. ಮಹಿಳೆಯರ ದೇಹದಲ್ಲಿ ಕೊಬ್ಬಿನ ಅಂಶ ಜಾಸ್ತಿ. ಆದರಿಂದ ತುಂಬಾ ದೂರ ಈಜುವಾಗಲೂ ಅವರು ದೇಹದ ಉಷ್ಣತೆ ಕಾಯ್ದುಕೊಳ್ಳುವುದು ಸಾಧ್ಯ. ಜೊತೆಗೇ ತೇಲುವ ಸಾಮರ್ಥ್ಯ ಕೂಡ ಇದರಿಂದ ಹೆಚ್ಚುತ್ತದೆ.

ಇದುವರೆಗೆ ನಡೆದ, ನಡೆಯುತ್ತಿರುವ ಅಧ್ಯಯನ ಮತ್ತು ಸಂಶೋಧನೆಗಳಿಂದ ವ್ಯಕ್ತವಾದ ಸಂಗತಿ ಇದು. ಆದರೆ ಮಹಿಳೆಯ ನಿಜವಾದ ಶಕ್ತಿ, ಆಕೆ ಮೇಲುಗೈ ಪಡೆಯಬಹುದಾದ ರಂಗಗಳನ್ನು ಗುರುತಿಸುವ ಕಾರ್ಯ ಇನ್ನೂ ಹೆಚ್ಚಾಗಿ ಆಗಬೇಕಿದೆ

■ ಸುಭಾಷಿಣಿ

ಮಾನವೀಯ ಮೌಲ್ಯಗಳು

'ಏನಜ್ಜಿ ಆರೋಗ್ಯಾನ? ಎಂದೆ. 'ಬಿದ್ದೋಗೊ ಮರ ಹೆಂಗಿದ್ರೇನ, ನೀ ಚೆಂದಾಗಿದ್ದೀಯಾ ಮೊಗ' ಅಂದ್ಳು ಆ ತಾಯಿ.

ನಿಡಿದಾದ ಬಾಳಿನ ತುಂಬುಹೃದಯದ ಮಾತಿದು. ಆಕೆ, ನಾಡಿಬಡಿತದಷ್ಟು ಸ್ವಭಾವ ಸಹಜವಾಗಿ ಆಡಿದ ಮಾತದು. ಕಿರಿದೊಂದು ಜೀವವನ್ನೂ ಹಿರಿದಾದ ಜೀವ ಪೋಷಿಸುತ್ತಿದ್ದ ಕ್ರಮವದು. ತಾನೂ ಸಂತೋಷಿಸಿ, ಮತ್ತೊಬ್ಬರನ್ನು ಸಂತೋಷದಿಂದಿರಿಸುವ ಉದಾರ ನೀತಿಯದು.

ಮತ್ತೊಂದು ಸಂದರ್ಭವನ್ನು ನೋಡೋಣ.

ಹಿಂದೆ ವಾರಾನ್ನದ ಪದ್ಧತಿ ಇತ್ತು. ಅಂಥದೊಂದು ಮನೆ, ಮನೆಗೆ ಬರುವ ಒಬ್ಬ ವಿದ್ಯಾರ್ಥಿಯನ್ನು ಆ ತಾಯಿ ನಡೆಸಿಕೊಂಡ ರೀತಿಯನ್ನು ನೋಡೋಣ. ಎಂದಿನಂತೆ ಆ ವಿದ್ಯಾರ್ಥಿ ಬಂದ, ಎಲ್ಲರಿಗೂ ಸಹ ಪಂಕ್ತಿ ಭೋಜನ, ಒಂದು ಹೊತ್ತಿನ ಊಟ ನೀಡುವುದು ಆ ತಾಯಿಯ ಹೊಣೆ ಆಗಿತ್ತು. ತನ್ನ ಮಕ್ಕಳೆಲ್ಲರ ಜೊತೆ ಕುಳಿತಿದ್ದ ಆ ವಿದ್ಯಾರ್ಥಿಗೆ, ಹೊಗೆ ಆಡುತ್ತಿದ್ದ ಬಿಸಿ ಬಿಸಿ ಅನ್ನ ಬಡಿಸಿದ್ದಳು ಆ ತಾಯಿ, ತನ್ನ ಮಕ್ಕಳಿಗೆ ರಾತ್ರಿ ಮಿಕ್ಕಿದ್ದ ತಂಗಳು ಬಡಿಸಿದಳು.

'ಅಮ್ಮ ಏನಿದು ಅನ್ಯಾಯ, ನನಗೆ ಬಿಸಿ ಅನ್ನ ನಿಮ್ಮ ಮಕ್ಕಳಿಗೆ ತಂಗಳು' ಎಂದು ಕೇಳಿದ.

'ಮಗು, ನಿನಗೆ ಈ ಹೊತ್ತು ಮಾತ್ರ ಅನ್ನ ಬಡಿಸಲು ನನಗೆ ಅವಕಾಶ, ಇವರಿಗಾದರೂ ಬಿಸಿ ಬಿಸಿ ಅನ್ನ ಮಾಡಿ ಬಡಿಸಲು ಮತ್ತೊಂದು ಹೊತ್ತು ಕಾದಿದೆ' ಎಂದಳು.

ಸಾಮಾನ್ಯರಾಡಲು ಸಾಧ್ಯವೆ ಇಂಥ ಮಾತನ್ನು! ದೊಡ್ಡ ಜೀವಗಳು ಮಾತ್ರ ಆಡುತ್ತವೆ. ಅದಕ್ಕಾಗಿಯೇ ಏನೋ 'ತಾಯಿಯ ಮಡಿಲು ಹೊಂಗೆಯ ನೆರಳು' ಎಂದದ್ದು ಹಿರಿಯರು.

ಇಂಥ ಮಾನವೀಯ ಅನುಕಂಪ. ನಮಗೆ ಅರಿವಿಲ್ಲದೆ ಕಣ್ಣು ತುಂಬಿ ಬರುವಂತೆ ಮಾಡುತ್ತದೆ. ಸಂತೋಷವನ್ನು ಅದುಮಿಡಲು ಸಾಧ್ಯವಾಗದಂತೆ ಉದ್ಗಾರ ತೆಗೆಯುವಂತೆ ಮಾಡುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನೆದುರು ಸಂಸ್ಕೃತ ಕಾಲೇಜಿದೆ. ಸುಮಾರು ಹದಿನೈದು ವರ್ಷಗಳ ಹಿಂದಿನ ಮಾತು. ಆ ಕಾಲೇಜಿಗೆ ಸಂಸ್ಕೃತ ಪ್ರಾಧ್ಯಾಪಕರೊಬ್ಬರು ಬರುತ್ತಿದ್ದರು. ಹಾಗಲ್ಲ, ಬಹಳ ಪ್ರಯಾಸದಿಂದ ಊರುಗೋಲ ಸಹಾಯದೊಂದಿಗೆ ತಮ್ಮೆರಡೂ, ಬಿಲ್ಲಿನಂತೆ ಬಾಗಿದ್ದ ಕಾಲುಗಳನ್ನು ಎಳೆದುಕೊಂಡು ಬರುತ್ತಿದ್ದರು. ಚಿಕ್ಕಮಕ್ಕಳಿಗಂತೂ ಅವರನ್ನು ನೋಡುವುದೇ ಒಂದು ವಿಚಿತ್ರ ಅನುಭವ. ಒಂದು ದಿನ ಅದೇ ಕಾಲೇಜಿನ ವಿದ್ಯಾರ್ಥಿ, (ಆ ಕಾಲೇಜಿನ ವಿದ್ಯಾರ್ಥಿ ಆಗಲು ವಯೋಮಿತಿಗಳೇನೂ ಇಲ್ಲ. ವಿದ್ಯಾರ್ಥಿಗೆ ಸಂಸ್ಕೃತ ಕಲಿಯಬೇಕೆಂಬ ಆಸೆ ಇದ್ದರೆ, ಅರ್ಹ ವಿದ್ಯಾಭ್ಯಾಸ ಹೊಂದಿದ್ದರೆ ಸಾಕು) ತನ್ನ ಮಗನೊಂದಿಗೆ ಕಾಲೇಜಿಗೆ ಬರುತ್ತಿದ್ದ ಆ ಕಡೆಯಿಂದ ಈ ಸಂಸ್ಕೃತ ಪ್ರಾಧ್ಯಾಪಕರು ಬರುತ್ತಿದ್ದರು. ಮಗು ಅವರನ್ನು ನೋಡಿದ ತಕ್ಷಣ, ಕುಂಟ ಕುಂಟ ಕುಂಟ ಅಂದೇಬಿಡ್ತು, ತಂದೆಗೂ ತುಂಬ ಕೋಪ ಬಂದು ಗದರಿಸಿದರು. 'ಲೋ ಅವರು ನಮ್ ಮೇಷ್ಟ್ರು ಕಣೊ. ಹಾಗನ್ತಾರೇನೋ' ಎಂದು ಮಗು ತೆಪ್ಪಗಾಯ್ತು.

ಅದಕ್ಕೆ ಸಂಸ್ಕೃತ ಮೇಷ್ಟ್ರು ಅಂದ್ರು,

'ಆ ಮಗು ಆಡಿದ್ ಮಾತು ಸುಳ್ಳೇನೋ ! ಕುಂಟನಲ್ಲವೆ ನಾನು? ಸತ್ಯ ಹೇಳಿದ್ರೆ ದಂಡಿಸ್ತೀಯಾ?'

'ಹಾಗಲ್ಲ ಸರ್, ಮನಸ್ಸಿಗೆ ನೋವಾಗಲ್ವೆ ಸರ್' ಎಂದರು ತಂದೆ. ಸತ್ಯ ಯಾವಾಗ್ಲೂ ಕಠೋರಾಪ್ಪ, ಅದನ್ನ ಸಹಿಸೋ ಧೈರ್ಯ ಬೇಕು, ನನ್ನ ಅಧ್ಯಯನ ನನಗೆ ಅದನ್ನೇ ಹೇಳ್ಕೊಡ್ತಾ ಇದೆಯಪ್ಪಾ' ಅಂದ್ರು ಆ ಮೇಷ್ಟ್ರು.

ಉರಿಗೋಪಕ್ಕೆ ಕಾರಣವಾಗಬೇಕಿದ್ದ ಸಂದರ್ಭವನ್ನು ಒಬ್ಬ ವಿವೇಕಿ ಹೇಗೆ ನಿರ್ವಹಿಸಬಲ್ಲ ಅನ್ನೋದನ್ನ ಈ ಸಂದರ್ಭ ಸ್ಪಷ್ಟಪಡಿಸ್ತಿಲ್ವೆ, ನೀವೇ ಹೇಳಿ.

ಮನುಷ್ಯ ಮನುಷ್ಯನ ನಡುವಣ ಸಂಬಂಧ ಹೇಗಿದ್ದರೆ, ಏನೆಲ್ಲ ಒಳಿತನ್ನು ರಾಶಿ ಹಾಕಬಹುದು. ಎಂಥ ಸುಂದರವಾದ ಸಂದರ್ಭಗಳನ್ನು ಕಟ್ಟಿಕೊಳ್ಳಬಹುದು ಅನ್ನಿಸೊಲ್ವೆ

ಮಾನವೀಯ ಮೌಲ್ಯಗಳೇ ಹಾಗೆ. ಎಲ್ಲರನ್ನೂ ಒಂದು ಗೂಡಿಸುತ್ತದೆ. ಒಗ್ಗಟ್ಟಿನ ಬಾಳುವೆಯಲ್ಲಿ ಸಮಾಜವನ್ನು ನಿರ್ಮಾಣ ಮಾಡುತ್ತದೆ. ಸೌಹಾರ್ದ, ಸ್ನೇಹ ಸಂಬಂಧಗಳನ್ನು ಭದ್ರಗೊಳಿಸುತ್ತವೆ, ಏನೆಲ್ಲವನ್ನು ಮಾಡುತ್ತದೆ ಎನ್ನುವುದೇ ಒಂದು ಚೇತೋಹಾರಿ ಅನುಭವ.

■ ನ. ಚಕ್ರಪಾಣಿ



ಪ್ರಾಚೀನ ಕಾಲದಲ್ಲಿ ರಾಜರುಗಳು ಕೆಲ್ಸ ಮಾಡಿಸಿದ್ದೀವಿ ಅನ್ನೋಕೆ ಶಿಲಾಶಾಸನಗಳನ್ನು ನೆಡತಾ ಇರ್ಲಿಲ್ವಾ, ಹಾಗೆ ಇಂದಿನ ರಾಜಕಾರಣಿಗಳು ತಾವು ಮಂತ್ರಿಯಾಗಿದ್ವಿ ಅನ್ನೋ ಗುರುತಿಗೆ ಅಡಿಗಲ್ಲನ್ನು ಹಾಕಿರತಾರೆ ಕಣಯ್ಯಾ

ಬದುಕು ದೀಪಾವಳಿ ವಿಶೇಷಾಂಕ

ಪ್ರಕಟಣೆಯ ३ನೇ ವರ್ಷದಲ್ಲಿ ಕಾಲಿರಿಸಿದ '**ಬಿಸಿಲ ಬದುಕು**' ಮಾಸಪತ್ರಿಕೆ ವಿನೂತನ '**ದೀಪಾವಳಿ ವಿಶೇಷಾಂಕ**' ರೂಪಿಸುತ್ತಿದೆ. ಅರ್ಥಪೂರ್ಣ ಸಂಪಾದಕೀಯಸತ್ವ ಹಾಗೂ ಅತ್ಯಾಧುನಿಕ ವರ್ಣ ಮುದ್ರಣ ಈ ವಿಶೇಷಾಂಕದ ವೈಶಿಷ್ಟ್ಯ

ಚೆನ್ನವೀರ ಕಣವಿ, ಚಂದ್ರಶೇಖರ ಕಂಬಾರ, ಶಾಂತರಸ, ಎಚ್.ಎಸ್. ಶಿವಪ್ರಕಾಶ್, ಎಂ.ಎನ್. ವ್ಯಾಸರಾವ್, ನಾ. ಡಿಸೋಜ, ಬಿದರಹಳ್ಳಿ ನರಸಿಂಹಮೂರ್ತಿ, ಗೀತಾ ನಾಗಭೂಷಣ, ಎಸ್. ದಿವಾಕರ, ರಾಘವೇಂದ್ರ ಪಾಟೀಲ, ಮುದೇನೂರ ಸಂಗಣ್ಣ, ಎಂ.ಎಸ್. ಮೂರ್ತಿ, ಸುಭದ್ರಮ್ಮ ಮನ್ಸೂರ್.... ಮೊದಲಾದ ಗಣ್ಯರು ಈ ಸಂಚಿಕೆಯನ್ನು ಸಮೃದ್ಧಗೊಳಿಸಲಿದ್ದಾರೆ.

ರೂ. 15000 ಬಹುಮಾನಗಳು

ಪ್ರಬಂಧ ಸ್ಪರ್ಧೆ

* ಮೊದಲ ಬಹುಮಾನ : ರೂ.2000
* ಎರಡನೇ ಬಹುಮಾನ : ರೂ. 1000
* ತಲಾ 500 ರೂಪಾಯಿಗಳ ನಾಲ್ಕು ಸಮಾಧಾನಕರ ಬಹುಮಾನಗಳು

ಕಥಾ ಸ್ಪರ್ಧೆ

* ಮೊದಲ ಬಹುಮಾನ : ರೂ.2000
* ಎರಡನೇ ಬಹುಮಾನ : ರೂ. 1000
* ತಲಾ 500 ರೂಪಾಯಿಗಳ ನಾಲ್ಕು ಸಮಾಧಾನಕರ ಬಹುಮಾನಗಳು.

- ಕಥೆ, ಪ್ರಬಂಧ ಸ್ವತಂತ್ರವಾಗಿರಬೇಕು. ಭಾಷಾಂತರವಾಗಲಿ, ಅನುಕರಣೆಯಾಗಲಿ ಆಗಿರಕೂಡದು. ಹಸ್ತಪ್ರತಿ ಫುಲ್‌ಸ್ಕೇಪ್ ಎಂಟು ಪುಟ ಮೀರಿರಬಾರದಷ್ಟು.
- ಬೇರೆಡೆ ಪ್ರಕಟವಾಗಿರಬಾರದು ಅಥವಾ ಆಕಾಶವಾಣಿ, ದೂರದರ್ಶನದಲ್ಲಿ ಪ್ರಸಾರವಾಗಿರಬಾರದು.
- ಕಾಗದದ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರಬೇಕು.
- ಅರ್ಹವೆನಿಸಿದ ಪ್ರವೇಶಗಳು ಬಾರದಿದ್ದಲ್ಲಿ ಬಹುಮಾನಗಳನ್ನು ಸೂಕ್ತ ರೀತಿಯಲ್ಲಿ ವಿತರಣೆ ಮಾಡುವ ಅಧಿಕಾರ ಸಂಪಾದಕರಿಗೆ ಸೇರಿದ್ದು.
- ಸ್ಪರ್ಧೆಗೆ ಪ್ರವೇಶ ಧನ ಇಲ್ಲ. ಕಥೆ, ಪ್ರಬಂಧಗಳನ್ನು ವಾಪಸ್ ಮಾಡುವುದಿಲ್ಲ.

ಛಾಯಾಚಿತ್ರ ಸ್ಪರ್ಧೆ

ಈ ಸ್ಪರ್ಧೆಯಲ್ಲಿ ಭಾವಚಿತ್ರ, ಪ್ರಕೃತಿ ಹಾಗೂ ಇತರೆ ಛಾಯಾಚಿತ್ರಗಳು - ಹೀಗೆ ಮೂರು ವಿಭಾಗಗಳಿವೆ. ಮೂರೂ ವಿಭಾಗದ ಒಂದೊಂದು ಅತ್ಯುತ್ತಮ ಛಾಯಾಚಿತ್ರಕ್ಕೆ ರೂ. 1000 ಪ್ರಥಮ ಬಹುಮಾನ. ಜೊತೆಗೆ ತಲಾ 250 ರೂಪಾಯಿಯ ಎಂಟು ಸಮಾಧಾನಕರ ಬಹುಮಾನಗಳು.

- 8 X 10 ಸೈಜಿನ ವರ್ಣಚಿತ್ರ ಅಥವಾ ವರ್ಣಪಾರದರ್ಶಿಕೆಯನ್ನು ಕಳಿಸಿ.
- ಒಬ್ಬರು ಎಷ್ಟಾದರೂ ಛಾಯಾಚಿತ್ರಗಳನ್ನು ಕಳಿಸಬಹುದು.
- ಆಯ್ಕೆಯಾದ ಛಾಯಾಚಿತ್ರಗಳ ಹಕ್ಕು ಪ್ರಕಾಶಕರಿಗೆ ಸೇರುತ್ತದೆ.
- ಆಯ್ಕೆಯಾಗದ ಛಾಯಾಚಿತ್ರ ಹಿಂದಿರುಗಿ ಪಡೆಯಲು ಸಾಕಷ್ಟು ಅಂಚೆ ಚೀಟಿ ಹಚ್ಚಿದ ಸ್ವವಿಳಾಸದ ಲಕೋಟೆ ಕಳಿಸಿ.

ಓದುಗರ ಅಂಕಣಗಳು :

- **ಶತಮಾನದ ವ್ಯಕ್ತಿ :** ನೀವು ಆರಿಸುವ ಈ ಶತಮಾನದ ವ್ಯಕ್ತಿ ಯಾರು? ನಿಮ್ಮ ಆಯ್ಕೆಗೆ ಈ ವ್ಯಕ್ತಿಯಲ್ಲಿ ನೀವು ಕಂಡ ವಿಶೇಷತೆಗಳಾವುವು?
- **ನನ್ನ ಕಲ್ಪನೆಯಲ್ಲಿ ಸೌಂದರ್ಯ :** ನಿಮ್ಮ ಮನೋಬಿತ್ತಿಯಲ್ಲಿ ಮೂಡುವ ಸೌಂದರ್ಯದ ಕಲ್ಪನೆ ಎಂತಹದು? ಒಳಗಣ್ಣ ನೋಟದ ಈ ಸೌಂದರ್ಯಕ್ಕೆ ಲಿಖಿತ ರೂಪ ನೀಡಿರಿ.
- **ನನ್ನ ದಾಂಪತ್ಯ ಜೀವನ :** ದಾಂಪತ್ಯ ಜೀವನದ ಸರಸ-ವಿರಸಗಳ ರಸಾನುಭವಗಳಿಗೆ ಅಭಿವ್ಯಕ್ತಿ ನೀಡಿ. ಈ ಬಗ್ಗೆ ಗಂಡ-ಹೆಂಡತಿ ಇಬ್ಬರೂ ಬರೆಯಬಹುದು.

ಸೂಚನೆಗಳು :

* ಓದುಗರ ಅಂಕಣದ ಬರಹಗಳು ಫುಲ್‌ಸ್ಕೇಪ್ ಹಾಳೆಯ ಅರ್ಧಪುಟ ಮೀರಬಾರದು.
* ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರಬೇಕು.
* ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ.
* ಬರಹದೊಂದಿಗೆ ನಿಮ್ಮದೊಂದು ಭಾವಚಿತ್ರ ಕಳಿಸಿ.


ವಿಳಾಸ

ಬದುಕು ದೀಪಾವಳಿ ಸ್ಪರ್ಧೆ, ಅಂಕುರ ಪ್ರಕಾಶನ, 473, 1ನೇ ಬ್ಲಾಕ್, 3ನೇ ಸ್ಟೇಜ್,
ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರನಗರ, ಬೆಂಗಳೂರು - 560 079 ✆ 3307810

ಸ್ಪರ್ಧೆಗೆ ಪ್ರವೇಶಗಳನ್ನು ಸ್ವೀಕರಿಸುವ ಕೊನೆಯ ದಿನ 15 ಸೆಪ್ಟೆಂಬರ್ 1999

ಅಪರಾಧಿಗಳ ಹೊಸ ಸಂಗಾತಿ

ಕಂಪ್ಯೂಟರ್



ಕಂಪ್ಯೂಟರ್ ಒಳ್ಳೆಯ ಕೆಲಸಕ್ಕೆ ಬಳಕೆ ಆಗುವ ಹಾಗೆ ಅಪರಾಧಗಳಲ್ಲೂ ಬಳಕೆ ಆಗುತ್ತಿದೆ. ಜೀವನದ ಎಲ್ಲ ರಂಗಗಳಲ್ಲೂ ಕಂಪ್ಯೂಟರ್ ವ್ಯಾಪಿಸಿಕೊಳ್ಳುತ್ತಾ ಹೋದಂತೆ ಅಪರಾಧಿಗಳು, ಇದನ್ನು ಸ್ವಂತದ ಲಾಭಕ್ಕೆ ಬಳಸಲು ಆರಂಭಿಸಿದ್ದಾರೆ. ಇದೊಂದು ಅಪಾಯಕಾರಿ ಬೆಳವಣಿಗೆ. ಇಲ್ಲಿ ಅಪರಾಧ ಮಾಡುವುದು ಮನುಷ್ಯರೇ ಆದರೂ, ಸುಲಭವಾಗಿ ಪಾರಾಗುವ ಎಲ್ಲ ಉಪಾಯಗಳೂ ಅವರಿಗೆ ಗೊತ್ತಿರುತ್ತವೆ. ಇದರಿಂದಾಗಿಯೇ ಇಂದು ಆಧುನಿಕ ವಂಚಕರು ಇಡೀ ವ್ಯವಸ್ಥೆಗೆ ಬಹುದೊಡ್ಡ ತಲೆನೋವಾಗುತ್ತಾ ಇದ್ದಾರೆ

ಅಪರಾಧಗಳಲ್ಲಿ ನಾನಾ ಬಗೆ. ಕೊಲೆ, ಸುಲಿಗೆ, ದರೋಡೆ, ಕಳ್ಳತನ, ವಂಚನೆ ಹೀಗೆ. ಇವುಗಳಲ್ಲಿ ಪತ್ತೆ ಹಚ್ಚಲಾಗದ ಪ್ರಕರಣ ಇರುತ್ತವೆ. ಅವುಗಳನ್ನು ಅತ್ಯುತ್ಕೃಷ್ಟ ಅಪರಾಧ ಪ್ರಕರಣ ಎಂದು ಹೇಳಲಾಗುತ್ತದೆ. ಇಲ್ಲಿ ಅಪರಾಧ ವರದಿ ಆಗುತ್ತದೆ. ಆದರೆ ಅಪರಾಧಿ ಯಾರೆಂದು ಪತ್ತೆ ಆಗುವುದಿಲ್ಲ. ಕೆಲವು ದಿನ ಕಳೆದು ಇಂಥ ಪ್ರಕರಣಗಳು ಮುಚ್ಚಿ ಹೋಗುತ್ತವೆ.

ಈಚಿನ ದಿನಗಳಲ್ಲಿ ಅಪರಾಧದ ಶೈಲಿ ಬದಲಾಗಿದೆ. ನಡೆದ ಅಪರಾಧವೇ ವರದಿ ಆಗದಂತೆ ನೋಡಿಕೊಂಡರೆ! ಇದು ಇತ್ತೀಚಿನ ಅತ್ಯುತ್ಕೃಷ್ಟ ಅಪರಾಧ ಪ್ರಕರಣದ ಮಾದರಿ. ಇಲ್ಲಿ ಬಂದೂಕು ಹಿಡಿದು ಬ್ಯಾಂಕಿಗೆ ಹೋಗಿ ಬೆದರಿಸಬೇಕಿಲ್ಲ. ಮಚ್ಚು ಹಿಡಿದು ಯಾರದೋ ಮನೆಗೋ, ಅಂಗಡಿಗೋ ನುಗ್ಗಬೇಕಿಲ್ಲ. ಮನೆಯಲ್ಲಿ ಕುಳಿತೇ ಬೆರಳ ಸನ್ನೆಯಿಂದಲೇ ಕೋಟ್ಯಂತರ ಹಣ ದೋಚಬಹುದು. ಇಂಥ ಅಪರಾಧಕ್ಕೆ ಆರಿಸಿಕೊಂಡ ಜೊತೆಗಾರ ಬಾಯಿ ಬಿಡುವ ಪ್ರಮೇಯ ಇಲ್ಲ. ಲೂಟಿ ಹಣದಲ್ಲಿ ಪಾಲು ಕೂಡ ಕೇಳುವುದಿಲ್ಲ. ನಡೆದ ಅಪರಾಧ ಆಕಸ್ಮಾತ್ ಹೊರಬೀಳಬಹುದು. ಪತ್ತೆಯಾದರೂ ಭಯಪಡಬೇಕಿಲ್ಲ. ಏಕೆಂದರೆ ಏನೇ ತಲೆ ಕೆಡಿಸಿಕೊಂಡರೂ ಅಪರಾಧಿ ಯಾರೆಂದು ಪತ್ತೆ ಆಗುವುದಿಲ್ಲ. ಪತ್ತೆ ಆದರೂ ಆತ ಅಪರಾಧ ಎಸಗಿದ್ದಾನೆ. ಎಂದು ಸಾಬೀತುಮಾಡಲು ಪುರಾವೆಗಳೇ ದೊರೆಯುವುದಿಲ್ಲ. ಹೀಗೆ ಅತ್ಯಾಧುನಿಕ ಅಪರಾಧಿಗಳು ತಮ್ಮ ದುಷ್ಟ ಕೆಲಸಗಳಿಗೆ ಆರಿಸಿಕೊಳ್ಳುವ ಸಂಗಾತಿ ಎಂದರೆ ಕಂಪ್ಯೂಟರ್.

ಅದು ತನಗೆ ಒದಗಿಸುವ ಮಾಹಿತಿ ಮೇಲೆ ಕೆಲಸ ಮಾಡುತ್ತದೆ. ತಪ್ಪು ಮಾಹಿತಿ ಪೂರೈಕೆ ಆಗಿದ್ದಲ್ಲಿ, ಅಂಥ ಕಾರ್ಯನಿರ್ವಹಣೆ ಕೂಡ ತಪ್ಪಾಗಿರುತ್ತದೆ. ಹಾಗೆಂದು ಅದು ಉದ್ದೇಶಪೂರ್ವಕ ತಾನೆಂದೂ ತಪ್ಪು ಮಾಡುವುದಿಲ್ಲ. ಇದನ್ನು ಚೆನ್ನಾಗಿ ಅರ್ಥ ಮಾಡಿಕೊಂಡ ಕಂಪ್ಯೂಟರ್ ಪರಿಣಿತಿ ಇರುವ ಕಳ್ಳರು ಲಾಭ ಮಾಡಿಕೊಳ್ಳುತ್ತಿದ್ದಾರೆ. ಮುಂದುವರಿದ ದೇಶಗಳಲ್ಲಿ ಇದು ದೊಡ್ಡ ಪಿಡುಗು. ಕಂಪ್ಯೂಟರ್ ಅವಲಂಬಿಸಿ ವ್ಯಾಪಾರ, ವ್ಯವಹಾರ ಮಾಡುವುದು ಇಲ್ಲಿಯೂ ಹೆಚ್ಚುತ್ತಿದೆ. ಕಂಪ್ಯೂಟರ್ ಬಳಸಿಯೇ ದೋಚುವ ಪ್ರಸಂಗಗಳೂ ಹೆಚ್ಚಾಗುತ್ತಿವೆ.

ಬೆಂಗಳೂರು ಸಹಜವಾಗಿಯೇ ಇಂಥವರ ಕೇಂದ್ರ. ಇತ್ತೀಚೆಗೆ ಅಂಥದೊಂದು ಪ್ರಕರಣ ವರದಿ ಆಯಿತು. ಬ್ಯಾಂಕಿನ ಸಾಧಾರಣ ಸಿಬ್ಬಂದಿ ಒಬ್ಬ ಇದರ ರೂವಾರಿ. ಅವನನ್ನು ಕಂಪ್ಯೂಟರ್ ನಿರ್ವಹಣೆ ತರಬೇತಿಗೆ ಸಿಂಗಪುರಕ್ಕೆ ಕಳುಹಿಸಲಾಯಿತು. ಅಲ್ಲಿ ಕಂಪ್ಯೂಟರ್ ಹೇಗೆ ಬಳಸಬೇಕು ಎನ್ನುವುದಕ್ಕಿಂತ, ಅದರ ದುರ್ಬಳಕೆ ಹೇಗೆ ಮಾಡಿಕೊಳ್ಳಬೇಕು ಎಂದು ಚೆನ್ನಾಗಿ ಕಲಿತು ಬಂದ.

ಬ್ಯಾಂಕಿನ ಹಿರಿಯ ಸಿಬ್ಬಂದಿ ಹೋದ ಮೇಲೆ ಈತ ಫ್ಯಾಕ್ಸ್ ಮತ್ತು ಇ-ಮೇಲ್‌ಗಳ ಮೂಲಕ ನಾನಾ ಖಾತೆಗಳಿಗೆ ಹಣ ಹಾಕುವಂತೆ ಸೂಚನೆ ನೀಡುತ್ತಿದ್ದ. ಅದಕ್ಕೆ ಬಳಸಬೇಕಾದ ಸಂಕೇತಗಳು ಅವನಿಗೆ ಚೆನ್ನಾಗಿ ಗೊತ್ತಿದ್ದವು. ಹೀಗೆ ಹಲವು ಬ್ಯಾಂಕುಗಳನ್ನು ದೋಚಿದ ಈತ, ಬೇರೆ ಯಾರನ್ನೋ ಬೆದರಿಸಲು ಹೋಗಿ ಸಿಕ್ಕುಬಿದ್ದ. ಹಾಗಾಗಿ ಬ್ಯಾಂಕ್ ವಂಚನೆ ಪ್ರಕರಣ ಬಯಲಾಯಿತು.

ಎಂಬತ್ತರ ದಶಕದಿಂದಲೇ ಅಮೇರಿಕಾದಲ್ಲಿ ಇಂಥ ವಂಚನೆ ಪಿಡುಗು ಆರಂಭಗೊಂಡಿತು. ಈ ವಂಚನೆ ಎಷ್ಟು ಸರಳ ಎನ್ನುವುದಕ್ಕೆ ಒಂದು ಉದಾಹರಣೆ ನೋಡಿ. ನ್ಯೂಯಾರ್ಕ್‌ನ ತರುಣನೊಬ್ಬ ಕಾರ್ ಕೊಳ್ಳಲು ಇಪ್ಪತ್ತು ಸಾವಿರ ಡಾಲರ್ ಸ್ಥಳೀಯ ಬ್ಯಾಂಕ್‌ನಿಂದ ಸಾಲ ಪಡೆದ. ಅದನ್ನಾತ ಹನ್ನೆರಡು ತಿಂಗಳಲ್ಲಿ ತೀರಿಸಬೇಕಿತ್ತು. ಪ್ರತಿ ತಿಂಗಳು ಹಣ ತುಂಬುವಾಗಲೂ, ಆಯಾ ತಿಂಗಳ ಕೂಪನ್ ಭರ್ತಿಮಾಡಿ ಸಲ್ಲಿಸಬೇಕಿತ್ತು. ಕೊನೆಯ ಕಂತು ತುಂಬವವರೆಗೂ ಕಾರಿನ ಮಾಲೀಕತ್ವಕ್ಕೆ ಸಂಬಂಧಿಸಿದ ಕಾಗದ ಪತ್ರ ಬ್ಯಾಂಕಿನಲ್ಲಿಯೇ ಇರುತ್ತಿತ್ತು.

ಕಾರು ಕೊಂಡು ಮನೆಗೆ ಬಂದ ತರುಣ ತಿಂಗಳಾಗುವವರೆಗೂ ಕಾಯ್ದ.

ಮೊದಲ ತಿಂಗಳ ಹಣ ಪಾವತಿ ಮಾಡುವ ದಿನ ಬಂತು. ಹಣ ತುಂಬಿದ. ಆದರೆ ಅವನು ಬ್ಯಾಂಕಿಗೆ ವಿವರ ತುಂಬಿದ ಒಂದನೆ ತಿಂಗಳು ಕೂಪನ್ ಬದಲು, ಹನ್ನೆರಡನೇ ತಿಂಗಳ ಕೂಪನ್ ತುಂಬಿ ಕಳುಹಿಸಿ ಕಾಯುತ್ತಾ ಕುಳಿತ. ಕೆಲವೇ ದಿನಗಳಲ್ಲಿ ಅವನಿಗೆ ಬ್ಯಾಂಕಿನ ಕಂಪ್ಯೂಟರ್ ಒಂದು ಅಭಿನಂದನೆಯ ಪತ್ರ ರವಾನಿಸಿತು. ಪ್ರಾಮಾಣಿಕವಾಗಿ ಕಾರು ಸಾಲದ ಹಣವೆಲ್ಲ ಪಾವತಿಸಿದ್ದಕ್ಕೆ ಅಭಿನಂದಿಸಿದ್ದೂ ಅಲ್ಲದೆ, ಆತನನ್ನು ಬ್ಯಾಂಕಿನ ಅತ್ಯುತ್ತಮ ಗ್ರಾಹಕ ಎಂದೂ ಪತ್ರದಲ್ಲಿ ಬಣ್ಣಿಸಲಾಗಿತ್ತು. ಹಾಗೇ ಕಾರಿನ ದಾಖಲೆಗಳನ್ನೂ ಕಂಪ್ಯೂಟರ್ ಬಿಡುಗಡೆ ಮಾಡಿತು.

ಎಷ್ಟೋ ತಿಂಗಳು ಕಳೆದವು, ತರುಣನಿಂದ ಒಂದು ಕಂತು ಹಣ ಬಂದಿದೆ. ಮತ್ತೆ ಬರುತ್ತಾ ಇಲ್ಲ ಎಂದು ಮನಗಂಡ ಬ್ಯಾಂಕಿನವರು ಹುಡುಕಿಕೊಂಡು ಹೋದರೆ, ಅವನ ಮನೆ ಖಾಲಿ. ಕಾರು ಆಗಲೇ ಡೀಲರ್ ಒಬ್ಬನಿಗೆ ಮಾರಿ ಆಗಿತ್ತು. ತಂದೆಯ ಹೃದಯ ಶಸ್ತ್ರ ಚಿಕಿತ್ಸೆಗೆ ಹಣ ಬೇಕಿರುವುದರಿಂದ ಹೊಚ್ಚ ಹೊಸಾ ಕಾರು ಮಾರುತ್ತಾ ಇರುವುದಾಗಿ ತರುಣ ಹೇಳಿದನಂತೆ. ಡೀಲರ್‌ನ ಇಲ್ಲಿ ದಂಡಿಸುವಂತಿಲ್ಲ. ಬ್ಯಾಂಕ್‌ನಿಂದ ಪಾವತಿ ಚುಕ್ತಾ ಆದ ಪತ್ರವಿದೆ. ಕಾರಿನ ದಾಖಲೆಗಳು ಅವನ ಬಳಿ ಇವೆ. ಕೊನೆಗೂ ಆ ತರುಣ ಪತ್ತೆ ಆಗಲಿಲ್ಲ.

ಮಯಾಮಿಯಲ್ಲಿ ಇನ್ನೊಬ್ಬ ತರುಣಿ ಇಂಥದ್ದೇ ಸಣ್ಣ ತರಲೆ ಮಾಡಿ ಒಂದೇ ವಾರದಲ್ಲಿ 3,50,000 ಡಾಲರ್ ದೋಚಿಕೊಂಡು ಹೋದಳು. ತಾನೊಬ್ಬ ವಿವಾಹ ವಿಚ್ಛೇದಿತೆ. ಪ್ರಕರಣ ಈಗ ಇತ್ಯರ್ಥವಾಗಿದೆ. ಕೆಲವೇ ದಿನಗಳಲ್ಲಿ ಮಾಜಿ ಗಂಡನಿಂದ ಅಪಾರ ಹಣ ಬರಲಿದೆ. ತಾನು ಇಲ್ಲಿಯೇ ದೊಡ್ಡ ಬಂಗಲೆ ಖರೀದಿಸಿ ನೆಲೆಸುವ ಉದ್ದೇಶ ಇದೆ ಎಂದೇ ಆಕೆ ಬ್ಯಾಂಕಿನವರಿಗೆ ಹೇಳಿಕೊಂಡಳು. ಅವರು ಖುಷಿಯಿಂದಲೇ ಆಕೆ ಖಾತೆ ತೆರೆಯಲು ಅವಕಾಶ ಮಾಡಿಕೊಟ್ಟರು. ಇನ್ನೂರು ಡಾಲರ್ ತೊಡಗಿಸಿ ಆಕೆ ಖಾತೆ ತೆರೆದಳು. ಕೆಲವು ದಿನಗಳ ನಂತರ ಬಂದು ಖಾತೆಯಲ್ಲಿ 3,50,000 ಡಾಲರ್‌ಗೂ ಹೆಚ್ಚು ಹಣ ಜಮೆಯಾಗಿದ್ದು ಖಚಿತಪಡಿಸಿಕೊಂಡು, ಕೆಲವೇ ನೂರು ಡಾಲರ್ ಉಳಿಸಿ ಮಿಕ್ಕ ಹಣ ಪಡೆದುಕೊಂಡು ಹೋದವಳು ಮತ್ತೆ ಬರಲಿಲ್ಲ.

ಆ ತಿಂಗಳು ಕಳೆದು, ಮೊದಲ ವಾರದಲ್ಲಿ ಗ್ರಾಹಕರು ತಮ್ಮ ಖಾತೆಗೆ ಹಾಕಿದ್ದ ಹಣ ಪಡೆಯಲು ಬಂದರೆ ಅಲ್ಲೇನಿದೆ ಮಣ್ಣು! ಅವರು ಪಾವತಿಸಿದ್ದ ಹಣವೆಲ್ಲ ಆ ಮಹಿಳಾ ಮಣಿಯ ಖಾತೆಗೆ ಜಮೆ ಆಗಿದೆ. ಬ್ಯಾಂಕಿನವರಿಗೆ ಆಶ್ಚರ್ಯ.

ಅಲ್ಲಿ ಹೆಚ್ಚಾಗಿ ಖಾಸಗಿ ಖಾತೆಗಳು. ಹಣ ಪಾವತಿಸಲು ಹೆಸರು, ಖಾತೆ ನಂಬರು ಎಂದು ವಿವರ ತುಂಬಿಕೊಂಡು ಕೂರಬೇಕಾಗಿಲ್ಲ. ಪ್ರತಿ ಗ್ರಾಹಕನಿಗೂ ವಿಶೇಷ ರೀತಿಯ ಚಲನ್ ಒದಗಿಸುತ್ತಾರೆ. ಅದರಲ್ಲಿ ಮೊತ್ತ ಬರೆದು ಪಾವತಿಸಿದರೆ ಆಯಿತು. ಕಂಪ್ಯೂಟರ್‌ಗೆ ಅದನ್ನು ಒದಗಿಸಿದರೆ, ಚಲನ್ ಮೂಲೆಯಲ್ಲಿ ಅಚ್ಚು ಮಾಡಿರುವ ಮ್ಯಾಗ್ನೆಟಿಕ್ ಇಂಕ್‌ನ ಸಂಕೇತ ಗ್ರಹಿಸಿ, ಆಯಾ ಮೊತ್ತ ಅವರವರ ಖಾತೆಗಳಿಗೆ ಜಮಾ ಮಾಡಿಬಿಡುತ್ತದೆ. ಅಂಥ ಚಲನ್ ಮರೆತು ಬಂದವರು ಬ್ಯಾಂಕಿನ ಕೌಂಟರ್‌ನಲ್ಲಿ ದೊರೆಯುವ ಮಾಮೂಲಿ ಚಲನ್‌ನಲ್ಲಿ ವಿವರ ಬರೆದು ಕೊಡಬೇಕು. ಅದನ್ನೂ ಕಂಪ್ಯೂಟರ್‌ಗೆ ಒದಗಿಸುತ್ತಾರೆ. ಮ್ಯಾಗ್ನೆಟಿಕ್ ಇಂಕ್ ಕೋಡ್ ಇಲ್ಲದ ಚಲನ್‌ಗಳ ಹಣ ಜಮಾವಣೆ ಆಗುವುದಿಲ್ಲ ಅದನ್ನು ಒಂದೆಡೆ ಪೇರಿಸಿಟ್ಟು, ಬ್ಯಾಂಕ್ ಸಿಬ್ಬಂದಿ ಬಿಡುವಾದಾಗ ಆಯಾ ಖಾತೆಗೆ ಜಮಾ ಮಾಡುತ್ತಾರೆ.

ಬ್ಯಾಂಕ್‌ಗೆ ಬಂದ ಮಹಿಳೆ, ಯಾರ ಕಣ್ಣಿಗೂ ಕಾಣದಂತೆ ಬ್ಯಾಂಕಿನ ಕೌಂಟರ್‌ನಲ್ಲಿ ಇರಿಸಿದ್ದ ಸಾದಾ ಚಲನ್ ಹೊತ್ತುಕೊಂಡು ಹೋದಳು. ಅದು ಹೇಗೋ ಚಲನ್‌ಗಳು ಮೂಲೆಯಲ್ಲಿ ಮ್ಯಾಗ್ನೆಟಿಕ್ ಇಂಕ್‌ನಿಂದ ತನ್ನ ಖಾತೆಯ ಕೋಡ್ ಬರೆದಳು. ಮರಳಿ ಆ ಚಲನ್‌ಗಳನ್ನು ಬ್ಯಾಂಕ್ ಕೌಂಟರ್‌ನಲ್ಲಿ ಇರಿಸಿ ಬಂದಳು. ತಮ್ಮ ಸ್ವಂತದ ಚಲನ್ ಮರೆತು ಬಂದ ಗ್ರಾಹಕರು ಇದನ್ನು ಬಳಸಿದರು. ಅವರು ಪಾವತಿ ಮಾಡಿದ ದುಡ್ಡೆಲ್ಲ ಆಕೆಯ ಖಾತೆಗೆ ಜಮಾ ಆಗುತ್ತಿತ್ತು. ವಾರಬಿಟ್ಟು ಬಂದು ಜಮೆ ಆಗಿದ್ದ ಹಣ ದೋಚಿಕೊಂಡು ಹೋದಳು.

ಇನ್ನೊಬ್ಬ ಭೂಪತಿ ಮಹಾ ವಂಚಕ. ಹೈಸ್ಕೂಲು ಮುಗಿಸಿದ್ದ ಆತ ಟೆಲಿಫೋನ್ ಉಪಕರಣ ಸರಬರಾಜು ಕಂಪೆನಿ ಆರಂಭಿಸಿದ್ದ. ಅದು ಹೇಗೋ ಒಮ್ಮೆ ಲಾಸೆಂಜಲ್ಸ್‌ನ ಬೆಲ್ ಟೆಲಿಫೋನ್ ಕಂಪೆನಿಯ ಸ್ಟಾಕು ನಿರ್ವಹಿಸುತ್ತಿದ್ದ ಕಂಪ್ಯೂಟರ್ಸ್ ಮಾಹಿತಿ ಅವನಿಗೆ ದೊರೆಯಿತು. ಮನೆಯಲ್ಲಿ ಕುಳಿತು ಎಕ್ಸ್‌ಚೇಂಜ್‌ನ ಕಂಪ್ಯೂಟರ್‌ಗೆ ಇಂಥ ಪ್ರದೇಶಕ್ಕೆ ಇಂಥಿಂಥ ಉಪಕರಣ ಒದಗಿಸುವಂತೆ ಸೂಚನೆ ನೀಡುತ್ತಿದ್ದ. ಕಂಪ್ಯೂಟರ್ ಅದಕ್ಕೆ ತಕ್ಕ ಆದೇಶ ಹೊರಡಿಸುತ್ತಿತ್ತು. ಕಂಪೆನಿಯ ಲಾರಿಗಳು ಉಪಕರಣ ತಂದು ಇವನು ಹೇಳಿದ ಕಡೆ ಇಳಿಸಿ ಹೋಗುತ್ತಿದ್ದವು. ಕಂಪೆನಿಯ ಲಾರಿಯಂತೆಯೇ ತನ್ನ ಲಾರಿಯನ್ನೂ ಮಾರ್ಪಡಿಸಿಕೊಂಡಿದ್ದ. ಅದರಲ್ಲಿ ಎಲ್ಲ ಹೊತ್ತು ತಂದು ಬೇರೆಯವರಿಗಿಂತ ಕಡಿಮೆ ದರದಲ್ಲಿ ಪೂರೈಸುತ್ತಾ ಇದ್ದ. ಎಕ್ಸ್‌ಚೇಂಜಿನ ಕಂಪ್ಯೂಟರ್ ಟರ್ಮಿನಲ್‌ನಲ್ಲಿ ಈ ಸಂಬಂಧ ಇದ್ದ ಕುರುಹುಗಳನ್ನೆಲ್ಲ ಆನಂತರ ಅಳಿಸಿ ಹಾಕುತ್ತಿದ್ದ. ಹೀಗೆ ಒಂದೇ ವರ್ಷದಲ್ಲಿ ಎಕ್ಸ್‌ಚೇಂಜ್‌ನಿಂದ ಒಂದು ದಶಲಕ್ಷ ಡಾಲರ್‌ಗೂ ಹೆಚ್ಚು ಲೂಟಿಹೊಡೆದ.

ಸ್ನೈಡರ್ ಎಂಬ ಹೆಸರಿನ ಈತ ನಿರಂತರ ಹೀಗೆ ಮಾಡಬಹುದಿತ್ತು. ಇವನ ಕಂಪೆನಿಯ ಉದ್ಯೋಗಿ ಒಬ್ಬನಿಗೆ ಸಂಬಳ ಏರಿಸಲು ನಿರಾಕರಿಸಿದ್ದೇ ಇವನಿಗೆ ಮುಳುವಾಯಿತು. ಆ ಉದ್ಯೋಗಿ ಹೋಗಿ ಸ್ನೈಡರ್ ನಡೆಸುತ್ತಿದ್ದ ಅಪರಾಧದ ಬಗ್ಗೆ ಪೋಲಿಸರಿಗೆ ದೂರಿತ್ತ. ಅವರು ಎಕ್ಸ್‌ಚೇಂಜ್‌ನವರನ್ನು ವಿಚಾರಿಸಿದರೆ ಅಂಥದ್ದೇನೂ ನಡೆದಿಲ್ಲ, ನಡೆಯುವ ಸಂಭವವೂ ಇಲ್ಲ ಎಂದು ನಿರಾಕರಿಸಿಬಿಟ್ಟರು. ಆದರೆ ದೂರಿತ್ತ ಮನುಷ್ಯನ ಹಟದಿಂದಾಗಿ ಪೇಪರು ಪೆನ್ಸಿಲು ಹಿಡಿದುಕೊಂಡು ಲೆಕ್ಕ ಹಾಕಿದಾಗ ವಂಚನೆ ಬಯಲಿಗೆ ಬಂತು.

ಸ್ನೈಡರ್ ಜೈಲು ಸೇರಿದ. ಆದರೆ ಅವನು ಅಪರಾಧಿ ಎಂದು ತೋರಿಸಲು ದಾಖಲೆಗಳೇನೂ ಇರಲಿಲ್ಲ. ಹಾಗಾಗಿ ಬೆಲ್ ಕಂಪೆನಿಯವರು ಅವನ ಜೊತೆ ಸಂಧಾನಕ್ಕೆ ಮುಂದಾದರು. ಇನ್ನು ಮುಂದೆ ಇಂಥ ವಂಚನೆ ಆಗದಂತೆ ನೋಡಿಕೊಳ್ಳಲು ಸ್ನೈಡರ್ ನೆರವಾಗಬೇಕು. ಅವರು ಕೇಸು ಹಾಕುವುದಿಲ್ಲ. ಎಂದಾಯಿತು. ಜೈಲಿಂದ ಹೊರಬಿದ್ದ ಸ್ನೈಡರ್, ಬೇರೊಂದು ಏಜೆನ್ಸಿಯನ್ನು ತೆರೆದ. ಕಂಪ್ಯೂಟರ್ ಬಳಸಿ ಅಪರಾಧ ನಡೆಯುವುದು ತಡೆಯಲು ಸಲಹೆ ನೀಡುವುದೇ ಅವನ ಉದ್ಯೋಗವಾಯಿತು. ಪ್ರತಿ ಕಂಪೆನಿ ಬಳಸುವ ಕಂಪ್ಯೂಟರ್ ಜಾಲ ಅಭ್ಯಸಿಸಿ ಅದರಲ್ಲಿನ ದೋಷ ಏನು? ಅದರಿಂದ ಸಂಸ್ಥೆಗೆ ನಷ್ಟ ಆಗದಂತೆ ಏನು ಉಪಾಯ ಮಾಡಬೇಕೆಂದು ಸಲಹೆ ನೀಡುತ್ತಾ ಆತ ಈಗ ಭಾರೀ ಶ್ರೀಮಂತನಾಗಿದ್ದಾನೆ. ಕಳ್ಳನನ್ನೆ ಕಾವಲಿಗೆ ನೇಮಿಸಿ ಹಲವರು ಸುರಕ್ಷಿತರಾಗಿದ್ದಾರೆ.

■ ಮನೋಜ್


ಚಿತ್ರದುರ್ಗ ಜಿಲ್ಲೆ ಚಿಕ್ಕ ಜಾಜೂರಿನಲ್ಲಿ ಮನೆಗೆ ನುಗ್ಗಿದ ಕಳ್ಳರು ಟಿವಿ ಕದ್ದರು. ಜೊತೆಗೆ ಅಡುಗೆ ಮನೆಯಲ್ಲಿ ಮಾಡಿಟ್ಟಿದ್ದ ಹೋಳಿಗೆ ತಿಂದರು. ಅದು ಸಾಲದೆಂಬಂತೆ ಮನೆಯಲ್ಲಿ ಹೋಳಿಗೆ ಮಾಡಲೆಂದೋ ಏನೋ ಬೇಳೆಯನ್ನೂ ಕದ್ದೊಯ್ದರು. ಇಷ್ಟೆಲ್ಲ ಕಳ್ಳರ ಸಾಹಸ ನಡೆಯುತ್ತಿದ್ದರೂ ಮನೆಯ ಯಾರೊಬ್ಬರಿಗೂ ಎಚ್ಚರ ಆಗಲಿಲ್ಲವಂತೆ. ದುರದೃಷ್ಟದಿಂದ ಕೆಲವೇ ದಿನದಲ್ಲಿ ಕಳ್ಳರು ಸಿಕ್ಕಿ ಬಿದ್ದರು. ಜೈಲಿನಲ್ಲಿಯೂ ಅವರು ಹೋಳಿಗೆಯನ್ನೇ ಕೇಳಿದರೇ! ಗೊತ್ತಿಲ್ಲ.

★

ಆತುರದಲ್ಲಿರುವ ಯಾವೊಬ್ಬ ಮನುಷ್ಯನೂ ಅಷ್ಟೇನು ನಾಗರಿಕನಲ್ಲ.

■ ವಿಲ್‌ಡ್ಯುರಾಂಟ್

ಮುಖ, ಮೈ ಚರ್ಮ ಸದಾ ಆರೋಗ್ಯದಿಂದ ನಳನಳಿಸುತ್ತಾ ಇರಬೇಕೆಂಬುದೇ ಎಲ್ಲರ ಬಯಕೆ. ವಯಸ್ಸಾದಂತೆ, ಹೆರಿಗೆ ನಂತರ ಸುಕ್ಕುಗಟ್ಟುವ ಚರ್ಮವನ್ನು ಮರಳಿ ಯಥಾ ಸ್ಥಿತಿಗೆ ತರುವುದಾಗಿ ಹೇಳಿಕೊಂಡು ಕೆಲವು ಕ್ರೀಂಗಳು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತವೆ. ನಿಜಕ್ಕೂ ಇಂಥ ಕ್ರೀಂಗಳ ಬಳಕೆಯಿಂದ ಚರ್ಮದ ಸುಕ್ಕು ನಿವಾರಣೆ ಸಾಧ್ಯವೇ?



ಸುಕ್ಕು ನಿವಾರಕ ಕ್ರೀಂ ಉಪಯುಕ್ತವೇ?

ಸುಕ್ಕುರಹಿತ ಸ್ವಚ್ಛ ಚರ್ಮ ಪ್ರತಿ ಹೆಣ್ಣಿನ ಕನಸು. 'ಸುಕ್ಕು, ಕಲೆಗಳನ್ನು ನಿವಾರಿಸುವ ಕ್ರೀಂ' ಆಕರ್ಷಕ ಪೌಚ್‌ಗಳಲ್ಲಿ ದುಬಾರಿ ಬೆಲೆ ಅನಿಸಿದರೂ ಅದನ್ನು ಕೊಳ್ಳಲು ಮುಂದಾಗುತ್ತಾರೆ! ಜನಸಾಮಾನ್ಯರನ್ನು ಸೆರೆಹಿಡಿಯಲೆಂದೇ ಚೆಲುವೆ ರೂಪದರ್ಶಿಗಳ ಚಿತ್ರ ಹಾಕುವುದು. ತಯಾರಕರು 'ಗಿಮಿಕ್ಸ್' ಜೊತೆಗೆ 'ಸುಕ್ಕು, ಕಲೆಗಳ ಶಾಶ್ವತ ನಿವಾರಣೆ' ಎನ್ನುವ ಸೂಚನೆ ಬೇರೆ, ಓಹ್.... ಬಹಳ ಆಕರ್ಷಕವಾದ ನಿವೇದನೆ ಎ ವೆರಿ ಟೆಂಪ್ಟಿಂಗ್ ಆಫರ್. ಹೆಂಗಸರ ಸೌಂದರ್ಯಪ್ರಜ್ಞೆ ಕೆರಳಿಸಿ ಲಾಭಮಾಡಿಕೊಳ್ಳಲು ಸುಲಭ ಸಾಧನವಿದು. ಈ ಬಗೆಯ ಕ್ರೀಂ ಅಥವಾ ಲೋಶನ್‌ಗಳನ್ನು ಕೊಳ್ಳುವ ಮುನ್ನ ಒಮ್ಮೆ ಈ ಲೇಖನದ ಮೇಲೆ ಕಣ್ಣಾಡಿಸಿ ನಂತರ ನಿರ್ಧಾರ ಕೈಗೊಳ್ಳಬಹುದಲ್ಲವೇ?

ಸುಕ್ಕುಗಳೆಂದರೇನು? ಅವುಗಳು ಮೂಡುವುದು ಹೇಗೆ? ದಿನ ಉರುಳಿದಂತೆ ದೇಹಕ್ಕೆ ವಯಸ್ಸೇರುವುದು ಎಷ್ಟು ಸಹಜವೋ ಚರ್ಮದಲ್ಲಿ ಕೆಲವು ಬದಲಾವಣೆಯೂ ಅಷ್ಟೇ ಸಾಮಾನ್ಯ. ಹದಿ ವಯಸ್ಸಿನಲ್ಲಿ ಚರ್ಮದ ಕೆಳಗೆ ಸೂಕ್ತ ಕೊಬ್ಬಿನಂಶ ಶೇಖರವಾಗಿದ್ದು ಚರ್ಮ ಬಿಗಿಯಾಗಿ ಹೊಳಪಿನಿಂದ ಕೂಡಿರುತ್ತದೆ. ಕಾಂತಿಯುತವಾದ ಚರ್ಮಕ್ಕೆ ಹಾರ್ಮೋನುಗಳ ಸಹಾಯವೂ ಇರುತ್ತದೆ. ವಯಸ್ಸು ಹೆಚ್ಚಾದಂತೆ ಚರ್ಮದ ಕೆಳಪದರದಲ್ಲಿ ಶೇಖರಿಸಲ್ಪಟ್ಟ ಕೊಬ್ಬಿನಂಶ ತಗ್ಗಿ ಚರ್ಮದ ಹೊರಪದರ ಒಣಗಿ ಶಿಥಿಲವಾಗುತ್ತದೆ. ಇದು ಸುಕ್ಕು, ಗೆರೆ, ಕಲೆಗಳ ರೂಪದಲ್ಲಿ ಗೋಚರಿಸಿ ಮಹಿಳೆಯರ ಮನಸ್ಸಿಗೆ ಕಳವಳ ಉಂಟು ಮಾಡುತ್ತದೆ. ಈಗೊಂದು ವಿಷಯ ಮನದಟ್ಟು ಮಾಡಿಕೊಳ್ಳಬೇಕು. ಸುಕ್ಕು ಎನ್ನುವುದು ಮುದುರಿದ ಕಾಗದದಂತೆ. ಅದನ್ನು ಮತ್ತೆ ಸ್ವಚ್ಛ ಹಾಳೆಯನ್ನಾಗಿ ಮಾರ್ಪಡಿಸಲು ಹೇಗೆ ಅಸಾಧ್ಯವೋ, ಸುಕ್ಕುಗಟ್ಟಿದ ಚರ್ಮವನ್ನು ಹಿಂದಿನ ಸ್ಥಿತಿಗೆ ತರಲು, ವರ್ಧಕ ಕ್ರೀಂಗಳಿಗೂ ವಯಸ್ಸನ್ನು ತಡೆಗಟ್ಟುವ ಸಾಮರ್ಥ್ಯ ಇಲ್ಲ. ಹಾಗಿರುವಾಗ ವಯಸ್ಸಿನ ಪರಿಣಾಮದಿಂದ ಉಂಟಾಗುವ ಸುಕ್ಕು ಹಾಗೆ ನಿವಾರಿಸಲು ಸಾಧ್ಯವಿಲ್ಲ.

ಈಗ ಮಾರುಕಟ್ಟೆಯಲ್ಲಿ ಲಭ್ಯವಾಗುವ ಕ್ರೀಂಗಳು, ಲೋಶನ್‌ಗಳು ಚರ್ಮದ ಮೇಲೆ ಹೇಗೆ ಕೆಲಸ ಮಾಡುತ್ತವೆ ! (ಈ ಲೇಖನದಲ್ಲಿ ಪ್ರಯತ್ನ ಪೂರ್ವಕವಾಗಿ ಸೌಂದರ್ಯವರ್ಧಕ ತಯಾರಕರ ಹೆಸರುಗಳನ್ನು ಬಳಸಿಲ್ಲ) ಕ್ರೀಂಗಳ ಕಾರ್ಯಾಚರಣೆ ಕೇವಲ ಚರ್ಮದ ಹೊರಪದರದ ಮೇಲೆ ಸೀಮಿತವಾಗಿರುತ್ತದೆ. ಕ್ರೀಂಗಳು ಚರ್ಮದ ಪದರ ದಾಟಿ ಒಳ ಅಂಗಾಂಗಗಳ ಮೇಲೆ ಪರಿಣಾಮ ಬೀರುವ ಸಾಮರ್ಥ್ಯವಿರುವುದೇ ನಿಜವಾಗಿದ್ದರೆ ಅವು 'ಅಲಂಕಾರ ಸಾಮಗ್ರಿ (Cosmetics)' ಎನ್ನುವ ಹೆಸರು ಪಡೆದು ಮಾರುಕಟ್ಟೆಗೆ ಬರುತ್ತಿರಲಿಲ್ಲ. ಬದಲಾಗಿ 'ಔಷಧಿ' (Medicines) ಎಂದಾಗಿ ಸರ್ಕಾರದ ನಿಯಮ ಕಟ್ಟಳೆಗಳಿಂದ ನಿಯಂತ್ರಿಸಲ್ಪಟ್ಟು ಮಾರಾಟವಾಗುತ್ತಿತ್ತು. ಈಗ ಮಾರುಕಟ್ಟೆಯಲ್ಲಿ ಮಾರಾಟವಾಗುವ ಸುಕ್ಕು, ಕಲೆ ನಿವಾರಕ ಕ್ರೀಂ, ಲೋಶನ್‌ಗಳು ವಿವಿಧ ಬಗೆಯ ವಿಟಮಿನ್‌ಗಳು, ಆಲ್ಫಾ ಹೈಡ್ರಾಕ್ಸಿ ಆಸಿಡ್ಸ್ (AHA), ಕೊಲ್ಲಾಜಿನ್ ಎನ್ನುವ ಕೃತಕ ಪದಾರ್ಥಗಳ ಮಿಶ್ರಣವನ್ನೊಳಗೊಂಡು ಪ್ರಚಾರ ಪಡೆಯುತ್ತಿವೆ. ಆ ಕ್ರೀಂಗಳಲ್ಲಿ ವೈವಿಧ್ಯಮಯವಾದ ದಿನಬೆಳಿಗ್ಗೆ ಬಳಸುವ ಕ್ರೀಂ, ರಾತ್ರಿ ಕ್ರೀಂ, ಕೈಕಾಲುಗಳಿಗೆ ಕ್ರೀಂ, ತುಟಿಗಳಿಗೆ ಜೆಲ್ ಎಂದು ಆಕರ್ಷಕ ಪ್ಯಾಕ್ ಹಾಗೂ ಪೌಚ್‌ಗಳಲ್ಲಿ ಅಲಂಕೃತವಾಗಿ ಕಣ್ಣು ಸೆಳೆಯುತ್ತಿವೆ. ಅದರ ಅಂದಚಂದದ ಪ್ಯಾಕಿಂಗ್, ಪ್ರಭಾವಶಾಲಿಯಾದ ಸೂಚನೆಗಳಿಗೆ ಮರುಳಾಗಿ ದುಬಾರಿ ಬೆಲೆ ತೆತ್ತು ಕೊಂಡಮೇಲೆ ಅದು

ಪ್ರಬಲವಾಗಿ ಪರಿಣಾಮಕಾರಿಯೇ ಆಗಿರಬೇಕಲ್ಲವೇ? ಇಲ್ಲದಿದ್ದರೆ ಅಷ್ಟು ದುಬಾರಿಯಾಗುವ ಅಗತ್ಯವೇನು? ಇದು ತಮ್ಮ ವಯಸ್ಸಿನಲ್ಲಿ ಹತ್ತು ವರ್ಷಗಳಾದರೂ ತಗ್ಗಿಸಿಬಿಡುವಷ್ಟು ಸಮರ್ಥಶಾಲಿಯಾಗಿರಲೇಬೇಕು! ಎಂಬ ಚಪಲಕ್ಕೆ ಜೋತುಬಿದ್ದು ಇವುಗಳನ್ನು ಕೊಳ್ಳಲು ಎಷ್ಟೋ ಮಹಿಳೆಯರು ಹಾತೊರೆಯುತ್ತಾರೆ. ಮಹಿಳೆಯರ ಸೌಂದರ್ಯಪ್ರಜ್ಞೆಯ 'ಸೆಂಟಿಮೆಂಟ್ಸ್' ಹೇಗೆ ಸೆರೆ ಹಿಡಿಯಬೇಕೆಂದು ತಯಾರಕರು ಹೊಸದಾಗಿ ಕಲಿಯಬೇಕಿಲ್ಲ!

ಇಲ್ಲೊಂದು ಕಿವಿಮಾತು. ನೀವು ಯಾವುದೇ ಕಾಸ್ಮೆಟಿಕ್ಸ್ ಕೊಂಡಾಗಲೂ ಅದರಲ್ಲಿರುವ ಅಂಶಗಳ ಮಿಶ್ರಣವನ್ನು ಗಮನಿಸಿ ನೋಡಿ! ಸಾಧರಣವಾಗಿ ಕ್ರೀಂ, ಲೋಶನ್‌ಗಳಲ್ಲಿ ನೀರು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಮಿಕ್ಕ ಕನಿಷ್ಠ ಪ್ರಮಾಣಗಳಲ್ಲಿ ಸಂರಕ್ಷಣಾ ವಸ್ತುಗಳು (preservatives), ಕೃತಕ ವರ್ಣಗಳು, ಕೃತಕ ಸುವಾಸನೆಗಳು ಇರುತ್ತವೆ. ಸಾಮಾನ್ಯವಾಗಿ ಸುಕ್ಕು ನಿವಾರಕ ಕ್ರೀಂಗಳಲ್ಲಿ ಈ ಕೆಳಕಂಡ ಅಂಶಗಳ ಮಿಶ್ರಣವಿರುತ್ತದೆ.

ಅಲ್ಫಾ ಹೈಡ್ರಾಕ್ಸಿ ಆ್ಯಸಿಡ್ಸ್ (AHA) : ಇದಕ್ಕೆ ಹಣ್ಣುಗಳ ಆಸಿಡ್ ಎಂದೂ ಕರೆಯುತ್ತಾರೆ. ಇದು ಕಬ್ಬು, ಹಾಲು, ದ್ರಾಕ್ಷಿ ಮತ್ತು ನಿಂಬೆಯಲ್ಲಿ ಲಭ್ಯವಾಗುತ್ತದೆ. AHA ಚರ್ಮದ ಹೊರಪದರು ಸ್ವಚ್ಛಗೊಳಿಸಿ ಸತ್ತ ಕಣಗಳ ಪದರವನ್ನು ನಿವಾರಿಸಿ ಚರ್ಮಕ್ಕೆ ತೇವಾಂಶ ಕೊಡುತ್ತದೆ. ಇದಕ್ಕಿಂತ ಹೆಚ್ಚಿನ ಕ್ರಿಯಾಶಕ್ತಿ AHAಗೆ ಬೇರೇನೂ ಇಲ್ಲ. ಆದರೆ ಇದರ ಬಳಕೆಯಿಂದ ಕೆಲವು ದುಷ್ಪರಿಣಾಮ ಕಂಡುಬಂದಿವೆ. ಉದಾಹರಣೆಗೆ ಚರ್ಮದ ಕೆರಳುವಿಕೆ, ಉರಿ, ಬೊಕ್ಕೆ ಮುಂತಾದ ತೊಂದರೆಗಳು ಇದರ ಅಧಿಕ ಬಳಕೆಯಿಂದ ಕಂಡುಬರತ್ತದೆ. AHA ಚರ್ಮವನ್ನು ಸೂಕ್ಷ್ಮಗೊಳಿಸುವುದರಿಂದ ಅದನ್ನು ಬಳಸುವವರು ತೀವ್ರವಾಗಿ ಸೂರ್ಯಕಿರಣಕ್ಕೆ ಚರ್ಮ ಒಡ್ಡಬಾರದು.

ವಿಟಮಿನ್ ಎ : ಇದಕ್ಕೆ Retonol ಎಂದು ವೈಜ್ಞಾನಿಕವಾಗಿ ಹೆಸರಿಡಲಾಗಿದೆ. ವಿಟಮಿನ್ ದೇಹದ ಕೊಬ್ಬಿನಂಶದಲ್ಲಿ ಚರ್ಮದ ಕೆಳಗೆ ಶೇಖರವಾಗಿರುತ್ತದೆ. ಈ ವಿಟಮಿನ್ ಎ ಚಿಕಿತ್ಸಕವಾಗಿ ಮೊಡವೆಗಳನ್ನು ನಿವಾರಿಸಲು ಬಳಸಲಾಗುತ್ತದೆ. ಸೌಂದರ್ಯವರ್ಧಕ ಕ್ರೀಂಗಳಲ್ಲಿ ವಿಟಮಿನ್ ಎ ಚರ್ಮದ ರಕ್ತಸಂಚಾರವನ್ನು ಹೆಚ್ಚಿಸಿ ಹೊಸ ಜೀವಕಣಗಳನ್ನು ವೃದ್ಧಿಸುವಲ್ಲಿ ಸಹಾಯಕವಾಗುತ್ತದೆ. ಆದರೆ ಕಂಟಕಗಳಿವೆ ಎಚ್ಚರಿಕೆ! ವಿಟಮಿನ್ ಎ ಅತಿಯಾಗಿ ಬಳಸಿದರೆ ಚರ್ಮ, ತಲೆಗೂದಲಿಗೆ ಹಾನಿಯುಂಟು ಮಾಡುತ್ತದೆ. ಚರ್ಮವನ್ನು ಸೂರ್ಯಕಿರಣಗಳಿಗೆ ಸೂಕ್ಷ್ಮ ಮಾಡಿ ಚರ್ಮದ ಕ್ಯಾನ್ಸರ್‌ಗೆ ಎಡೆಕೊಡುತ್ತದೆ. ಹುಟ್ಟುವ ಮಕ್ಕಳ ಮೇಲೂ ದುಷ್ಪರಿಣಾಮ ಬೀರುವುದರಿಂದ ಗರ್ಭಿಣಿಯರು ಎಚ್ಚರಿಕೆಯಿಂದಿರಬೇಕು!

ವಿಟಮಿನ್ ಬಿ ಮತ್ತು ವಿಟಮಿನ್ ಸಿ : ಹಲವು ವಿಟಮಿನ್‌ಗಳ ಹೆಸರು ಕ್ರೀಂಗಳಲ್ಲಿ ಸೂಚಿಸುವುದು ಇತ್ತೀಚಿನ ಗೀಳು. ಇವೆಲ್ಲ Anti-oxidants ಎನ್ನುವ ರೂಪದಲ್ಲಿರುತ್ತದೆ. ವಿಟಮಿನ್ ಬಿ ಮತ್ತು ಸಿ ತಾಜಾ ತರಕಾರಿ, ಹಣ್ಣುಗಳಲ್ಲಿ ಹೇರಳವಾಗಿರುತ್ತವೆ ಎಂಬ ಮಾತೇನೋ ನಿಜ. ಆದರೆ, ಇದೇ ವಿಟಮಿನ್‌ಗಳು ಕ್ರೀಂ, ಲೋಶನ್‌ಗಳಲ್ಲಿ ಸೇರಿಕೊಂಡು ಹೇಗೆ ಕಾರ್ಯ ನಿರ್ವಹಿಸುವುದೋ ತಿಳಿದು ಬಂದಿಲ್ಲ.

ವಿಟಮಿನ್ ಇ : ಇದು ಬಹಳ ಜನಪ್ರಿಯ ಸೌಂದರ್ಯವರ್ಧಕ. ಇದರ ಹೆಸರಿನಲ್ಲಿ ಎಣ್ಣೆ, ಲೋಶನ್‌ಗಳು ತಯಾರಿಸಿ ಸುಕ್ಕುಗಳು, ಗರ್ಭಿಣಿಯ ಹೊಟ್ಟೆ ಮೇಲಿನ ಕಲೆಗಳನ್ನು ಹೋಗಲಾಡಿಸುತ್ತದೆ ಎಂದು ಪ್ರಚಾರವಾಗುತ್ತಿದೆ. ವಾಸ್ತವವಾಗಿ ಗರ್ಭ ಧರಿಸಿದ ಪರಿಣಾಮವಾಗಿ ಹೊಟ್ಟೆಯ ಚರ್ಮ ವಿಸ್ತಾರವಾಗುವುದರಿಂದ ಈ ಕಲೆಗಳು ಉಂಟಾಗುತ್ತದೆ. ಇವು ಶಾಶ್ವತ ಎಂಬುದನ್ನು ಮಹಿಳೆಯರು ಮರೆಯಬಾರದು. ವಿಟಮಿನ್ ಇ ಲೇಪನ ಕಲೆಗಳ ಮೇಲೆ ಯಾವ ಪ್ರಭಾವವೂ ಬೀರುವುದಿಲ್ಲ ಹಾಗೂ ವೈದ್ಯರ ಸಲಹೆ ಇಲ್ಲದೇ ವಿಟಮಿನ್-ಇ ಮಾತ್ರೆಗಳನ್ನಾಗಲಿ, ಸಿರಪ್‌ಗಳನ್ನಾಗಲಿ ಅನಧಿಕೃತವಾಗಿ ಸೇವಿಸುವುದು ಶರೀರಕ್ಕೆ ಅಪಾಯಕಾರಿ.

ಕೊಲ್ಲಾಜಿನ್ (Collagen) : ಇದು ಚರ್ಮದ ಒಳ ಪದರದಲ್ಲಿರುತ್ತದೆ. ಇದರ ಇರುವಿಕೆ ಚರ್ಮಕ್ಕೆ ದಿಂಬಿನಂತೆ ಮೃದುತ್ವ ನೀಡುತ್ತದೆ. ಚಿಕ್ಕ ವಯಸ್ಸಿನಲ್ಲಿ ಕೊಲ್ಲಾಜಿನ್ ಅಧಿಕವಾಗಿರುವುದರಿಂದ ಚರ್ಮ ಬಿಗಿಯಾಗಿ, ಮೃದುವಾಗಿರುತ್ತದೆ. ವಯಸ್ಸು ಏರಿದಂತೆ ಕೊಲ್ಲಾಜಿನ್ ಪ್ರಮಾಣ ತಗ್ಗಿ ಚರ್ಮ ಶಿಥಿಲಗೊಂಡು ಸುಕ್ಕುಗಳು ಮೂಡುತ್ತವೆ. ಇದು ಪ್ರಕೃತಿಯ ವಿಧಾನ. ಇದೇ ಕೊಲ್ಲಾಜಿನ್ ಇರುವ ಕ್ರೀಂಗಳನ್ನು ಮುಖಕ್ಕೆ ಲೇಪಿಸಿಕೊಂಡರೆ ಅದು ಚರ್ಮದ ಹೊರಪದರ ದಾಟಿ ಒಳಪದರಕ್ಕೆ ಹೋಗುವುದಿಲ್ಲ. ಕೊಲ್ಲಾಜಿನ್‌ಗೆ ಚರ್ಮದ ಹೊರಪದರದಲ್ಲಿ ಏನೂ ಕೆಲಸವಿಲ್ಲದ ಪಕ್ಷದಲ್ಲಿ ಅದನ್ನು ಕ್ರೀಂಗಳಲ್ಲಿ ವೃಥಾ ಬಳಸಿ ಸಾಮಾನ್ಯ ಜನರನ್ನು ಪ್ರಯೋಗಕ್ಕೆ ಒಳಪಡಿಸುತ್ತಿದ್ದಾರೆ ಎನ್ನುವುದು ನಿಷ್ಠುರದ ಮಾತಾಗದು.

ಕೆಲವು ತಯಾರಕರು ತಮ್ಮನ್ನು ಸಂಭಾಳಿಸಿಕೊಳ್ಳಲು, ಗ್ರಾಹಕರನ್ನು ಸಂತೃಪ್ತಿಗೊಳಿಸುವ ಸಲುವಾಗಿ ಪ್ಯಾಕೆಟ್‌ಗಳ ಮೇಲೆ 'allergy tested' 'ಅಲರ್ಜಿರಹಿತ', 'ಸಂಪೂರ್ಣ ಸುರಕ್ಷಿತ' ಎಂದು ಸೂಚನೆ ನೀಡುತ್ತಾರೆ. ಇದು ಜನಸಾಮಾನ್ಯರನ್ನು ಆಕರ್ಷಿಸುವ ವಿಧಾನ. ಪರೀಕ್ಷೆಗೊಳಪಟ್ಟ ತಯಾರಿಕೆಯ ವಸ್ತುವಿನ ಬಗ್ಗೆ ಜನಗಳಿಗೆ ಮಾಹಿತಿ ದೊರಕುವುದಿಲ್ಲ. ಅಂಥಹ ಸಾಮಗ್ರಿಗಳನ್ನು ಬಳಸುವುದು ನಿಮಗೆ ಬಿಟ್ಟಿದ್ದು.

ಹಾಗಾದರೆ ಚರ್ಮದ ಸುಕ್ಕುಗಳ ನಿವಾರಣೆ ಸಾಧ್ಯವಿಲ್ಲವೇ? ಅದಕ್ಕೆ ನೇರವಾದ ಉತ್ತರ, ಖಂಡಿತ ಸಾಧ್ಯವಿಲ್ಲ. ಸುಕ್ಕುಗಳ ಮೂಡುವಿಕೆಯನ್ನು ತಡೆಗಟ್ಟಬಹುದು ಹಾಗೂ ತಡ ಮಾಡಿಸಬಹುದು. ಈ ಮಾತು ನಿಷ್ಠೂರವಾದರೂ ಸತ್ಯ! ಸುಕ್ಕುಗಳು ತಡೆಗಟ್ಟುವ ಉಪಾಯಗಳೇನು? ಇದು ಒಳ್ಳೆಯ ಪ್ರಶ್ನೆ. ಆತ್ಮೀಯ ಗೆಳತಿಯರೇ, ಬಾಲ್ಯ, ಪ್ರಾಯ, ಮುಪ್ಪು ಎಲ್ಲವೂ ಬದುಕಿನ ವಿವಿಧ ಹಂತಗಳು. ವಯಸ್ಸು ಹೆಚ್ಚಾದಂತೆ ನಿಮ್ಮ ಇತರ ಅಂಗಗಳೊಡನೆ ಚರ್ಮದಲ್ಲೂ ಕೆಲವು ಬದಲಾವಣೆಗಳಾಗುವುದು ಸಹಜ. ಚರ್ಮ ದೇಹದ ಅತ್ಯಂತ ವಿಸ್ತಾರವಾದ ಅಂಗವೆಂದು ತಿಳಿದಿದ್ದೇವೆ. ಚರ್ಮವು ನಿಯಮಿತವಾಗಿ ಜೀವಕಣಗಳ ಪುನರುಜ್ಜೀವನಗೊಳಿಸುತ್ತಿರುತ್ತದೆ. ಹಳೆಯ ಜೀವಕಣ ಚರ್ಮದ ಹೊರಪದರಕ್ಕೆ ಬಂದು ಉದುರಿ ಹೋಗುತ್ತವೆ. ಈ ವ್ಯವಸ್ಥೆ ವಯಸ್ಸಾದಂತೆ ಮಂದಗತಿಯಲ್ಲಿ ಸಾಗುವುದರಿಂದ ಚರ್ಮ ಕಾಂತಿಹೀನವಾಗಿ ಅದರ ಸ್ವರೂಪ ಸಡಿಲವಾಗುವುದರಿಂದ ಚರ್ಮದ ಸ್ಥಿತಿಸ್ಥಾಪಕತ್ವ (elasticity) ಶಿಥಿಲವಾಗುತ್ತದೆ. ಇದು ಸುಕ್ಕು, ಕಲೆಗಳನ್ನು ಉಂಟುಮಾಡುತ್ತಿದೆ. ಸುಕ್ಕುಗಳ ತೀವ್ರತೆ ಅನುವಂಶಿಕವಾಗಿಯೂ ಇರುತ್ತದೆ.

ಸಂತೋಷವಾಗಿ, ಸಮಾಧಾನದಿಂದ ಮುಪ್ಪನ್ನು ಎದುರಿಸಿ! ಅಪ್ರಯೋಜಕವಾದ ಯಕಃಶ್ಚಿತ್ ಸುಕ್ಕುಗಳು ನಿಮ್ಮ ವ್ಯಕ್ತಿತ್ವವನ್ನು ಹಾಳು ಮಾಡಲು ಅವಕಾಶ ಕೊಡಬೇಡಿ. ಸುಕ್ಕುಗಳು, ಗೆರೆಗಳು ನಿಮ್ಮ ಅನುಭವ, ಪ್ರಬುದ್ಧತೆಯನ್ನು ಸೂಚಿಸುತ್ತದೆ. ಸೂರ್ಯನ ಅಲ್ಟ್ರಾವಯಲೆಟ್ ಕಿರಣಗಳು ಶೀಘ್ರವಾಗಿ ಸುಕ್ಕುಗಳನ್ನು ಮೂಡಿಸುವುದರಿಂದ ಬಿಸಿಲಿಗೆ ಹೊರಟಾಗ ಛತ್ರಿ ಅಥವಾ ಕ್ಯಾಪ್ ಮರೆಯದೇ ಧರಿಸಿ. ಅದು ಅಭ್ಯಾಸವಿಲ್ಲದಿದ್ದರೆ ಸೂರ್ಯ ಕಿರಣ ಸಂರಕ್ಷಣಾ ಲೋಶನ್ (Sunscreen) ಬಳಸಿ.

ಸಿಡುಕು, ಸೆಡವು ಆರೋಗ್ಯಪೂರ್ಣ ಚರ್ಮದ ಪರಮ ಶತ್ರುಗಳು. ಪ್ರತಿದಿನವನ್ನೂ ನಗುನಗುತ್ತ ಎದುರಿಸಿ. ನಿಮ್ಮ ದೇಹಸ್ಥಿತಿಗೆ ತಕ್ಕಂತಹ ಸೂಕ್ತ ವ್ಯಾಯಾಮ ಮಾಡಿ-ಸಮತೋಲನ ಆಹಾರ ಸೇವಿಸಿ. ನಿಮಗೆ ಪ್ರಿಯವಾದ ಹವ್ಯಾಸ ಬೆಳೆಸಿಕೊಳ್ಳಿ, ಎಲ್ಲಕ್ಕಿಂತ ಹೆಚ್ಚಾಗಿ ನಗು ಮುಖವನ್ನು ಸದಾಕಾಲ ಧರಿಸಲು ಮರೆಯಬೇಡಿ. ನಿಮ್ಮ ಒಂದು ಮುಗುಳುನಗೆ ಹಲವು ಸುಕ್ಕುಗಳನ್ನು ತಡೆಗಟ್ಟುತ್ತದೆ.

■ **ಡಾ|| ಆರತಿ ವೆಂಕಟೇಶ್**

ಪ್ರಕಾಶ : ಇವತ್ತು ಗುರುಗಳು ಶಾಲೆಯಲ್ಲಿ ಒಂದು ಗಾದೆ ಮಾತು ಹೇಳಿದರು ನೆನಪಿದೆಯಾ?
ಸುರೇಶ : ಏನದು?
ಪ್ರಕಾಶ : 'ಹಾಸಿಗೆ ಇದ್ದಷ್ಟು ಕಾಲು ಚಾಚು' ಅಂತ ಹೇಳಿದರು. ಆದರೆ ಹಾಸಿಗೆ ದೊಡ್ಡದಿದ್ದರೆ ಕಾಲು ಚಾಚುವುದು ಹೇಗೆ ಅಂತ ನನಗೆ ಯೋಚನೆ ಆಗಿದೆ.

ಕೋನೇರು ಹಂಪಿ

ಆಂಧ್ರ ಪ್ರದೇಶದ ಹಂಪಿಗೆ ಇನ್ನೂ ಹನ್ನೆರಡು ವರ್ಷ. ಅವಳ ಸಾಧನೆ ಮಾತ್ರ ಬಹಳ ದೊಡ್ಡದು. ಚದುರಂಗದಾಟದಲ್ಲಿ ಪ್ರಪಂಚ ನಿಬ್ಬೆರಗಾಗುವಂಥ ಪ್ರತಿಭೆ ಹೊಂದಿರುವ ಆಕೆಗೆ ಈಗಿರುವ ಬಹುದೊಡ್ಡ ಕನಸೆಂದರೆ ಅಂತಾರಾಷ್ಟ್ರೀಯ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಆಗುವುದು



ಚಿಕ್ಕ ಹುಡುಗಿಯ ದೊಡ್ಡ ಸಾಧನೆ

ಆಕೆಗಿನ್ನೂ ಹನ್ನೆರಡು ವರ್ಷ. ಆಂಧ್ರದ ಗುಂಟೂರಿನ ಚಲಪತಿರಾವ್ ಹೈಸ್ಕೂಲಿನಲ್ಲಿ ಏಳನೇ ತರಗತಿಯ ವಿದ್ಯಾರ್ಥಿ. ಅವಳ ಸಾಧನೆ ಪರಿಗಣಿಸಿ ಬ್ಯಾಂಕ್ ಆಫ್ ಬರೋಡಾ ಆಕೆಯ ಖರ್ಚು ವೆಚ್ಚ ಭರಿಸುತ್ತದೆ. ವರ್ಷಕ್ಕೆ ಎರಡು ಲಕ್ಷ ರೂಪಾಯಿ ಆಕೆಗಾಗಿ ವಿನಿಯೋಗಿಸುತ್ತದೆ.

ಆ ಪುಟಾಣಿ ಹುಡುಗಿಯ ಹೆಸರು ಕೋನೇರು ಹಂಪಿ. ಜುಲೈ ತಿಂಗಳಲ್ಲಿ ಆಕೆಗೆ ಇಂಟರ್‌ನ್ಯಾಷನಲ್ ವುಮೆನ್ ಮಾಸ್ಟರ್ ಪಟ್ಟ ದೊರಕಿತು. ಭಾರತದ ಮಹಿಳಾ ಚದುರಂಗ ಆಟಗಾರರಲ್ಲಿ ಆಕೆಯದು ಮೂರನೆಯ ಅಗ್ರಸ್ಥಾನ. ಆಕೆಯ ಮೇಲಿರುವ ಇಬ್ಬರು ಹಿರಿರೆಂದರೆ ಭಾಗ್ಯಶ್ರೀ ತಿಪ್ಸೆ ಮತ್ತು ವಿಜಯಲಕ್ಷ್ಮಿ. ಭಾಗ್ಯಶ್ರೀ ಕಳೆದ ಎರಡು ದಶಕಗಳಿಂದಲೂ ಚದುರಂಗದಾಟದ ಅಗ್ರ ಪಂಕ್ತಿಯಲ್ಲಿ ಇರುವವರು. ಇಂಥದ್ದು ಗಮನಿಸಿದಾಗ ಹನ್ನೆರಡರ ಬಾಲಕಿಯ ಈ ಸಾಧನೆ ಎಷ್ಟು ದೊಡ್ಡದು ಎಂಬುದು ಅರಿವಾದೀತು. ಹಾಗೆಂದು ಆಕೆ, ಸಾಧನೆ ಮುಗಿಯಿತು ಎಂದು ಕೈಕಟ್ಟಿ ಕುಳಿತವಳಲ್ಲ, ಆಕೆಗೊಂದೇ ಆಸೆ. ಮಹಿಳಾ ಗ್ರ್ಯಾಂಡ್ ಮಾಸ್ಟರ್ ಆಗುವುದು. ಭಾರತದಲ್ಲಿ ಇತ್ತೀಚೆಗೆ ಗ್ರ್ಯಾಂಡ್‌ಮಾಸ್ಟರ್ ಪಟ್ಟಗಳಿಸಿ, ಅಂತಾರಾಷ್ಟ್ರೀಯ ಖ್ಯಾತಿ ಪಡೆದಿರುವ ವ್ಯಕ್ತಿ ಎಂದರೆ ವಿಶ್ವನಾಥನ್ ಆನಂದ್. ಆಕೆಯ ಹಂಬಲ ತೀರಾ ದೊಡ್ಡದಾಯಿತು ಎನ್ನಿಸಬಹುದು. ಆದರೆ ಹಂಪಿಯಲ್ಲಿ ಅಂಥ ಸಾಮರ್ಥ್ಯವಿದೆ, ಅದಕ್ಕೆ ಬೇಕಾದ ಸಿದ್ಧತೆಯೂ ಇದೆ.

ಆಂಧ್ರ ಪ್ರದೇಶದ ಕೃಷ್ಣಾ ನದಿ ಬಯಲಿನ ವಿಜಯವಾಡಾ ಮತ್ತು ಗುಂಟೂರು ವಾಣಿಜ್ಯಕ್ಕೆ ಪ್ರಸಿದ್ಧ. ಆಗಾಗ ಚಂಡಮಾರುತದ ದಾಳಿಗೆ ಸಿಕ್ಕಿ ಹೆಚ್ಚು ಕಡಿಮೆ ನಾಶವಾಗಿ, ಮತ್ತೆ ಮೇಲೇಳುವ ಈ ಜಿಲ್ಲೆಗಳ ಜನ ಕಠಿಣ ದುಡಿಮೆಯವರು. ವಿಜಯವಾಡಾದ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದವರು ಕೋನೇರು ಅಶೋಕ್. ಮಗಳು ಹುಟ್ಟಿದಾಗ ಆಕೆಗೆ ಛಾಂಪಿಯನ್ ಎಂದು ಹೆಸರಿಡುವ ಆಸೆ. ಅದರ ಹ್ರಸ್ವರೂಪವಾದ ಛಾಂಪಿ ಕೊನೆಗೆ ಹಂಪಿ ಆಯಿತು. ಸ್ವತಃ ಚದುರಂಗದ ಆಟಗಾರರಾದ ತಂದೆಗೆ, ಮಗಳ ಪ್ರತಿಭೆ ಹುಟ್ಟುವಾಗಲೇ ತಿಳಿದಿತ್ತು ಎಂದಲ್ಲ. ಅದೊಂದು ಆಸೆ, ಹಂಬಲ ಮಾತ್ರ.

ಚಿಕ್ಕ ಹುಡುಗಿ ಆಗಿದ್ದಾಗಲೇ, ಪತ್ರಿಕೆಗಳಲ್ಲಿ ಬರುತ್ತಿದ್ದ ಚದುರಂಗದ ವಿವಿಧ ಸಮಸ್ಯೆಗಳಿಗೆ ಸುಲಭವಾಗಿ ಪರಿಹಾರ ಕಂಡುಹಿಡಿಯುತ್ತಿದ್ದಳು. ಅದರಿಂದ ಪ್ರೇರಿತರಾಗಿ, ತಂದೆ ಅಶೋಕ್ ಮಗಳನ್ನು ಚದುರಂಗದ ರಂಗಕ್ಕೆ ತಂದರು.

ತೀರಾ ಎಳವೆಯಲ್ಲೇ ಅಸಾಮಾನ್ಯ ಪ್ರತಿಭೆ ಪ್ರದರ್ಶಿಸುತ್ತಿದ್ದ ಆಕೆಯನ್ನು ಕಂಡ ಖ್ಯಾತಿವೆತ್ತ ಆಟಗಾರರು ಆಕೆ ಬಹು ಬೇಗ ದೊಡ್ಡ ಸಾಧನೆ ಮಾಡುತ್ತಾಳೆ ಎಂದು ಭವಿಷ್ಯ ನುಡಿದಿದ್ದರು. ಪತ್ರಿಕೆಗಳಿಗೆ, ಬೇರೆಯವರಿಗೆ ನಂಬಿಕೆಯಾಗಲಿಲ್ಲ. ಆದರೆ ಹತ್ತು ವರ್ಷದೊಳಗಿನವರ ವಿಶ್ವ ಛಾಂಪಿಯನ್‌ಶಿಪ್ ಪ್ರಶಸ್ತಿ ಆಕೆಯದಾಯಿತು. ಅದಾದ ಕೆಲವೇ ದಿನಕ್ಕೆ ರಾಷ್ಟ್ರೀಯ ಸಬ್‌ಜ್ಯೂನಿಯರ್ ಪ್ರಶಸ್ತಿ ತನ್ನದಾಗಿಸಿಕೊಂಡಳು ಹಂಪಿ. ಅಲ್ಲಿ ತನಗಿಂತ ನಾಲ್ಕೈದು ವರ್ಷ ಹಿರಿಯರಾದವರನ್ನು ಎದುರಿಸಿ ಆಕೆ ಗೆಲವು ತನ್ನದಾಗಿಸಿಕೊಂಡಿದ್ದು ಗಮನಾರ್ಹ.

ಮಗಳ ಸಾಧನೆಗೆ ಇನ್ನಷ್ಟು ನೆರವಾಗಲೆಂದು ತಂದೆ ಕೋನೇರು ಅಶೋಕ್ ಕಾಲೇಜಿನ ಅಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿದರು. ಎರಡು ವರ್ಷದ ಹಿಂದೆ ಎಲೆ ಮರೆಯ ಕಾಯಂತಿದ್ದ ಹಂಪಿ, ಇತ್ತೀಚೆಗೆ ಹನ್ನೆರಡು ವರ್ಷದೊಳಗಿನವರ ವಿಶ್ವಛಾಂಪಿಯನ್‌ಶಿಪ್ ಕೂಡ ತನ್ನದಾಗಿಸಿಕೊಂಡಿದ್ದಾಳೆ.

ಹನ್ನೆರಡು ತುಂಬಿರುವ, ಮಣ್ಣಿನ ಬಣ್ಣದ ಈ ಹುಡುಗಿ ಮಹಾ ಸಂಕೋಚದವಳು. ತನ್ನ ಕೀರ್ತಿಯ ಬಗ್ಗೆ ತಲೆ ಕೆಡಿಸಿಕೊಂಡವಳಲ್ಲ. ಮೆಚ್ಚಿ ಮಾತಾಡಿದರೆ, ಸಂಕೋಚದಿಂದಲೇ ನಕ್ಕು ಸುಮ್ಮನಾಗಿಬಿಡುತ್ತಾಳೆ. ಆದರೆ ಆಟದ ಮಣೆಯ ಮುಂದೆ ಕುಳಿತಾಗ, ಎಂಥ ಧೃತಿಗೆಡುವ ಸನ್ನಿವೇಶದಲ್ಲಿಯೂ ಒಂದಿಷ್ಟೂ ವಿಚಲಿತಳಾಗದೇ ದಾಳಿ ನಡೆಸುವ ಆಕೆಯನ್ನು ನುರಿತ ಆಟಗಾರರೂ ಮೆಚ್ಚುಗೆಯಿಂದ ನೋಡುವಂತಾಗುತ್ತದೆ.

ಭಾರತದ ಖ್ಯಾತ ಚದುರಂಗ ಆಟಗಾರ್ತಿಯರಾದ ವಿಜಯಲಕ್ಷ್ಮಿ, ಅನುಪಮಾ ಗೋಖಲೆ 'ಈ ವಯಸ್ಸಿಗೆ ಇಷ್ಟೊಂದು ಪ್ರೌಢತೆ ಇರುವುದೇ ಆಕೆಯ ಬಹುದೊಡ್ಡ ಸಾಮರ್ಥ್ಯ' ಎಂದು ಹೇಳುತ್ತಾರೆ.

ಇಂಥ ಅನುಪಮ ಪ್ರತಿಭೆಯ ಈ ಚಿಕ್ಕ ಹುಡುಗಿಯನ್ನು ಸಹಜವಾಗಿಯೇ 'ಸ್ಪೋರ್ಟ್ಸ್ ವರ್ಲ್ಡ್' ಕಳೆದ ಎರಡು ವರ್ಷಗಳಿಂದಲೂ 'ವಿಶೇಷ ಪ್ರತಿಭೆಯ ಕಿರಿಯ ಆಟಗಾರ್ತಿ' ಎಂದು ಆರಿಸುತ್ತಾ ಬಂದಿದೆ.


■ ಸುಹಾಸ

ಸ್ಟೆಫಿ ನಿವೃತ್ತಿ

ಇದು ನಿರೀಕ್ಷಿತ. ಆಕೆ ಅಮೇರಿಕನ್ ಓಪನ್ ನಂತರ ಟೆನಿಸ್ ಅಂತಾರಾಷ್ಟ್ರೀಯ ರಂಗದಿಂದ ನಿವೃತ್ತಿ ಘೋಷಿಸುವ ನಿರೀಕ್ಷೆ ಇತ್ತು. ಅದಕ್ಕೆ ಮುಂಚೆಯೇ ಸ್ಟೆಫಿ ನಿವೃತ್ತಿ ಘೋಷಿಸಿದ್ದಾಳೆ.

ಕಳೆದ ಹದಿನೇಳು ವರ್ಷಗಳಲ್ಲಿ ಟೆನಿಸ್ ಪ್ರಿಯರ ಬದುಕಿನ ಒಂದು ಭಾಗವೇ ಆಗಿದ್ದ ಸ್ಟೆಫಿ ನಿರ್ಗಮಿಸುವುದು ಅನಿವಾರ್ಯ ಆಗಿತ್ತು. ವಯಸ್ಸು, ಕಾಲಿನ ಗಾಯ, ತಂದೆಯ ಜೈಲು ಶಿಕ್ಷೆ ಎಲ್ಲವುಗಳಿಂದ ಮಾನಸಿಕವಾಗಿ ಪೆಟ್ಟು ತಿಂದಿದ್ದ ಸ್ಟೆಫಿ, ಅದನ್ನೆಂದೂ ತನ್ನ ಆಟದ ಸಮಯದಲ್ಲಿ ಹೊರಗೆಡುಹುತ್ತಲೇ ಇರಲಿಲ್ಲ.

ಈ ಬಾರಿ ಫ್ರೆಂಚ್ ಓಪನ್ ಪಂದ್ಯಾವಳಿಯಲ್ಲಿ ಹದಿನೆಂಟರ ಮಾರ್ಟಿನಾ ಹಿಂಗಿಸ್‌ನ ಸೋಲಿಸಿದ ಸ್ಟೆಫಿ, ಅದೇ ಸಾಧನೆ ವಿಂಬಲ್ಡನ್‌ನಲ್ಲಿ ತೋರಿಸಲಾಗಲಿಲ್ಲ. ಲಿಂಡ್ಸೆ ಡೇವನ್ ಪೋರ್ಟ್ ಪಾಲಾಯಿತು ವಿಂಬಲ್ಡನ್. ಏಳು ಬಾರಿ ವಿಂಬಲ್ಡನ್ ಗೆದ್ದಿದ್ದ ಆಕೆಗೆ, ನಿರ್ಗಮನಕ್ಕೆ ಮುಂಚೆ ಮತ್ತೊಂದು ಪ್ರಶಸ್ತಿ ದಕ್ಕಿದ್ದರೆ ಆಕೆಗಿಂತಲೂ ಆಕೆಯ ಲಕ್ಷಾಂತರ ಅಭಿಮಾನಿಗಳಿಗೆ ನೆಮ್ಮದಿಯಾಗುತ್ತಿತ್ತು.



ಸ್ಟೆಫಿ ಗ್ರಾಫ್



ಬೈಚಿಂಗ್ ಭುತಿಯಾ

ಕೋಟಿ ರೂಪಾಯಿ ಗುತ್ತಿಗೆ

ಪಾಕ್ ಕ್ರಿಕೆಟ್ ತಂಡದಲ್ಲಿ ತಲ್ಲಣವಿದೆ. ಇದರಿಂದ ಹೊರತಾದವನು ಶೋಯಿಬ್ ಅಕ್ತರ್. ಕಳೆದ ವಿಶ್ವಕಪ್‌ನಲ್ಲಿ ಆತ ಅತಿ ವೇಗದ ಬೌಲರ್. ಅದಕ್ಕೆಂದೇ 'ರಾವಲ್ಪಿಂಡಿ ಎಕ್ಸ್‌ಪ್ರೆಸ್' ಎಂಬ ಬಿರುದು. ಅವನೀಗ ನಾಟಿಂಗ್ ಹ್ಯಾಂಶೈರ್ ಕೌಂಟಿಯ ಆಟಗಾರ. ಅದಕ್ಕಾಗಿ ಪಡೆಯುವ ಸಂಭಾವನೆ ಮೂರು ಲಕ್ಷ ಪೌಂಡ್. ಭಾರತೀಯ ಲೆಕ್ಕಾಚಾರದಲ್ಲಿ 1.29 ಕೋಟಿ ರೂಪಾಯಿ. ಈ ವರ್ಷದ ಆರಂಭದಲ್ಲಿ ಏಷಿಯಾ ಕಪ್ ಪಂದ್ಯಾವಳಿಯಲ್ಲಿ ಬೆಳಕಿಗೆ ಬಂದ ಶೋಯಿಬ್ ಅತಿ ವೇಗದ ಬೌಲರ್. ಈ ವೇಗ ಸದಾ ಕಾಯ್ದುಕೊಳ್ಳುವುದು ಆತನ ವಿಶಿಷ್ಟತೆ.


ದಕ್ಷಿಣ ಆಫ್ರಿಕಾದ ಅಲನ್ ಡೋನಾಲ್ಡ್‌ನಂತೆ ಚೆಂಡೆಸೆಯುವ ಶೋಯಿಬ್, ಈ ಬಾರಿ ವಿಶ್ವಕಪ್‌ನಲ್ಲಿ ನೂರು ಮೈಲಿ ವೇಗದಿಂದ ಚೆಂಡೆಸೆದು ದಾಖಲೆ ಮಾಡಬೇಕೆಂದಿದ್ದ. ಆಸ್ಟ್ರೇಲಿಯಾದ ಮಾಜಿ ವೇಗದ ಬೌಲರ್ ಜೆಫ್ ಥಾಂಸನ್‌ನ 97 ಮೈಲಿ ವೇಗದ ದಾಖಲೆ ಕೂಡ ಮುರಿಯುವುದು ಆತನಿಗೆ ಸಾಧ್ಯವಾಗಲಿಲ್ಲ.

ಇಪ್ಪತ್ಮೂರರ ಹರೆಯದ ಶೋಯಿಬ್ ಅಕ್ತರ್ ಮುಂದೊಂದು ದಿನ ದಾಖಲೆ ಮುರಿಯಬಹುದು. ಗಳಿಕೆಯ ವಿಚಾರದಲ್ಲಂತೂ ಆತ ದಾಖಲೆ ಮಾಡಿದ್ದಾನೆ.


ಭುತಿಯಾ ಇಂಗ್ಲೆಂಡಿಗೆ

ಬಂಗಾಳ, ಕೇರಳ ರಾಜ್ಯಗಳಲ್ಲಿ ಫುಟ್‌ಬಾಲ್ ಜನಪ್ರಿಯ. ಬಂಗಾಳಿಗಳಿಗಂತೂ ಕೆಲವು ಫುಟ್‌ಬಾಲ್ ಪಂದ್ಯಗಳು ಬದುಕು, ಸಾವಿನ ಪ್ರಶ್ನೆಯಂತೆ. ಅಲ್ಲಿನ ಪ್ರಖ್ಯಾತ ಮೋಹನ್ ಬಗಾನ್, ಮಹಮಡನ್ ಸ್ಪೋರ್ಟಿಂಗ್ ಮುಂತಾದ ತಂಡಗಳು ಅತ್ಯುತ್ತಮ ಆಟಗಾರರನ್ನು ಹೆಚ್ಚು ಕಡಿಮೆ ಖರೀದಿಸುತ್ತವೆ.

ಇಷ್ಟೆಲ್ಲ ಕ್ರೇಜ್ ಇದ್ದರೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಶೂನ್ಯ. ಇದಕ್ಕೆ ಅಪವಾದ ಎಂಬಂತೆ ಬೈಚಿಂಗ್ ಭುತಿಯಾ ಈಗ ಇಂಗ್ಲೆಂಡ್‌ನ ಫುಲ್‌ಹ್ಯಾಂ ತಂಡಕ್ಕೆ ತೆರಳಿದ್ದಾನೆ. ಇದು ಆತನಿಗೆ ವಿಶ್ವಮಟ್ಟದ ಪಂದ್ಯಗಳಲ್ಲಿ ಆಡುವ ಅವಕಾಶ ಕೊಡುತ್ತದೆ. ಹಾಗೇ ಆತ ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಲೂ ಇದು ಸಹಕಾರಿ. ಭಾರತೀಯ ಫುಟ್‌ಬಾಲ್‌ನಲ್ಲಿ ಇದೊಂದು ಪ್ರಮುಖ ಬೆಳವಣಿಗೆಯಾಗಿದೆ.



ಶೋಯಿಬ್ ಅಕ್ತರ್



ಮೈಕೇಲ್ ಶೂ ಮೇಕರ್

ದುಬಾರಿ ಕಾಲು

ಗ್ರ್ಯಾಂಡ್‌ಪ್ರಿ ಆಕರ್ಷಣೆ ಹಾಗಿರುತ್ತದೆ. ಗೆದ್ದರೆ ಸಿಂಹಾಸನ, ಸತ್ತರೆ ವೀರ ಸ್ವರ್ಗ ಎನ್ನುವ ಹಾಗೆ. ಅಲ್ಲಿ ಹಣದ ಗಳಿಕೆ ಕೂಡ ಭಾರಿ. ಇತ್ತೀಚಿಗೆ ಬ್ರಿಟನ್ನಿನ ಗ್ರ್ಯಾಂಡ್‌ಪ್ರಿಯಲ್ಲಿ ಕಾಲು ಮುರಿದುಕೊಂಡ ಮೈಕೇಲ್ ಶೂಮೇಕರ್, ಅದಕ್ಕಾಗಿ ಗಳಿಸುತ್ತಿರುವ ವಿಮಾ ಪರಿಹಾರವೇ ದಿನಕ್ಕೆ ಅರವತ್ತೈದು ಸಾವಿರ ಪೌಂಡ್‌ಗಳು. ಅದನ್ನು ಇಂಗ್ಲೆಂಡಿನ ವಿಮಾ ಕಂಪೆನಿಯೊಂದು ತೆರುತ್ತಿದೆ.

ಇದು ಭಾರೀ ಮೊತ್ತ ಎಂದೇ ನಮಗೆ ತೋರಬಹುದು. ವಾಸ್ತವ ಹಾಗಲ್ಲ. ಆತನ ಕಾಲು ಸರಿ ಇದ್ದಿದ್ದರೆ ಈ ಮೊತ್ತ ಯಾವ ಲೆಕ್ಕಕ್ಕೂ ಇಲ್ಲ. ಫೆರಾರಿ ತಂಡದ ಸದಸ್ಯನಾಗಿ ಕಾರ್ ರೇಸ್‌ಗಳಲ್ಲಿ ಅವನು ವರ್ಷಕ್ಕೆ 35 ದಶಲಕ್ಷ ಡಾಲರ್ ಸಂಪಾದಿಸುತ್ತಾನೆ. ಇದಲ್ಲದೇ ಜಾಹೀರಾತುಗಳಿಂದ ಬರುವ ಹಣ ಬೇರೆ. ತಿಂಗಳಿಗೆ ವಿಮೆಯಾಗಿ ಕಟ್ಟುವ ಮೊತ್ತವೇ ಇಪ್ಪತ್ತು ಸಾವಿರ ಪೌಂಡ್‌ಗಳಷ್ಟಿರುತ್ತದೆ.

ನಮ್ಮಲ್ಲಿ ಕ್ರಿಕೆಟ್ ಆಟಗಾರರೇ ಶ್ರೀಮಂತರು. ಯೂರೋಪ್ ಮತ್ತು ಅಮೇರಿಕಾಗಳಲ್ಲಿ ಕಾರ್ ರೇಸಿಗರು, ಫುಟ್‌ಬಾಲ್ ಆಟಗಾರರಿಗೇ ಭಾರೀ ಬೇಡಿಕೆ.

ಫೆರಾರಿ ಟೀಂ ಸದಸ್ಯನಾಗಿ ಮೈಕೇಲ್ ಶೂ ಮೇಕರ್ ಸದಾ ತನ್ನ ತಂಡದ ಕಾಳಜಿ ತೋರುತ್ತಾ ಬಂದಿದ್ದಾನೆ. ಈಗಾಗಲೇ ಹಲವೆಡೆ ಗ್ರ್ಯಾಂಡ್ ಪ್ರಿ ಆರಂಭವಾಗಿದ್ದು, ತಂಡದ ಉಳಿದ ಸದಸ್ಯರು ಗೆಲುವು ಸಾಧಿಸಲೆಂದು ಆತ ನಾನಾ ರೀತಿಯ ಸಲಹೆ, ಸೂಚನೆಗಳನ್ನು ನೀಡುವುದರಲ್ಲಿ ನಿರತನಾಗಿದ್ದಾನೆ. ■



ನಿಮ್ಮ ಸ್ನೇಹವೆಷ್ಟು ಗಾಢ?

ಈ ಪ್ರಶ್ನೆಗಳಿಗೆ ಉತ್ತರಿಸಿ ತಿಳಿದುಕೊಳ್ಳಿ

1. ನಿಮ್ಮ ಸ್ನೇಹಿತನೊಬ್ಬ ತನಗೆ ಗುಪ್ತ ವ್ಯಾಧಿ ಸೋಂಕಿದೆ ಎಂದು ಭಯಪಡುತ್ತಿದ್ದಾನೆ. ಆಗ ನೀವು

1) ಆ ವಿಷಯವನ್ನು ನಿಮ್ಮ ಇತರ ಸ್ನೇಹಿತರ ಮುಂದೆ ಹೇಳಿಕೊಂಡು ನಗುತ್ತೀರಿ.
2) ಆತನ ಹೆಸರನ್ನು ಹೇಳದೆ ವಿಷಯವನ್ನು ನಿಮ್ಮ ಇತರ ಸ್ನೇಹಿತರಿಗೆ ತಿಳಿಸುತ್ತೀರಿ
3) ರೋಗದ ಸೋಂಕಿನ ಸ್ನೇಹಿತನಿಗೆ ಧೈರ್ಯದಿಂದಿರಲು ತಿಳಿಸಿ, ಸಮಾಧಾನ ಹೇಳುತ್ತೀರಿ

2. ನಿಮ್ಮ ಸ್ನೇಹಿತ ಒಂದು ವಾರದಷ್ಟು ಕಾಲ ತರಗತಿಗಳಿಗೆ ಹಾಜರಾಗಿಲ್ಲದೇ ನಂತರ ಬಂದು ನಿಮ್ಮ ನೋಟ್ಸ್ ಕಾಪಿ ಮಾಡುವುದಾಗಿ ಕೇಳುತ್ತಾನೆ. ಆಗ ನೀವು

1) 'ಕ್ಷಮಿಸಿ ನೋಟ್ಸ್ ಕೊಡುವುದಿಲ್ಲ' ಎಂದು ಹೇಳುತ್ತೀರಿ.
2) ನಾನು ನೋಟ್ಸ್ ಮಾಡಿಕೊಂಡಿಲ್ಲ ಎಂಬ ಹಾರಿಕೆ ಉತ್ತರ ನೀಡಿ ತಪ್ಪಿಸಿಕೊಳ್ಳುತ್ತೀರಿ.
3) ನೋಟ್ಸ್ ಕೊಡುತ್ತೀರಿ.

3) ನಿಮ್ಮ ಸ್ನೇಹಿತ ನಿಮಗಿಷ್ಟವಾಗದ ವ್ಯಕ್ತಿಯೊಬ್ಬನೊಂದಿಗೆ ಹತ್ತಿರವಾಗುತ್ತಿದ್ದಾನೆಂದು ನಿಮಗೆ ತಿಳಿಯುತ್ತದೆ. ಆಗ ನೀವು

1) ತಕ್ಷಣ ಸ್ನೇಹಿತನೊಂದಿಗೆ ಮಾತನಾಡುವುದನ್ನು ಬಿಡುತ್ತೀರಿ.
2) ನಿಮ್ಮ ಸ್ನೇಹಿತನಿಗೆ ನಮ್ಮಿಬ್ಬರಲ್ಲಿ ಒಬ್ಬನನ್ನು ಆರಿಸಿಕೊಳ್ಳಲು ಸೂಚಿಸುತ್ತೀರಿ.
3) ಆ ವಿಷಯದ ಕಡೆ ಗಮನ ನೀಡದೆ ಆತನೊಂದಿಗೆ ಮಾಮೂಲಿಯಾಗಿಯೇ ಮುಂದುವರಿಯುತ್ತೀರಿ.

4) ನಿಮ್ಮ ಸ್ನೇಹಿತನ ಮನೆಯಲ್ಲಿ ಹಲವು ಸಮಸ್ಯೆಗಳು ಉದ್ಭವಿಸಿದವು. ನೀವು

1) ಅವುಗಳನ್ನು ಹಲವರಿಗೆ ತಿಳಿಸುತ್ತೀರಿ.
2) ಸಾಧ್ಯವಾದಷ್ಟು ಅವನಿಂದ ದೂರ ಉಳಿಯಲು ಯತ್ನಿಸುತ್ತೀರಿ.
3) ಆ ಸಮಸ್ಯೆಗಳ ಪರಿಹಾರಕ್ಕೆ ಸಹಾಯ ಮಾಡಲು ಯತ್ನಿಸುತ್ತೀರಿ.

5) ಒಂದು ಪುಸ್ತಕ ಕೊಳ್ಳುವುದಕ್ಕಾಗಿ ನಿಮ್ಮ ಸ್ನೇಹಿತನಿಗೆ ದುಡ್ಡಿನ ಅವಶ್ಯಕತೆ ಇದೆ. ನಿಮ್ಮಲ್ಲಿ ಹಣವಿದೆ. ಆಗ ನೀವು

1) ಹಣದ ಸಹಾಯ ಮಾಡಲು ನಿರಾಕರಿಸುತ್ತೀರಿ.
2) ಆ ಪುಸ್ತಕವನ್ನು ನಾಳೆ ಕೊಳ್ಳಬಹುದು ಈಗ ಸದ್ಯಕ್ಕೇನು ಅವಶ್ಯವಿಲ್ಲ ಎಂದು ಹೇಳಿ ಕರೆದೊಯ್ಯುತ್ತೀರಿ.
3) ತಕ್ಷಣ ಹಣ ನೀಡಿ ಮರುದಿನ ವಾಪಸು ಪಡೆಯುತ್ತೀರಿ.

6) 'ಸ್ನೇಹಿತ'ನೆಂದರೆ ನಿಮ್ಮ ದೃಷ್ಟಿಯಲ್ಲಿ ಆತ

1) ತನ್ನ ರಹಸ್ಯಗಳೆಲ್ಲವನ್ನು ನಿಮಗೆ ತಿಳಿಸುತ್ತಿರಬೇಕು.
2) ತನ್ನ ಯಾವ ಸಮಸ್ಯೆಗಳನ್ನೂ ನಿಮಗೆ ತಿಳಸಬಾರದು
3) ಅವಶ್ಯಕವಾದ ವಿಷಯಗಳನ್ನು ನಿಮ್ಮೊಂದಿಗೆ ಚರ್ಚಿಸಬೇಕು. ಸಮಸ್ಯೆಗಳು ಎದುರಾದಾಗ ನಿಮ್ಮ ಸಲಹೆ ಪಡೆಯಬೇಕು.

7) ನಿಮ್ಮ ಪುಸ್ತಕವೊಂದನ್ನು ತೆಗೆದುಕೊಂಡ ನಿಮ್ಮ ಸ್ನೇಹಿತ ಅದನ್ನೆಲ್ಲೋ ಕಳೆದಿದ್ದಾನೆ. ಕೇಳಿದಾಗ ಕ್ಷಮೆ ಕೇಳುತ್ತಿದ್ದಾನೆ. ಆಗ ನೀವು

1) ಆತನ ಪುಸ್ತಕವೊಂದನ್ನು ಕಸಿದುಕೊಂಡು ನಿಮ್ಮ ಪುಸ್ತಕ ಹಿಂದಿರುಗಿಸಿದ ನಂತರ ಈ ಪುಸ್ತಕವನ್ನು ತೆಗೆದುಕೊಳ್ಳಲು ತಿಳಿಸುತ್ತೀರಿ.
2) "ಮರ್ಯಾದೆಯಿಂದ ಹೊಸದೊಂದು ಪುಸ್ತಕವನ್ನು ತಂದುಕೊಡು" ಎಂದು ಎಚ್ಚರಿಸುತ್ತೀರಿ.
3) ಅದು ಎಲ್ಲಿ ಕಳೆದಿದೆ ಎಂಬುದನ್ನು ತಿಳಿದುಕೊಳ್ಳಲು ಯತ್ನಿಸುತ್ತೀರಿ.

8) ಮರುದಿನ ನಿಮ್ಮ ಸ್ನೇಹಿತನ ಹುಟ್ಟು ಹಬ್ಬವಿದೆ ಎಂದು ನಿಮಗೆ ತಿಳಿದಿದೆ. ನೀವು ಅವರಿಗೆ ಶುಭ ಹಾರೈಸುತ್ತೀರಾ? ಅಥವಾ ನೀವು

1) ನನ್ನ ಹಾರೈಕೆಯಿಂದ ಆಗುವುದೇನಿದೆ ಎಂದು ಸುಮ್ಮನಿರುತ್ತೀರಿ.
2) ಆತ ಆಹ್ವಾನಿಸಿದರೆ ಹೋಗಿ ಹಾರೈಸಬಹುದು ಎಂದುಕೊಳ್ಳುತ್ತೀರಿ.
3) ಆತನಿಗೆ ಶುಭ ಹಾರೈಸಿ ಆತನನ್ನು ಆಶ್ಚರ್ಯಚಕಿತನಾಗಿಸುತ್ತೀರಿ.

9) ನಿಮ್ಮ ಸ್ನೇಹಿತ ಕೆಟ್ಟವರ ಸಹವಾಸ, ಕೆಟ್ಟ ಅಭ್ಯಾಸಗಳಿಗೆ ದಾಸನಾಗುತ್ತಿದ್ದಾನೆ ಆಗ ನೀವು

1) ತಕ್ಷಣವೇ ಅವನ ತಂದೆ ತಾಯಿಗಳಿಗೆ ವಿಷಯವನ್ನು ತಿಳಿಸುತ್ತೀರಿ
2) ಆತನೊಂದಿಗೆ ಸ್ನೇಹವನ್ನು ದೂರ ಮಾಡುತ್ತೀರಿ.
3) ಆತನಿಗೆ ಒಳಿತು ಕೆಡುಕುಗಳ ಕುರಿತು ತಿಳಿಸಿ ಹೇಳಲು ಯತ್ನಿಸಿ, ನಂತರವೂ ಅವನು ತನ್ನ ದಾರಿಯನ್ನು ಬದಲಾಯಿಸಿಕೊಳ್ಳದಿದ್ದಲ್ಲಿ ನಿಮ್ಮ ಕೆಲಸ ನೀವು ನೋಡಿಕೊಳ್ಳುತ್ತೀರಿ.

10) ನಿಮ್ಮ ಸ್ನೇಹಿತನು ಮಾಡದ ಅಪರಾಧಕ್ಕೆ ತಾನು ಸಿಕ್ಕಿ ಬಿದ್ದಿದ್ದಾನೆ. ನಿಜ ಹೇಳಬೇಕೆಂದರೆ ಅವನು ಬಹಳ ಅಮಾಯಕ. ಆಗ ನೀವು

1) ಅವನನ್ನು ಅಮಾಯಕನಂತೆ ನಟಿಸುತ್ತಿದ್ದಾನೆಂದು ಜರಿಯುತ್ತೀರಿ
2) "ಅವನು ಅಮಾಯಕನಾದರೂ ಈ ಅಪರಾಧವನ್ನು ಮಾಡಿರಬಹುದು" ಎಂದುಕೊಳ್ಳುತ್ತೀರಿ.
3) ಅವನು ನಿರಪರಾಧಿ ಎಂದು ನಿರೂಪಿಸಲು ಸಹಾಯ ನೀಡುತ್ತೀರಿ.

ಮೇಲಿನ 10 ಪ್ರಶ್ನೆಗಳ ಉತ್ತರಗಳಲ್ಲಿ 1ಕ್ಕೆ 2 ಅಂಕಗಳು, 2ಕ್ಕೆ 3 ಅಂಕಗಳು, 3ಕ್ಕೆ 5 ಅಂಕಗಳು ಹಾಕಿಕೊಳ್ಳಿ.


★ ನೀವು ಪಡೆದ ಅಂಕಗಳು 40 ರಿಂದ 50ರ ಮಧ್ಯದಲ್ಲಿದ್ದರೆ ನಿಮ್ಮ ಸ್ನೇಹ ಗಾಢವಾಗಿ ಉಳಿಯುವಂತಹುದು ಆಗಿರುತ್ತದೆ.

★ ನೀವು ಪಡೆದ ಅಂಕಗಳು 30 ರಿಂದ 39ರ ಮಧ್ಯದಲ್ಲಿದ್ದರೆ ನಿಮ್ಮ ಸ್ನೇಹ ಅಡ್ಡಗೋಡೆಯ ಮೇಲೆ ದೀಪವಿದ್ದಂತೆ ಕೆಲ ಕಾಲದ ನಂತರ ಮಾಸುವಂತಹದ್ದಾಗಿರುತ್ತದೆ.

★ ನೀವು ಪಡೆದ ಅಂಕಗಳು 20 ರಿಂದ 29ರ ಮಧ್ಯದಲ್ಲಿದ್ದರೆ ನಿಮ್ಮದು ಹೇಳಿಕೊಳ್ಳುವಂತಹ ಸ್ನೇಹವೇ ಅಲ್ಲ. ಕೇವಲ ಹಾಯ್, ಹಲೋಗೆ ಸೀಮಿತವಾದ ಸ್ನೇಹವಷ್ಟೆ.

■ ಕೆ.ಎಂ. ಚಂದ್ರಮೌಳಿ

ಇದು ಕಾಯಿಲೆ ಅಲ್ಲದ ಕಾಯಿಲೆ



ಕೆಲವು ಮಾನಸಿಕ ತೊಂದರೆಗಳು ನಾನಾ ರೀತಿಯಲ್ಲಿ ಪ್ರಕಟವಾಗುತ್ತವೆ. ಮನಸ್ಸಿನ ಸಣ್ಣದೊಂದು ಆತಂಕ ತೀವ್ರ ರೀತಿಯ ಪ್ರತಿಕ್ರಿಯೆಗೆ ಕಾರಣ ಆಗಬಹುದು. ಮನೆಯ ಬೀಗ ಸರಿಯಾಗಿ ಹಾಕಿದ್ದೇನೋ ಇಲ್ಲವೋ ಎಂಬುದರಿಂದ ಹಿಡಿದು ಸಣ್ಣದೊಂದು ಚೀಟಿ ಕಳೆದು ಹೋದರೂ ನಾಳೆ ಏನೋ ಬಹುದೊಡ್ಡ ದುರಂತ ಸಂಭವಿಸಬಹುದೆಂಬ ಆತಂಕ ಇದೆಯಲ್ಲ ಅದು ಬಹಳ ಅನಾಹುತಕಾರಿ. ಹೀಗೆ ಆತಂಕದಿಂದ ನರಳುತ್ತಾ ಬದುಕನ್ನೇ ಹಾಳು ಮಾಡಿಕೊಳ್ಳುವ ಹಾದಿಯಲ್ಲಿದ್ದ ತರುಣನ ಕತೆ ಇದು

ಚಿತ್ರದುರ್ಗ ಜಿಲ್ಲೆಯ ಸಣ್ಣ ಹಳ್ಳಿ ನಮ್ಮದು. ಅಲ್ಲಿಂದ ಕಾಲೇಜು ಕಲಿಯಲೆಂದು ನಾನು ಮೈಸೂರಿಗೆ ಬಂದೆ. ಅದೊಂದು ವಿಚಿತ್ರ ಸನ್ನಿವೇಶ. ನನ್ನನ್ನು ಓದಿಸುವ ಸ್ಥಿತಿಯಲ್ಲಿ ಮನೆಯವರು ಇರಲಿಲ್ಲ. ಹತ್ತಿರದ ಊರಿನ ಮಠದ ಕಾಲೇಜಲ್ಲಿ ಅನುಕೂಲತೆಗಳು ಇದ್ದರೂ, ಅಲ್ಲಿನ ವ್ಯವಸ್ಥೆಯ ಬಗ್ಗೆ ನಾನಾ ರೀತಿ ಮಾತುಗಳಿದ್ದವು. ಚಿತ್ರದುರ್ಗದಲ್ಲಿ ಸರ್ಕಾರಿ ಕಾಲೇಜು ಇತ್ತಾದರೂ ಉಚಿತ ಊಟ, ವಸತಿಗೆ ಅನುಕೂಲ ಇರಲಿಲ್ಲ. ಈ ಮಧ್ಯೆ ಯಾರೋ ಮೈಸೂರಲ್ಲಿ ಒಳ್ಳೆಯ ಓದು ಸಾಧ್ಯ. ಅಲ್ಲಿ ಕಷ್ಟಪಟ್ಟರೆ ಮೇಲೆ ಬರಲು ಅನುಕೂಲ ಇದೆ ಎಂದು ಹೇಳಿದ್ದು ಮನಸ್ಸಲ್ಲಿ ಹೂತುಬಿಟ್ಟಿತು. ಹೀಗಾಗಿ ನಾನು ಮೈಸೂರಿಗೆ ಬಂದಿದ್ದು. ಇದರಿಂದಾಗಿ ನಮ್ಮ ಮನೆಯವರನ್ನು ಒಂದು ದೊಡ್ಡ ದುರಂತದಿಂದ ಪಾರು ಮಾಡುವುದು ಸಾಧ್ಯ ಆಯಿತು. ಆ ಕಾರಣಕ್ಕೇ ಮೈಸೂರಿನ ಪ್ರಸ್ತಾಪ ಮೊದಲು ಹೇಳಿದ್ದು.

ಹಳ್ಳಿಯಲ್ಲಿ ನಮ್ಮ ಮನೆ ಇತ್ತು. ಜಮೀನು ಅಂತೇನು ಇರಲಿಲ್ಲ. ವ್ಯವಸಾಯದ ಕಾಲಕ್ಕೆ ಕೆಲವರ ಹೊಲ ಪಾಲಿಗೆ ಅಂತ ತೆಗೆದುಕೊಂಡು ತಂದೆ ಕೃಷಿ ಮಾಡುತ್ತಿದ್ದರು. ಉಳಿದ ದಿನಗಳಲ್ಲಿ ಬಡಿಗಿತನ ಮಾಡುತ್ತಿದ್ದರು. ಅದು ಕುಲದ ಕಸುಬಲ್ಲ. ಹೇಗೋ ಕಲಿತಿದ್ದು. ಸಾಲಾಗಿ ಐದು ಗಂಡು ಮಕ್ಕಳು. ಇಬ್ಬರು ಹಿರಿಯ ಅಣ್ಣಂದಿರು. ನಾನು ಮಧ್ಯಮ. ನನ್ನ ನಂತರ ಇನ್ನಿಬ್ಬರು. ಇದೂ ಒಂದು ರೀತಿಯ ಪುಣ್ಯ ಎಂದು ಹಳ್ಳಿಯ ಜನರ ಭಾವನೆ. ಹೆಣ್ಣು ಹುಟ್ಟಿದ್ದರೆ ಮದುವೆ ಖರ್ಚಿಗಾಗಿ ಜೀವ ತೇಯಬೇಕು. ಇವರಿಗೆ ಅಂಥ ದರ್ದು ಇಲ್ಲ. ಪುಣ್ಯವಂತರು ಎಂಬ ಭಾವನೆ. ಹೆಣ್ಣಿನ ಮದುವೆಗಾಗಿ ನಡೆಯುವ ಖರ್ಚುಗಳನ್ನು ನೋಡಿದರೆ, ಅವರ ಮಾತು ನಿಜ ಅನ್ನಿಸುತ್ತದೆ.

ನನ್ನ ಇಬ್ಬರು ಅಣ್ಣಂದಿರು ಹೆಚ್ಚು ಓದಲಿಲ್ಲ. ಹಿರಿಯಣ್ಣ ಹೈಸ್ಕೂಲು ಕೂಡ ಮುಗಿಸದೇ ತಂದೆಗೆ ನೆರವಾಗಲು ನಿಂತ. ಎರಡನೆಯವನು ಸ್ವಲ್ಪ ಚೂಟಿ. ಸಣ್ಣ ಪುಟ್ಟ ವ್ಯಾಪಾರ ಮಾಡುತ್ತಾ ತನ್ನ ನೆಲೆ ಕಂಡುಕೊಂಡ. ನಾನು ಪಿಯುಸಿ ಸೇರಲು ಮೈಸೂರಿಗೆ ಬಂದಾಗ ಮನೆಯಲ್ಲಿ ಎರಡು ಹೊತ್ತು ಊಟ ಕಾಣಬಹುದಾದ ನೆಮ್ಮದಿಯ ಸ್ಥಿತಿ. ನನ್ನ ಓದಿಗೆ ಹಣ ಒದಗಿಸುವುದೆಂದರೆ ಮನೆಯವರು ಹೊಟ್ಟೆ, ಬಟ್ಟೆ ಕಟ್ಟಬೇಕು. ಹಾಗೆ ಅವರು ಕಷ್ಟ ಪಡುವುದು ತಪ್ಪಿಸಲೆಂದು ನನ್ನೆಲ್ಲ ಯತ್ನ ಮಾಡುತ್ತಿದ್ದೆ.

ನನ್ನ ಒತ್ತಿನ ತಮ್ಮನಾದ ಶೇಖರ ಒಂಟಿಬಡಕ. ಸದಾ ಏನಾದರೂ ಚಿತ್ರ ಗೀಚುವ ಅಭ್ಯಾಸ. ಚಿಕ್ಕವನಿದ್ದಾಗ ಸ್ವಲ್ಪ ರೋಗಿಷ್ಠ. ಹಾಗಾಗಿಯೇ ಇರಬೇಕು ತಾಯಿಗೆ ತೀರಾ ಮುದ್ದಿನವನು. ಸ್ವಲ್ಪ ಮಟ್ಟಿಗೆ ಅವನ ಸ್ವಭಾವ ತಾಯಿಯನ್ನೇ ಹೋಲುತ್ತಿತ್ತು. ಹೈಸ್ಕೂಲು ಸೇರುವ ಮುನ್ನವೇ ಅವನು ಶಾಲೆಯ ಬಗ್ಗೆ ಅನಾದರ ಬೆಳೆಸಿಕೊಂಡಿದ್ದ. ಹೈಸ್ಕೂಲು ಸೇರಿದ್ದು ನೆಪಕ್ಕೆ. ಅದನ್ನು ಬಿಟ್ಟು ಅವನು ಊರಿನ ಕೆಲಸ ಮಾಡಿದ್ದು ಜಾಸ್ತಿ. ದೇವಸ್ಥಾನ, ಮನೆಯ ಗೋಡೆಗಳಿಗೆ ಚಿತ್ರ ಬರೆದು ಬಣ್ಣ ತುಂಬುವುದು, ನಾಟಕದ ಸೀನರಿ ಸಿದ್ಧಗೊಳಿಸುವುದು ಹೀಗೆ. ಸ್ವಲ್ಪ ದಿನಕ್ಕೆ ಅವನ ಕಲೆ ಸುತ್ತಮುತ್ತ ಪ್ರಚಾರ ಪಡೆದು, ಬೇರೆ ಊರುಗಳವರು ಬಂದು ಕರೆದೊಯ್ಯುವಂತಾಯಿತು.

ಪಿಯುಸಿ ಪರೀಕ್ಷೆ ಮುಗಿಸಿ ಮೈಸೂರಿಂದ ಬಂದಾಗ, ಶೇಖರ ಮನೇಲೇ ಇರುತ್ತಿದ್ದ. ದೇವಸ್ಥಾನ, ತೇರಿನ ಬಣ್ಣ ಆಗಬೇಕು ಎಂದು ಯಾರಾದರೂ ಬಂದರೆ, ಅವರಿಗೊಂದು ದಿನಾಂಕ ಹೇಳಿ, ಅವತ್ತು ಬರುತ್ತೇನೆ ಎಂದು ಸಾಗಹಾಕುತ್ತಿದ್ದ. ಆದರೆ ಹೇಳಿದ ದಿನ ಅವನೆಂದೂ ಹೋಗುತ್ತಾ ಇರಲಿಲ್ಲ. ಆ ಊರಿನವರು ಮತ್ತೆ ಮತ್ತೆ ಬಂದು ಒತ್ತಾಯಿಸಬೇಕಾಗುತ್ತಿತ್ತು. ಹೇಳಿದ ದಿನವೇ ಹೋದರೆ ಸದರವಾಗಿ ಕಾಣುತ್ತಾರೆ. ಈತ ಕೆಲಸ ಇಲ್ಲದೆ ಬಂದಿದ್ದಾನೆ ಎಂದು ಹಗುರವಾಗಿ ಕಾಣುತ್ತಾರೆ. ಕೊಡಬೇಕಾದ ಹಣಕ್ಕೆ ಚೌಕಾಸಿ ಮಾಡುತ್ತಾರೆ' ಎಂದು ತಾಯಿ ಹೇಳಿದ ಸಮರ್ಥನೆ ಸರಿ ಎನ್ನಿಸಿತು. ಹಳ್ಳಿಗರ ವರ್ತನೆಗಳಿಗೆ ಅವರದ್ದೇ ಕಾರಣಗಳಿರುತ್ತವೆ. ಅದು ಹಾಗೇ ಇರಬಹುದು ಅಂದುಕೊಂಡೆ. ಆದರೆ, ನನಗೆ ಕಾಳಜಿ ಎನಿಸಿದ್ದು, ಅವನು ಪದೇ ಪದೇ ಹಿತ್ತಲಿಗೆ ಹೋಗಿ ಕೈ ತೊಳೆಯುತ್ತಿದ್ದ. ಶುಭ್ರವಾದ ಟವಲಿಂದ ಒತ್ತಿ ಒತ್ತಿ ತಿಕ್ಕಿ ಒಣಗಿಸಿಕೊಳ್ಳುತ್ತಿದ್ದ. ಕನಿಷ್ಠ ಇಪ್ಪತ್ತರಿಂದ ಮೂವತ್ತು ಬಾರಿ ಈ ರೀತಿ ಮಾಡುತ್ತಿದ್ದ. ಅದು ವಿಪರೀತವಾಯಿತು ಅನ್ನಿಸುತ್ತಿತ್ತು. ಅವನು ಮುಖೇಡಿ. ಯಾಕೋ ಹೀಗೆ ಅಂತ ಕೇಳಿದರೆ ತಪ್ಪು ತಿಳಿಯಬಹುದು. ಅಷ್ಟು ಹೊತ್ತಿಗಾಗಲೇ ಅವನು ಮನೆಯ ಅಟ್ಟವನ್ನು ತನ್ನ ಗುಹೆಯಾಗಿ ಮಾಡಿಕೊಂಡಿದ್ದ. ಸುಮ್ಮನೇ ಏನೋ ಒಂದು ಪೇಂಟ್ ಮಾಡುತ್ತಾ ಇರುವುದು. ಎಷ್ಟೋ ಜನ ಹೆಣಿಗೆಗೆ ಡಿಸೈನು, ಸೀರೆಯ ಅಂಚು, ಮೈಗೆ ಫ್ಯಾಬ್ರಿಕ್ ಪೇಂಟ್‌ನಿಂದ ಚಿತ್ತಾರ ಬಿಡಿಸಿ ಕೊಡುವ ಕೆಲಸ ಅವನಿಗೆ ವಹಿಸುತ್ತಿದ್ದರು. ಅಂಥ ಕೆಲಸದಲ್ಲಿ ಸದಾ ಅವನು ನಿರತನಾಗಿರುತ್ತಿದ್ದ.

ಆದರೂ ಅವನು ಪದೇಪದೇ ಆ ರೀತಿ ಕೈ ತೊಳೆದುಕೊಂಡು ಒರೆಸಿಕೊಳ್ಳುವ ರೀತಿ ಮಾತ್ರ ವಿಚಿತ್ರವೆನ್ನಿಸಿತು. ತಾಯಿಯ ಮುಂದೆ ರೇಗಿದೆ. ''ಅದೇನೋ ಸುಡುಗಾಡು ಪೇಂಟುಗಳು ಇರುತ್ತವಲ್ಲಪ್ಪ! ಕೈ ಅದ್ದಿ ಬಿಡತಾನೆ. ಒಗ್ಗೋದಿಲ್ಲ ಕೈ ಎಲ್ಲ ಉರಿಯುತ್ತೆ ಅಂತಾನೆ. ಒಂದಿಷ್ಟು ತಣ್ಣನೆ ನೀರು ಹಾಕ್ಕೊಂಡರೆ ಹಿತವಾಗಿರುತ್ತೆ. ಉರಿ ಇರೋದಿಲ್ಲ....'' ಇದು ಅವರ ವಿವರಣೆ. ಅದರಿಂದಾಗಿ ನನಗೂ ಕಾಳಜಿ ಎನ್ನಿಸಿತು. ಮರಳಿ ಡಿಗ್ರಿಗೆ ಸೇರಲೆಂದು ಮೈಸೂರಿಗೆ ಹೊರಟ ದಿನ, ನನ್ನನ್ನು ಕಳಿಸಲು ಬಸ್ ಸ್ಟ್ಯಾಂಡಿಗೆ ಬಂದವನಿಗೆ 'ಆ ದರಿದ್ರ ಪೇಂಟುಗಳಲ್ಲಿ ಕೈಯಾಡಿಸೋದು ಸ್ವಲ್ಪ ದಿನ ಬಿಟ್ಟು ಆರಾಮಾಗಿರು......' ಎಂದು ಬೈಯುತ್ತಲೇ ಬುದ್ಧಿವಾದ ಹೇಳಿ ಹೋದೆ.

ಡಿಗ್ರಿ ಸೇರಿದ ಮೊದಲ ವರ್ಷ ನಾನಾ ಕಾರಣಗಳಿಂದಾಗಿ ಊರಿಗೆ ಬಿಡುವಾಗಿ ಬರುವುದು ಸಾಧ್ಯವಾಗಲಿಲ್ಲ. ಬಂದರೂ ಹಬ್ಬ, ಹರಿದಿನ ಅಂತ ಒಂದು ದಿನದ ಮಟ್ಟಿಗೆ ಬಂದು ಹೋಗೋದು. ಎರಡನೇ ವರ್ಷದ ಮಿಡ್‌ಟರ್ಮ್ ರಜಾದ ಹೊತ್ತಿಗೆ ಬಂದಾಗ, ಆಘಾತಕಾರಿ ದೃಶ್ಯವೊಂದು ಕಣ್ಣಿಗೆ ಬಿತ್ತು. ಶೇಖರ ಕೈತೊಳೆಯುವುದು ವಿಪರೀತ ಜಾಸ್ತಿ ಆಗಿತ್ತು. ಅವನ ಎರಡೂ ಕೈಗಳು ಕುದಿಯುವ ನೀರಲ್ಲಿ ಅದ್ದಿ ತೆಗೆದ ಹಾಗೆ ಕೆಂಪಾಗಿರುತ್ತಿದ್ದವು. ಕೈಯಿಂದ ಊಟ ಮಾಡುವುದು ಕೂಡ ಅವನಿಗೆ ಸಾಧ್ಯವಿರಲಿಲ್ಲ. ಚಮಚದಿಂದ ಊಟ ಮಾಡಬೇಕಿತ್ತು. ಈ ನಡುವೆ ಇಬ್ಬರು ಅಣ್ಣಂದಿರ ಮದುವೆ ಆಗಿತ್ತು. ನನ್ನ ಓದು ಮುಗಿಯುವ ತನಕ ಮದುವೆಯ ಪ್ರಶ್ನೆಯೇ ಇರಲಿಲ್ಲ. ಶೇಖರನಿಗೆ ಮೇಲಿಂದ ಮೇಲೆ ಹೆಣ್ಣು ಕೊಡಲು ಜನ ಬರುತ್ತಿದ್ದರು. ಅವನು ಬಿಲ್ಕುಲ್ ಆಗುವುದಿಲ್ಲ ಎಂದು ಪಟ್ಟು ಹಿಡಿದಿದ್ದ. ಮದುವೆಯ ಸುದ್ದಿ ಯಾರಾದರೂ ಎತ್ತಿದರೆ ಅಲ್ಲಿಂದ ಮರೆಯಾಗುತ್ತಿದ್ದ. ಅಮ್ಮನೇ ಅವನನ್ನು ಹಿಡಿದು ಕೇಳಿದರೆ ಮದುವೆಗೆ ಒತ್ತಾಯಿಸಿದರೆ 'ಎಲ್ಲಾದರೂ ಓಡಿ ಹೋಗಿಬಿಡುತ್ತೇನೆ' ಎಂದು ಬೆದರಿಕೆ ಹಾಕಿದ್ದನಂತೆ. ಮಗನ ಮದುವೆ ಆಗದೇ ಇದ್ದರೂ ಚಿಂತೆ ಇಲ್ಲ, ಕಣ್ಣೆದುರಿಗಾದರೂ ಇರಲಿ ಎಂದು ಅವರು ಸುಮ್ಮನಾಗಿದ್ರು. ನಾನು ಬಿಡುವಾಗಿ ಹೋದಾಗ ಇದೆಲ್ಲ ಗೋಳು ತೋಡಿಕೊಂಡರು.

ನನಗೆ ತಿಳಿದ ಮಟ್ಟಿಗೆ ಅದು ಅಲರ್ಜಿ ಇರಬೇಕು ಅಂದುಕೊಂಡೆ. ಯಾರಾದರೂ ಸರಿಯಾದ ಡಾಕ್ಟರಿಗೆ ತೋರಿಸಿದರೆ ಸರಿಯಾಗುತ್ತದೆ ಎಂದೂ ಸಲಹೆ ಮಾಡಿದೆ. ಆ ಸಮಯಕ್ಕೆ ಅವನು ಹತ್ತು ನಿಮಿಷಕ್ಕೆ ಒಮ್ಮೆ ಎಂಬಂತೆ ಕಡ್ಡಾಯವಾಗಿ ಕೈತೊಳೆದುಕೊಳ್ಳುತ್ತಿದ್ದ. ತಣ್ಣಗಿನ ನೀರು ಸುರಿದುಕೊಂಡಾಗ ಹಾಯೆನಿಸುತ್ತಾ ಇತ್ತು. ಕೈ ಒಣಗುತ್ತಿದ್ದ ಹಾಗೆ ಮತ್ತೆ ಉರಿ, ಉರಿ. ಅವನಿಗೆ ಒಳ್ಳೆಯ ಡಾಕ್ಟರಿಗೆ ತೋರಿಸುವಂತೆ ತಾಕೀತು ಮಾಡುವುದು ಬಿಟ್ಟು ನಾನೇನೂ ಮಾಡುವಂಥ ಸ್ಥಿತಿಯಲ್ಲಿ ಇರಲಿಲ್ಲ.

ಮೈಸೂರಿಗೆ ಬಂದು ಆ ವಿಚಾರ ಮರೆತೇಬಿಟ್ಟೆ. ಒಂದು ದಿನ ಗೆಳೆಯ ಸುರೇಶನ ರೂಮಿಗೆ ಹೋಗಬೇಕಾಯಿತು. ಅವನು ಸೈಕಾಲಜಿಯ ವಿದ್ಯಾರ್ಥಿ. ತರಗತಿಯ ಪಾಠಕ್ಕೂ ಮಿಗಿಲಾಗಿ, ವಿಷಯ ಚೆನ್ನಾಗಿ ತಿಳಿದುಕೊಂಡವನು. ರೂಮಿಂದ ಎಲ್ಲ ಹೊರಗೆ ಬಂದ ಮೇಲೆ, ಇನ್ನೊಬ್ಬ ಗೆಳೆಯ ವಾಸೂಗೆ ಬೀಗ ಹಾಕಿಕೊಂಡು ಬರಲು ಹೇಳಿ, ನಾವು ಹೊರಗೆ ಕಾಯುತ್ತ ನಿಂತೆವು. ವಾಸು ಬರುವುದು ಕೊಂಚ ತಡವಾಯಿತು.

ವಾಸು ಬೀಗ ಸರಿಯಾಗೇ ಹಾಕಿರ್‍ತಾನೆ. ಆದರೆ ಅನುಮಾನ. ನಾಲ್ಕೈದು ಸಲ ಎಳೆದು ಪರೀಕ್ಷಿಸಿ, ಸ್ವಲ್ಪ ದೂರ ಬಂದ ಮೇಲೂ ಬೀಗ ಸರಿಯಾಗಿ ಹಾಕಿದ್ದೆನೋ ಇಲ್ಲವೋ ಅನ್ನಿಸ್ತಾ ಇರುತ್ತೆ. ಈಗ ಸುಮ್ಮನೆ ಬೀಗ ಸರಿಯಾಗಿ ಹಾಕಿದೆಯಾ? ಅಂತ ಹೇಳ್ತೀನಿ ನೋಡು ಮತ್ತೆ ಹೋಗಿ ನೋಡಿಕೊಂಡು ಬರ್‍ತಾನೆ' ಎಂದು ಹಾಗೇ ಮಾಡಿದ. ಸುರೇಶ ಹೇಳಿದಂತೆಯೇ ವಾಸು ಮತ್ತೆ ರೂಮಿನವರೆಗೆ ಹೋಗಿ ಬೀಗ ಜಗ್ಗಿ ನೋಡಿಕೊಂಡು ಬಂದ.

ದಾರಿಯುದ್ದಕ್ಕೂ ಅದರ ವಿಚಾರವೇ ಹೇಳುತ್ತಾ ಹೋದ. ಅಂತಹ ವರ್ತನೆಗೆ obsessive compulsive disorder ಅನ್ನುತ್ತಾರೆ. ಹಾಕಿದ ಬೀಗ ಸರಿಯಾಗಿದೆಯೇ ಇಲ್ಲವೊ ಎಂಬ ಅನುಮಾನ. ಮನೆ ಬಿಡುವಾಗ ಲೈಟ್ ಸ್ವಿಚ್, ಐರನ್ ಬಾಕ್ಸ್, ಸ್ಟೌ ಆರಿಸಿ ಬಂದೆನೋ ಇಲ್ಲವೋ ಎಂಬಂಥ ಅನುಮಾನ. ಹಾಗೆ ಅದು ಕಾಡಲು ದಟ್ಟವಾದಾಗ, ತೀರ ತಡೆಯಲಾಗದಿದ್ದರೆ ಹ್ಯಾಗಾದರೂ ಸರಿ ಒಂದು ಸಲ ಹೋಗಿ ನೋಡಿಕೊಂಡು ಬಂದೇ ಬಿಡೋಣ ಅಂತ ಹೊರಟೇ ಬಿಡ್ತಾರೆ. ನೋಟು ಎಣಿಸೋ ಚಟ. ಅದು ಸರಿಯಾಗಿ ಇರುತ್ತೆ. ಆದರೆ ಎಷ್ಟು ಸಲ ಎಣಿಸಿದರೂ ಅವರಿಗೆ ನಂಬಿಕೆ ಆಗೋದಿಲ್ಲ. ಅಂಥವರು ಹಳೇ ಪೇಪರು, ಬೇಡವಾದ ಚೀಟಿ ತುಂಬಿಕೊಳ್ತಾರೆ. ಮೇಜಿನ ಮೇಲೆ ಜೋಡಿಸಿಟ್ಟಿದ್ದು ಸರಿ ಇದ್ರೂ ಮತ್ತೆ ಮತ್ತೆ ಎಲ್ಲ ತೆಗೆದು ಜೋಡಿಸುತ್ತಾರೆ. ಕೆಲವು ಸಲ ಇದು ದೊಡ್ಡ ಗೀಳಾಗುತ್ತೆ. ಇನ್ನು ಕೆಲವರು ಇರ್‍ತಾರೆ ಗಳಿಗೆಗೊಂದು ಸಲ ಕೈತೊಳೆದುಕೋತಾರೆ, ಮುಖ ತೊಳಕೋತಾರೆ ಇಲ್ಲ ಸ್ನಾನ ಮಾಡಲೂಬಹುದು.

ಕೊನೆಯ ಮಾತು ಅವನು ಹೇಳಿದಾಗ ಹೃದಯದ ಬಡಿತ ಕ್ಷಣ ನಿಂತಿತು. ಶೇಖರನ ಸಣ್ಣದೊಂದು ಹವ್ಯಾಸಕ್ಕೆ ಮಾನಸಿಕ ಪ್ರೇರಣೆಗಳಿರಬಹುದು ಎಂಬ ಕಲ್ಪನೆಯೇ ನನಗೆ ಬಂದಿರಲಿಲ್ಲ. 'ಯಾಕೆ ಹಾಗೆ ತೊಳ್ಕೊಳ್ಳೋದು?' ನಾನು ಕುತೂಹಲಕ್ಕೆಂಬಂತೆ ಕೇಳಿದೆ.

'ಅದರ ಮಾನಸಿಕ ಹಿನ್ನೆಲೆ ಬೇರೆ ಇರುತ್ತೆ. ಆದರೆ, ಅವರಿಗೆ ಕೈ ಕೊಳೆಯಾಗಿದೆ, ಮುಖ ಸರಿಯಾಗಿ ತೊಳೆದಿಲ್ಲ, ಮೈ ಮೈಲಿಗೆ ಆಗಿದೆ, ಬೆವರು ವಾಸನೆ ಹೊಡೀತಾ ಇದೆ ಅಂತೆಲ್ಲ ಅನ್ನಿಸಬಹುದು.

ಹೀಗೆ ಹೇಳುತ್ತಾ ಹೋದಂತೆ ಮನಸ್ಸು ದಿಗಿಲುಗೊಂಡಿತು. ಶೇಖರನಿಗೆ ಅಲರ್ಜಿಯಾಗಲಿ, ಕೈ ಉರಿಯಾಗಲೀ ಇಲ್ಲ, ಅದೆಲ್ಲ ಅವನಾಗಿ ತಂದುಕೊಂಡ ವಿಪತ್ತು ಎಂಬುದು ಅರಿವಿಗೆ ಬರುತ್ತಿದ್ದಂತೆ ತಳಮಳ ಹೆಚ್ಚಾಯಿತು. ಸ್ವಲ್ಪಮಟ್ಟಿಗೆ ಈ ರೀತಿಯ ಆತಂಕದ ಗುಣ ತಾಯಿಯಲ್ಲಿ ಇದ್ದುದು ನನಗೆ ಗೊತ್ತು. ಸಾರಿಗೆ ಉಪ್ಪು ಹಾಕಿದೆನೋ ಇಲ್ಲವೋ ಎಂಬ ಅನುಮಾನ. ರಾತ್ರಿ ಮಲಗಿದಾಗ ಹಾಲಿಗೆ ಹೆಪ್ಪಿಟ್ಟದ್ದೇನೋ ಇಲ್ಲವೋ ಎಂದೆಲ್ಲ ಆಕೆ ಒದ್ದಾಡುತ್ತಾ ಇದ್ದುದು ನನಗೆ ತಿಳಿದಿತ್ತು. ಈಗ ಶೇಖರನಿಗೆ ಮದುವೆ ಮಾಡುವ ವಿಚಾರವಿತ್ತು. ಅವನು ಕೈನ ತೊಂದರೆಯಿಂದಾಗಿ ಮದುವೆ ಗಿದುವೆ ಯಾವುದೂ ಬೇಡವೆಂದು ಪಟ್ಟು ಹಿಡಿದಿದ್ದ. ಅವನ ಇಷ್ಟದ ಪೇಂಟಿಂಗ್ ಕೆಲಸ ಮಾಡುವುದೂ ಅಸಾಧ್ಯವಾಗಿಬಿಟ್ಟಿತ್ತು. ಅವತ್ತು ತುಂಬಾ ಹೊತ್ತು ಸುರೇಶನ ಬಳಿ ಮಾತಾಡಿ, ಶೇಖರನ ವಿಷಯ ಹೇಳಿದ ಮೇಲೆ ಆತ ಸಲಹೆ ನೀಡಿದ್ದು ''ತಕ್ಷಣ ತಮ್ಮನನ್ನು ಕರೆಸಿಕೋ. ಇಲ್ಲಿನ ಮೆಡಿಕಲ್ ಕಾಲೇಜಿನಲ್ಲಿ ಒಳ್ಳೆಯ ಡಾಕ್ಟರಿದ್ದಾರೆ. ಅವರಿಗೆ ಮುಂಚೆಯೇ ಹೋಗಿ ನಾವಿಬ್ಬರೂ ವಿಷಯ ತಿಳಿಸೋಣ ತಮ್ಮನಿಗೆ ಇಲ್ಲೊಬ್ಬರು ಇಂಥದ್ದಕ್ಕೆಲ್ಲ ಒಳ್ಳೆಯ ಚಿಕಿತ್ಸೆ ಕೊಡುವವರು ಇದ್ದಾರೆ ಎಂದು ಹೇಳಿ ಕರೆಸಿಕೋ....'' ಎಂದೆಲ್ಲ ಬುದ್ಧಿವಾದ ಹೇಳಿದ.

ಮರುದಿನವೇ ಡಾಕ್ಟರನ್ನು ಕಂಡೆವು. ಅವರು ನಮ್ಮ ಜೊತೆ ಕಾಳಜಿಯಿಂದ ಮಾತಾಡಿದರು. ''ಮೆದುಳಿನಲ್ಲಿ ಕೆಲವು ರಾಸಾಯನಿಕಗಳ ಏರುಪೇರಿನಿಂದಲೂ ಹೀಗಾಗುವುದು ಸಾಧ್ಯವಿದೆ. ಅದರ ನಿವಾರಣೆಗೆ ಸಾಕಷ್ಟು ಕ್ರಮಗಳನ್ನು ರೂಢಿಸಲಾಗಿದೆ ನಿಮ್ಮ ತಮ್ಮ ಬರಲಿ'' ಎಂದರು.


ಶೇಖರ ಅಷ್ಟು ಸುಲಭವಾಗಿ ಬರಲು ಒಪ್ಪಲಿಲ್ಲ. ತಾಯಿಯ ಒತ್ತಾಯಕ್ಕೆ ಅವಳನ್ನೂ ಜೊತೆಯಾಗಿ ಕರೆದುಕೊಂಡು ಬಂದ. ಅಷ್ಟು ಹೊತ್ತಿಗಾಗಲೇ ಅವನ ಕೈ ಎಷ್ಟು ಹಾಳಾಗಿತ್ತೆಂದರೆ ಬ್ಯಾಂಡೇಜಿನಿಂದ ಸುತ್ತಲಾಗಿತ್ತು. ನಾನು ಇದ್ದುದು ಹಾಸ್ಟೆಲಿನಲ್ಲಿ. ಸುರೇಶ ತನ್ನ ರೂಮಿನಲ್ಲೇ ಇರಲು ತಾಯಿ ಮತ್ತು ತಮ್ಮನಿಗೆ ಅವಕಾಶ ಮಾಡಿಕೊಟ್ಟ. ಶೇಖರನನ್ನು ತಮ್ಮನಿಗಿಂತ ಹೆಚ್ಚಾಗಿ ನೋಡಿಕೊಂಡ. ಡಾಕ್ಟರು ಆರಂಭಿಸಿದ ಚಿಕಿತ್ಸೆ ಪೂರ್ಣ ಫಲಕಾಣಲು ಹಲವಾರು ತಿಂಗಳೇ ಬೇಕಾಯಿತು. ಅವತ್ತು ಸುರೇಶ ಸಾಂದರ್ಭಿಕವಾಗಿ ಅಂಥದೊಂದು ಕಾಯಿಲೆ ಇರುತ್ತದೆ ಎಂದು ಹೇಳದೇ ಹೋಗಿದ್ದರೆ ಇದೆಲ್ಲ ಚಿಕಿತ್ಸೆ ಸಾಧ್ಯವೇ ಆಗುತ್ತಿರಲಿಲ್ಲ ಎಂದು ನನಗೆ ತಿಳಿದಿದೆ.

ಇದೆಲ್ಲ ಆಗಿ ಈಗ ಮೂರ್‍ನಾಲ್ಕು ವರ್ಷಗಳೇ ಆಗಿವೆ. ನಮ್ಮ ಶೇಖರ ಗುಣಮುಖವಾಗಿ ಮತ್ತೆ ಬ್ರಷ್ ಹಿಡಿದಿದ್ದಾನೆ. ಮದುವೆ ಆಗಿದ್ದಾನೆ. ಮದುವೆಗೆಂದು ಬಂದಿದ್ದ ಸುರೇಶನಿಗೆ ಚಿಕ್ಕದೊಂದು ಸುಂದರ ಪೇಂಟಿಂಗ್ ಕಾಣಿಕೆಯಾಗಿ ನೀಡಿದ್ದಾನೆ.

ನಮ್ಮ ಊರು ಹತ್ತಿರದ ಹೋಬಳಿ ಕೇಂದ್ರದಲ್ಲಿ ಹೊಸದಾಗಿ ಥಿಯೇಟರ್ ಆರಂಭವಾಯಿತು. ಅದರ ಹಜಾರದ ಗೋಡೆಗಳ ಮೇಲೆ ಶೇಖರನ ಪೇಂಟಿಂಗ್‌ಗಳಿವೆ. ಅದನ್ನು ನೋಡುತ್ತಾ ಬೆರಗಿನಿಂದ ಬಹಳಷ್ಟು ಜನ ''ಇದು ನಮ್ಮ ಶೇಖರಣ್ಣ ಬರೆದಿದ್ದು ಅಲ್ಲವಾ?'' ಎನ್ನುತ್ತಾರೆ.

■ ಚಿದಾನಂದ, ಅರಿಸಿನಕುಂಟೆ.

ಹೀಗೇ ಈ ಬದುಕು....



ಮಗುವಿನ ನಾಮಕರಣದ ಸಂಭ್ರಮ. ಹೆಸರಿಗಾಗಿ ಹುಡುಕಾಟ ನಡೆದಿತ್ತು. ನಾನು ಯಾವುದೇ ಹೆಸರು ಹೇಳಿದರೂ ನಮ್ಮವಳು ಏನಾದರೂ ಕೊಂಕು ತೆಗೆಯುತ್ತಿದ್ದಳು. ಉದ್ದ ಆಯಿತು, ತೀರಾ ಹಳೇ ಕಾಲದ್ದಾಯಿತು ಹೀಗೇ...

ಇದು ಮನೆಯಲ್ಲಿ ದಿನಗಟ್ಟಲೇ ನಡೆಯುತ್ತಾ ಹೋಯಿತು. ಕೊನೆಗೆ ಸ್ನೇಹಿತರು, ನೆಂಟರು ಎದುರಾದರೆ ಅವರು ಕೇಳುತ್ತಿದ್ದ ಮೊದಲ ಪ್ರಶ್ನೆ ಎಂದರೆ ''ಹೆಸರು ಸಿಕ್ಕಿತಾ?''

ಅಂಥ ಒಂದು ದಿನ ನಮ್ಮವಳ ಗೆಳತಿ ತನ್ನ ನಾಲ್ಕು ವರ್ಷದ ಮಗಳು ಮೇಘನಾ ಜೊತೆ, ಮಗು ಬಾಣಂತಿ ನೋಡಲು ಬಂದಿದ್ದಳು. ಸಹಜ ಮಾತು ಮಗುವಿನ ಹೆಸರಿನತ್ತ ಹೊರಳಿತು. ನನ್ನ ಹೆಂಡತಿ 'ಮಗೂಗೊಂದು ಸ್ವೀಟ್‌ನೇಮ್ ಇದ್ದರೆ ಹೇಳು' ಅಂದಳು. ಗೆಳತಿಯ ಮಗು ಥಟ್ಟಂತ ಉತ್ತರ ಹೇಳಿತು. 'ಜಾಮೂನ್ ಅಂತ ಹೆಸರು ಇಡಬಹುದಲ್ಲವಾ ಮಮ್ಮಿ. ನಂಗೆ ಜಾಮೂನ್ ಅಂದರೆ ತುಂಬಾ ಇಷ್ಟ ಅಲ್ಲವಾ?'

ಮುದ್ದು ಮುದ್ದಾಗಿ ಹೇಳಿದ ಮಗುವಿನ ಸಲಹೆ ಈಗ ಮನೆಯವರ ಪಾಲಿಗೆ ನಿಜವಾಗಿದೆ. ಸಿಟ್ಟು ಬಂದಾಗ, ಪ್ರೀತಿ ಹೆಚ್ಚಾದಾಗ ನಾವು ಮಗೂನ 'ಜಾಮೂನ್' ಅಂತಲೇ ಕರೆಯೋದು.

- ರಮಾಕಾಂತ, ಹಾಸನ.

ಮನೆಯವರು ಸುತ್ತಾಡುವುದು ಜಾಸ್ತಿ. ದಿನಗಟ್ಟಲೇ ಬೇರೆ, ಬೇರೆ ಊರುಗಳಿಗೆ ಹೋಗಿ ಬರಬೇಕಾಗುತ್ತದೆ. ಮನೆಯ ಪಾಮೆರಿನ್ ನಾಯಿ ರೋಸಿ ಅಂದರೆ ಅವರಿಗೆ ಜೀವ. ಪ್ರವಾಸದಿಂದ ಹಿಂದಿರುಗಿ ಬರುವಾಗೆಲ್ಲ ನಾಯಿಗೆಂದೇ ಬಿಸ್ಕತ್ತು, ಚೀಸ್ ಹೀಗೆ ಏನಾದರೊಂದು ತಂದೇ ತರುತ್ತಾರೆ. ಅವತ್ತೊಂದು ದಿನ ಅವರು ಪ್ರವಾಸದಿಂದ ಹಿಂದಿರುಗಿದಾಗ ರಾತ್ರಿ ತಡವಾಗಿತ್ತು. ಹಸಿದು ಬಂದಿದ್ದರೋ ಏನೋ! ಆದರೆ ಅಷ್ಟು ಹೊತ್ತಿನಲ್ಲಿ ಏನಾದರೂ ಮಾಡಿಕೊಡುವ ತಾಳ್ಮೆಯೂ ನನಗಿರಲಿಲ್ಲ.

ಅವರು ಬಟ್ಟೆ ಬದಲಿಸಿ, ಕೈಕಾಲು ಮುಖ ತೊಳೆದು ಬರುವ ಹೊತ್ತಿಗೆ ನಾನು ಹಾಸಿಗೆ ಸೇರಿದ್ದೆ. ಬಂದು ಜೊತೆ ಸೇರಿದ ಇವರು ಕೆನ್ನೆ, ಕುತ್ತಿಗೆ ಎಲ್ಲ ನೇವರಿಸುತ್ತಾ ಇರುವಾಗ ಬೇಕೆಂದೇ ನಿದ್ದೆ ಬಂದವಳ ಹಾಗೆ ನಟಿಸಿದೆ. ಕೊನೆಗೆ ಅವರು ಮನಸ್ಸು ತಡೆಯದೇ ಕಿವಿಯ ಬಳಿ ಮುಖ ತಂದು ಹೆಸರು ಹಿಡಿದು ಕರೆದು ಎಚ್ಚರಿಸಿದರು. ಎಚ್ಚರಾದವಳ ಮುಂದೆ ತೀರಾ ಮೆಲುದನಿಯಲ್ಲಿ ''ಬ್ರೆಡ್ಡೋ, ಬಿಸ್ಕತ್ತೋ ಏನಾದರೂ ಇದೆಯಾ?'' ಎಂದು ಕೇಳಿದಾಗ ನನಗಂತೂ ಹೊಟ್ಟೆಯೇ ಉರಿದ ಹಾಗಾಯಿತು. ಹಸಿದು ಬಂದಿದ್ದವರಿಗೆ, ಉಪಚಾರಕ್ಕಾದರೂ ಏನಾದರೂ ಬೇಕಾ? ಅಂತ ಕೂಡ ಕೇಳಿರಲಿಲ್ಲ. ಸರಸರನೆ ಎದ್ದು ಬ್ರೆಡ್, ಹಾಲು ತಂದು ಕೊಟ್ಟೆ.

ಪತಿರಾಯರು ಎರಡನ್ನೂ ಹಿಡಿದುಕೊಂಡು, ರೋಸಿ ಇರುತ್ತಿದ್ದ ನಾಯಿಯ ಮನೆಗೆ ಹೋಗಿ ಪ್ರೀತಿಯಿಂದ ಕರೆದು, ಬಟ್ಟಲಲ್ಲಿ ಹಾಲು ಹಾಕಿ, ಬ್ರೆಡ್ ತುಂಡು ಮಾಡಿ ಅದರಲ್ಲಿ ಹಾಕುತ್ತಾ ಹೋದರು.

ಹಿಂದೆಯೇ ಹೋಗಿ ನಿಂತವಳನ್ನು ತಲೆ ಎತ್ತಿ ನೋಡುತ್ತಾ ''ಹೊತ್ತಾಗಿಬಿಟ್ಟಿತ್ತು, ರೋಸೀಗೆ ಏನೂ ತರೋಕಾಗಲಿಲ್ಲ..'' ಎಂದು ತಪ್ಪು ಮಾಡಿದವರಂತೆ ಹೇಳುವಾಗ ನಗಬೇಕೋ! ಅಳಬೇಕೊ! ತಿಳಿಯದಾಯಿತು.

- ಶಾರದಾ ನಾಗರಾಜ್, ಬೆಂಗಳೂರು.

ನಮ್ಮ ಆಫೀಸಿನಲ್ಲಿ ಎಲ್ಲರನ್ನೂ ಅವರ ಇನಿಷಿಯಲ್ಸ್‌ನಿಂದ ಕರೆಯುವುದು ರೂಢಿ. ಆ ಕಾರಣಕ್ಕೆ ಬಾಸ್ ಜಿ.ಎ. ನಾರಾಯಣ ಮೂರ್ತಿ ಗ್ಯಾನ್ ಆದರೆ, ಸೂಪರಿಂಟೆಂಡೆಂಟ್ ಎಂ.ಎ. ನಾಗರಾಜ್ ಮ್ಯಾನ್ ಆಗಿದ್ದರು. ಉಳಿದವರ ಹೆಸರು ಹೀಗೆ ಹೊಂದಾಣಿಕೆ ಆಗುತ್ತಿರಲಿಲ್ಲ. ಅವರನ್ನು ಎಸ್‌ಡಿ, ಆರ್‌ಜಿ ಮುಂತಾಗಿ ಕರೆಯುವ ಪರಿಪಾಠ.

ಒಂದು ದಿನ ನಮ್ಮ ಆಫೀಸಿಗೆ ನಳಿನಿ ಎಂಬಾಕೆ ಬಾಸ್‌ನ ಪಿಎ ಆಗಿ ಬಂದರು. ಅನಂತರ ಆಕೆಯ ಇನಿಷಿಯಲ್ ಬಿ.ಯು. ಎಂದೂ ತಿಳಿಯಿತು. ನಾವು ನಮ್ಮ ನಮ್ಮಲ್ಲಿ ಮಾತಾಡುವಾಗ 'ಬನ್' ಎಂದು ಹೇಳಿಕೊಂಡರೂ, ಆಕೆಯ ಎದುರು ಹಾಗೆ ಹೇಳಲು ಅಳುಕು.

ಅದು ಹೇಗೋ ನಳಿನಿಗೆ ಈ ವಿಚಾರ ತಿಳಿಯಿತು. ಮಧ್ಯಾಹ್ನದ ಊಟದ ವೇಳೆ 'ಇದು ತೀರಾ ಅನ್ಯಾಯ' ಎಂದು ಮಾತೆತ್ತಿದಳು. ''ನೀವು ಅನಂತ ಮೂರ್ತಿನಾ ಬರೀ ಎ.ಎಂ. ಅಂತೀರ. ಅವರ ಇನಿಷಿಯಲ್ ಜೆ.ಜ್ಯಾಮ್ ಅಂತ ಯಾಕೆ ಕರೆಯೋದಿಲ್ಲ? ನನ್ನ ಮಾತ್ರ ಬನ್ ಅಂತ ಕರೀತೀರ'' ಎಂದು ತಕರಾರು ತೆಗೆದಳು.

ಅವತ್ತಿಂದ ಬನ್ ಮತ್ತು ಜ್ಯಾಮ್ ರೂಢಿಗೆ ಬಂದವು ಅದಕ್ಕಿಂತ ವಿಚಿತ್ರ ಎಂದರೆ ಇತ್ತೀಚೆಗೆ ಬನ್ ಮತ್ತು ಜ್ಯಾಂ ಹತ್ತಿರ ಬಂದಿವೆ.

- ಪಿ.ಆರ್. ಬೆಂಗಳೂರು.

ಅಪ್ಪನ ಹತ್ತಿರ ಒಂದು ಬೆತ್ತ ಇತ್ತು. ಬೆಳ್ಳಿ ಹಿಡಿಕೆಯ ಅದನ್ನು ಅವರು ವಾಕಿಂಗ್ ಸ್ಟಿಕ್ ಆಗಿ ಉಪಯೋಗಿಸುತ್ತಿದ್ದರು. ಆ ಬೆತ್ತ ಬೇಕು ಅಂತ ನನ್ನ ಇಬ್ಬರು ಮಕ್ಕಳಲ್ಲಿ ಯಾವಾಗಲೂ ಜಗಳ ಆಗುತ್ತಿತ್ತು. ತೀರ್ಪಿಗಾಗಿ ಅವರು ಅಜ್ಜನ ಬಳಿಯೇ ಹೋಗುತ್ತಿದ್ದರು. ಅವರು ಏನಾದರೊಂದು ಸಮಾಧಾನ ಮಾಡಿ ಕಳುಹಿಸುತ್ತಿದ್ದರು. ಮುಖ್ಯ; ಚಾಕಲೇಟ್, ಕಲ್ಲು ಸಕ್ಕರೆ ಹೀಗೆ ಏನಾದರೊಂದು ದೊರೆಯುತ್ತಿತ್ತು. ಬೆತ್ತ ಯಾರಿಗೆ ಸೇರಬೇಕು ಎಂದು ನಿರ್ಧಾರವಾಗದಿದ್ದರೂ, ಲಾಭವಂತೂ ಆಗುತ್ತಿತ್ತು.

ಒಂದು ದಿನ ಜಗಳ ಜೋರಾಯಿತು. ಅಪ್ಪನಿಗೂ ರೇಗಿ 'ನಾನು ಸತ್ತ ಮೇಲೆ ನಿಮಗೆ ತಾನೇ ಇದು?' ಎಂದುಬಿಟ್ಟರು.

''ಇಬ್ಬರಿಗೂ ಒಂದೇ ಬೆತ್ತ ಹ್ಯಾಗೆ ಸೇರೊಕ್ಕೆ ಸಾಧ್ಯ? ಮುರೀಬೇಕು ಅಷ್ಟೇ..'' ಒಬ್ಬನ ವಾದ. ಅಜ್ಜನಿಗೂ ತಾನು ಹೇಳಿದ್ದು ಅತಿಯಾಯಿತು ಅನ್ನಿಸಿರಬೇಕು. ''ಅದಕ್ಕೊಂದು ಉಪಾಯ ಮಾಡೋಣ. ಸತ್ತ ದಿನದ ತಾರೀಖು 1,3,5 ಹೀಗೆ ಬೆಸ ಆದರೆ ಬೆತ್ತ ದೊಡ್ಡವನಿಗೆ. 2,4,6 ಹೀಗೆ ಸಮ ಆದರೆ ಬೆತ್ತ ಚಿಕ್ಕವನಿಗೆ....''

ಇದಾದ ಸ್ವಲ್ಪ ದಿನಕ್ಕೆ ಅಪ್ಪ ಹಾರ್ಟ್ ಆಟ್ಯಾಕ್ ಆಗಿ ಆಸ್ಪತ್ರೆ ಸೇರಿದರು. ಮನೇಲಿ ತೀರಾ ಆತಂಕ. ಆಸ್ಪತ್ರೆಗೆ ಯಾರೂ ಹೋಗಿ ತೊಂದರೆ ಕೊಡಬಾರದು ಅಂತ ಡಾಕ್ಟರು ಹೇಳಿದ್ದರು.

ಅವರು ಸ್ವಲ್ಪ ಚೇತರಿಸಿಕೊಂಡ ಮೇಲೂ ಮನೆಯವರಿಗೆ ಕಳವಳ. ಕೆಲವು ಅಪಶಕುನದವರು ಮಾತ್ರ 'ಇನ್ನು ಅವರು ಉಳಿಯೋದಿಲ್ಲ ಬಿಡಿ' ಅಂತೆಲ್ಲ ಮಾತಾಡಿಕೊಂಡಿದ್ದು ಚಿಕ್ಕವನ ಕಿವಿಗೆ ಬಿದ್ದಿತ್ತು. ಅದೇ ದಿನ ಅಜ್ಜನ್ನ ನೋಡಲು ಅವನನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆಸ್ಪತ್ರೇಲಿ ಅಜ್ಜನ ಹಾಸಿಗೆ ಏರಿದ ಅವನು ಕಕ್ಕುಲತೆಯಿಂದ ಅಜ್ಜನ ಗಲ್ಲ ಹಿಡಿದು

''ಅಜ್ಜಾ, ನೀನಿವತ್ತು ಸಾಯೋದಿಲ್ಲ ಅಲ್ಲವಾ?'' ಎಂದ.

''ಇಲ್ಲಪ್ಪ, ಖಂಡಿತಾ ಸಾಯಲ್ಲ.. ಯಾಕೆ?'' ಎಂದು ನಗುನಗುತ್ತಾ ಅವರು ಕೇಳಿದರು.

ಇಂಥವರು ಹೀಗೆ ಮಾತಾಡುತ್ತಾ ಇದ್ದರು ಎಂದು ಬಾಯಿಬಿಟ್ಟ ಅವನು

'ನೋಡು ನೀನು ಇವತ್ತು ಸತ್ತರೆ ಬೆತ್ತ ನನಗೆ ಸಿಗೋದಿಲ್ಲ. ಇವತ್ತು ತಾರೀಕು ಹನ್ನೊಂದು'' ಎಂದು ಬಿಡುವುದೇ.

■ ವೀರಣ್ಣ. ಹಡಗಲಿ

ಅಸಾಮಾನ್ಯ ಕೀಟ ಇರುವೆ



ಸಾಲೋಮನ್ ದೊರೆ ಬುದ್ಧಿವಂತ. ಆತ ಮೈಗಳ್ಳರಿಗೆ ಒಮ್ಮೆ ಹೇಳಿದ್ದ 'ಮೈಗಳ್ಳರೇ ಇರುವೆಗಳ ಬಳಿ ಹೋಗಿ ಅವುಗಳನ್ನು ನೋಡಿ ಯಾದರೂ ಬುದ್ಧಿ ಕಲಿಯಿರಿ. ಅವಕ್ಕೆ ಮಾರ್ಗದರ್ಶಕನಿಲ್ಲ, ಮೇಲ್ವಿಚಾರಕನಿಲ್ಲ, ಆಳುವವನೂ ಇಲ್ಲ ಆದರೂ ಮಳೆಗಾಲಕ್ಕೆ ಆಹಾರ ಉಳಿಸಿಕೊಂಡಿರುತ್ತವೆ. ಸುಗ್ಗಿಯ ಕಾಲಕ್ಕೆ ಸಂಗ್ರಹಿಸಿಡುತ್ತವೆ, ಇದು ಬೈಬಲಿನ ಹಳೆ ಒಡಂಬಡಿಕೆಯಲ್ಲಿ ಬರುವ ಮಾತು. ಅದು ಕಟ್ಟುಕತೆ ಎಂದೇ ಕೀಟ ಶಾಸ್ತ್ರಜ್ಞರು ನಂಬಿದ್ದರು. 1829ರಲ್ಲಿ ಬ್ರಿಟಿಷ್ ಅಧಿಕಾರಿಯೊಬ್ಬ ಇರುವೆಗಳ ಬಗ್ಗೆ ಪುಣೆಯಲ್ಲಿ ಅಭ್ಯಾಸ ನಡೆಸಿ, ಸಾಲೋಮನ್ ದೊರೆ ಸಾವಿರಾರು ವರ್ಷದ ಹಿಂದೆ ಹೇಳಿದ್ದು ಸತ್ಯಸ್ಯಸತ್ಯ ಎಂದಾಗ ವಿಜ್ಞಾನ ಪ್ರಪಂಚಕ್ಕೇ ಬೆರಗು. ಮುನ್ನೂರಾ ಐವತ್ತು ದಶಲಕ್ಷ ವರ್ಷಗಳಿಂದಲೂ ಭೂಮಿಯ ಮೇಲೆ ಬದುಕುತ್ತಾ ಬಂದ ಈ ಕೀಟ ಅತ್ಯಂತ ಯಶಸ್ವೀ ಜೀವಿ. ನಾವು ಸಾಮಾನ್ಯವಾಗಿ ನೋಡುವ ಸಣ್ಣ ಇರುವೆಯಿಂದ ಹಿಡಿದು ಮಧ್ಯ ಅಮೇರಿಕಾದ ಕಾಡುಗಳಲ್ಲಿನ ಒಂದು ಅಂಗುಲ ಉದ್ದದ ಪನಾಮ ಇರುವೆಯವರೆಗೂ ನಾನಾ ಬಗೆಯ ಇರುವೆಗಳಿವೆ. ಕೀಟ ಶಾಸ್ತ್ರಜ್ಞರು ಜೇನ್ನೊಣ, ಕೆಂಜಿಗ ಮತ್ತು ಇರುವೆ ಹಾಗೂ ಗೊದ್ದಗಳನ್ನು ಒಂದೇ ಪ್ರಬೇಧ ಎಂದು ಗುರುತಿಸುತ್ತಾರೆ. ಇವುಗಳಲ್ಲಿ 1,115,000 ವಿವಿಧ ಜಾತಿಯ ಕೀಟಗಳಿವೆ.

ಇರುವೆಯಂತೆ ದುಡಿಯಲು ಹಿರಿಯರು ಬುದ್ಧಿವಾದ ಹೇಳುವುದುಂಟು. ನಮ್ಮ ಜಾನಪದ ಕತೆಗಳಲ್ಲಿ ಉಪಕಾರ ಸ್ಮರಣೆಯಿಂದ ರಾಗಿ, ಸಾಸಿವೆ ಬೇರೆ ಮಾಡಿಕೊಡುವ, ಸೂಕ್ತ ಸಮಯಕ್ಕೆ ದಾರಿ ತೋರಿಸಿ ನಾಯಕನನ್ನು ಪಾರು ಮಾಡುವ ಇರುವೆಗಳು ಬರುತ್ತವೆ. ಪಾಪಿಲಾನ್‌ನಂಥ ಕಾದಂಬರಿಯಲ್ಲಿ ಮನುಷ್ಯನನ್ನೇ ಮುತ್ತಿ ಕೊಲ್ಲಬಲ್ಲ ಇರುವೆಗಳು ಮಧ್ಯ ಅಮೆರಿಕಾದಲ್ಲಿ ಇವೆ ಎಂಬ ವಿವರ ಬರುತ್ತದೆ. ಇದಕ್ಕೆ ಸಾಕ್ಷ್ಯಾಧಾರಗಳು ಇದುವರೆಗೂ ದೊರೆತಿಲ್ಲ.

ನಾವು ಸಾಮಾನ್ಯವಾಗಿ ಆಹಾರ, ಸತ್ತ ಕೀಟ, ಹಣ್ಣಿಗೆ ಮುತ್ತುವ ಇರುವೆಗಳನ್ನು ನೋಡುತ್ತೇವೆ. ಕೆಲವು ಸಾತ್ವಿಕ ಜನ ಇರುವೆ ಗೂಡುಗಳ ಬಳಿ ಸಕ್ಕರೆ, ರವೆ ಹಾಕುತ್ತಾರೆ. ನಾವು ಕಾಣುವುದು ಇರುವೆಯ ಒಂದು ವರ್ಗ ಮಾತ್ರ. ಗೂಡೊಳಗೆ ನಾನಾ ಬಗೆಯ ನಿರಂತರ ಚಟುವಟಿಕೆ ನಡೆಯುತ್ತಾ ಇರುತ್ತದೆ. ಯಂತ್ರಗಳ ಹಾಗೆ ಇರುವೆಗಳು ಅವುಗಳ ಕಾರ್ಯ ನಿರ್ವಹಿಸುತ್ತಾ ಹೋಗುತ್ತದೆ.

ಅರ್ಜೆಂಟಿನಾದಂಥ ಕಡೆ ಇರುವೆಗಳ ದಂಡುಗಳು ಎಕರೆಗಟ್ಟಲೆ ಜಾಗದಲ್ಲಿ ಭೂಮಿಯೊಳಗೆ ಗೂಡು ಕಟ್ಟುತ್ತವೆ. ಅದೊಂದು ಅದ್ಭುತ ನಗರಿಯ ಹಾಗೆ. ಅಂಥದೊಂದು ವಸತಿ ನಿರ್ಮಾಣಕ್ಕೆ ಇರುವೆಗಳಂಥ ಅತಿ ಪುಟ್ಟ ಪ್ರಾಣಿಗಳು ಒಂದು ಎಕರೆ ಪ್ರದೇಶದಲ್ಲಿ ಹದಿನಾರು ಟನ್‌ನಷ್ಟು ಮಣ್ಣು ಭೂಮಿಯ ಆಳದಿಂದ ಎತ್ತಿ ಹೊರ ಹಾಕುತ್ತವೆ. ಒಂದು ಗೂಡಲ್ಲಿ ಲಕ್ಷಗಟ್ಟಲೇ ಇರುವೆಗಳಿರುವುದು ಸಾಮಾನ್ಯ. ದೊಡ್ಡ ಗೂಡಲ್ಲಿ ಇಪ್ಪತ್ತು ದಶಲಕ್ಷ ಇರುವೆಗಳು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಬಾಳುತ್ತಿದ್ದರೂ ಆಶ್ಚರ್ಯ ಪಡಬೇಕಿಲ್ಲ ಐವತ್ತು ಲಕ್ಷ ಜನಸಂಖ್ಯೆಯ ಬೆಂಗಳೂರಲ್ಲಿ ಜನ ಬಾಳುವುದು ದುಸ್ತರವೆನಿಸುತ್ತಿರುವ ಇಂದಿನ ಹಿನ್ನೆಲೆಯಲ್ಲಿ ಇರುವೆಗಳ ಸಂಘಟಿತ ಬದುಕು, ಎರಡು ಕೋಟಿಯಷ್ಟು ಇರುವೆಗಳು ಒಂದಿಷ್ಟು ಕಿರಿಕಿರಿ ಇಲ್ಲದೆ ಬಾಳುವುದು ನಿಜಕ್ಕೂ ಅದ್ಭುತ ಅಲ್ಲವೇ?

ಅತ್ಯಂತ ಶೀತ ಪ್ರದೇಶಗಳಲ್ಲಿ ಮೈನಸ್ 30^0 ಸೆಂಟಿಗ್ರೇಡ್ ತಾಪಮಾನ ಇರುವೆಡೆ ಬದುಕುವ ಇರುವೆ ಹಾಗೆ ಅತ್ಯಂತ ಸುಡುವ 48.9^0. ಸೆಂಟಿಗ್ರೇಡ್ ತಾಪಮಾನದ ಪ್ರದೇಶದಲ್ಲೂ ಬದುಕಿ ಉಳಿದಿದೆ.

ಕಪ್ಪಿರುವೆ, ಕೆಂಪಿರುವೆ, ಮರಗಳಲ್ಲಿರುವ ಕೆಂಜಿಗ, ಜೇನ್ನೊಣ, ಗೆದ್ದಲು ಎಲ್ಲವುಗಳ ಬದುಕೂ ಸರಿ ಸುಮಾರು ಒಂದೇ ರೀತಿ. ಆಹಾರಗಳಲ್ಲಿ ಮಾತ್ರ ಅಲ್ಪ ಸ್ವಲ್ಪ ವ್ಯತ್ಯಾಸ.

ಇಂಥ ಕೀಟಗಳ ಗೂಡಿಗೆಲ್ಲ ಒಂದು ರಾಣಿ ಇರುತ್ತದೆ. ಆದರ ಕೆಲಸ ಬರೀ ಮೊಟ್ಟೆ ಇಡುತ್ತಾ ಹೋಗುವುದು. ಇಂಥ ಸಂತಾನ ಕ್ರಿಯೆಗೆ ಪೂರಕವಾಗಿ ಗಂಡಿರುವೆಗಳು ಇರುತ್ತವೆ. ಸಾವಿರವಲ್ಲ, ಲಕ್ಷಾಂತರ ಮೊಟ್ಟೆ ಇಡುತ್ತಾ ಹೋಗುತ್ತದೆ ರಾಣಿ.

ಜೀವಲೋಕದಲ್ಲಿ ಜೀವಿಯ ಗಾತ್ರ ಸಣ್ಣದಾದಷ್ಟು ಸಂತಾನ ಭಾಗ್ಯ ಜಾಸ್ತಿ ಇರುತ್ತದೆ. ಗಂಡಿನ ಕೆಲಸ ಸಂತಾನ ಕರುಣಿಸುವುದು. ರಾಣಿಯ ಕೆಲಸ ಮೊಟ್ಟೆ ಇಡುತ್ತಾ ಹೋಗುವುದು. ಅದರ ಪೋಷಣೆ, ಮರಿಗಳನ್ನು ಪಾಲಿಸುವ ಗೋಜೂ ಅದಕ್ಕಿಲ್ಲ, ಆ ಕೆಲಸ ಮಾಡಲು ದಾದಿ ಇರುವೆಗಳಿರುತ್ತವೆ. ಹಾಲು ಉತ್ಪಾದಿಸುವ ಗೌಳಿ ಇರುವೆಗಳಿರುತ್ತವೆ. ಇವುಗಳ ಕೆಲಸ ಎಂದರೆ ಗಿಡಹೇನು (ಅಫಿಡ್ಸ್)ಗಳನ್ನು ತಂದು ಒತ್ತೆಯಾಳುಗಳಂತೆ ಇಟ್ಟುಕೊಂಡು ಅವುಗಳು ನೀಡುವ ಹಾಲು ಬಳಸುವುದು. ಗೂಡಿನೊಳಗೆ ಸಂತಾನೋತ್ಪತ್ತಿ, ಅವುಗಳ ಪಾಲನೆ ಪೋಷಣೆ ಭರಾಟೆಯಿಂದ ಈ ಎಲ್ಲ ಇರುವೆಗಳಿಂದ ನಡೆಯುತ್ತಾ ಇದ್ದರೆ, ಇಡೀ ಗೂಡಿನ ಜೀವಿಗಳಿಗೆ ಅಗತ್ಯವಾದ ಆಹಾರ ಸಂಗ್ರಹಕ್ಕೆ ಕಾರ್ಮಿಕ, ಗುಲಾಮ ಕೀಟಗಳಿರುತ್ತವೆ. ಸತ್ತ ಪ್ರಾಣಿ, ಕೀಟ, ಎಲೆ, ಮರ, ಕಾಂಡ, ಕೊಳೆತ ಗೊಬ್ಬರ, ಕಾಳು, ಹಣ್ಣು ಹೀಗೆ ನಾನಾ ಮೂಲ ಹುಡುಕಿ ಗೂಡಿಗೆ ಹೊತ್ತೊಯ್ಯುವ ಕೆಲಸ ಇವುಗಳದು. ಆಹಾರ ಪತ್ತೆ ಆದ ಕೂಡಲೇ ಅದು ಕಂಡ ಇರುವೆ ಸ್ರವಿಸುವ ರಾಸಾಯನಿಕದಿಂದಾಗಿಯೇ ಸಂದೇಶ ರವಾನೆಯಾಗುತ್ತದೆ. ಸಾಲುಗಟ್ಟಿ ಇರುವೆಗಳ ದಂಡು ಹೊರಡುತ್ತದೆ. ಹೋಗುವ, ಬರುವ ಇರುವೆಗಳು ಮುಖಾಮುಖಿಯಾಗಿ ಸ್ಪರ್ಶದ ಮೂಲಕವೇ ಮಾರ್ಗ ಸರಿಯಾಗಿದೆಯೇ ಇಲ್ಲವೇ ಎಂದು ಸಂವಹಿಸುತ್ತವೆ. ಇದು ಸಾಲದೆಂಬಂತೆ ಹಲವು ಬಗೆಯ ಶಿಲೀಂದ್ರಗಳನ್ನು ಗೂಡಿನಲ್ಲೇ ತಯಾರಿಸುವ ಇರುವೆಗಳ ದಂಡೊಂದು ಇರುತ್ತದೆ. ಆಹಾರಕ್ಕೆ ಜೊಲ್ಲು ಬೆರೆಸಿ ಅವುಗಳಲ್ಲಿ ಶಿಲೀಂದ್ರ (fungus) ಬೆಳೆಸುತ್ತಾ ಹೋಗುವುದೇ ಇವುಗಳ ಕೆಲಸ.

ಸಾಮಾನ್ಯವಾಗಿ ಗುಲಾಮ ಇರುವೆಗಳು ಕುರುಡಾಗಿರುತ್ತವೆ. ರಾತ್ರಿಯ ಹೊತ್ತೇ ಇವುಗಳ ಸಂಚಾರ. ಉದುರಿಬಿದ್ದ ಎಲೆಗಳ ಕೆಳಗೆ ಹರಿಯುತ್ತಾ ವಹಿಸಿದ ಕೆಲಸ ಅಚ್ಚುಕಟ್ಟಾಗಿ ಮಾಡುತ್ತವೆ. ಇಂಥ ಗುಲಾಮರನ್ನು ಬೇರೆ ಗೂಡುಗಳಿಂದ ಹೊತ್ತು ತರಲೆಂದೇ ಒಂದು ಇರುವೆ ದಂಡು ಇರುತ್ತವೆ.

ಇಷ್ಟಾಗಿ ನಮ್ಮಲ್ಲಿನ ಹಾಗೇ ಇಲ್ಲಿ ಕಳ್ಳ ಮತ್ತು ಭಿಕ್ಷುಕ ಇರುವೆಗಳು ಇರುತ್ತವೆ. ಇವುಗಳಿಗೆ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಕದಿಯುವುದು, ಯಾರೂ ಇಲ್ಲದ ಹೊತ್ತಿನಲ್ಲಿ ಮನೆಯ ಮುಸುರೆ ಪಾತ್ರೆಗೆ ಮುಗಿಬಿದ್ದು ಹೊಟ್ಟೆ ತುಂಬಿಸಿಕೊಳ್ಳುವುದು ಅನಿವಾರ್ಯ. ಇದಲ್ಲದೇ ಜೇನು ದುಡಿದು, ಸಂಗ್ರಹಿಸಿ ಇಟ್ಟುಕೊಳ್ಳುವ ಇರುವೆಗಳೂ ಇವೆ. ಹೂವುಗಳಲ್ಲಿ ಇರುವ ಜೇನು ಕುಡಿದು ಕುಡಿದು ಇವುಗಳ ಹೊಟ್ಟೆ ಬಲೂನಿನ ಹಾಗೆ ಉಬ್ಬಿರುತ್ತವೆ. ತಿಂಗಳುಗಟ್ಟಲೇ ಹೀಗೆ ಸಂಗ್ರಹಿಸಿದ ಜೇನನ್ನು ಹೊಟ್ಟೆಯೊಳಗೆ ಹೊತ್ತು ತಿರುಗುತ್ತವೆ. ಇವು ಗೌಳಿಗ ಇರುವೆಗಳು ಗಿಡಕ್ಕಂಟುವ ಹೇನುಗಳನ್ನು ಹೊತ್ತು ತರಲು ತೆನೆಗಳಿಗೆ ಲಗ್ಗೆ ಹಾಕಿ, ಅದರ ಪರಾಗ ಸ್ಪರ್ಶಕ್ಕೆ ಸಹಕಾರಿ ಆದ ಹಾಗೇ, ಜೇನು ಸಂಗ್ರಹಿಸುವ ಇರುವೆ ಹೂವಿನಿಂದ ಹೂವಿಗೆ ನಡೆಯುತ್ತಾ ಪರಾಗ ಸ್ಪರ್ಶ ನಡೆಸುತ್ತವೆ.

ಒಂದೆಡೆ ಸತ್ತ ಪ್ರಾಣಿ, ಕೀಟಗಳನ್ನು ತಿಂದು ಬದುಕುವ ಇರುವೆ ಪ್ರಕೃತಿಯ ಜಾಡಮಾಲಿ. ಇನ್ನೊಂದೆಡೆ ಪರಾಗ ಸ್ಪರ್ಶಕ್ಕೆ ನೆರವಾಗುವ ಸಹಕಾರಿ. ಇನ್ನೊಂದು ಅದ್ಭುತ ಸಂಗತಿ ಎಂದರೆ, ಗೂಡಲ್ಲಿ ಸಂಗ್ರಹಿಸಿದ ಕಾಳು ಮೊಳಕೆಯೊಡೆದರೆ ಅದನ್ನು ಬೇರ್ಪಡಿಸಿ ತಂದು ಗೂಡಿಂದ ಹೊರಗೆ ಎಸೆಯುತ್ತವೆ. ಮೊಳಕೆಯೊಡೆದ ಕಾಳು ಇನ್ನೊಂದು ಸಸ್ಯವಾಗಿ ತಲೆ ಎತ್ತುತ್ತದೆ.

ಇರುವೆಗಳದು ಅದ್ಭುತ ಪ್ರಪಂಚ. ಅವುಗಳಿಗೆ ರಾಜನಿಲ್ಲ. ಹೀಗೆ ಮಾಡಿ ಎಂದು ಹೇಳುವ ಮೇಸ್ತ್ರಿ ಇಲ್ಲ. ಸೋಮಾರಿಯಾದರೆ, ಕೆಲಸ ತಪ್ಪಿಸಿದರೆ ಶಿಕ್ಷೆ ವಿಧಿಸುವ ನ್ಯಾಯಾಧೀಶ, ಪೋಲೀಸು ಯಾರೂ ಇಲ್ಲ. ಆದರೂ ಸಣ್ಣ ಗೂಡೊಳಗೆ ಲಕ್ಷಾಂತರ ಇರುವೆಗಳು ಸತತ ಚಟುವಟಿಕೆಯಿಂದ ವ್ಯವಸ್ಥಿತವಾಗಿ ಬದುಕುತ್ತವೆ. ತಮ್ಮ ಬಾಳು ನಡೆಸುತ್ತಲೇ ಪ್ರಕೃತಿಯ ನಿರಂತರತೆಗೆ ನೆರವಾಗುತ್ತವೆ. ಮನುಷ್ಯ ಇದರಿಂದ ಕಲಿಯಬಹುದಾದ ಪಾಠ ಬಹಳ ದೊಡ್ಡದು.

■ ಶೇಷಗಿರಿ ಜೋಡಿದಾರ್.

ವಿಚಿತ್ರ ಜಗತ್ತು




ಆಗಸ್ಟ್ ತಿಂಗಳು ಪಾಶ್ಚಿಮಾತ್ಯರಿಗೆ ಬೇಸಿಗೆ. ಶ್ರೀಮಂತರಿಗೆ ಏರ್ ಕಂಡೀಷನ್ ತಂಪು. ಬಹಳಷ್ಟು ಜನ ಗಿರಿಧಾಮಗಳಿಗೆ ಹೋಗುತ್ತಾರೆ. ಬಡವರೇನು ಮಾಡಬೇಕು! ಬೇಗೆಗೆ ಪರಿಹಾರ ಏರ್‌ಕಂಡೀಷನರ್. ಅದನ್ನು ಕದಿಯುವುದೇ ಈಗ ಅಲ್ಲೊಂದು ಉದ್ಯೋಗವಾಗಿದೆ. ಕನ್ಸಾಸ್ ನಗರ ಒಂದರಲ್ಲೇ 40ಕ್ಕೂ ಹೆಚ್ಚು ಏರ್ ಕಂಡೀಷನರ್‌ಗಳು ಕಳುವಾಗಿವೆ. ಮನೆ, ಅಂಗಡಿಗಳಿಂದ ಇರಲಿ, ಚರ್ಚು, ಶಾಲೆಗಳ ಏರ್‌ಕಂಡೀಷನರ್‌ಗಳಿಗೂ ಈಗ ಕುತ್ತು ಬಂದಿದೆ.

★ ★ ★

ಮದುವೆ ಆಗುತ್ತಿದ್ದ ಹಾಗೇ ಡೈವೋರ್ಸ್! ಇದೇನು ವಿಚಿತ್ರ ಅನ್ನಬೇಡಿ. ಹೀಗೆ ರಿಯಾದ್‌ನಲ್ಲಿ ನಡೆದಿದೆ. ಮದುವೆ ಆಯಿತು. ರಿಸೆಪ್ಷನಿಗೆ ಗಂಡು-ಹೆಣ್ಣು ಕುಳಿತಿದ್ದರು. ಬಂದವರು ನರ್ತನ ಆರಂಭಿಸಿದರು. ಕುಣಿಯುತ್ತಿದ್ದವರಲ್ಲಿ ಗಂಡಿನ ತಾಯಿಯೂ ಇದ್ದಳು. ಇದನ್ನು ಕಂಡ ಹೆಣ್ಣು ನಕ್ಕು ಗೇಲಿ ಮಾಡಿದಳು. ಇದರಿಂದ ಕೆರಳಿದ ಗಂಡು, ಆಗಷ್ಟೇ ಮದುವೆಯಾಗಿದ್ದ ಹೆಣ್ಣಿಗೆ ತಲಾಖ್ ಹೇಳಿಬಿಟ್ಟ.

★ ★ ★



ಬೆಲ್ಗ್ರೇಡ್ ಮೃಗಾಲಯದ ಪಾಲಕಿ ಇತ್ತೀಚೆಗೆ ನಡೆದ ಸೂರ್ಯ ಗ್ರಹಣ ವೀಕ್ಷಿಸಲು ರಕ್ಷಕ ಕನ್ನಡಕ ಧರಿಸಿದ್ದಂತೆ ಮೃಗಾಲಯದ ಜೊವಾನ್ ಎಂಬ ಚಿಂಪಾಂಜಿಗೂ ಕನ್ನಡಕ ತೊಡಿಸಿದ್ದಳು



ಪಾಕೀಸ್ತಾನದ ಪ್ರಧಾನಿ ನವಾಜ್ ಶರೀಫ್ ಕೆಳಗಿಳಿಯುವಂತೆ ನಡೆಸಿದ ಪ್ರದರ್ಶನದಲ್ಲಿ ಪಾಲ್ಗೊಂಡ ತಾಯಿ ಮಗುವಿನ ತಲೆಯುಡೆಗೆಯಲ್ಲೂ ಧಿಕ್ಕಾರದ ಬರಹ

ಪಕ್ಕದ ತೋಟದಲ್ಲಿ ರಾತ್ರಿಯಿಡೀ ಪ್ರೀತಿ ಮಾಡುವ ಆಮೆ ದಂಪತಿಗಳ ಸದ್ದಿನಿಂದ ನಿದ್ದೆ ಬರುತ್ತಿಲ್ಲ ಎಂದು ದೂರಿದವನನ್ನು ಇಟಲಿಯ ನ್ಯಾಯಾಲಯ ಇಕ್ಕಟ್ಟಿಗೆ ಸಿಕ್ಕಿಸಿದೆ. ಆಮೆಗಳು ಸಾರ್ವಜನಿಕವಾಗಿ ಪ್ರೀತಿಸುವುದನ್ನು ತಡೆಯಲು ಸಾಧ್ಯವಿಲ್ಲ. ಬಹಿರಂಗ ಕಾಮಕೇಳಿಯ ಜಾಲ ರೂಪಿಸಿವೆ ಎಂದೂ ಶಿಕ್ಷಿಸುವಂತಿಲ್ಲ ಎಂದು ನ್ಯಾಯಾಲಯ ತೀರ್ಪಿತ್ತಿದೆ. ದೂರು ನೀಡಿದವನ ನಿದ್ದೆಯೂ ಹಾಳು. ದುಡ್ಡೂ ದಂಡ.

★ ★ ★

ಹಂಗೆರಿಯ ಮಹಿಳೆಯೊಬ್ಬಳು ತನ್ನ ಇಪ್ಪತ್ತನೆಯ ಮಗುವಿಗೆ ಜನ್ಮ ನೀಡಿ ಮಹಾತಾಯಿ ಎನಿಸಿದ್ದಾಳೆ. ಧಾರ್ಮಿಕ ಕಾರಣಕ್ಕೆ ಇನ್ನು ಮುಂದೆಯೂ ಹೀಗೆಯೇ ಮಕ್ಕಳನ್ನು ಹೆರುತ್ತಾ ಹೋಗುವುದಾಗಿ ಕೂಡ ಆಕೆ ತಿಳಿಸಿದ್ದಾಳೆ. ನಲವತ್ಮೂರು ವರ್ಷದ ಆಕೆಯ ಹಿರಿಯ ಮಗನಿಗೆ 26 ವರ್ಷ. ಏಳುಕೋಣೆಗಳ ಬುಡಾಪೆಸ್ಟ್‌ನಲ್ಲಿರುವ ಮನೆ ಸಾಲ ಕೂಡ ತೀರಿಲ್ಲ ಬಟ್ಟೆ ಒಗೆಯಲು ಓಬೀರಾಯನ ಕಾಲದ ವಾಷಿಂಗ್ ಮಷೀನು.

ಪೂಜಿ ಎಂಬ ಈ ಮಹಾತಾಯಿಯ ಗಂಡನನ್ನು ಬಡವ ಎನ್ನಬೇಕೇ! ಶ್ರೀಮಂತ ಎನ್ನಬಹುದೇ?

★ ★ ★

ಬ್ರುನೇಯಿ ತೈಲ ಸಂಪತ್ತಿನ ಶ್ರೀಮಂತ ದೇಶ. ಅಲ್ಲೀಗ ಗಂಡಂದಿರು ಹೆಂಡತಿಗೆ ಕೈಕೊಟ್ಟು ಪಾರಾಗುವಂತಿಲ್ಲ. ಹೆಂಡತಿ ಸರಿಯಾಗಿ ನೋಡಿಕೊಳ್ಳದೇ ಇದ್ದರೆ ದಂಡ, ಸಂಬಳ ಸ್ಥಗಿತ, ಕೊನೆಗೆ ಸೆರೆವಾಸ ಶಿಕ್ಷೆ ವಿಧಿಸಲೂ ಕಾನೂನು ಜಾರಿಗೆ ಬಂದಿದೆ.

ಈ ಮುಂಚೆ ಏಳುಸಾವಿರ ಡಾಲರ್ ತಿಂಗಳಿಗೆ ದುಡಿಯುವ ಗಂಡಂದಿರು ಹೆಂಡತಿ ಜೀವನ ನಿರ್ವಹಣೆಗೆ ಕೇವಲ ಇನ್ನೂರು ಡಾಲರ್ ನೀಡಿದ್ದರೆ ಸಾಕಿತ್ತು. ಉಳಿದದ್ದೆಲ್ಲ ಅವರು ಮೋಜು ಮಜಾಕ್ಕೆ ವಿನಿಯೋಗ ಆಗುತ್ತಿತ್ತು. ಹೊಸಕಾನೂನಿಂದ ಇದಕ್ಕೆ ಕಡಿವಾಣ ಬಿದ್ದಿದೆ.

★ ★ ★

ಬಲ್ಗೇರಿಯಾದ ಜನತೆಗೆ ಗ್ರಹಣ ವೀಕ್ಷಣೆಗೂ ಗ್ರಹಣ ಬಡಿಯಿತು. ಬುಧವಾರ ನಡೆದ ಖಗ್ರಾಸ ಸೂರ್ಯಗ್ರಹಣದ ಚಿತ್ರ ತೋರಿಸುವ ಬದಲು ಟಿವಿ ಸ್ಕ್ರೀನುಗಳು ಖಾಲಿಯಾದವು. ವಿವರಣೆ ನೀಡಲು ತೋಚದೇ ಸುಮ್ಮನಾದ ವಿವರಣೆಕಾರನ ಮುಖ ದಂಗುಬಡಿದಂತೆ ನೋಡುತ್ತಾ ಕೂರಬೇಕಾದ ಸ್ಥಿತಿ.

ಇದಕ್ಕೆ ಕಾರಣವೇನೆಂದು ಪತ್ರಿಕೆಯೊಂದು ಪತ್ತೆ ಮಾಡಿದೆ. ಟಿವಿ ಕ್ಯಾಮರಾ ಬೀಡುಬಿಟ್ಟಿದ್ದ ಜಾಗದಲ್ಲಿ ಸಿನಿಮಾ ಚಿತ್ರೀಕರಣ ನಡೆಯುತ್ತಿತ್ತು. ಅಲ್ಲೊಂದು ಬಿಸಿಬಿಸಿ ಪ್ರೇಮ ದೃಶ್ಯದ ಚಿತ್ರಣ. ಮಂಕು ಹಿಡಿದ ಸೂರ್ಯನತ್ತ ಕ್ಯಾಮರಾ ತಿರುಗಿಸುವ ಬದಲು, ಇವರೆಲ್ಲ ಪ್ರೇಮ ದೃಶ್ಯದ ಬಿಸಿಯನ್ನು ವೀಕ್ಷಿಸುವುದರಲ್ಲೇ ಮಗ್ನರಾಗಿದ್ದರಂತೆ.

■

ಕ್ಷಮಿಸಿ, ಸ್ವಲ್ಪ ಪೆನ್ ಕೊಡ್ತೀರಾ?



'ಕ್ಷಮಿಸಿ, ಸ್ವಲ್ಪ ಪೆನ್ ಕೊಡ್ತೀರಾ?' ಹೌದು, ಈ ಪ್ರಶ್ನೆಯನ್ನು ಪ್ರತಿಯೊಬ್ಬರೂ ತಮ್ಮ ಜೀವಮಾನದಲ್ಲಿ ಒಮ್ಮೆಯಾದರೂ ಕೇಳಿರುತ್ತಾರೆ ಎಂಬುದು ನನ್ನ ದೃಢವಾದ ನಂಬಿಕೆ. ಒಂದು ವೇಳೆ ನೀವು ಯಾರ ಬಳಿಯೂ ಈ ಪ್ರಶ್ನೆ ಕೇಳಿಲ್ಲದೆ ಇರಬಹುದು. ಆದರೆ ಇನ್ನೊಬ್ಬರು ನಿಮಗೆ ಕೇಳಿರುವ ಸಾಧ್ಯತೆ ಇರಬಹುದು. ಒಟ್ಟಿನಲ್ಲಿ ''ಕ್ಷಮಿಸಿ, ಸ್ವಲ್ಪ ಪೆನ್‌ಕೊಡ್ತೀರಾ?'' ಎಂಬ ಪ್ರಶ್ನೆಯನ್ನು ಒಂದೋ ನಿಮ್ಮ ನಾಲಿಗೆ, ಇಲ್ಲವೇ ನಿಮ್ಮ ಕಿವಿ ಕೇಳಿರುತ್ತದೆ.

ಈ ಪ್ರಶ್ನೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಕೇಳ್ತಾರೆ. ನನ್ನ ಅನುಭವದ ಪ್ರಕಾರ ಕನ್ನಡದಲ್ಲಿ ಯಾರೂ ''ಕ್ಷಮಿಸಿ'' ಎಂಬ ಪೀಠಿಕೆಯೊಂದಿಗೆ ಪೆನ್ನು ಕೇಳುವುದಿಲ್ಲ. 'ಕ್ಷಮಿಸಿ, ಸ್ವಲ್ಪ ಪೆನ್ ಕೊಡ್ತೀರಾ?' ಎನ್ನುವುದು ಇಂಗ್ಲೀಷಿನ "Excuse me, May I use your pen?'' ಎಂಬುದರ ಅನುವಾದ. ಇಂಗ್ಲಿಷಿನಲ್ಲಿ ಹೀಗೆ ಕೇಳುವಾಗ ಕೇಳುವವರ ಧ್ವನಿಯಲ್ಲಿ ಭಾರೀ ವಿನಯ ಮತ್ತು ಕೊಂಚ ಸಂಕೋಚವೂ ಇರುತ್ತದೆ. ಆದರೆ, ಭಾರತೀಯರಾದ ನಮಗೆ ಇನ್ನೊಬ್ಬರ ಬಳಿ ಬೇಡುವುದಕ್ಕೆ ನಾಚಿಕೆ ಇಲ್ಲ. ಹೀಗಾಗಿ ನಾವು ಯಾವುದೇ ಪೀಠಿಕೆ ಇಲ್ಲದೆ, ಬೇಡುವುದು ನಮ್ಮ ಜನ್ಮಸಿದ್ಧ ಹಕ್ಕು ಎಂಬಂತೆ 'ಸ್ವಲ್ಪ ಪೆನ್ ಕೊಡಿ' ಅಂತೇವೆ. ಇನ್ನು ಕೆಲವರು ಸ್ವಲ್ಪ ಎಂಬ ಪದವನ್ನು ಬಿಟ್ಟು ಸ್ವಲ್ಪವೂ ವಿನಯವಿಲ್ಲದೆ ಒರಟಾಗಿ 'ಪೆನ್ ಕೊಡಿ' ಅಂತ ಪೆನ್ನು ಕೇಳುತ್ತಾರೆ. ಉಹುಂ, ಪೆನ್ನು ಕೀಳುತ್ತಾರೆ!

ಎಲ್ಲೋ ಕೆಲವರು ಪಾಶ್ಚಾತ್ಯರ ಪ್ರಭಾವದಿಂದಲೋ ಎಂಬಂತೆ ಸ್ವಲ್ಪ ನಯವಾಗಿ ಪೆನ್ನು ಕೇಳುವುದುಂಟು. ಆಗಲೂ ಅವರು ''ಕ್ಷಮಿಸಿ, ಸ್ವಲ್ಪ ಪೆನ್ ಕೊಡ್ತೀರಾ?'' ಅನ್ನುವುದಿಲ್ಲ. ''ಕ್ಷಮಿಸಿ'' ಅನ್ನುವ ಬದಲು ಕೆಮ್ಮಿ ''ಸ್ವಲ್ಪ ಪೆನ್ ಕೊಡ್ತೀರಾ?'' ಅಂತಾರೆ.

''ನೀರೆಗಿಂತ ಸೀರೆ ಭಾರ'' ಎಂಬಂತೆ ಮುಖ್ಯ ವಿಷಯವನ್ನು ಬಿಟ್ಟು 'ಪೆನ್ನು ಕೇಳುವಾಗ ಕ್ಷಮಿಸಿ ಅಂತಾರೆಯೇ ಇಲ್ಲವೆ' ಎಂಬ ಬಗ್ಗೆ ತುಸು ಹೆಚ್ಚಾಗಿ ಕೊರೆದದ್ದಕ್ಕೆ ದಯವಿಟ್ಟು ಕ್ಷಮಿಸಿ. ಇನ್ನು ಮುಂದೆ, ''ಸ್ವಲ್ಪ ಪೆನ್ ಕೊಡ್ತೀರಾ?'' ಎಂಬ ಪ್ರಶ್ನೆಯನ್ನು ಯಾರು, ಯಾರಿಗೆ, ಯಾವಾಗ, ಯಾಕೆ ಕೇಳುತ್ತಾರೆ ಎಂದು ಸಂದರ್ಭ ಸಹಿತವಾಗಿ ವಿವರಿಸಲು ಪ್ರಯತ್ನಿಸುತ್ತೇನೆ. ಈ ಪ್ರಶ್ನೆಯನ್ನು ಪೆನ್ನಿಲ್ಲದವರು ಪೆನ್ನು ಇರುವವರಿಗೆ, ಪೆನ್ನು ಬೇಕು ಅನ್ನಿಸಿದಾಗ, ಪೆನ್ನು ಪಡೆದುಕೊಳ್ಳಲು, ಕೇಳುತ್ತಾರೆ ಎಂದು ಯಾರಾದರೂ ಒಂದೇ ವಾಕ್ಯದಲ್ಲಿ ಉತ್ತರಿಸಿದರೆ ಅವರು ತುಂಬಾ ಭೋಳೆ ಸ್ವಭಾವದವರು ಅನ್ನಬಹುದು. ಯಾಕೆ ಅಂತೀರಾ? ಹಾಗಾದರೆ ಕೇಳಿ. ವೇಳೆ ಎಷ್ಟೆಂದು ಕೇಳುವವರೆಲ್ಲಾ ವಾಚಿಲ್ಲದವರಲ್ಲ. ಹಾಗೆಯೇ, ಪೆನ್ನು ಕೊಡ್ತೀರಾ ಅನ್ನುವವರೆಲ್ಲ ಪೆನ್ನಿಲ್ಲದವರಲ್ಲ. ಕಾಲೇಜು, ಕಚೇರಿಗಳಲ್ಲಿ, ಯುವಕರು ತಾವು ಮೆಚ್ಚುವ ಯುವತಿಯರನ್ನು ಮಾತನಾಡಿಸಲು ಒಂದು ಕುಂಟು ನೆಪವಾಗಿ ಈ ಪ್ರಶ್ನೆಯನ್ನು ಕೇಳುವುದುಂಟು. ಅಂಥವರಿಗೆ ಪೆನ್ನು ಕೊಟ್ಟರೆ ಅವರು ಬರೆಯುವುದಿಲ್ಲ. ಕೊರೆಯಲು ಶುರು ಮಾಡುತ್ತಾರೆ. ''ಥ್ಯಾಂಕ್ಸ್ ತುಂಬಾ ಚೆನ್ನಾಗಿದೆ'' ಎಂದು ಹೇಳಿ ಯುವತಿಯ ಪ್ರತಿಕ್ರಿಯೆ ಧನಾತ್ಮಕವಾಗಿದ್ದಲ್ಲಿ ''ಪೆನ್ನು ಚೆನ್ನಾಗಿದೆ ನಿಮ್ಮ ಹಾಗೆ'' ಅಂತಲೂ ಅನ್ನಬಹುದು. ಈ ರೀತಿಯಾಗಿ ''ಸ್ವಲ್ಪ ಪೆನ್ ಕೊಡ್ತೀರಾ?'' ಎಂಬ ಪುಟ್ಟ ಪ್ರಶ್ನೆಯೊಂದಿಗೆ ಆರಂಭವಾಗುವ ಹುಡುಗ ಹುಡುಗಿಯ ಪರಿಚಯ ಕ್ರಮೇಣ ಸ್ನೇಹಕ್ಕೆ ತಿರುಗಿ, ನಂತರ ಪ್ರೇಮಕ್ಕೆ ಬಡ್ತಿಪಡೆದು ಕೊನೆಗೆ ಆತ್ಮಹತ್ಯೆ ಎಂಬ ಟ್ರಾಜಿಡಿಯಲ್ಲೋ ಅಥವಾ ಮದುವೆ ಎಂಬ ಇನ್ನೊಂದು ಟ್ರಾಜಿಡಿಯಲ್ಲೋ ಕೊನೆಗೊಳ್ಳುವುದನ್ನು ನೀವು ನೋಡಿರಬಹುದು. ಜೀವನದಲ್ಲಿ ಅಲ್ಲವಾದರೆ ಕನ್ನಡ ಸಿನಿಮಾಗಳಲ್ಲಿಯಾದರೂ ಕಂಡಿರಬಹುದು. ಆದ್ದರಿಂದ ಸುಂದರ ಯುವತಿಯರೇ, ಹುಷಾರಾಗಿರಿ, ''ಸ್ವಲ್ಪ ಪೆನ್ ಕೊಡ್ತೀರಾ'' ಎಂದು ಕೇಳುವ ಯುವಕರ ಮನಸ್ಸಿನೊಳಗೆ ''ಸ್ವಲ್ಪ ಹೃದಯ ಕೊಡ್ತೀರಾ?'' ಎಂಬ ಭಾವನೆಯೂ ಇರಬಹುದು.

ಎಲ್ಲೋ ಕೆಲವರು ಪಾಶ್ಚಾತ್ಯರ ಪ್ರಭಾವದಿಂದಲೋ ಎಂಬಂತೆ ಸ್ವಲ್ಪ ನಯವಾಗಿ ಪೆನ್ನು ಕೇಳುವುದುಂಟು. ಆಗಲೂ ಅವರು ''ಕ್ಷಮಿಸಿ, ಸ್ವಲ್ಪ ಪೆನ್ ಕೊಡ್ತೀರಾ?'' ಅನ್ನುವುದಿಲ್ಲ. ''ಕ್ಷಮಿಸಿ'' ಅನ್ನುವ ಬದಲು ಕೆಮ್ಮಿ ''ಸ್ವಲ್ಪ ಪೆನ್ ಕೊಡ್ತೀರಾ?'' ಅಂತಾರೆ

ನನ್ನ ಕಾಲೇಜು ಸಹಪಾಠಿಯೊಬ್ಬನಿಗೆ ಹೆಣ್ಣು ಮಕ್ಕಳ ಬಳಿ ಪೆನ್ನು ಕೇಳುವ ಚಟ ಇತ್ತು. ನೋಡಲು ಸ್ವಲ್ಪ ಚೆನ್ನಾಗಿರುವ ಹುಡುಗಿ ಕಣ್ಣಿಗೆ ಬಿದ್ದರೆ ಸಾಕು, ಆತ

ಮುಲಾಜಿಲ್ಲದೆ ''ಸ್ವಲ್ಪ ಪೆನ್ನು ಕೊಡ್ತೀರಾ?'' ಅನ್ನುತ್ತಿದ್ದ. ಆಕೆ ಪೆನ್ನು ಕೊಟ್ಟರೆ ಕಿಸೆಯಿಂದ ಚೀಟಿ ತೆಗೆದು ನನ್ನ ಬಳಿ ''ಈಗ ಹೇಳಯ್ಯಾ - 24615 ಅಲ್ಲವಾ?'' ಎಂದು ಸುಳ್ಳುಸುಳ್ಳೇ ನನ್ನ ಫೋನ್ ನಂಬರ್ ಬರೆದುಕೊಳ್ಳುವಂತೆ ಅಥವಾ 4th main, 5th cross ಎಂದು ವಿಳಾಸ ಬರೆದುಕೊಳ್ಳುವವನಂತೆ ನಟಿಸಿ, 'ಥ್ಯಾಂಕ್ಸ್' ಎಂದು ಹಲ್ಲುಗಿಂಜಿ ಪೆನ್ನು ವಾಪಾಸು ಕೊಡುತ್ತಿದ್ದ. ಈ ನನ್ನ ಮಿತ್ರನಿಗೆ ಹುಡುಗಿಯರು ಕೇಳಿದ ತಕ್ಷಣ ಮಾತಾಡದೆ ಪೆನ್ನು ಕೊಟ್ಟರೆ ಕೊಂಚ ನಿರಾಸೆಯಾಗುತ್ತಿತ್ತು. ಬದಲಿಗೆ ಹುಡುಗಿಯರು ಪೆನ್ನಿದ್ದರೂ "Sorry, ಪೆನ್ ಇಲ್ಲಾರಿ'', ಅಂದರೆ ತುಂಬಾ ಖುಷಿಪಡುತ್ತಿದ್ದ. ಯಾಕೆಂದರೆ ಅವನಿಗೆ ಬೇಕಾದ್ದು ಪೆನ್ನಲ್ಲ, ಆ ಹೆಣ್ಣಿನ ಮಂಜುಳ ಧ್ವನಿ.

ಇನ್ನು ನಿಜವಾಗಿ ಪೆನ್ನು ಕೇಳುವವರ ವಿಷಯಕ್ಕೆ ಬರೋಣ. ಇಂಥವರು ನಮಗೆ ಹೆಚ್ಚಾಗಿ ಅಂಚೆಕಛೇರಿ, ಬ್ಯಾಂಕು, ಟೆಲಿಫೋನ್ ಬೂತ್ ಮುಂತಾದ ಸಾರ್ವಜನಿಕ ಪ್ರದೇಶಗಳಲ್ಲಿ ಗಂಟು ಬೀಳುತ್ತಾರೆ. ಒಬ್ಬ ವ್ಯಕ್ತಿ ನಿಮ್ಮ ಬಳಿ ''ಪೆನ್ನು ಕೊಡಿ'' ಎಂಬುದನ್ನು ಯಾವ ರೀತಿಯಲ್ಲಿ ಕೇಳುತ್ತಾರೆ ಎಂಬುದು ಆಯಾವ್ಯಕ್ತಿಯ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಪೆನ್ನು ಮರೆತು ಬರುವವರು ಗಡಿಬಿಡಿ ಸ್ವಭಾವದವರು. ಹೀಗಾಗಿ ಅಂಥವರು ''ಸ್ವಲ್ಪ ಪೆನ್ ಕೊಡ್ತೀರಾ'' ಎಂದು ರಾಗ ಎಳೆಯುವುದಿಲ್ಲ. ಅವಸರದಲ್ಲಿ ಚುಟುಕಾಗಿ ''ಪೆನ್ ಕೊಡಿ'' ಅಂತಾರೆ. ನಿಮಗೆ ಅರ್ಥವಾಗದೆ ''ಏನು?'' ಅಂದರೆ ಇನ್ನೊಮ್ಮೆ ''ಪೆನ್ನು ಕೊಡಿ'' ಎಂದು ಕೇಳುವಷ್ಟು ತಾಳ್ಮೆ ಇವರಿಗೆ ಇರುವುದಿಲ್ಲವಾದ್ದರಿಂದ ''ಪೆನ್ನು'' ಎಂದಷ್ಟೇ ಹೇಳಿ ಸೀದಾ ನಿಮ್ಮ ಜೇಬಿಗೆ ಕೈ ಹಾಕುತ್ತಾರೆ.

ನಾನು ಗಮನಿಸಿದಂತೆ, ಕಾಲೇಜು ವಿದ್ಯಾರ್ಥಿಗಳನ್ನು ಹೊರತುಪಡಿಸಿದರೆ, ಸಾಮಾನ್ಯವಾಗಿ ಗಂಡಸರು ಗಂಡಸರ ಬಳಿ, ಹೆಂಗಸರು ಹೆಂಗಸರ ಬಳಿ ಮತ್ತು ವಯಸ್ಸಾದವರು ವಯಸ್ಸಾದವರ ಹತ್ತಿರವೇ ಪೆನ್ನು ಕೇಳುತ್ತಾರೆ. ಆದರೆ, ಪೆನ್ನು ಕೇಳುವವರು ಹಿಂದೂ, ಮುಸ್ಲಿಂ, ದಲಿತ, ಮೇಲ್ವರ್ಗದವ ಎಂಬ ಭೇದ ಭಾವ ತೋರುವುದಿಲ್ಲ. ನಮ್ಮ ಜನರು ಈ ಸಂದರ್ಭದಲ್ಲಾದರೂ ನಿಜವಾದ ಜಾತ್ಯಾತೀತ ಮನೋಭಾವ ಮತ್ತು ಭಾವೈಕ್ಯವನ್ನು ಪ್ರದರ್ಶಿಸುತ್ತಾರೆ ಎಂಬುದು ನಾವೆಲ್ಲ ಸಂತೋಷಪಡಬಹುದಾದ ಸಂಗತಿ.

''ಸ್ವಲ್ಪ ಪೆನ್ ಕೊಡ್ತೀರಾ?'' ಎಂದು ಕೇಳುವವರು ನಮ್ಮನ್ನು ಶೋಕ ಸಾಗರದಲ್ಲಿ ಮುಳುಗಿಸುವ ಸಂದರ್ಭಗಳೂ ಬರಬಹುದು. ಒಮ್ಮೆ ನನ್ನ ಬಳಿ ಪೆನ್ನು ಕೇಳಿದವನೊಬ್ಬ ಅದು ಸರಿಯಾಗಿ ಬರೆಯದಿದ್ದಾಗ ''ಥತ್ ಎಂಥಾ ಪೆನ್ ಇಟ್ಕೊಂಡಿದೀರ್ರಿ?'' ಎಂದು ನನಗೆ ದಬಾಯಿಸಿದ. ಮಾತ್ರವಲ್ಲ, ಆ ಇಂಕ್ ಪೆನ್ನನ್ನು ನನ್ನೆದುರೇ ನಾಲ್ಕಾರು ಸಲ ಜೋರಾಗಿ ಕೊಡವಿ, ಬಿಳಿ ಜುಬ್ಬಾ ಪೈಜಾಮಾ ಧರಿಸಿ ಕವಿಗೋಷ್ಠಿಗೆ ಹೊರಟಿದ್ದ ನನ್ನ ಉಡಿಗೆಯ ಮೇಲೆ ನೀಲಿ ರಂಗೋಲಿ ಮೂಡಿಸಿದ್ದ. ನನಗೆ ಆತನ ಕತ್ತು ಹಿಸುಕಬೇಕೆಂಬಷ್ಟು ಕೋಪ ಬಂದಿತ್ತಾದರೂ ಅವನ ಬಾಡಿಯನ್ನು ನೋಡಿ ಸುಮ್ಮನಾದೆ. ಅದೇ ಉಡಿಗೆಯಲ್ಲಿ ಕವಿಗೋಷ್ಠಿಗೆ ಹೋಗಿ ''ನಾನು ಬರೆಯುತ್ತೇನೆ ಕನ್ನಡ ಶಾಯಿರಿ, ಅದಕ್ಕೆ ನನ್ನ ಅಂಗಿ ತುಂಬಾ ಶಾಯಿರೀ'' ಎಂಬ ಚುಟುಕ ಓದಿ ಸಮಾಧಾನ ಪಟ್ಟುಕೊಂಡೆ.

ಅಂಚೆ ಕಛೇರಿಯಲ್ಲಿ ಒಮ್ಮೆ ಒಬ್ಬಳು ಚೆಲುವೆ ನನ್ನ ಬಳಿ ಬಳುಕುತ್ತಾ ಬಂದು 'ಒಂದ್ನಿಮಿಷ ಪೆನ್ ಕೊಡ್ತೀರಾ?' ಅಂದಾಗ "Oh, yes" ಎಂದು ಸಂತೋಷದಿಂದ ಕೊಟ್ಟಿದ್ದೆ. ಸಂತೋಷಕ್ಕೆ ಕಾರಣ - ಆಕೆ ನಮ್ಮ ನೆರೆಮನೆಯ ಹುಡುಗಿಯರಂತೆ ನನ್ನನ್ನು ''ಅಂಕಲ್'' ಅನ್ನಲಿಲ್ಲ. ಬಿಳಿಕೂದಲು ಕಾಣದಂತೆ ಕ್ರಾಪು ಸರಿಪಡಿಸುತ್ತಾ ನಾನು ಆಕೆಯ ಪಕ್ಕದಲ್ಲೇ ನಿಂತೆ. ಆಕೆ ''ಥ್ಯಾಂಕ್ ಯೂ'' ಎಂದು ಕಣ್ಣಂಚಿನಲ್ಲೇ ನಕ್ಕು ಪೆನ್ನು ಹಿಂದಿರುಗಿಸುವ ಮತ್ತು ಆಕಸ್ಮಾತ್ ಅವಳ ಕೋಮಲ ಹಸ್ತದ ಸ್ಪರ್ಶದಿಂದ ರೋಮಾಂಚನಗೊಳ್ಳುವ ಆ ಕ್ಷಣಕ್ಕಾಗಿ ಕಾಯತೊಡಗಿದೆ. ಹತ್ತು ನಿಮಿಷವಾದರೂ ಆಕೆ ತಲೆ ಎತ್ತದೆ ಬರವಣಿಗೆಯಲ್ಲಿಯೇ ತಲ್ಲೀನಳಾಗಿದ್ದಳು. ಕುತೂಹಲದಿಂದ ಕಣ್ಣಾಡಿಸಿದಾಗ ತಿಳಿಯಿತು. ಅವಳು ತನ್ನ ಪ್ರಿಯಕರನಿಗೆ ''ನಿನ್ನನ್ನೆ ಪ್ರೀತಿಸುತ್ತೇನೆ ನನ್ನಾಣೆ, ನನ್ನ ಪೆನ್ನಾಣೆ'' ಎಂದು ಪ್ರೇಮ ಪತ್ರ ಬರೆಯುತ್ತಿದ್ದಳು. ನನ್ನ ಉತ್ಸಾಹ ಜರ್ರನೆ ಇಳಿದು ಆಫೀಸಿನ ನೆನಪಾಯಿತು. ''ಪೆನ್‌ಕೊಡ್ರಿ, ನಂಗೆ ತಡ ಆಗ್ತಿದೆ'' ಎಂದೆ. ''ಒಂದ್ನಿಮಿಷ'' ಎಂದು ಮತ್ತೂ ಐದು ನಿಮಿಷ ಬರೆದು ಕೊನೆಗೆ ''ತಗೊಳ್ಳಿ ಅಂಕಲ್'' ಅನ್ನುತ್ತ ಪೆನ್ನಿನ ಕಡ್ಡಿಯಿಂದ ನನ್ನ ಕೈಯನ್ನು ಚುಚ್ಚಿ ಆಕೆ ದುರ್ದಾನ ಪಡೆದವಳಂತೆ ಹೊರಟುಹೋದಳು.

ಪೆನ್ನು ಹೇಗೆ ಕೇಳುತ್ತಾರೆ? ಯಾಕೆ ಕೇಳುತ್ತಾರೆ? ಎನ್ನುವುದು ಅಷ್ಟು ಮುಖ್ಯವಲ್ಲ. ಪೆನ್ನು ತೆಗೆದುಕೊಂಡವರು ಅದನ್ನು ನಮಗೆ ವಾಪಾಸು ಕೊಡುತ್ತಾರೆಯೇ ಎಂಬುದು ಅತೀ ಮುಖ್ಯ. ನಮ್ಮ ಪೆನ್ನಿನಿಂದ ಬರೆದು ಅಭ್ಯಾಸ ಬಲದಿಂದ ಎಂಬಂತೆ ಅದನ್ನು ತಮ್ಮ ಜೇಬಿಗೋ, ಬ್ಯಾಗಿಗೋ ಹಾಕಿಕೊಂಡು ಹೋಗುವವರೂ ಇರುತ್ತಾರೆ. ಆದ್ದರಿಂದ ಪೆನ್ನು ಕೊಟ್ಟಾತ ಒಂದು ಕ್ಷಣ ಕೂಡಾ ಮೈ ಮರೆಯುವಂತಿಲ್ಲ. ಮುತ್ತು ಒಡೆದರೆ ಹೋಯಿತು-ಮಾತು ಆಡಿದರೆ ಹೋಯಿತು ಪೆನ್ನು-ನೀಡಿದರೆ ಹೋಯಿತು. ಪೆನ್ನು ಕಡ ಕೇಳಿದವ ತಮಗೆ ಟೊಪ್ಪಿ ಹಾಕದಿರಲಿ ಎಂದು ಕೆಲವರು ಮುಂಜಾಗ್ರತೆ ವಹಿಸುತ್ತಾರೆ. ಪೆನ್ನಿನ ಟೊಪ್ಪಿ ಅಥವಾ ಕ್ಯಾಪನ್ನು ತಾವೇ ಇಟ್ಟುಕೊಂಡು ಬರೇ ಪೆನ್ನು ಕೊಡುತ್ತಾರೆ. ಹೀಗೆ ಮಾಡುವುದರಿಂದ ಪೆನ್ನು ಮರಳಿ ಬರುವ ಸಾಧ್ಯತೆ ಹೆಚ್ಚು. ಬಾರದಿದ್ದರೆ, ಅದರ ಸವಿ ನೆನಪಿಗೆ ಖಾಲಿ ಟೊಪ್ಪಿಯಾದರೂ ನಿಮ್ಮ ಬಳಿ ಇರುತ್ತದೆ. ಟೊಪ್ಪಿಯೇ ಇಲ್ಲದ ಬಾಲ್‌ಪೆನ್ನಿಗೆ ಏನು ಮಾಡೋಣ? ಕಚೇರಿಗಳಲ್ಲಿ ಇದಕ್ಕೊಂದು ಉಪಾಯ ಮಾಡಿರುತ್ತಾರೆ. ಯಾರೂ ಜೇಬಿಗಿಳಿಸದಂತೆ ಪೆನ್ನಿಗೆ ಹಗ್ಗ ಕಟ್ಟಿ ಇಡುತ್ತಾರೆ. ನಮ್ಮ ಬ್ಯಾಂಕಿನ ಕೌಂಟರಿನಲ್ಲೂ ಈ ವ್ಯವಸ್ಥೆ ಇದೆ. ಜೋತಾಡುವ ಇಂಥ ಪೆನ್ನುಗಳನ್ನು ನೋಡಿದಾಗಲೆಲ್ಲ ನನಗೆ ನಮ್ಮ ಜನರ ಪ್ರಾಮಾಣಿಕತೆ ಎಂಬ ಮೌಲ್ಯಕ್ಕೇ ನೇಣುಹಾಕಲಾಗಿದೆಯೇನೋ ಅನ್ನಿಸುತ್ತದೆ. ಲೇಖಕನಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು, ಯಾವುದೇ ಕಟ್ಟುಪಾಡು ಇರಬಾರದು ಎನ್ನುವ ನಾವು ಲೇಖನಿಯನ್ನು ಕಟ್ಟಿ ಹಾಕುವುದು ಉಚಿತವಲ್ಲ ಎಂದು ನನ್ನ ಭಾವನೆ. ಹೀಗಾಗಿ ನಮ್ಮ ಬ್ಯಾಂಕಿನಲ್ಲಿ ನಾನು ಕುಳಿತುಕೊಳ್ಳುವ ಮ್ಯಾನೇಜರ್ ಕೋಣೆಯಲ್ಲಿ ಪೆನ್ನುಗಳನ್ನು ಪೆನ್ ಸ್ಟಾಂಡಿನಲ್ಲಿ ಓರಣವಾಗಿ ಇಟ್ಟಿದ್ದೇನೆ ಮತ್ತು ವಿಷಾದದ ಸಂಗತಿ ಎಂದರೆ ಆಗಾಗ ಇಡುತ್ತಲೇ ಇರುತ್ತೇನೆ.

ನಾನು ಗಮನಿಸಿದಂತೆ ಬ್ಯಾಂಕಿಗೆ ಬರುವ ಗಿರಾಕಿಗಳಲ್ಲಿ ನೂರಕ್ಕೆ 80 ಜನ ಪೆನ್ನು ತರುವುದಿಲ್ಲ. ಹೀಗಾಗಿ ಸಹಿಮಾಡಿ ಎಂದು ಕಾಗದ ಪತ್ರಗಳ ಜತೆ ಪೆನ್ನು ಕೊಡುವುದು ನನ್ನ ಅಭ್ಯಾಸವಾಗಿದೆ. ಗಿರಾಕಿಗಳೂ ಸಂಕೋಚವಿಲ್ಲದೆ ಪೆನ್ನು ತೆಗೆದುಕೊಳ್ಳುತ್ತಾರೆ. ನೂರಕ್ಕೆ ಹತ್ತು ಜನ ತೆಗೆದುಕೊಂಡೇ ಹೋಗುತ್ತಾರೆ. ಕೊಟ್ಟ ಸಾಲವಾದರೂ ಮರಳಿ ಬರಬಹುದು. ಆದರೆ ಸಾಲಪತ್ರಕ್ಕೆ ಸಹಿ ಮಾಡಿದ ಪೆನ್ನು ಮರಳಿ ಬರುವುದು ಅಪರೂಪವಾದ್ದರಿಂದ ''ಪೆನ್ನು ಮನ್ನಾ'' ಯೋಜನೆ ಅನಿವಾರ್ಯ. ಒಮ್ಮೆ ಮಾತ್ರ ಸಾಲ ಪಡೆಯಲು ಬಂದ ಹೆಂಗಸೊಬ್ಬಳು ಸಹಿ ಮಾಡಿ ಎಂದು ನಾನು ಪೆನ್ನು ನೀಡಿದಾಗ ತೆಗೆದುಕೊಳ್ಳಲಿಲ್ಲ. ಆಕೆ ತುಂಬಾ ಸ್ವಾಭಿಮಾನಿ ಇರಬಹುದು ಎಂದು ಭಾವಿಸಿ ''ಪರವಾಗಿಲ್ಲ, ನಿಮ್ಮ ಪೆನ್ನಲ್ಲೆ ಸಹಿ ಮಾಡಿ'' ಎಂದೆ. ಆಗಲೂ ಆಕೆ ಸುಮ್ಮನೆ ನೆಲನೋಡುತ್ತ ನಿಂತಳು. ಕೊನೆಗೆ ಅವಳ ಗಂಡ ''ಸಹಿ ಅಲ್ಲ, ಹೆಬ್ಬೆಟ್ಟು'' ಎಂದಾಗ 'ಪೆನ್ನು ಯಾಕೆ ಬೇಡ' ಎಂದು ತಿಳಿಯಿತು. ಸದ್ಯ ತಮ್ಮ ಪೆನ್ನು ಮರೆತ ಹಾಗೆ ಜನ ತಮ್ಮ ಹೆಬ್ಬೆರಳನ್ನೂ ಮರೆತುಬಿಟ್ಟು ''ಕ್ಷಮಿಸಿ, ಸ್ವಲ್ಪ ಹೆಬ್ಬೆರಳು ಕೊಡ್ತೀರಾ? ಅಂತ ಕೇಳುವುದಿಲ್ಲವಲ್ಲ. ನನ್ನಿಂದ ಸ್ವಲ್ಪ ಪೆನ್ನು ಕೊಡ್ತೀರಾ ಅಂತ ಕೇಳಿ ಕೊನೆಗೆ ಅದನ್ನು ಇಡಿಯಾಗಿ ನುಂಗಿ ನೀರು ಕುಡಿದ ಅಲ್ಲ ಶಾಯಿ ಕುಡಿದವರಿಗೆ ಎಚ್ಚರಿಕೆ ನೀಡಲು ನನ್ನ ಕ್ಯಾಬಿನ್ನಿನಲ್ಲಿ ಹೀಗೊಂದು ಫಲಕ ತೂಗು ಹಾಕಬೇಕೆಂದಿದ್ದೇನೆ!

ಪೆನ್ನಲ್ಲವೆ ನಾವೆಲ್ಲ ಬರೆಯುವ ವಸ್ತು
ಪೆನ್ನು ಮರೆಯುವುದು ಅಶಿಸ್ತು
ಪೆನ್ನು ಕೇಳಿದರೆ ನನ್ನ ಬಳಿ
ಪಿನ್ನು ಚುಚ್ಚಿದಂತೆ ಹೃದಯದಲ್ಲಿ
ಪೆನ್ನು ಪೆನ್ನಿಂದೇಕೆ ಜೀವ ತಿನ್ನುವರು
ಪೆನ್ನು ತಾರದ ಪೆನ್ನಿಗರು
ಬರೆದವರು - ಸಂಚಿ ಪೆನ್ನಮ್ಮ

ಈ ಫಲಕದಲ್ಲಿ ನನ್ನ ಹೆಸರು ಬರೆಯುವುದಿಲ್ಲ. ಯಾಕೆಂದರೆ ನಾನೂ ಕೆಲವು ಸಲ ಪೆನ್ನು ಮರೆತು ಇನ್ನೊಬ್ಬರ ಬಳಿ ಸ್ವಲ್ಪ ಪೆನ್ ಕೊಡ್ತೀರಾ? ಅಂತ ಕೇಳಿದ್ದುಂಟು.

■ ಎಚ್. ಡುಂಡಿರಾಜ್

ಕೆನಡಿ ಕಣ್ಮರೆ



ಜೂನಿಯರ್ ಕೆನಡಿ ಹುಟ್ಟಿದಾಗಿನ ಘಟನೆ. ಮಗುವನ್ನು ಕಂಡ ಐರ್ಲೆಂಡಿನ ರಾಯಭಾರಿ ಕವನ ಒಂದನ್ನು ಹುಡುಗನ ತಂದೆ, ತಾಯಿಯ ಎದುರು ಓದಿದ್ದ. ಅದು ಹೀಗಿದೆ.

ಈ ಹೊಸ ಮಗು ಹೃದಯಕ್ಕೆ
ಸುಳಿ ಗಾಳಿಯಲ್ಲಿ ಮಿಸುಕಾಡುವ
ಹೂ ಹರ್ಷ ತರಲಿ.
ಬಿರುಗಾಳಿ ಬೀಸಿದರೂ
ಗಿಡ, ಮರ ಸುರಿಸಲಿ
ಹೂ ಮಳೆ ಇವನ ಮೇಲೆ
ನಿದ್ರೆಬಾರದ ರಾತ್ರಿಯಲ್ಲಿ
ಎಚ್ಚರಿರಲಿ ಇವನಿಗಾಗೊಬ್ಬ ಮಿತ್ರ,
ಆಯುಷ್ಯ ಆಗಲಿ ದೀರ್ಘ.
ಪ್ರೀತಿ, ಪ್ರೇಮ ಎಲ್ಲದರ
ಕೊನೆಗೆ
ಮೇಲಿನವನು ಕರುಣಿಸಲಿ
ಇವನಿಗೊಂದು ಕಿರೀಟ.

ಆತನ ಹಾರೈಕೆ ಅರ್ಧ ಸತ್ಯ. ಕೆನಡಿ ಬದುಕಲಿ, ಬಾಳಲಿ ಎಂದು ಇಡೀ ಅಮೇರಿಕಾ ಕಣ್ಣು ತೆರೆದು ಕೂತಿತ್ತು. ಆದರವನು ಬದುಕಿ ಬಾಳಲಿಲ್ಲ. ಎಲ್ಲ ನಿರೀಕ್ಷಿಸಿದ ಕಿರೀಟ ಅವನ ತಲೆ ಏರಲೇ ಇಲ್ಲ. ಒಂದು ಸುಂದರ ಕನಸು ಭಗ್ನವಾದಂತೆ ಅವನು ಮರೆಯಾಗಿಬಿಟ್ಟ. ತಂದೆ ಅಮೇರಿಕಾದ ಅಧ್ಯಕ್ಷ ಜಾನ್ ಎಫ್ ಕೆನಡಿ. ತಾಯಿ ಪರಮ ಸುಂದರಿ ಜಾಕ್ವೆಲಿನ್. ತಂದೆ ಹತ್ಯೆ ನಡೆದಾಗ ಆತನನ್ನೂ ಎಳೆಯ ಬಾಲಕ. ಆದರೆ ತಾಯಿಯ ಕೊನೆಯ ದಿನಗಳಲ್ಲಿ, ಕ್ಯಾನ್ಸರ್‌ನಿಂದ ನರಳುತ್ತಿದ್ದವಳ ನೋವು ಕಣ್ಣಾರೆ ಕಂಡವನು.

ಅಷ್ಟೇನೂ ಪ್ರತಿಭಾವಂತನಲ್ಲದ ಕೆನಡಿಯನ್ನು ಕಂಡರೆ ಅಮೇರಿಕಾದ ಜನಕ್ಕೆ ತುಂಬಾ ಇಷ್ಟ. ಸತ್ತ ತಂದೆಯ ಶವಯಾತ್ರೆ ಆರಂಭವಾದಾಗ, ಶ್ವೇತಭವನದ ಮೆಟ್ಟಿಲ ಮೇಲೆ ನಿಂತು ವಂದನೆ ನೀಡುತ್ತಿದ್ದ ಮೂರು ವರ್ಷದ ಜ್ಯೂನಿಯರ್ ಕೆನಡಿಯ ಚಿತ್ರ ಜನರ ಮನಸನ್ನು ಕದಡಿತ್ತು. ಆ ಹೊತ್ತಿನ ದುರಂತದ ಛಾಯೆಯ ನಡುವೆಯೂ ಮಾಸದಿದ್ದ ಆ ಮಗುವಿನ ಮುಗ್ಧ ಮುಖದಲ್ಲಿ ಗಂಭೀರತೆಯ ಹೊಳಪಿತ್ತು

ತಂದೆ ಅಂದು ಟೆಕ್ಸಾಸಿಗೆ ಹೊರಟ ದಿನ ಅವರ ಎರಡೂ ಕಾಲು ಅಪ್ಪಿ ಹಿಡಿದು ''ಇವತ್ತು ನೀನು ಹೋಗಬೇಡ'' ಎಂದು ಹಟ ಮಾಡಿದ್ದ. ತಂದೆ ಹೊರಟು ನಿಂತಾಗ ಎಂದೂ ಅವನು ಅತ್ತು ಕರೆದು ರಂಪ ಮಾಡಿದವನಲ್ಲ. ಇವನ ಮಾತು ಮೀರಿ ಹೋದ ತಂದೆ ಮರಳಿ ಬರಲಿಲ್ಲ, ಹಂತಕನ ಗುಂಡಿಗೆ ಬಲಿಯಾಗಿಬಿಟ್ಟ.

ತಾಯಿ ಸಾವಿನ ಹೊಸ್ತಿಲಲ್ಲಿ ನಿಂತ ಗಳಿಗೆ, ಅದು ತಿಳಿದೂ, ''ಬೇಡ, ಹೋಗಬೇಡ'' ಎಂದು ಕೂಗಿ ಹೇಳುವಂತೆ ಹೃದಯ ಚೀರಿ ಹೇಳುತ್ತಾ ಇದ್ದರೂ ಅದು ಎಂದೂ ಮಾತಾಗಲಿಲ್ಲ. ಅಷ್ಟು ಹೊತ್ತಿಗಾಗಲೇ ಅವನಿಗೆ ಸಾವಿನ

ಕರಾಳತೆ, ಬದುಕಿನ ಮಿತಿ ಎಲ್ಲ ತಿಳಿದುಬಿಟ್ಟಿತ್ತು.

ಹಾಗೆಂದು ಬದುಕಿನಲ್ಲಿ ಅವನೆಂದೂ ಶ್ರದ್ಧೆ ಕಳೆದುಕೊಂಡವನಲ್ಲ. ಮಹಾ ಜೀವನೋತ್ಸಾಹಿ. ಚಿಕ್ಕಪ್ಪ ಎಡ್ವರ್ಡ್ ಕೆನಡಿ ಚುನಾವಣೆಗೆ ನಿಂತಿದ್ದ. ಅದು 1994ರ ಚುನಾವಣೆ. ಇವನು ಪ್ರಚಾರಕ್ಕೆ ಹೋಗಬೇಕು. "ನಾನು ಬರುತ್ತೇನೆ. ಜೊತೆಗೆ ಸಂಗಾತಿ ಕೂಡ. ಹಾಗಂತ ಬೇರೆ ಬೇರೆ ರೂಮು ಬೇಡ. ಇಬ್ಬರಿಗೂ ಒಂದೇ ರೂಮು ಸಾಕು...." ಎಂಬ ಸಂದೇಶ ರವಾನೆಯಾಗಿತ್ತು. ಎಲ್ಲರಿಗೂ ಕುತೂಹಲ 'ಕೆನಡಿಯ ಸಂಗಾತಿ ಯಾರಿರಬಹುದು?' ಆತ ಬಂದಿಳಿದಾಗ ಖಂಡಿತ ಸಂಗಾತಿಯೊಂದಿಗೇ ಬಂದಿದ್ದ. ಆದರೆ, ಅವನು ಕರೆದು ತಂದಿದ್ದು ದೊಡ್ಡ ಗಾತ್ರದ ಜರ್ಮನ್ ಶಫರ್ಡ್ ನಾಯಿ. ಅದೂ ಅವನು ದೊಡ್ಡಿಯಿಂದ ಬಚಾಯಿಸಿ ತಂದಿದ್ದು.

'ತನ್ನ ಸಂಗಾತಿಯೊಂದಿಗೆ ಜ್ಯೂನಿಯರ್ ಕೆನಡಿ ಬರುತ್ತಾನೆ' ಎಂಬ ಸುದ್ದಿ ತಿಳಿದಿದ್ದ ಹೋಟೆಲಿನ ರಿಸೆಪ್ಷನಿಸ್ಟ್‌ಗೆ ಈತ ತನ್ನ ನಾಯಿಯೊಡನೆ ಹೋಗಿ ಎದುರು ನಿಂತಾಗ ಹೇಗನ್ನಿಸಿರಬೇಡ!

ತನ್ನನ್ನು ಅಂಥ ಸ್ಥಿತಿಯಲ್ಲಿ ಕಂಡ ರಿಸೆಪ್ಷನಿಸ್ಟ್ ಮುಖ ಹೇಗಾಯಿತು ಎಂದು ಆತ ಚುನಾವಣಾ ಪ್ರಚಾರಕ್ಕೆ ಬಂದ ಕಾರ್ಯಕರ್ತರಿಗೆ ಅಭಿನಯದೊಂದಿಗೆ ವಿವರಿಸಿ ಹೇಳುತ್ತಿದ್ದ.

ತಂದೆಯನ್ನು ಕಳೆದುಕೊಂಡು ಶ್ವೇತಭವನದಿಂದ ಹೊರಬಿದ್ದ ಅವನಿಗೆ ತಾಯಿಯ ಶ್ರೀರಕ್ಷೆ ಇತ್ತು. ಮೃದು ಮಾತಿನ, ಗಟ್ಟಿ ನಿರ್ಧಾರಗಳ ಹೆಂಗಸು ಜಾಕ್ವೆಲಿನ್. ಆಕೆ ಮಗನಿಗೆ ಒಂದು ಮಾತು ಹೇಳಿದ್ದಳು. "ಏನಾದರೂ ಆಗು, ಮೊದಲು ನೀನು ನೀನಾಗು. ಅಳು, ನಗು, ಸಂತೋಷ ಪಡು, ನಿನ್ನ ಯತ್ನದಿಂದಲೇ ನೀನು ಏನಾಗಬೇಕು ಎಂಬುದು ಕಂಡುಕೋ...."


ತಂದೆ ಜಾನ್, ತಾಯಿ ಜಾಕ್ವೆಲಿನ್ ಜೊತೆ ಪುಟ್ಟ ಮಗು ಜೂನಿಯರ್

ಅಮೇರಿಕಾವನ್ನಾಳಿದ ತಂದೆ, ಆತನ ದಾರುಣ ಸಾವು, ಇಡೀ ಕುಟುಂಬದ ಸದಸ್ಯರು ಒಬ್ಬೊಬ್ಬರಾಗಿ ದುರಂತ ಕಾಣುತ್ತಾ ಎಡವಿ ಬಿದ್ದರು.

ಆಗಲೂ ಆತನ ಕಿವಿಯಲ್ಲಿ ತಾಯಿಯ ಮಾತು ಮೊರೆಯುತ್ತಿತ್ತು. ತಾನೊಬ್ಬ ಅಮೇರಿಕಾದ ಮಾಜಿ ಅಧ್ಯಕ್ಷನ ಮಗನೆಂಬ ಹಮ್ಮು ಇರಲಿಲ್ಲ. ಸೈಕಲ್ ಏರಿ, ಸಿಟಿ ಬಸ್‌ನಲ್ಲಿ, ಉಪನಗರಗಳ ಭೂಗತ ರೈಲಿನಲ್ಲಿ ತಿರುಗಾಡುತ್ತಿದ್ದ. ತನ್ನ ಕಾರು ತಾನೇ ಡ್ರೈವ್ ಮಾಡುತ್ತಿದ್ದ ತನ್ನ ವಿಮಾನಕ್ಕೆ ಅವನೇ ಚಾಲಕ....

(ಅಲ್ಲಿಯೇ ವಿಧಿ ಹೊಂಚಿ ಕುಳಿತಿತ್ತು)

ತಾನು ಮಾಜಿ ಅಧ್ಯಕ್ಷನ ಮಗ. ನಾನೆಂದರೆ ಇಡೀ ಅಮೇರಿಕಾಗೆ ಗೊತ್ತು ಎಂಬ ಹಮ್ಮು ಇರಲಿಲ್ಲ. ಇಡೀ ಅಮೇರಿಕಾದ ಜನ ಅವನ್ಯಾರು ಎಂದು ತಿಳಿದಿದ್ದಾಗಲೂ, ಯಾರಾದರೂ ಪರಿಚಯಕ್ಕೆ ಮುಂದಾಗಿ ಕೈ ಚಾಚಿದಾಗ "ನಾನು ಜ್ಯೂನಿಯರ್ ಕೆನಡಿ. ನಿಮ್ಮ ಪರಿಚಯವಾದದ್ದು ಸಂತೋಷ" ಎಂದೇ ವಿನಯದಿಂದ ಹೇಳುತ್ತಿದ್ದ.

ಕೆನಡಿಯದು ದೊಡ್ಡ ಕುಟುಂಬ. ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳು, ಅತ್ತೆಯ ಮಕ್ಕಳು ಎಂದು ಎಲ್ಲ ಒಂದೆಡೆ ಸೇರಿದರೆ ಜಾತ್ರೆಯಂತಾಗುತ್ತಿತ್ತು. ದೋಣಿ ವಿಹಾರ ನಡೆಸಿ ಬಂದು, ಮನೆಯಂಗಳದಲ್ಲಿ ಟಚ್ ಫುಟ್‌ಬಾಲ್ ಆಟ ಆಡುತ್ತಾ ಇದ್ದರು. ದಾಯಾದಿಗಳ ಎರಡು ಗುಂಪು. ಒಂದಕ್ಕೆ ಜ್ಯೂನಿಯರ್ ಕೆನಡಿ ನಾಯಕ. ಆಟ ಸಾಗಿದಂತೆ ಹುರುಪೇರುತ್ತಿತ್ತು. ಅವನ ಹೆಂಡತಿ ಕ್ಯಾರೋಲಿನ್ ಬೆಸೆಟ್ ಅಂಗಳದ ಅಂಚಿನಲ್ಲಿ ನಿಂತು ಸಣ್ಣ ಮಗುವಿನ ಹಾಗೆ ಕೇಕೆ ಹಾಕಿ ಪ್ರೋತ್ಸಾಹಿಸುತ್ತಾ ಇದ್ದಳು. ಜ್ಯೂನಿಯರ್‌ನ ತಂದೆ ಜಾನ್‌ಕೆನಡಿ ಸಂತಸ ತುಂಬಿ ನಲಿಯುತ್ತಿದ್ದ ಮನೆಯಂಗಳದಲ್ಲಿ ಸಂತಸ ಪುಟಿಯುತ್ತಿತ್ತು.

ಸುಂದರಾಂಗ ಕೆನಡಿಗೆ ತಕ್ಕ ಹೆಂಡತಿ ಕ್ಯಾರೋಲಿನ್. ಇಬ್ಬರದೂ ಹೇಳಿ ಮಾಡಿಸಿದಂಥ ಜೋಡಿ. ಅಂಥ ದಾಂಪತ್ಯ ಕೂಡ ಸಾವಿರ ದಿನಗಳಲ್ಲಿ ಇದ್ದಕ್ಕಿದ್ದಂತೆ ಅದೃಶ್ಯವಾಯಿತು. ಸಾವಿನ ಮಂತ್ರದಂಡ ಇಂಥದೊಂದು ಕರಾಳತೆ ಮೂಡಿಸಬಹುದೆಂಬ ಕಲ್ಪನೆ, ನಿರೀಕ್ಷೆ ಕೂಡ ಯಾರಿಗೂ ಇರಲಿಲ್ಲ.

ಜ್ಯೂನಿಯರ್ ಕೆನಡಿ ತುಂಬಾ ಬುದ್ಧಿವಂತನಲ್ಲ. ಆತನ ಓದು, ವೃತ್ತಿಯಲ್ಲಿ ಹೆಚ್ಚೇನೂ ಸಾಧನೆ ಆದದ್ದು ಕಾಣುವುದಿಲ್ಲ. ಕೆಲವು ದಿನ ವಕೀಲನಾಗಿದ್ದ. ಹೇಳಿಕೊಳ್ಳುವ ಯಶಸ್ಸು ಕಾಣಲಿಲ್ಲ. ಈಚಿನ ದಿನಗಳಲ್ಲಿ 'ಜಾರ್ಜ್' ಎಂಬ ಪತ್ರಿಕೆ ಮಾಡಿದ್ದ. ರಾಜಕೀಯಕ್ಕೆ ಮೀಸಲಾದ ಪತ್ರಿಕೆ ಅದು. ಮೊದಲ ಸಂಚಿಕೆಯ ಮುಖಪುಟದಲ್ಲಿ ಚೆಲುವೆ ಸಿಂಡಿ ಕ್ರಾಫರ್ಡ್ ಚಿತ್ರ. ಅಮೇರಿಕಾದ ಮಾಜಿ ಅಧ್ಯಕ್ಷ ಜಾರ್ಜ್ ವಾಷಿಂಗ್‌ಟನ್ ವೇಷಭೂಷಣ ಧರಿಸಿ ನಿಂತ ಅವಳು, ಹೊಕ್ಕಳು ಕಾಣುವಂತೆ ಪೋಸ್ ನೀಡಿದ್ದಳು. ರಾಜಕೀಯದಲ್ಲಿ ನಿಂದನೆ, ಟೀಕೆಗಿಂತ ಗೇಲಿಯೇ ಒಳ್ಳೆಯದು ಎಂದು ಅವನು ನಂಬಿದ್ದ.

ಪತ್ರಿಕೆಯ ಮೂಲಕ ಇನ್ನು ಮುಂದಿನ ತನ್ನ ದಾರಿಯಾವುದೆಂದು ಜಾನ್ ಸೂಚನೆ ನೀಡಿದ್ದ. ರಾಜಕೀಯ ಅವನ ಬದುಕಿನ ರಂಗ ಆಗುವುದಿತ್ತು.

ಅಷ್ಟೇನೂ ಪ್ರತಿಭಾವಂತನಲ್ಲದ ಕೆನಡಿಯನ್ನು ಕಂಡರೆ ಅಮೇರಿಕಾದ ಜನಕ್ಕೆ ತುಂಬಾ ಇಷ್ಟ. ಸತ್ತ ತಂದೆಯ ಶವಯಾತ್ರೆ ಆರಂಭವಾದಾಗ, ಶ್ವೇತಭವನದ ಮೆಟ್ಟಿಲ ಮೇಲೆ ನಿಂತು ವಂದನೆ ನೀಡುತ್ತಿದ್ದ ಮೂರು ವರ್ಷದ ಜ್ಯೂನಿಯರ್ ಕೆನಡಿಯ ಚಿತ್ರ ಜನರ ಮನಸನ್ನು ಕದಡಿತ್ತು. ಆ ಹೊತ್ತಿನ ದುರಂತದ ಛಾಯೆಯ ನಡುವೆಯೂ ಮಾಸದಿದ್ದ ಆ ಮಗುವಿನ ಮುಗ್ಧ ಮುಖದಲ್ಲಿ ಗಂಭೀರತೆಯ ಹೊಳಪಿತ್ತು.

ತಂದೆ ಎಲ್ಲಿಗಾದರೂ ಹೋಗಿ ಹಿಂದಿರುಗಿ ಬಂದು ಶ್ವೇತ ಭವನದ ಹೆಲಿಪ್ಯಾಡ್‌ನಲ್ಲಿ ಇಳಿಯುವಾಗ ಮಗ ಓಡೋಡಿ ಬರುತ್ತಿದ್ದ. ಅಷ್ಟೇ ಖುಷಿಯಿಂದ ತಂದೆ ಧಾವಿಸಿ ಬಂದು ಮಗನನ್ನು ಎತ್ತಿ ಬಿಗಿದಪ್ಪಿಕೊಳ್ಳುತ್ತಾ ಇದ್ದರು. ಪ್ರತಿ ತಂದೆ ತಾಯಿಗೂ ಇಂಥ ಒಬ್ಬ ಮಗ ಇರಬೇಕು ಅನ್ನಿಸುತ್ತಿತ್ತು. ಪ್ರತಿ ಮಗುವಿಗೂ ಇಂಥ ತಂದೆ ತಮಗೆ ಬೇಕು ಅನ್ನಿಸುತ್ತಿತ್ತು.

ತಂದೆಯನ್ನು ಕಳೆದುಕೊಂಡ ಮೇಲೂ ಆತ, ದಿನ ಕಳೆದಂತೆ ಎಲ್ಲದರ ಅರಿವು ಮೂಡುವ ಸಮಯದಲ್ಲಿ ಘನತೆಯಿಂದ ದುಃಖ ನುಂಗಿಕೊಂಡು ನಡೆದ. ತನ್ನ ಸಹೋದರಿಯನ್ನು ಜೀವನದ ಜೀವವಾಗಿ ನೋಡಿಕೊಂಡ. ಒಂದು ದಿನಕ್ಕೂ ಇಬ್ಬರೂ ಸಣ್ಣ ಪುಟ್ಟ ಜಗಳ ಮಾಡಲಿಲ್ಲ. ಕಚ್ಚಾಡಲಿಲ್ಲ.

ಅಮೇರಿಕಾದ ಜನಕ್ಕೆ ಇಂಥ ಸಂಗತಿ ಮುಖ್ಯ. ದಿನದಿನಕ್ಕೆ ಕುಟುಂಬದ ಕಲ್ಪನೆ ಕ್ಷೀಣಿಸುತ್ತಿದೆ. ಬೆಳಿಗ್ಗೆ ಮದುವೆ, ಸಂಜೆಗೆ ವಿವಾಹ ವಿಚ್ಛೇದನ. ಅಲ್ಲಿ ಕುಟುಂಬ, ಗಂಡ, ಹೆಂಡತಿ, ಮಗು ಎಂಬ ಸುಖದ ಕಲ್ಪನೆಯೇ ಮಾಯವಾಗುತ್ತಿದೆ. ಅತುಲ ಶ್ರೀಮಂತಿಕೆ ತಂದಿರುವ ಅಮಾನುಷತೆ ಇದು. ಸುಂದರ ಸಂಸಾರ ಕಂಡಾಗ, ಅಥದ್ದು ತಮ್ಮದೂ ಆಗಬೇಕು ಅನ್ನಿಸುತ್ತದೆ. ಕೆನಡಿ ಕುಟುಂಬದ ಬಗ್ಗೆ ಪ್ರೀತಿ, ಅಭಿಮಾನ ಇಂಥ ಕಾರಣಗಳಿಂದ ಮೂಡಿದ್ದು. ಚೆಲುವೆ ಹೆಂಡತಿ, ಪ್ರೀತಿಯುಳ್ಳ ಗಂಡ, ಮುದ್ದು ಮಮತೆ ತುಂಬಿದ ಮಕ್ಕಳು. ಅದೊಂದು ಸುಖದ ಸಂಸಾರ. ಈ ಸಣ್ಣ, ಮೂಲಭೂತ ಸಾಮಾಜಿಕ ವ್ಯವಸ್ಥೆಯೇ ವಿರಳವಾಗುತ್ತಿರುವ ಇಂದಿನ ದಿನಗಳಲ್ಲಿ, ತಾವೆಲ್ಲ ಕಟ್ಟಿಕೊಂಡ ಕನಸೊಂದು ಇಲ್ಲೆಲ್ಲೋ ಜೀವಂತವಿದೆ ಎಂದು ಕೆನಡಿ ಕುಟುಂಬ ಕಂಡಾಗ ಪ್ರತಿಯೊಬ್ಬರಿಗೂ ಅನ್ನಿಸುತ್ತಾ ಇತ್ತು. ಅಂಥ ಸುಂದರ ಚಿತ್ರವೇ ವಿಧಿಯ ಕ್ರೂರ ಹೊಡೆತಕ್ಕೆ ಸಿಕ್ಕಿ ಭಗ್ನವಾಗುತ್ತಾ ಹೋದದ್ದು ಕಣ್ಣಾರೆ ಕಂಡ ಜನಕ್ಕೆ ಹೇಳಿಕೊಳ್ಳಲಾಗದ ತಲ್ಲಣ. ಹಂತಕನ ಗುಂಡಿಗೆ ಕೆನಡಿ ಬಲಿಯಾದಾಗ, ಒಂದು ಚಿತ್ರ ಭಗ್ನವಾಯಿತು. ಜ್ಯೂನಿಯರ್ ಕೆನಡಿಯಲ್ಲಿ ಅದು ಮತ್ತೆ ಸಾಕಾರ ಆಗಬಹುದೆಂಬ ನಿರೀಕ್ಷೆ, ಕನಸು. ಅದೂ ಕೂಡ ವಿಮಾನದ ದುರಂತ ನಡೆದು, ಪರದೆ ಎಳೆದುಬಿಟ್ಟಿತ್ತು.

1963ರ ನವೆಂಬರ್‌ನಲ್ಲಿ ಅಧ್ಯಕ್ಷ ಕೆನಡಿಯ ಕೊಲೆ ನಡೆದಾಗ ಜನಕ್ಕೆ ಎಂಥ ಆಘಾತ! ಇನ್ನೊಮ್ಮೆ ಇಂಥ ಅಧ್ಯಕ್ಷ ಬರುವುದಿಲ್ಲ ಎಂದವರಿಗೆ ಖಂಡಿತ ಗೊತ್ತಿತ್ತು. ಮುಂದಿನ ದಶಕದಲ್ಲಿ ಅದು ಸಾಬೀತಾಯಿತು. ದುರ್ಬಲ



ತಂದೆಯ ಶವಯಾತ್ರೆಯ ಮುಂಚೂಣಿಯಲ್ಲಿ ತಾಯಿ ಹಾಗೂ ಸಹೋದರಿ ಕೆರೋಲಿನ್ ಜೊತೆ ಶ್ವೇತಭವನದ ಮೆಟ್ಟಿಲ ಮೇಲೆ

ಸರ್ಕಾರಗಳು, ಯುದ್ಧದ ಸೋಲು, ಜನಾಂಗೀಯ ಘರ್ಷಣೆಗಳಿಂದ ಅಮೇರಿಕಾ ತಲ್ಲಣಿಸಿತು. ಸುಂದರ ಚಹರೆಯ ಕೆನಡಿ, ಆತನ ಗ್ಲಾಮರಸ್ ವರ್ತನೆ, ಎಲ್ಲವನ್ನೂ ತನ್ನ ತೆಕ್ಕೆಯಲ್ಲಿ ಸಲೀಸು ಹಿಡಿದು ಕೊಂಡೊಯ್ಯಬಲ್ಲೆನೆಂಬ ದಾಸತ್ತು ಮತ್ತೆ ಯಾರಿಗೂ ಬರಲಿಲ್ಲ.

ಅದು ಬರುವುದು ಸಾಧ್ಯವಿದ್ದಿದ್ದರೆ ಜ್ಯೂನಿಯರ್ ಕೆನಡಿ ಮೂಲಕ ಮಾತ್ರವೇ ಎಂಬ ಸಣ್ಣ ಆಸೆಯಿತ್ತು. ಜುಲೈ ಹದಿನಾರರ ಸಂಜೆ ಸೂರ್ಯ ಮುಳುಗುವ ಹೊತ್ತಿನಲ್ಲಿ ಸಿಂಗಲ್ ಎಂಜಿನ್ ವಿಮಾನವೇರಿದ ಕೆನಡಿ ಪೂರ್ವಕರಾವಳಿಯ ಮಾರ್ಥಾಸ್ ವೈನ್‌ಯಾರ್ಡ್‌ಗೆ ತಲುಪಲೇ ಇಲ್ಲ.

ಸಮುದ್ರಕ್ಕೆ ಅಗಾಧ ವೇಗದಿಂದ ಅಪ್ಪಳಿಸಿದ ವಿಮಾನ ಚೂರು ಚೂರಾಗಿತ್ತು. ವಿಮಾನದಲ್ಲಿ ಇದ್ದವರು ಯಾರೂ ಬದುಕಲಿಲ್ಲ. ಹಾಗೆಂದು ಪ್ರಕಟಣೆ ಹೊರಬಿದ್ದಿದ್ದು ದುರ್ಘಟನೆ ನಡೆದ ಐದು ದಿನಗಳ ನಂತರ

ಮ್ಯಾನ್‌ಹಟನ್ ಹೊರವಲಯದ ಕೆನಡಿ ಕುಟುಂಬಕ್ಕೆ ಸೇರಿದ ಮನೆಯ ಮುಂದ ಶೋಕತಪ್ತರ ಸಾಲು. ಇರಿಸಿದ ಹೂಗುಚ್ಛಗಳು. ತಮ್ಮ ಹೃದಯದಾಳದ ಭಾವನೆ ಮಾತಾಗಿಸಿದ ಚೀಟಿಗಳು. ಕೆಲವು ಕೈಯಲ್ಲಿ ಬರೆದವು. ಮತ್ತೆ ಕೆಲವು ಕಂಪ್ಯೂಟರ್‌ನಲ್ಲಿ ಮುದ್ರಿಸಿದಂಥವು.

ಬಂದವರಲ್ಲಿ ಎಷ್ಟೊಂದು ವೈವಿಧ್ಯ. ಐರ್ಲೆಂಡ್, ಕೋಸ್ಟರಿಕಾ, ಸ್ಪೇನ್ ಹೀಗೆ ನಾನಾ ಜನಾಂಗಗಳಿಗೆ ಸೇರಿದ ಜನ. ಅವರಾಡುತ್ತ ಇದ್ದದು ನಾನಾ ಭಾಷೆ. ಎಲ್ಲರ ಹೃದಯದಲ್ಲೂ ಹೆಪ್ಪುಗಟ್ಟಿದ ದುಃಖ.

ಯಾವ ದುಃಖವೂ ವಾಸ್ತವವನ್ನು ಬದಲಿಸಲಾಗದೆಂಬ ಕಠೋರ ಸತ್ಯದ ಅರಿವು. ಅದೇ ಎಲ್ಲರನ್ನೂ ಇನ್ನಷ್ಟು ಗಾಢವಾಗಿ ಕಲಕುತ್ತಾ ಇತ್ತು. ಎರಡು ವರ್ಷದ ಹಿಂದೆ ಇಂಗ್ಲೆಂಡಿನ ರಾಜಕುಮಾರಿ ಡಯಾನಾ ದುರ್ಮರಣಕ್ಕೆ ಈಡಾದಾಗಲೂ ಹೀಗೆ. ಇಡೀ ಲಂಡನ್ ನಗರ ಬಾಡ ತೊಡಗಿದ ಹೂಗುಚ್ಛಗಳ ದೊಡ್ಡ ಸಮಾಧಿಯಂತೆ, ಅಂತ್ಯಕ್ರಿಯೆಗೆ ಬಾಡಿದ ಮುಖ ಹೊತ್ತು ಸ್ಮಶಾನಕ್ಕೆ ಬಂದ ಜನರಿಂದ ತುಂಬಿದಂತೆ ಅನ್ನಿಸಿಬಿಟ್ಟಿತ್ತು. ಡಯಾನಾ ಆಗಲಿ, ಕೆನಡಿ ಆಗಲಿ ಅಧಿಕಾರದಲ್ಲಿ ಇದ್ದವರಲ್ಲ ಅವರಿಂದ ಇಂಥದ್ದು ಆಗುತ್ತದೆ ಎಂಬ ಅಪೇಕ್ಷೆ ಕೂಡ ಜನಕ್ಕೆ ಇರಲಿಲ್ಲ. ಆದರೆ ಅಂಥ ಜನರ ಸಾವು ತೀರಾ ವೈಯಕ್ತಿಕವಾಗಿ ಜನರನ್ನು ಕಾಡುತ್ತದೆ. ಒಂದು ಆಸೆ, ಕನಸು ಭಗ್ನವಾದಂತೆ ಎಲ್ಲ ಮಿಡುಕಾಡುತ್ತಾರೆ.

ಕೆನಡಿ ಅಂಥ ಒಬ್ಬ ಕಿರೀಟವಿರದಿದ್ದ ರಾಜಕುಮಾರ. ಅವನಿಗೆ ಅಮೇರಿಕಾದ ಜನರ ಹೃದಯದಲ್ಲೊಂದು ಸಿಂಹಾಸನ ಸಿದ್ಧವಿತ್ತು. ಅದನ್ನು ಏರಿ ಕುಳಿತುಕೊಳ್ಳುವ ಮುನ್ನವೇ ಆತ ಕಣ್ಮರೆಯಾದ. ಮತ್ತೀಗ ಸಿಂಹಾಸನ ಬರಿದೋ ಬರಿದು.

ಕೆನಡಿಯ ಅಜ್ಜಿ ರೋಸ್ ಮಹಾ ದೈವಭೀರು. ಆಕೆ ಆಗಾಗ ಧರ್ಮಗ್ರಂಥದಿಂದ ಉದಾಹರಿಸುತ್ತಿದ್ದ ಒಂದು ಮಾತಿತ್ತು.

'ಆ ದೇವರಿಂದ ಹೆಚ್ಚು ಹೆಚ್ಚು ಪಡೆದವರು, ಹೆಚ್ಚು ಹೆಚ್ಚಾಗಿ ತಾವೇ ಕೊಡಬೇಕಾಗುತ್ತದೆ....'

ಅದು ನಿಜ.

■ ಲಕ್ಷ್ಮೀಕಾಂತ ಪಿ. ಎಸ್.

ಇಮೆಲ್ಡಾ ಮಾರ್ಕೋಸ್ ಮತ್ತೆ ಸುದ್ದಿಯಲ್ಲಿ ಇದ್ದಾಳೆ. ಫಿಲಿಪೀನ್ಸ್‌ನ ಮಾಜಿ ಅಧ್ಯಕ್ಷ ಮಾರ್ಕೋಸ್‌ನ ಪತ್ನಿ ಈಕೆ. ಒಂದು ಕಾಲಕ್ಕೆ ಭ್ರಷ್ಟಾಚಾರದಿಂದ ಬಿಲಿಯಾಂತರ ಡಾಲರ್ ದುಡ್ಡು ಮಾಡಿದ ಈ ಗಂಡ ಹೆಂಡತಿ ಅಮೇರಿಕಾಕ್ಕೆ ಓಡಿ ಹೋದರು. ಇಮೆಲ್ಡಾ ಮರಳಿ ಬಂದಾಗ ಆಕೆಯ ಆಸ್ತಿ ಮುಟ್ಟುಗೋಲಾಯಿತು. ಆಕೆಯ ಬಳಿ ಹನ್ನೆರಡು ನೂರು ಜೊತೆ ಶೂಗಳಿದ್ದವು. ಅವೆಲ್ಲ ರಾಷ್ಟ್ರೀಯ ಮ್ಯೂಸಿಯಂ ಪಾಲಾದವು.

ಇಷ್ಟಾದರೂ ಹಠ ಬಿಡದ ಇಮೆಲ್ಡಾ ಮತ್ತೆ ಶೂಗಳನ್ನು ಸಂಗ್ರಹಿಸಿದ್ದಾಳಂತೆ. ಈ ಬಾರಿ ಮೂರು ಸಾವಿರ ಜೊತೆ ಶೂ ಒಟ್ಟು ಮಾಡಿರುವ ಆಕೆ, ಅದನ್ನು ಇತ್ತೀಚೆಗೆ ವಿದೇಶೀ ಸುದ್ದಿ ಮಾಧ್ಯಮಕ್ಕೆ ಬಯಲು ಮಾಡಿದ್ದಾಳೆ.

ನಮ್ಮಲ್ಲಿನ ಜಯಲಲಿತಾ ಮುಂದೆ ಇಮೆಲ್ಡಾ ಯಾವ ಮಹಾ ಅನ್ನುತ್ತೀರ?

★


ಬದಲಾವಣೆ ಕೇವಲ ಬದುಕಿನ ಅಗತ್ಯವಲ್ಲ; ಅದೇ ಬದುಕು

■ ಆಲ್ವಿನ್ ಟಾಫ್ಲರ್

ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ.....

ಬಂದು ಹೋಗುವ ಹಕ್ಕಿಗಳಂತೆ

ನಮ್ಮದು ಹಂಪೆ. ಇದು ಪ್ರಾಚೀನ ಕಾಲದ ವೈಭವವನ್ನು ನೆನಪಿಸುವ ಸ್ಥಳವಾಗಿದೆ ಮತ್ತು ಪ್ರವಾಸಿಗರ ತಾಣವಾಗಿದೆ. ಇಲ್ಲಿ ಬರುವ ಪ್ರವಾಸಿಗಳು ಹೆಚ್ಚಾಗಿ ಪರದೇಶಿಯರೇ. ಅವರು ಹಂಪೆಗೆ ಭೇಟಿ ನೀಡುವ ಅವಧಿ ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ. ಈ ದಿನಗಳಲ್ಲಿ ಪರದೇಶಿಯರು ಬರುತ್ತಿರುತ್ತಾರೆ. ಅಮೇರಿಕಾ, ಕೊರಿಯಾ, ಚೈನಾ, ಆಸ್ಟ್ರೇಲಿಯಾ, ಡೆನ್ಮಾರ್ಕ್, ಜರ್ಮನಿ, ಇಂಗ್ಲೆಂಡ್‌ಗಳಿಂದ ಬರುತ್ತಾರೆ. ಇದೇ ಅವಧಿ ಗಳಲ್ಲಿ ನಮ್ಮ ಉತ್ತರ ಭಾರತೀಯರೂ ಬರುತ್ತಾರೆ. ಆರು ತಿಂಗಳವರೆಗೆ ಹಂಪೆಯಲ್ಲಿ ತಂಗುತ್ತಾರೆ. ಇವರನ್ನು ಹಿಮಾಲಯನ್ ಎಂದೇ ಕರೆಯುವ ಹಂಪೆಯ ಜನಕ್ಕೆ, ಉತ್ತರ ಭಾರತೀಯರೆಂದರೆ ಬಹಳ ಪ್ರೀತಿ. ನೋಡುವುದಕ್ಕೆ ಬಣ್ಣ ಕೆಂಪಾಗಿ ಉಡುಗೆ ತೊಡುಗೆಗಳಲ್ಲಿ ಬಾಲಿವುಡ್‌ನವರಂತೆ ಕಂಗೊಳಿಸುವ ಪಡ್ಡೆ ಹುಡುಗರು. ಕೆಲಸ ಕಾಯಿನ್ಸ್ ಮಾರುವುದು. ವಿಚಿತ್ರ ಶೈಲಿಯ ಮೂರ್ತಿಗಳು, ಮುತ್ತುಗಳು, ಉಂಗುರಗಳು, ಸರಗಳು ಜೊತೆಗೆ ಬಟ್ಟೆಗಳು ಮತ್ತು ಓಲೆಗಳು ಮಾರುವುದು. ಇವೆಲ್ಲ ಒಂದಕ್ಕಿಂತ ಇನ್ನೊಂದು ವಿಭಿನ್ನವಾಗಿದೆ. ಆದರೆ ಈ ಎಲ್ಲಾ ವಸ್ತುಗಳು ಪರದೇಶಿಯರಿಗೆ ಮಾತ್ರ. ಅವರು ಉತ್ತರದಿಂದ ದಕ್ಷಿಣಕ್ಕೆ ಬರುವುದಕ್ಕೆ ಇಲ್ಲಿನ ವ್ಯಾಪಾರವೇ ಮುಖ್ಯ ಕಾರಣ. ಹಂಪೆಗೆ ಬಂದು ನೆಲಸಿದ ಮೇಲೆ ಇಲ್ಲಿನ ಒಬ್ಬ ಸದಸ್ಯರಾಗಿ, ಕುಟುಂಬದ ಆಪ್ತ ಸ್ನೇಹಿತರಾಗಿ ಇರುತ್ತಾರೆ. ಅವರ ಧೈರ್ಯ, ಒಂಟಿತನ ಮೆಚ್ಚಲೇಬೇಕು. ತಮ್ಮ ಕುಟುಂಬದವರನ್ನು ಬಿಟ್ಟು ವ್ಯಾಪಾರಕ್ಕಾಗಿ ದಕ್ಷಿಣಕ್ಕೆ ಬರುವ ಪಡ್ಡೆ ಹುಡುಗರು ಒಳ್ಳೆಯ ಸ್ನೇಹಿತರಾಗಿ ವರ್ತಿಸುತ್ತಾರೆ. ಇಲ್ಲಿಗೆ, ಎರಡು ವರ್ಷದಿಂದ ಹೆಚ್ಚಾಗಿ ಬರುವ ಉತ್ತರ ಭಾರತೀಯರು ಹಿಂದಿಯಲ್ಲೇ ಮಾತಾಡುವುದು, ಬಿಟ್ಟರೆ ಇಂಗ್ಲಿಷ್. ಅದರ ಜೊತೆಗೆ ಅಲ್ಪ ಸ್ವಲ್ಪ ಕನ್ನಡ ಭಾಷೆಯನ್ನು ಸೇರಿಸುವುದು. ಆಶ್ಚರ್ಯವಾದ ಸಂಗತಿ ಎಂದರೆ, ಓದು ಕಲಿಯದೆ ಇರುವವರು, ಇಂಗ್ಲಿಷ್ ಭಾಷೆ ಬರದೆ ಇರುವವರು ಕೂಡ, ಈಗ ಇಂಗ್ಲಿಷ್ ಭಾಷೆಯನ್ನು ಸರಳವಾಗಿ ಮಾತನಾಡಬಲ್ಲವರಾಗಿದ್ದಾರೆ. ಆದರೆ ಈ ಭಾಷೆ ಆರು ತಿಂಗಳು ಮಾತ್ರ ಇರುತ್ತದೆ. ಆಮೇಲೆ ನಮ್ಮ ಭಾಷೆ ಕನ್ನಡ ಇದೆಯಲ್ಲಾ. ಯಾವ ಭಾಷೆಯ ಜನರು ಬಂದರೂ ನಮ್ಮ ಹಂಪೆಯ ಕನ್ನಡಿಗರು ಕನ್ನಡ ಭಾಷೆಯನ್ನು ಮಾತ್ರ ಮರೆಯುವುದಿಲ್ಲ.



■ ಜಿ. ವನು, ಹಂಪೆ.

ಬಸ್‌ಗಾಗಿ ನುಗ್ಗಾಟ

ಸಿಟಿಬಸ್ ವಿಚಾರವೇ ಮಹಾ ತರಲೆ. ನಾನು ನೋಡಿದ ಹಾಗೆ ಮದರಾಸು, ಮುಂಬಯಿ ಬಿಟ್ಟರೆ ಎಲ್ಲ ಕಡೆ ಸಿಟಿಬಸ್‌ಗಳೆಂದರೆ ಪರದಾಟಕ್ಕೆ ಇನ್ನೊಂದು ಹೆಸರು. ನಮ್ಮ ಹೈದರಾಬಾದಿನ ಗ್ರೀನ್‌ಬಸ್‌ಗಳು ಕಾಚಿಗುಡಾ, ಗಂಜ್ ಮತ್ತು ಸನತ್‌ನಗರಗಳಂಥ ಮುಖ್ಯ ನಿಲ್ದಾಣಗಳಿಗೆ ಬಂದು ಹೊರಡುವ ವೇಳೆ ಉಂಟಾಗುವ ಕೋಲಾಹಲ ಸಾಮನ್ಯ ದೃಶ್ಯವಾಗಿತ್ತು. ಬಸ್ಸು ಒಳಗೆ ಬರುತ್ತಿದ್ದಂತೆ ಹತ್ತಿಕೊಳ್ಳಲು ಯತ್ನಿಸುತ್ತಿದ್ದ ಪಡ್ಡೆ ಹುಡುಗರು, ಅವರನ್ನು ಬೆನ್ನಟ್ಟಿ ಹೋಗಿ ಬಡಿಯಲು ಯತ್ನಿಸುತ್ತಿದ್ದ ಪೊಲೀಸರು. ಇದು ಸದಾ ಕಾಣುವ ತಮಾಷೆ. ಈಗೀಗ ಅದು ಸ್ವಲ್ಪ ಕಡಿಮೆ ಆಗಿದೆ.

ಅಂಥವನು ಬೆಂಗಳೂರಿಗೆ ಬಂದಾಗ, ಮೊದಲಿದ್ದ ವಿಶ್ವೇಶ್ವರಪುರಂನಲ್ಲಿ ಬಸ್ ಹತ್ತುವುದು ಕಷ್ಟವೇನೂ ಇರಲಿಲ್ಲ. ಮೆಜೆಸ್ಟಿಕ್, ಮಾರ್ಕೆಟ್‌ಗಳಿಗೆ ಹೋಗಬೇಕಾದರೆ ಸಜ್ಜನರಾವ್ ಸರ್ಕಲ್‌ಗೆ, ಶಿವಾಜಿನಗರ, ಇಂದಿರಾನಗರದ ಕಡೆ ಹೋಗಬೇಕಾದರೆ ಲಾಲ್‌ಬಾಗ್ ಸಮೀಪ ಕಾಯುತ್ತಾ ನಿಲ್ಲಬೇಕಾಗುತ್ತಿತ್ತು. ಏನೇ ಆದರೂ ಬಸ್ ಹತ್ತಲು ನೂಕು ನುಗ್ಗಲು, ಜಗಳ, ಬಡಿದಾಟ ಇರುತ್ತಾ ಇರಲಿಲ್ಲ.

ಸ್ವಲ್ಪ ದಿನಗಳಿಗೆ ಮನೆ ಬದಲಿಸಬೇಕಾಯಿತು. ದುಬಾರಿ ಬಾಡಿಗೆ, ಅಡ್ವಾನ್ಸ್‌ಗಳಿಂದ ತಪ್ಪಿಸಿಕೊಳ್ಳಲು ಮತ್ತೀಕೆರೆಗೆ ಬಂದಾಯಿತು. ಆಗಿನ್ನೂ ಅದು ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಇತ್ತು. ಇದ್ದ ಒಂದು ಬಸ್ ಸ್ಟಾಪ್‌ನಲ್ಲಿ ಸದಾ ನೂಕು ನುಗ್ಗುಲು. ಹೆಚ್ಚಾಗಿ ಕೆಂಪು ಬೋರ್ಡಿನ ಬಸ್‌ಗಳೇ ನಮಗೆ ಆಶ್ರಯ. ಮೆಜೆಸ್ಟಿಕ್‌ನಲ್ಲಿ ಆಗಿನ್ನೂ ನೂತನ ಬಸ್ ನಿಲ್ದಾಣ ಆಗಿರಲಿಲ್ಲ. ನಮ್ಮ ಕಡೆಗೆ ಬರುವ ಬಸ್ಸುಗಳು ಎಲ್ಲೆಂದರಲ್ಲಿ ನಿಲ್ಲುತ್ತಾ ಇದ್ದವು. ಅವುಗಳನ್ನು ಹುಡುಕಿಕೊಂಡು ಹೋಗಿ, ಒಳಗೆ ಸೇರಿ ಕಾಲೂರಿ ನಿಲ್ಲುವುದೇ ಮಹಾ ಸಾಹಸ.

ಅಂಥ ಕಾಲಕ್ಕೆ ಬೆಳಗಿನ ಹೊತ್ತು ಮತ್ತೀಕೆರೆಯ ಬಸ್‌ಸ್ಟಾಪ್ ದೊಡ್ಡ ಕದನ ಭೂಮಿಯಂತೆ ಕಾಣುತ್ತಿತ್ತು. ದೂರದಲ್ಲಿ ಬಸ್ ಬರುವುದು ಗೊತ್ತಾಗುತ್ತಿದ್ದ ಹಾಗೆ ಅದನ್ನು ಹಿಡಿಯಲು ಜನ ಸಿದ್ಧರಾಗುತ್ತಾ ಇದ್ದರು. ಮೊದಲೇ ಜಾಲಹಳ್ಳಿ, ಎಚ್.ಎಂ.ಟಿ. ಮುಂತಾದ ಕಡೆಗಳಿಂದ ಒಡಲು ತುಂಬಿಕೊಂಡೇ ಬರುತ್ತಿದ್ದ ಬಸ್ಸುಗಳು ನಿಲ್ಲುತ್ತಲೇ ಇರಲಿಲ್ಲ. ನಿಂತರೂ ಸ್ಟಾಪ್‌ನಿಂದ ಆಚೆಯೋ, ಈಚೆಯೋ ಕ್ಷಣ ನಿಂತು ಇಳಿಯುವವರನ್ನು ತಪತಪನೆ ಉದುರಿಸಿ, ಜನ ಓಡಿ ಬಂದು ಹತ್ತಲು ಯತ್ನಿಸುವ ಮುನ್ನವೇ ಓಡಿಬಿಡುತ್ತಾ ಇದ್ದವು.

ಆಗ ಈಗಿನ ಹಾಗೆ ಶಾಲಾ ಮಕ್ಕಳಿಗೆ ಸ್ಕೂಲ್ ಬಸ್, ವ್ಯಾನ್‌ಗಳೂ ಇರಲಿಲ್ಲ. ಬೆನ್ನ ಮೇಲೆ ಮೂಟೆ ಹೊತ್ತುಕೊಂಡು ಅವು ಚಡಪಡಿಸಿ ಆಚೀಚೆ ಧಾವಿಸುತ್ತಾ ಇದ್ದರೂ, ಆ ಮಕ್ಕಳನ್ನೇ ತಳ್ಳಿಕೊಂಡು, ಗದರಿಸಿ ದೊಡ್ಡವರು ಮುಂದೆ ಓಡುತ್ತಾ ಇದ್ದರು. ಎಷ್ಟೋ ಸಲ ಇಂಥ ಪರದಾಟದಲ್ಲಿ ಮಕ್ಕಳು ಬೀಳುತ್ತಾ ಇದ್ದದ್ದೂ ಉಂಟು.

ಅಲ್ಲಿಂದ ನನ್ನ ಜೊತೆ ಪ್ರಯಾಣಿಸುತ್ತಾ ಇದ್ದ ಬಂಗಾಳಿ ಮಿತ್ರ 'ದತ್ತ' ಎನ್ನುವವರು ಇಂಥ ಪ್ರಸಂಗ ನಡೆದಾಗ ಗದರುತ್ತಾ ಇದ್ದರು. ''ಈ ಜನಕ್ಕೆ ಎಷ್ಟು ಹೇಳಿದರೂ ಬುದ್ಧಿ ಬರೋದಿಲ್ಲ. ಇದೇ ರೀತಿ ದನ ನುಗ್ಗಿದ ಹಾಗೆ ನುಗ್ಗಿ ಬಸ್‌ಸ್ಟಾಪ್‌ನಲ್ಲಿ ಒಂದು ಮಗೂನ ತುಳಿದು ಕೊಂದುಹಾಕಿದ್ದರು. ಅದಾದ ಎರಡು ದಿನ ಕೊಂಚ ತಣ್ಣಗಾಗಿತ್ತು. ಈಗ ಮತ್ತೆ ಯಥಾಸ್ಥಿತಿ'' ಎಂದು ಗೊಣಗುತ್ತಾ ಇದ್ದರು.

ಇದೇ ಬಸ್‌ಸ್ಟಾಪ್‌ನಲ್ಲಿ ಶಾಂತಿ ಎನ್ನುವ ಮಗು ಕೆಳಗೆ ಬಿದ್ದು, ಆಕೆಯನ್ನು ತುಳಿದುಕೊಂಡೇ ಬಸ್ ಹತ್ತಲು ಯತ್ನಿಸಿದ ಕಾರಣ ಮಗು ಸತ್ತು ಹೋಗಿತ್ತು. ಅದರ ಬಗ್ಗೆ ದೊಡ್ಡ ಗಲಾಟೆ ಆಯಿತು. ಸ್ವಲ್ಪ ದಿನದ ಮೇಲೆ ಮಗುವಿನ ನೆನಪಿಗೆಂದು ಮತ್ತೀಕೆರೆ ಬಸ್‌ಸ್ಟಾಪ್‌ಗೆ 'ಶಾಂತಿ ಬಸ್‌ಸ್ಟಾಪ್' ಅಂತಲೂ ಹೆಸರಿಟ್ಟಿದ್ದರಂತೆ. ನಾನು ಬಂದಾಗ ಅಂಥದೊಂದು ಫಲಕವನ್ನು ಸಣ್ಣದಾಗಿ ಬಸ್‌ಶೆಲ್ಟರ್‌ನಲ್ಲಿ ಹಾಕಿದ್ದರು.

ಇತ್ತೀಚೆಗೆ ಅದೂ ಕೂಡ ಕಾಣೆಯಾಗಿದೆ. ಜನಕ್ಕೆ ಮರೆವು ಜಾಸ್ತಿ. ಮತ್ತದೇ ತಿಕ್ಕಾಟ, ಜಗ್ಗಾಟ ನಿತ್ಯ ಇಲ್ಲಿನ ಸಂಗತಿ.

ಆ ಮಟ್ಟಿಗೆ ನಮ್ಮ ಹೈದರಾಬಾದ್ ವಾಸಿ ಅನ್ನಿಸುತ್ತದೆ. ಅಲ್ಲಿ ಬುದ್ಧಿ ತಿಳಿಯದ, ಯೌವನದ ಉತ್ಸಾಹದಿಂದ ತಪ್ಪು ಮಾಡಲು ಯತ್ನಿಸುವ ಹುಡುಗರು ತಂಟೆ ಮಾಡುತ್ತಾ ಇದ್ದುದು ನಿಜ. ಇಲ್ಲಿನ ಬಸ್ ಹತ್ತುವಾಗಿನ ಹೊಡೆದಾಟ ನೋಡಿದರೆ ನಮ್ಮ ಊರಿನ ಜನ ಸಾವಿರ ಪಾಲು ವಾಸಿ ಅನಿಸುತ್ತದೆ.

■ ಸುಧಾಕರ ರೆಡ್ಡಿ, ಸಿಕಂದರಾಬಾದ್

ಈ ಅಂಕಣಕ್ಕೆ ನೀವು ನಿಮ್ಮ ಅನುಭವಗಳನ್ನು ಬರೆದು ಕಳಿಹಿಸಬಹುದು.
ನಿಮ್ಮ ಲೇಖನ ಸೇರಬೇಕಾದ ವಿಳಾಸ :

ಸಂಪಾದಕ
ಉತ್ತರ ಧ್ರುವದಿಂ.... ಅಂಕಣ ವಿಭಾಗ
'ಬಿಸಿಲ ಬದುಕು', 473, 1ನೇ ಕ್ರಾಸ್
1ನೇ ಬ್ಲಾಕ್, 3ನೇ ಸ್ಟೇಜ್, ಬಸವೇಶ್ವರನಗರ
ಬೆಂಗಳೂರು - 560 079

ರಕ್ತಲೇಪಿತ ಸರ್ವವ್ಯಾಪಿ ವಾಮನಮೂರ್ತಿ

ಒಣ ಮೆಣಸಿನ ಕಾಯಿ

ಕೋಪಕ್ಕೂ ಒಣ ಮೆಣಸಿನಕಾಯಿಗೂ ನಂಟು! ಕೋಪಿಷ್ಠರು ಇದನ್ನು ತಿನ್ನುವರೋ, ತಿಂದುದಕ್ಕಾಗಿ ಕೋಪಬರುವದೋ ನನಗೆ ಗೊತ್ತಿಲ್ಲ. ಆದರೆ ನಮ್ಮ ಭಾಗದಲ್ಲಿ, 'ಅವನಿಂದ ಜೋಪಾನ! ಅವ ಕೆಂಪು ಮೆಣಸಿನ ಕಾಯಿ!' ಎನ್ನುವರು. ಪಾಪ! ಕುದಿನೀರಲ್ಲಿ ತಾನು ಬೆಂದು, ನುಣ್ಣಗಾಗಿ, ನಮ್ಮ ತಟ್ಟೆಯಲ್ಲಿ ಮರೆಯಲಾರದ ವ್ಯಂಜನವಾಗುತ್ತಿದೆ - 'ರಂಜಕ' ಅಥವಾ 'ಕೆಂಪು ಹಿಂಡಿ' ಅದರ ಇತರ ಹೆಸರುಗಳು. ಗಬಗಬನೆ ಆಹಾರ ತಿನ್ನುವಾಗ, ಇದರ 'ಖಾರ' ತಪ್ಪಿ ಉಸಿರು ನಳಿಕೆಯತ್ತ ನಡೆದಾಗ 'ಸತ್ತು-ಸತ್ತು ಬದುಕಿದ' ಅನುಭವ ಬಂದೀತು



ಗೊಂಬೆಯ 'ವಾಕಿಂಗ್ ಸ್ಟಿಕ್' ನಂತೆ ಕಾಣುವ, ನುಣುಪಾದ ಸ್ಪರ್ಶ, ಕುಬ್ಜರೂಪ, ಘಾಟು ವಾಸನೆ, ಕಿವಿಗಳ ಹಿಂದೆ, ಮೂಗಿನ ತುದಿಯಲ್ಲಿ ಕೆಂಬಣ್ಣ ತರುವ ಒಣಮೆಣಸಿನಕಾಯಿಯ ಪರಿಚಯ ಪತ್ರಗಳಿವು. ದೇವರು ಒಬ್ಬನೇ ಆದರೂ ಅವನಿಗೆ ಹಲವು ಹೆಸರುಗಳಿರುವಂತೆ, ಇದರ ಪುಡಿಗೂ ಸಹ ಹಲವು ಹೆಸರುಗಳಿವೆ. ಇಂಗ್ಲಿಷ್ ಭಾಷೆಯಲ್ಲಿ ಮೂಲತಃ Chili-Chilli ಆದರೂ, ಹಾಗೇ ತಿಂದರೆ ಚಳಿ-ಚಳಿಯಾಗುವದೆಂತಲೋ ಏನೋ - Chilly ಕೂಡ ಬಳಕೆಯಲ್ಲಿದೆ. ಒಣ ಮೆಣಸಿನಕಾಯಿ ಇದರ ಗಿಡದ ಬೀಜಕೋಶ. ಮೆಣಸಿನ ಕಾಳು-ಕರಿಯದು ಅಥವಾ ಬಿಳಿಯದು-ಇದರ ದೂರದ ಸೋದರ ಸಂಬಂಧಿ. ಈ ಕಾಳಿನ ಪುಡಿ - 'ಮೆಣಸಿನ ಪುಡಿ'. ನಾವೀಗ ತಿಳಿದುಕೊಳ್ಳುತ್ತಿರುವದು ಒಣ ಮೆಣಸಿನ ಪುಡಿ, ಮೆಣಸಿನ ಕಾಯಿ ಪುಡಿಯ ಬಗೆಗೆ. ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ''ಖಾರದಪುಡಿ'' ಎನ್ನುವುದನ್ನು ರೂಢಿಸಿಕೊಂಡು ಬಿಟ್ಟರೆ ವಾದ ವಿವಾದದ ಭಯವಿಲ್ಲ! ಮೆಣಸಿನ ಕಾಯಿ ಎಂದು ನೆನಪು ಮಾಡಿಕೊಂಡೊಡನೆ ನೆನಪಾಗುವದು ಉತ್ತರ ಕರ್ನಾಟಕದ ಹಾವೇರಿ ಜಿಲ್ಲೆಯ 'ಬ್ಯಾಡಗಿ'. ಹಾಗೇ ಹೈದರಾಬಾದ್ ಕರ್ನಾಟಕದ 'ಬಳ್ಳಾರಿ' ಸಹ. 'ಕಡ್ಡಿ-ಕಾಯಿ', 'ಡಬ್ಬಗಾಯಿ', 'ಜ್ವಾಲಾ', 'ಗುಂಟೂರು ತಳಿ' - ಇವು ಜನಪ್ರಿಯ ಪ್ರಕಾರಗಳು.

ಒಣ ಮೆಣಸಿನಕಾಯಿ-ಯಾವದೇ ರೂಪದಲ್ಲಿರಲಿ -ಅಡಿಗೆ ಮನೆಯಲ್ಲಿ ಗೃಹಿಣಿಯ ಆತ್ಮೀಯ ಸಖಿ. ಉಪ್ಪು, ಸಕ್ಕರೆ, ಅರಿಶಿನ ಪುಡಿಗಳ ನಂತರದ ಸ್ಥಾನ ಇದಕ್ಕೆ. ಇದೊಂದು ಪ್ರಮುಖ ಸಾಂಬಾರು ಘಟಕ. ಇದು ಸರ್ವವ್ಯಾಪಿಯೂ ಹೌದು; ಬಹೂಪಯೋಗಿಯೂ ಹೌದು.

ಕೋಪಕ್ಕೂ ಒಣ ಮೆಣಸಿನಕಾಯಿಗೂ ನಂಟು! ಕೋಪಿಷ್ಠರು ಇದನ್ನು ತಿನ್ನುವರೋ, ತಿಂದುದಕ್ಕಾಗಿ ಕೋಪಬರುವದೋ ನನಗೆ ಗೊತ್ತಿಲ್ಲ. ಆದರೆ ನಮ್ಮ ಭಾಗದಲ್ಲಿ, 'ಅವನಿಂದ ಜೋಪಾನ! ಅವ ಕೆಂಪು ಮೆಣಸಿನ ಕಾಯಿ!' ಎನ್ನುವರು. ಪಾಪ! ಕುದಿನೀರಲ್ಲಿ ತಾನು ಬೆಂದು, ನುಣ್ಣಗಾಗಿ, ನಮ್ಮ ತಟ್ಟೆಯಲ್ಲಿ ಮರೆಯಲಾರದ ವ್ಯಂಜನವಾಗುತ್ತಿದೆ - 'ರಂಜಕ' ಅಥವಾ 'ಕೆಂಪು ಹಿಂಡಿ' ಅದರ ಇತರ ಹೆಸರುಗಳು. ಗಬಗಬನೆ ಆಹಾರ ತಿನ್ನುವಾಗ, ಇದರ 'ಖಾರ' ತಪ್ಪಿ ಉಸಿರು ನಳಿಕೆಯತ್ತ ನಡೆದಾಗ 'ಸತ್ತು-ಸತ್ತು ಬದುಕಿದ' ಅನುಭವ ಬಂದೀತು. ಉಪ್ಪಿಟ್ಟಿನಲ್ಲಿ ತುಂಡು ರೂಪದಲ್ಲಿರುವ, ವಿಶಿಷ್ಟ ರುಬ್ಬು-ಸಾಂಬಾರದಲ್ಲಿ ಇಡಿಯಾಗಿರುವ ಒಣಮೆಣಸಿನಕಾಯಿಯನ್ನು ಏನೋ ಧ್ಯಾನಿಸುತ್ತ ಕಚ್ಚಿದರೆ, ನಿಮ್ಮ ಉಸಿರಿನಿಂದಲೇ ಬಾಯೊಳಗೆ ಗಾಳಿ ಹಾಕುತ್ತ, ಶಂಕರ್ ಮಹಾದೇವನ್ ರಂತೆ ತಡೆರಹಿತ ಹಾಡುವದನ್ನು ರೂಢಿಸಿಕೊಳ್ಳಬಹುದು. ಹೆಂಗಸರು ತಮ್ಮ ಸಂಭಾವ್ಯ ಅಪಮಾನವನ್ನು - ಮಿರ್ಚ್ ಮಸಾಲಾ ಚಲನಚಿತ್ರದಲ್ಲಿಯಂತೆ - ಇದರ ಪುಡಿಯನ್ನುಪಯೋಗಿಸಿ ತಡೆದರೆ, ಗಂಡಸರು, ಕಳ್ಳರು-ದರೋಡೆಕೋರರನ್ನು ಹಿಡಿಯಲು ಬಳಸಬಹುದು. ಅದರಂತೆ ಕಳ್ಳರು-ದರೋಡೆಕೋರರು ಆರಕ್ಷಕರಿಂದ ಬಚಾವಾಗಲೂ ಇದು ಉಪಯೋಗಿ.

ನಾವು ಉಸಿರಾಡುವ ವಾಯು, ಕುಡಿಯುವ ನೀರು ಪ್ರದೂಷಿತವಾಗಿರುವಾಗ 'ಅಪ್ಪಟ ಖಾರದ ಪುಡಿ' ದೊರಕೀತೇ? ಇಲ್ಲ. ಆದುದರಿಂದಲೇ, ಕಾನೂನಿನ ಮೂಲಕ ಖಾರದ ಪುಡಿಯನ್ನು ಬಿಡಿಯಾಗಿ (loose) ಮಾರಾಟ ಮಾಡುವದನ್ನು ನಿಷೇಧಿಸಲಾಗಿದೆ. ಪೊಟ್ಟಣ, ಚೀಲಗಳಲ್ಲಿ ಇದನ್ನು ಮಾರಬಹುದು. ಜನ ಬಳಕೆಯ ಉಪ್ಪು, ಸಕ್ಕರೆ, ಹಪ್ಪಳ, ಉಪ್ಪಿನಕಾಯಿ, ಮಸಾಲೆ ವಸ್ತುಗಳು ಇವೆಲ್ಲ ಈಗ ಪಟ್ಟಣಗಳಲ್ಲಿ ವಿವಿಧ ಬಗೆಯ ಪೊಟ್ಟಣಗಳಲ್ಲಿ ಲಭ್ಯವಿವೆ. ಕೆಡದಿರುವ ಹಾಲು, ಕುಡಿಯುವ ನೀರು ಇವೂ ಲಭ್ಯವೆಂದರೆ 'ಪೊಟ್ಟಣ - ಮಹಿಮೆ' ಊಹಿಸಬಹುದು. 'ಗ್ರಾಮೀಣ ಗ್ರಾಹಕರನ್ನು ಕೈವಶ ಮಾಡಿಕೊಳ್ಳಲು ವಿವಿಧ ವಸ್ತುಗಳ 'ಪುಟ್ಟ-ಪೊಟ್ಟಣ' Sachet) ಗಳನ್ನು ನೋಡದವರೇ ಇಲ್ಲ.

ಪೊಟ್ಟಣ ಕಟ್ಟಿದ ಖಾರದ ಪುಡಿಯ ಮಾರಾಟ, 1954ರ ಆಹಾರ ಕಲಬೆರಕೆ ತಡೆ ಕಾನೂನು, 1977ರ (ಪೊಟ್ಟಣ ಕಟ್ಟಿದ ವಸ್ತುಗಳ) ತೂಕ, ಅಳತೆ ನಿಯಮಗಳು ವಿಧಿಸುವ ಶರತ್ತುಗಳಿಗೆ ಒಳಪಟ್ಟಿದೆ. ಖಾರದ ಪುಡಿಯ ಗುಣಮಟ್ಟವನ್ನು ಖಾತರಿಪಡಿಸುವ 'ಅಗ್‌ಮಾರ್ಕ್' ಮುದ್ರೆಯನ್ನೂ ತಯಾರಕರು ಆಶ್ರಯಿಸಬಹುದು. ಆದರೆ ಇದು ಕಡ್ಡಾಯವಲ್ಲ. ಅಗ್‌ಮಾರ್ಕ್ (Agricultural Marketing) ಇದು ಕೃಷಿಜನ್ಯ ಪದಾರ್ಥಗಳಿಗೆ, ಆಹಾರ ಪದಾರ್ಥಗಳಿಗೆ ಅನ್ವಯಿಸುತ್ತದೆ - ಐ.ಎಸ್.ಐ. ಗುರುತು ಇತರ ವಸ್ತುಗಳಿಗೆ ಅನ್ವಯಿಸುವಂತೆ. ಈ ಮುದ್ರೆ ದೊರೆಯಬೇಕಾದರೆ ಗುಣಮಟ್ಟಕ್ಕೆ ಸಂಬಂಧಿಸಿ, ಅದು ವಿಧಿಸುವ ನಿಯಮಗಳು ಪಾಲಿಸಲ್ಪಡಬೇಕು. ಪೊಟ್ಟಣದ ಮೇಲೆ ಎಲ್ಲ ವಿವರ ನೀಡುವ ಅಂಟು-ಕಾಗದ (label) ಇರುವದು ಸಾಮಾನ್ಯ. ಪೊಟ್ಟಣದ ಕಾಗದದ ಮೇಲೆಯೂ ಇವುಗಳನ್ನು ಮುದ್ರಿಸಿರಬಹುದು. ಅನಾಮಧೇಯ

ಪೊಟ್ಟಣಗಳಿಗಂತೂ ಕೊರತೆಯಿಲ್ಲ.

ಖಾರದ ಪುಡಿಯನ್ನು ಕೊಳ್ಳುವಾಗ 'ಪ್ರಥಮ ದೃಷ್ಟಿ ಪ್ರೇಮಾಂಕುರ'ದ ಖರೀದಿ (impulsive buying) ಸಲ್ಲ. ಚನ್ನಾಗಿ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿ. ಆದರೆ ಎಚ್ಚರಿಕೆ! ಅಕ್ಕಪಕ್ಕದವರು ಪೂರ್ವಾಗ್ರಹಪೀಡಿತರಾಗಿ, ತಯಾರಕರು-ಮಾರಾಟಗಾರರು ಸುಳ್ಳು-ಮೋಸಗಳಿಂದ ಕೂಡಿದ, ಜಾಹೀರಾತುಗಳು ಉತ್ಪ್ರೇಕ್ಷಿತ ಮಾಹಿತಿ ನೀಡಬಹುದು. ಅಧಿಕೃತ ಮಾಹಿತಿ ಪೊಟ್ಟಣದ ಮೇಲೆ ಲಭ್ಯವಿರುವ ವಿವರಗಳಿಂದ ಮಾತ್ರ ದೊರಕಲು ಸಾಧ್ಯ. ಪೊಟ್ಟಣಗಳ ಮೇಲೆ ಆಗಾಗ ಕಾಣುವ 'ಹೊಸತು-ಸುಧಾರಿತ' ಎಂಬ ಶಬ್ದಗಳ ಬಗೆಗೆ ಎಚ್ಚರವಹಿಸಿ. ಈ ಮೋಸದ ಬಗೆಗೆ ಪ್ರಚಲಿತವಿರುವ ತಮಾಷೆ: ಹೊಸ ಬಗೆಯ ವಿನ್ಯಾಸ; ಸುಧಾರಿತ ಮಾರಾಟ ತಂತ್ರ' ಎಂದು!

ಪೊಟ್ಟಣದಲ್ಲಿಯ ಖಾರದ ಪುಡಿಯಲ್ಲಿ ನಾವು ಗಮನಿಸಬೇಕಾದ ಅಂಶಗಳು ಆರು; ತೂಕ; ನುಣುಪು; 'ಖಾರ'ದ ಪ್ರಮಾಣ; ಎಣ್ಣೆ (ಇದ್ದರೆ)ಯ ಪ್ರಮಾಣ; ಲೋಹದ ಪ್ರಮಾಣ ಮತ್ತು ಪುಡಿಯ ವರ್ಣನೋಟ. ಪ್ರಯೋಗ ಶಾಲೆಯಲ್ಲಿ ಪೊಟ್ಟಣದ ಮೇಲಿನ ವಿವರಗಳನ್ನು, ಕಾನೂನುಗಳು ವಿಧಿಸುವ ನಿಯಮಗಳ ಬಳಕೆಯಲ್ಲಿ, ಪುಡಿಯನ್ನು ವಿವಿಧ ಪರೀಕ್ಷೆಗಳಿಗೊಳಪಡಿಸಿ, ಒರೆಗೆ ಹಚ್ಚಲಾಗುತ್ತದೆ. ಆದರೆ ಇಷ್ಟು ಮಟ್ಟದ 'ಸೂಕ್ಷ್ಮ-ರುಚಿಯ, ಅತಿಕ್ಲಿಷ್ಟ ವಿಮರ್ಶೆಯ ಸ್ವಭಾವ' (fastidiousness) ನನಗಂತೂ ಇಲ್ಲ. ಆದುದರಿಂದ ಸಮಾನ ಮನಸ್ಕರಿಗೆ ನನ್ನ ಕಿವಿ ಮಾತು: 'ನೀವು ಕೊಂಡ ಖಾರದ ಪುಡಿಯನ್ನು ಮನೆಯಲ್ಲಿ ಸ್ವತಃ ಪರೀಕ್ಷಿಸಿ' (ಚೌಕ ನೋಡಿ)

ಖಾರದ ಪುಡಿಯ ಮನೆ ಪರೀಕ್ಷೆ

1. ಚುಂಬುಪಾತ್ರ ಅಥವಾ ಗಾಜಿನ ಲೋಟ ತೆಗೆದುಕೊಳ್ಳಿ.
2. ಅದರಲ್ಲಿ ಸ್ವಲ್ಪ ನೀರು ಹಾಕಿ, ಖಾರದ ಪುಡಿ ಹಾಕಿ ಕಲಕಿರಿ.
3. ಸ್ವಲ್ಪ ಸಮಯ ಕಳೆಯಲಿ.
4. ಕಟ್ಟಿಗೆಯ ಪುಡಿ; ಕೃತ್ರಿಮ ಬಣ್ಣ ಅನುಕ್ರಮವಾಗಿ ತೇಲುತ್ತದೆ, ನೀರನ್ನು ವರ್ಣಮಯ ಮಾಡುತ್ತವೆ.
5. ನೀರಿನಲ್ಲಿ ಕರಗುವ ಔದ್ಯಮಿಕ ಬಣ್ಣ (dye) ಕೂಡಿದ್ದರೆ, ಲೋಟದಲ್ಲಿ ಪುನಃ ತೆಗೆದುಕೊಂಡ ಸ್ವಲ್ಪ ನೀರಿನ ಮೇಲೆ ಖಾರದ ಪುಡಿಯನ್ನು ಸಿಂಪಡಿಸಿದರೆ ಬಣ್ಣವು ಸೀಳು ಸೀಳಾದ ತುಂಡುಗಳಲ್ಲಿ ನೀರಿಗಿಳಿಯುವದು ಗೋಚರಿಸುತ್ತದೆ.
6. ನುಣುಪು ಕೈಗೂ.
7. ಖಾರದ ಪ್ರಮಾಣ ಬಾಯಿಗೂ ತಿಳಿಯುತ್ತವೆ.

ಗುಜರಾತ್ ರಾಜ್ಯದ ನಾಲ್ಕು, ಕರ್ನಾಟಕದ ಎರಡು, ಮಹಾರಾಷ್ಟ್ರದ ಒಂದು- ಹೀಗೆ ಏಳು ಗುರುತಿನ 'ಖಾರದ ಪುಡಿ'ಯನ್ನು ಇತ್ತೀಚೆಗೆ ಪರೀಕ್ಷೆಗೆ ಒಳಪಡಿಸಲಾಯಿತು. ಖಾರದ ಪುಡಿಯ ತಯಾರಿಕೆ-ಮಾರಾಟಗಳಿಗೆ ಅನ್ವಯಿಸದ ದೇಶ ವಿದೇಶಗಳ ಮಾನಕಗಳನ್ನು ಗಣನೆಗೆ ತೆಗೆದುಕೊಂಡದ್ದರಿಂದ ಇದು 'ಅತಿ-ಶಾಸ್ತ್ರೀಯ, ಪಂಡಿತ-ಪ್ರಿಯ' ಪರೀಕ್ಷೆ ಎಂದು ತಿಳಿಯಬಹುದು.

ಕರ್ನಾಟಕದ ಎರಡು ತಯಾರಿಕೆಗಳೆಂದರೆ- ಬೆಂಗಳೂರಿನ 'ಎಂ.ಟಿ.ಆರ್' ಮತ್ತು ಮೈಸೂರಿನ 'ಆರ್.ಕೆ.' ಗುರುತಿನವು. ಇವೆರಡಲ್ಲಿ 'ಎಂ.ಟಿ.ಆರ್' ಮಾತ್ರ 'ಅಗ್‌ಮಾರ್ಕ್' ಹೊಂದಿದೆ.

ಪ್ರಜ್ಞಾವಂತ ಗ್ರಾಹಕರಾದ ನಮಗೆ, ಅನ್ವಯವಾಗುವ ಕಾನೂನುಗಳು ವಿಧಿಸುವ ಅಂಶಗಳಾದರೂ ತಿಳಿದಿರಬೇಕು.

(ಪೊಟ್ಟಣ ಕಟ್ಟಿದ ವಸ್ತುಗಳು) ತೂಕದಳತೆ ನಿಯಮಗಳು - 1977 ಹೀಗೆ ವಿಧಿಸುತ್ತದೆ;

1. ನೂರು ಗ್ರಾಂ.ಗಳ ಪೊಟ್ಟಣದಲ್ಲಿಯ ಪದಾರ್ಥದ ತೂಕ ಕನಿಷ್ಠ 97ಗ್ರಾಂ. ಇರಬೇಕು.
2. ಐವತ್ತು ಗ್ರಾಂಗಳ ಪೊಟ್ಟಣದಲ್ಲಿಯ ಪದಾರ್ಥದ ತೂಕ ಕನಿಷ್ಠ 48.5 ಗ್ರಾಂ ಇರಬೇಕು.

ಅದೇ ಪೊಟ್ಟವನ್ನು ನೀವು ಪುನಃ ಪುನಃ ಕೊಳ್ಳುತ್ತೀರೆಂದುಕೊಳ್ಳಿ, ತೂಕ 3ಗ್ರಾಂ (1.5ಗ್ರಾಂ)ಗಿಂತ ಕಡಿಮೆಯಿದ್ದರೆ ಪ್ರತಿಸಲ ಕೆಲವು ಪೈಸೆಯಂತೆ ಒಟ್ಟಿನಲ್ಲಿ ಎಷ್ಟು ನಷ್ಟ ಅನುಭವಿಸುವಿರಿ- ಯೋಚಿಸಿ. 'ಹನಿಹನಿ ಸೇರಿ ಹಳ್ಳ, ತೆನೆ ತೆನೆ ಸೇರಿ ರಾಶಿ' ಅಲ್ಲವೇ ಏಕೆಂದರೆ ಹಲವರಿಗೆ ಖಾರದ ಪುಡಿ ನಿತ್ಯೋಪಯೋಗಿ ಪದಾರ್ಥ. ನಿಮ್ಮ ಹಾನಿ ವೈಯಕ್ತಿಕವಾದುದಾದರೆ, ಪೊಟ್ಟಣ ತಯಾರಕರಿಗೆ ಇದು ಗಾಳಿಗೆ ಉದುರಿದ ಹಣ್ಣುಗಳಂತೆ (Windfall) ಅನಿರೀಕ್ಷಿತ ಲಾಭ!

1954ರ ಆಹಾರ ಕಲಬೆರಕೆ ತಡೆಕಾನೂನು ವಿಧಿಸುವದು ಹೀಗೆ;

1. ತೇವದ ಗರಿಷ್ಠ ಪ್ರಮಾಣ	ಶೇಕಡಾ 12
2. ಬೂದಿಯ ಗರಿಷ್ಠ ಪ್ರಮಾಣ	ಶೇಕಡಾ 8
3. ಸೀಸದ ಪ್ರಮಾಣ ದಶಲಕ್ಷದಲ್ಲಿ	10 ಭಾಗ
4. ತಾಮ್ರದ ಪ್ರಮಾಣ ದಶಲಕ್ಷದಲ್ಲಿ	30 ಭಾಗ
5. ಸತುವಿನ ಅದೇ ಪ್ರಮಾಣ ದಶಲಕ್ಷದಲ್ಲಿ	30 ಭಾಗ

6. ಖಾದ್ಯತೈಲವನ್ನು ಗರಿಷ್ಠ ಶೇಕಡಾ 2ರಷ್ಟು ಸೇರಿಸಬಹುದು.

ಆದರೆ ಇದನ್ನು ಪೊಟ್ಟಣದ ಮೇಲೆ ನಮೂದಿಸುವದು ಕಡ್ಡಾಯ. ನುಣುಪಿನ ಮಟ್ಟದ ಬಗೆಗಾಗಲೀ, ಪದಾರ್ಥದ 'ಆಯುಷ್ಯ'ದ ಬಗೆಗಾಗಲೀ ಯಾವ ಉಲ್ಲೇಖವೂ ಎರಡೂ ಕಾನೂಗಳಲ್ಲಿಲ್ಲ. 'ಅಗ್‌ಮಾರ್ಕ್'ನಲ್ಲೂ ಇಲ್ಲ.

'ಅಗ್‌ಮಾರ್ಕ್' ಮುದ್ರೆ ನಿಮ್ಮ ಪೊಟ್ಟಣದ ಮೇಲೆ ಬೇಕಾದರೆ ಗರಿಷ್ಠ ತೇವದ ಪ್ರಮಾಣ ಶೇಕಡಾ 10 ಇರಬೇಕು. ಈ ಮುದ್ರೆ ಪಡೆಯುವದೂ ಐಚ್ಛಿಕ.

ಸಂಬಂಧಿಸಿದ ಅಧಿಕಾರಿಗಳು ಕಾನೂನು ಉಲ್ಲಂಘನೆಯ ಬಗೆಗೆ ಸಂಶಯ ತಾಳಿದಾಗೆಲ್ಲ ಮಾದರಿಗಳನ್ನು ಪರೀಕ್ಷೆಗಾಗಿ ಬೆಂಗಳೂರು ಪರೀಕ್ಷಾಲಯಕ್ಕೆ ರವಾನಿಸುತ್ತಾರೆ.

ಕಾನೂನು ಬದ್ಧ ಶರತ್ತುಗಳಲ್ಲದೇ, ನಮ್ಮ ತಿಳಿವಳಿಕೆಗಾಗಿ ಕೆಳಗಿನ ಎರಡನ್ನು ಗಮನಿಸಬಹುದು :

1. ಖಾರದ ಪ್ರಮಾಣ 24,000 ಸೂಚ್ಯಂಕಗಳಿಗಿಂತ ಕಡಿಮೆಯಾಗಬಾರದು. ಗರಿಷ್ಠ ಸೂಚ್ಯಂಕ ವಿಧಿಸಿರದಿದ್ದರೂ, ಸಾಮಾನ್ಯವಾಗಿ ಅದು 40,000 ಸೂಚ್ಯಂಕ ಮೀರಬಾರದು. ಆದರೆ ಕರ್ನಾಟಕದ ಎರಡೂ ಗುರುತಿನ ಪೊಟ್ಟಣಗಳು ಇದನ್ನು ಮೀರುತ್ತಿವೆ! ಊಹಿಸಿಯೇ ಕಣ್ಣೀರು ತುಂಬುತ್ತದೆ!
2. ಪುಡಿಯು 500 ಮೈಕ್ರಾನ್‌ಗಳ ಜರಡಿಯಲ್ಲಿ ಸಲೀಸಾಗಿ ಹಾಯ್ದು ಬರಬೇಕು. (ಮೈಕ್ರಾನ್ ಎಂದರೆ ದಶಲಕ್ಷದಲ್ಲಿ ಒಂದು ಭಾಗ)

ಕರ್ನಾಟಕದ ಎರಡೂ ಉತ್ಪಾದನೆಗಳಲ್ಲಿ ಸೇರಿಸಿದ ಖಾದ್ಯ ತೈಲ ಇಲ್ಲ.

ಉತ್ಪಾದಕರ ಜವಾಬ್ದಾರಿ ಎಂದರೆ ಗ್ರಾಹಕರ ಹಕ್ಕುಗಳು ಎಂಬುದು ನಮಗೆ ತಿಳಿದಿದೆ. ಉತ್ಪಾದಕರ ಅನಿಸಿಕೆ ಎಂದರೆ ಪ್ರಚಲಿತ ಅನ್ವಯಿಸುವ ಕಾನೂನುಗಳು, ಸಾಮಾಜಿಕ ಆರೋಗ್ಯ ಮತ್ತು ಗ್ರಾಹಕರ ಹಿತರಕ್ಷಣೆ-ಎರಡಕ್ಕೂ ಸೂಕ್ತವಾಗಿವೆ. ಕಾಯ್ದೆಬದ್ಧವಲ್ಲದ, ಎಲ್ಲರಿಗೂ ಅವಶ್ಯಕವಲ್ಲದ ಇತರ ಪರೀಕ್ಷೆಗಳಿಂದ ಸಾರ್ವಜನಿಕರು ಗೊಂದಲಕ್ಕೀಡಾಗಬಹುದು. ಆದುದರಿಂದ ಇಂಥ ಮಾನದಂಡಗಳನ್ನು ಅನುಸರಿಸಿ ಪದಾರ್ಥಗಳನ್ನು ಪರೀಕ್ಷಿಸಿದವರು ಕೇಳುವ ಲಿಖಿತ ಪ್ರತಿಕ್ರಿಯೆಗೆ ಉತ್ಪಾದಕರು ಒಂದೋ, ಮೌನ ತಾಳುತ್ತಾರೆ ಅಥವಾ ಅವುಗಳನ್ನು ಅಖಿಲ ಭಾರತ ಖಾದ್ಯ ಪದಾರ್ಥ ಉದ್ಯಮಗಳ ಸಂಘಕ್ಕೆ ಸಾಗಹಾಕುತ್ತಾರೆ. ಸಂಘದ ಉತ್ತರ: ನಿಮ್ಮ ವರದಿಗಳು ವಿಶ್ವಾಸಾರ್ಹವಲ್ಲ; ಆದ್ದರಿಂದ ಅಗ್ರಾಹ್ಯ!

■ ಡಾ|| ಟಿ.ಕೆ.ತಾಪಸ್

ತಾಯಿಯ ಎದೆ ಹಾಲು ಆರೋಗ್ಯಕ್ಕೆ ಒಳ್ಳೆಯದು. ಮಕ್ಕಳಲ್ಲಿ ಇದು ಶೇಕಡಾ ಐವತ್ತರಷ್ಟು ಎಚ್‌ಐವಿ ಪಾಸಿಟೀವ್ ಆಗುವುದ ತಡೆಯುತ್ತದೆ ಎಂದು ತಿಳಿದು ಬಂದಿದೆ. ನೆಟಾಲ್‌ನ ಕಿಂಗ್ ಎಡ್ವರ್ಡ್ ಆಸ್ಪತ್ರೆಯಲ್ಲಿ ಐದು ನೂರು ಪ್ರಕರಣಗಳ ಅಧ್ಯಯನದಿಂದ ಇದು ತಿಳಿದು ಬಂದಿದೆ. ಈ ಅಧ್ಯಯನ ನಡೆಸಿದ ನಾಲ್ವರು ವೈದ್ಯರಲ್ಲಿ ಇಬ್ಬರು ಭಾರತೀಯ ಮೂಲದವರು.

ನೀರದ್ ಚೌಧುರಿ



ಕೊನೆಯ ಅಜ್ಞಾತ ಭಾರತೀಯ

ನೀರದ್ ಚೌಧುರಿ ತಮ್ಮ ನೂರಾ ಎರಡನೇ ವರ್ಷದಲ್ಲಿ ಇಂಗ್ಲೆಂಡಿನ ಆಕ್ಸ್‌ಫರ್ಡ್‌ನ ಮನೆಯಲ್ಲಿ ನಿಧನರಾದರು. ಹುಟ್ಟಿದ್ದು ಈಗಿನ ಬಾಂಗ್ಲಾದೇಶದ ಕಿಶೋರ್ ಗಂಜ್‌ನಲ್ಲಿ. ಟ್ಯಾಗೋರರ ಕವಿತೆ ವಿಕೃತಗೊಳಿಸದರೆ ಸಿಡಿದೇಳುವ ಬಾಂಗ್ಲಾದೇಶೀಯರು, ನೀರದ್ ಚೌಧುರಿ ಅವರನ್ನು ತಮ್ಮವರೆಂದು ಒಪ್ಪಲಿಲ್ಲ. ಕಟ್ಟಾ ಹಿಂದೂ ಉಗ್ರವಾದಿಯಂತೆ ಮಾತಾಡುತ್ತಿದ್ದ ಆತನನ್ನು ಭಾರತೀಯರೂ ತಮ್ಮವನೆಂದು ಭಾವಿಸಲಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಅವರು ಸದಾ ಎತ್ತಿ ಹಿಡಿಯುತ್ತಾರೆಂದೇ ಇವರ ತಕರಾರು.

ಹುಟ್ಟಾ ವಿಲಾಯಿತಿಯಂತೆ ಸೂಟು, ಹ್ಯಾಟು ಧರಿಸುವುದು ನೀರದ್ ಬಾಬೂಗೆ ತುಂಬಾ ಇಷ್ಟ. 1951ರಲ್ಲಿ ಅಜ್ಞಾತ ಭಾರತೀಯನ ಆತ್ಮ ಚರಿತ್ರೆ (Autobiography of an Unknown Indian) ಕೃತಿಯನ್ನು ಅವರು ಅರ್ಪಿಸಿದ್ದು ಭಾರತದ ಬ್ರಿಟಿಷ್ ಸಾಮ್ರಾಜ್ಯದ ನೆನಪಿಗೆ. ಆತನಷ್ಟು ಗಾಢವಾದ ತಿಳಿವಳಿಕೆಯ, ಮನುಷ್ಯರನ್ನು ಅರ್ಥಮಾಡಿಕೊಂಡ ಇನ್ನೊಬ್ಬನನ್ನು ಇದುವರೆಗೆ ಕಂಡಿಲ್ಲ ಎಂದು ಖ್ಯಾತ ಲೇಖಕ ಖುಷ್‌ವಂತ್ ಸಿಂಗ್ ಹೇಳುತ್ತಾರಾದರೂ, ಭಾರತೀಯ ಸಾಹಿತಿಗಳಿಗೆ ಅಂಥ ಭಾವನೆ ಇಲ್ಲ.

ವಿವಾದಗಳಿಂದಾಗಿಯೇ ಅಂತರಾಷ್ಟ್ರೀಯ ಖ್ಯಾತಿ. ಭಾರತೀಯರನ್ನು, ಅವರ ವಿಚಾರ, ಚಿಂತನೆಗಳನ್ನು ನಿಕೃಷ್ಟವಾಗಿ ಕಾಣುವ ಮೂಲಕವೇ ಪಾಶ್ಚಿಮಾತ್ಯರಿಗೆ ಇವರು ಪ್ರಿಯರಾಗುತ್ತಾರೆ. ತಮ್ಮ ಸಾಹಿತ್ಯಕ್ಕೆ ಮಾರುಕಟ್ಟೆ ಗಳಿಸಿಕೊಳ್ಳುತ್ತಾರೆ ಎಂಬುದು ಇಲ್ಲಿನ ವಿಮರ್ಶಕರ ಗೊಣಗಾಟ. ಇಂಥ ಕಾರಣಗಳಿಂದಾಗಿಯೇ ಜನಪ್ರಿಯತೆಗಳಿಸಿದ ಶಷ್ಟಿಬ್ರತ ಅವರಂಥ ಲೇಖಕರು ಹೆಚ್ಚು ಕಾಲ ಬಾಳಲಿಲ್ಲ ಎಂಬುದು ನಾವು ಮರೆಯಬಾರದು. 'ಮೈಗಾಡ್ ಡೈಡ್ ಯಂಗ್' ಎಂಬಂಥ ಕೃತಿಯಿಂದ ಒಮ್ಮೆಲೇ ಕೋಲಾಹಲಕ್ಕೆ, ಜನಪ್ರಿಯತೆಗೆ ಕಾರಣವಾದ ಶಷ್ಟಿಬ್ರತ ಮತ್ತೆ ಅಂಥದ್ದೊಂದು ಉತ್ಕಟತೆ ಸಾಧಿಸಲೇ ಇಲ್ಲ.

ವಿಕ್ಟೋರಿಯಾ ರಾಣಿಯ ಸುವರ್ಣ ಮಹೋತ್ಸವ ವರ್ಷದಲ್ಲಿ ಹುಟ್ಟಿ, ಬಾಲ್ಯದ ಹಳ್ಳಿ ಕಿಶೋರ್‌ಗಂಜ್ ತೊರೆದು ಇಂಗ್ಲೆಂಡಿನ ಆಕ್ಸ್‌ಫರ್ಡ್‌ನತ್ತ ನಡೆದು ಸೇರಿದ್ದು ದೊಡ್ಡ ಸಾಹಸ ಯಾತ್ರೆ. ಅವರದೇ ಬಂಗಾಳದ ರಾಜಾರಾಮ್ ಮೋಹನ್‌ರಾಯ್‌ನ ಹಾಗೆ ಪಾಶ್ಚಿಮಾತ್ಯ, ಅದರಲ್ಲೂ ಇಂಗ್ಲೆಂಡಿನ ವಿಚಾರಶೀಲತೆಗೆ ಮಾರುಹೋದವರು. ಹಿಂದೂ ವಿಚಾರಧಾರೆ ಕಟುವಾಗಿ ಟೀಕಿಸಿದ ಹಾಗೆ ಬ್ರಿಟಿಷರ ಲೋಪಗಳನ್ನೂ ಎತ್ತಿ ಹಿಡಿದಿದ್ದಾರೆ. ಆದರೆ ಇಬ್ಬರಿಗೂ ಅಪ್ರಿಯರಾಗಿದ್ದಾರೆ.

ಬಾಬರಿ ಮಸೀದಿ ಉರುಳಿಸಿದಾಗ ಅದನ್ನು ಖಂಡಿಸಲು ನಿರಾಕರಿಸಿದರು ನೀರದ್ ಚೌಧುರಿ. ಮುಸ್ಲಿಮರ ಒಂದು ಮಸೀದಿ ಅಪವಿತ್ರಗೊಂಡರೆ ದುಃಖವೇನಿಲ್ಲ. ಸಾವಿರ ವರ್ಷಗಳಲ್ಲಿ ಮುಸ್ಲಿಮರು ಕಾಥೇವಾಡದಿಂದ ಬಿಹಾರದವರೆಗೆ, ಹಿಮಾಲಯದಿಂದ ವಿಂಧ್ಯದ ವರೆಗೆ ಪ್ರತಿ ದೇಗುಲ ಕೆಡವಿ ಮಸೀದಿ ಕಟ್ಟಿದ್ದಾರೆ ಎಂದು ಅವರು ಗುಡುಗಿದ್ದರು. ಇಂಥ ಧೋರಣೆಗಳೇ ಅವರನ್ನು ವಿವಾದದ ಕೇಂದ್ರವಾಗಿಸುತ್ತ ಇದ್ದುದು. ಭಾರತದ ಬುದ್ಧಿಜೀವಿಗಳು ಬಾಬರಿ ಮಸೀದಿ ನಾಶ ಖಂಡಿಸುತ್ತಿದ್ದಾಗ, ಅದರ ತದ್ವಿರುದ್ಧ ನಿಲುವು ತಳೆದು ಎಲ್ಲರಲ್ಲೂ ಅಚ್ಚರಿ ಹುಟ್ಟಿಸಿದ್ದರು.

ಎಲ್.ಕೆ. ಅಡ್ವಾನಿ ಅವರೊಡನೆ ಒಮ್ಮೆ ಮಾತಾಡುತ್ತಾ 'ನನಗೇನಾದರೂ ಒಬ್ಬ ಮಗಳಿದ್ದಿದ್ದರೆ ಖಂಡಿತ ಆಕೆ ಸಲ್ವಾರ್ ಕಮೀಜ್ ತೊಡಲು ಬಿಡುತ್ತಿರಲಿಲ್ಲ' ಎಂದು ಅವರು ಹೇಳಿದ್ದೂ ಇದೆ. ಅವರ ದೃಷ್ಟಿಯಲ್ಲಿ ಸಲ್ವಾರ್ ಕಮೀಜ್ ಕೂಡ ಹಿಂದೂ ಉಡುಗೆ ಅಲ್ಲ. ಮುಸ್ಲಿಮರ ದಾಳಿಯ ನಂತರ ನಮ್ಮ ದೇಶದಲ್ಲಿ ಜನಪ್ರಿಯವಾದದ್ದು.

ಒಂದೆಡೆ ಕಟ್ಟಾ ಹಿಂದೂವಾದಿಯಂತೆ ಕಾಣುತ್ತಾ, ಬಂಗಾಳಿಗಳ ಅತ್ಯಂತ ಪ್ರೀತಿಯ ರೇಷಿಮೆ ಜುಬ್ಬ ಮತ್ತು ಕಚ್ಚೆ ಪಂಚೆ ತೊಟ್ಟು ಉಲ್ಲಾಸದಿಂದ ತಿರುಗುತ್ತಿದ್ದ ನೀರದ್ ಚೌಧುರಿ, ಅಷ್ಟೇ ತದ್ವಿರುದ್ಧ ಎನಿಸುವ ಅತ್ಯುತ್ಕೃಷ್ಟ ಸೂಟು, ಟೈ, ಹ್ಯಾಟುಗಳೊಂದಿಗೆ ವಿಜೃಂಭಿಸುತ್ತಾ ಇದ್ದರು.

ಭಾರತೀಯ ಪರಂಪರಾಗತ ವಿಚಾರಗಳನ್ನು ಎತ್ತಿಹಿಡಿಯುವ, ಕೊಂಡಾಡುವ ಇಲ್ಲಿನವರನ್ನು ಕಟುವಾಗಿ ಮೂದಲಿಸುತ್ತಿದ್ದ ಹಾಗೆ, ಪಾಶ್ಚಿಮಾತ್ಯ ಮಾದರಿಗಳಿಗೆ ಕುರುಡಾಗಿ ಜೋತುಬೀಳುತ್ತಾ ಇದ್ದ ಬುದ್ಧಿಜೀವಿಗಳನ್ನೂ ಅವರು ತರಾಟೆಗೆ ತೆಗೆದು ಕೊಳ್ಳುತ್ತಾ ಇದ್ದರು. ಆ ಕಾರಣಕ್ಕೆ ಅವರು ವಿಕ್ಷಿಪ್ತರಾಗಿ ಕಂಡಿದ್ದರೆ, ಆಶ್ಚರ್ಯವಿಲ್ಲ.

ಹುಟ್ಟಿದ ನೆಲದ ಬೇರು ಕಡಿದುಕೊಂಡು, ನೆಲೆಯಾದ ನೆಲದಲ್ಲೂ ಬೇರುಗಳನ್ನು ಊರಲಾಗದೇ, ನಮಗೆ ಹೇಗೋ ಹಾಗೇ ಬ್ರಿಟಿಷ್ ಜನಕ್ಕೂ ಪರಕೀಯರಾದವರು ಅವರು.

ಭಾರತೀಯನೊಬ್ಬನ ಇಂದಿನ ತುಮುಲ, ಕಸಿವಿಸಿಗಳಿಗೆ ಪಕ್ಕಾ ಮಾದರಿಯಂತಿದ್ದ ಅವರು ನಿಜಕ್ಕೂ ಅಜ್ಞಾತ ಭಾರತೀಯ. ಅಂಥವರ ನಿಧನದಿಂದ ಬಹುದೊಡ್ಡ ಆಯಾಮ ಪಡೆಯಬಹುದಾಗಿದ್ದ ನಮ್ಮ ಸಾಹಿತ್ಯ, ಸಂಸ್ಕೃತಿಯ ಸಂಘರ್ಷ ಈಗ ಮೊನಚು ಕಳೆದುಕೊಂಡಂತಾಗಿದೆ.

■ ದಿನಕರ.ಎಂ.ಆರ್

ಅವಸಾನದ ಅಂಚಿನಲ್ಲಿ




ನೇಕಾರಿಕೆ

ಸ್ವಾತಂತ್ರ್ಯ ಸಮರದಲ್ಲಿ ಪರಂಗಿಯರ ವಿರುದ್ಧ ಹೋರಾಡಿದ ಸುರಪುರದ ದೊರೆಗಳ ಮನೆತನಕ್ಕೂ, ರಾಜಪರಿವಾರಕ್ಕೆಲ್ಲಾ ಹಬ್ಬ ಹರಿದಿನ ಮತ್ತು ದಿನಂಪ್ರತಿಗಳಿಗೆಲ್ಲಾ ಸಾಕಾಗುವಷ್ಟು ಸೀರೆ, ಕುಪ್ಪಸ ಹಾಗೂ ರೇಶ್ಮೆ ಬಟ್ಟೆಯನ್ನು ನೇಯ್ದುಕೊಡುವ ಪರಿಪಾಠವಿತ್ತಂತೆ. ಆ ನೇಕಾರಿಕೆ ಮನೆತನ. (ಪಾಣಿಭಾತ=ವಂಶಜರು) ಇನ್ನೂ ರಂಗಂಪೇಟೆಯಲ್ಲಿದೆ. ಇದೇ ರೀತಿ ವಿಜಾಪೂರದ ಇಲಕಲ್ ಹೆಸರು ನೇಕಾರಿಕೆಯಲ್ಲಿ ಉತ್ತುಂಗಕ್ಕಿದೆ. ನೇಕಾರಿಕೆಗೆ ಆಗ ಮನ್ನಣೆಯ ಕಾಲವಿತ್ತು

ಹಿಂದೊಮ್ಮೆ ಗುಡಿ ಕೈಗಾರಿಕೆಗಳಿಗೆ ತವರೂರಾದ ದೇಶ ನಮ್ಮದು. ಕಾಲನ ಪರಿವರ್ತನೆಯಿಂದ ಜಗತ್ತೆಲ್ಲ ಯಂತ್ರಮಯವಾಗಿ, ತುಂಬಾ ತರಾತುರಿಯಿಂದ ಕೆಲಸಗಳೆಲ್ಲ ಈಗಲೇ, ಈ ಕ್ಷಣಾರ್ಧದಲ್ಲಿ ಆಗುವ, ಆಗಬೇಕೆನ್ನುವ ಕಾಲ ಬಂದಿದೆ. ಇದೇನೋ ಸಂತೋಷದ ವಿಷಯವೆ, ಆದರೆ ಆ ಸಂತೋಷಕ್ಕಿಂತ ಮಿಗಿಲಾಗಿ ಬಹಳಷ್ಟು ದುಃಖವು ಅಡಗಿರುವುದು. ಸಮುದ್ರ ಮಥನ ನಡೆದಾಗ ದೇವತೆಗಳಿಗೂ - ದೈತ್ಯರಿಗೂ ನಡೆದ ಅಮೃತಪಾನದ ಹೋರಾಟದಂತೆ ಯಂತ್ರಗಳಿಂದೇನೊ ತೀವ್ರ ಕೆಲಸವಾಗುತ್ತದೆ ಆದರೆ ಇದನ್ನೇ ಸಾವಿರಾರು ವರ್ಷಗಳಿಂದ ತಮ್ಮ ಕಸುಬಾಗಿಸಿಕೊಂಡು ಬಂದ ಜನರ ದುಡಿಮೆಗೆ ಈ ಯಂತ್ರಮಾನವ ಕಲ್ಲು ಹಾಕಿದ್ದಾನೆ. ಆ ಕುಟುಂಬಗಳ ಗೋಳು ಹೇಳತೀರದು. ವಿವಿಧೆಡೆ ಇರುವ ಹಾಗೆ ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳು ನೇಕಾರಿಕೆಯಲ್ಲಿ ಹೆಸರು ಮಾಡಿದ್ದವು. ಅಂತಹವುಗಳಿಗೆ ಹೆಸರುವಾಸಿಯಾಗಿದ್ದ ಗುಲ್ಬರ್ಗಾದ ಶಹಾಪೂರ, ಗೋಗಿ, ರಂಗಂಪೇಟೆ, ರುಕ್ಮಾಪೂರ, ಸಗರಗಳು ನೇಕಾರಿಕೆ ವೃತ್ತಿಯಲ್ಲಿ ಪರಿಣಿತ ಕಲಾತ್ಮಕ ಕೈ ಚಳಕದವರನ್ನು ಹೊಂದಿತ್ತೆನುವುದು ಈ ಭಾಗದ ಹೆಮ್ಮೆಯಾಗಿತ್ತು. ಇದು ಈ ಭಾಗದ ಗತಕಾಲದ ವೈಭವವನ್ನು ನೆನಪಿಸಿಕೊಳ್ಳುವಾಗಿನ ಹೆಮ್ಮೆಯಾಗಿತ್ತು. ಇಂದು ಈ ಉದ್ಯೋಗಕ್ಕೆ ಅಂಟಿದ ಹಲವು ಜನಾಂಗಗಳಲ್ಲಿ ಪ್ರಮುಖವಾದುದೆಂದರೆ ಸ್ವಕುಲ-ಸಾಳಿ, ದೇವಾಂಗ, ಜೇಡರ, ಮುಸ್ಲಿಮರಾಗಿದ್ದರು. ಇತಿಹಾಸದ ಪುಟಗಳಲ್ಲಿ ಸ್ವಾತಂತ್ರ್ಯ ಸಮರದಲ್ಲಿ ಪರಂಗಿಯರ ವಿರುದ್ಧ ಹೋರಾಡಿದ ಸುರಪುರದ ದೊರೆಗಳ ಮನೆತನಕ್ಕೂ, ರಾಜಪರಿವಾರಕ್ಕೆಲ್ಲಾ ಹಬ್ಬ ಹರಿದಿನ ಮತ್ತು ದಿನಂಪ್ರತಿಗಳಿಗೆಲ್ಲಾ ಸಾಕಾಗುವಷ್ಟು ಸೀರೆ, ಕುಪ್ಪಸ ಹಾಗೂ ರೇಶ್ಮೆ ಬಟ್ಟೆಯನ್ನು ನೇಯ್ದುಕೊಡುವ ಪರಿಪಾಠವಿತ್ತಂತೆ. ಆ ನೇಕಾರಿಕೆ ಮನೆತನ. (ಪಾಣಿಭಾತ=ವಂಶಜರು) ಇನ್ನೂ ರಂಗಂಪೇಟೆಯಲ್ಲಿದೆ. ಇದೇ ರೀತಿ ವಿಜಾಪೂರದ ಇಲಕಲ್ ಹೆಸರು ನೇಕಾರಿಕೆಯಲ್ಲಿ ಉತ್ತುಂಗಕ್ಕಿದೆ. ನೇಕಾರಿಕೆಗೆ ಆಗ ಮನ್ನಣೆಯ ಕಾಲವಿತ್ತು. 'ಕರ್ಮಣ್ಯೆವಾದಿಕಾರಸ್ತೆ ಮಹಾಫಲೇಷು ಕದಾಚನ' ವನ್ನು ಭಗವದ್ಗೀತೆಯ ಶ್ಲೋಕವೊಂದರಲ್ಲಿ ಹೇಳಿರುವಂತೆ ಯಾವುದೇ ಪ್ರತಿಫಲಾಪೇಕ್ಷೆಯಲ್ಲಿ ಆಶೆ ಪಡದೆ ಕರ್ತವ್ಯವೇ ಮುಖ್ಯವೆಂದು ನಡೆಯುವ ಆ ಕಾಲದ ಜನರಿದ್ದರು.

ಆಗಿನ ಹಲವು ಪಟ್ಟಭದ್ರರ ಫಲವಾಗಿ ನೇಕಾರಿಕೆಯ ಸಹಕಾರಿ ಸಂಘಗಳು ಉಳಿಸಲಾಗದೆ ಮುಚ್ಚಿಬಿಟ್ಟವು, ಅಂದಿನ ಗಣ್ಯರು ನೇಕಾರಿಕೆಯ ಬಗ್ಗೆ ಅಭಿಮಾನಶೂನ್ಯರಾದರು. ದಾಪುಗಾಲಿಟ್ಟು ಬಂದ ಯಂತ್ರಮಾನವನಿಂದ ತಯಾರಾಗುತ್ತಿರುವ ಬಟ್ಟೆಯ ಫಲವಾಗಿ ಇವರ ಸ್ಥಿತಿ ಚಿಂತಾಜನಕವಾಗಿ ಹೊಟ್ಟೆಯ ತೊಳಲಾಟಕ್ಕಾಗಿ ವಲಸೆ ಹೋಗುವ ದಯನೀಯ ಸ್ಥಿತಿಯೊದಗಿತು. ನೇಕಾರಿಕೆಯ ಸಾಧನವಾಗಿದ್ದ ಸೆಟಲುಗಳೆಲ್ಲಾ ಈಗ ನಿಷ್ಕ್ರಿಯವಾಗಿ, ಕಳಾಹೀನವಾಗಿ ಗೋಡೆಯ ಗೂಟಕ್ಕೆ ಜೋತು ಬಿದ್ದಿವೆಯೆಂಬುದು ದುರಾದೃಷ್ಟದ ಸಂಗತಿ. ಬಟ್ಟೆ ಯಂತ್ರದ ಅವಿಷ್ಕಾರದ ಜೊತೆಗೆ ಇದೇ ಜನರಿಗೆ ಅದರಲ್ಲಿ ತರಬೇತುಗೊಳಿಸಿ ಉದ್ಯೋಗ ಕಲ್ಪಿಸಿ ಸೇರ್ಪಡೆಗೊಳಿಸಿದ್ದಲ್ಲಿ ಇವರು ಪರಾವಲಂಬಿಗಳಾಗುತ್ತಿರಲಿಲ್ಲ.

ಹನ್ನೆರಡನೆಯ ಶತಮಾನದಲ್ಲಿ ಅಧ್ಯಾತ್ಮಿಕತೆಯ ಮೇರುಪರ್ವತವಾಗಿದ್ದ (ಗುಲ್ಬರ್ಗಾ ಜಿಲ್ಲೆ) ಮುದನೂರಿನ ಶರಣ ದೇವರ ದಾಸಿಮಯ್ಯನವರು ಮತ್ತು



ನೇಯ್ಗೆಯಲ್ಲಿ ನಿರತ ನೇಕಾರ

ಸಂತ ಕಬೀರದಾಸ ಕೂಡ ನೇಕಾರರಾಗಿದ್ದು ವೃತ್ತಿ-ಪ್ರವೃತ್ತಿಗಳೆರಡರಿಂದ ಪರಮಾರ್ಥ ಗೆದ್ದವರಾದದ್ದು, ಅಂತಹ ಮಹನೀಯರ ಬದುಕು ಇವರಿಗೆ ದಾರಿದೀಪವಾಗಿದೆ. ಗತಕಾಲದ ವೈಭವದ ಹಂಪೆಯಂತೆಯೇ ನೇಕಾರಿಕೆ ಮೆರೆದಿದ್ದುದು. ಅದಿಂದು ಅದೇ ಹಾಳು ಕೊಂಪೆಯಂತಾಗಿದೆ. ನೇಕಾರಿಕೆಯ ನೆನಪುಗಳ ರಾಶಿಯಿಂದ ಹಿರಿಯನೋರ್ವ. ಮೆಲುಕಾಡಿಸಿ ಹೇಳುವಂತೆ ಬೆಳಗಿನ 4-5 ಗಂಟೆಯ ಹೊತ್ತಿಗೆ ಮಗ್ಗ ನೇಯುವ ಲವಲವಿಕೆಯ ಆ ಸಂತಸ, ನೆಮ್ಮದಿಯ ದಿನಗಳು ಅದೆಷ್ಟು ಆನಂದಕೊಡುತ್ತಿದ್ದವೆಂದರೆ ಈಗ ಹೇಳಲೂಬಾರದು, ತದೇಕ ಚಿತ್ತದಿಂದ ಕಾಯಕದಲ್ಲಿ ಶ್ರದ್ಧೆಯಿಟ್ಟು ತಯಾರಿಸಿದ ವಿವಿಧ ಸೀರೆ, ಪಟಗ, ಕುಪ್ಪಸ, ವಿಧವಿಧದ ರೇಷ್ಮೆಯ ವಸ್ತ್ರಗಳಿಗೆ ಲೆಕ್ಕವಿಲ್ಲ. ನೇಕಾರನ ಆ ಜಾಣ್ಮೆಯ ಕುಸುರಿ ಕಲೆಯುಳ್ಳ ವಸ್ತ್ರದಲ್ಲಿ ಸೀರೆಯುಟ್ಟುಕೊಂಡ ನೀರೆ ಅದೆಷ್ಟು ಚೆಂದ ಕಾಣುತ್ತಿದ್ದಳು. ಸಮಯಕ್ಕೆ ಸರಿಯಾಗಿ ನೇಯ್ದು ಒಪ್ಪಿಸುವ ಉತ್ತಮ ಪರಿಪಾಠ, ಎಲ್ಲವೂ ಗತಕಾಲದ ಕಾಲನ ತೆಕ್ಕೆಯಲ್ಲಿ ಕೇವಲ ನೆನಪುಗಳಾಗಿ ಕರಗುತ್ತಿರುವುದು ನಮ್ಮ ದುರಾದೃಷ್ಟ. ಅನರ್ಘ್ಯ ಕಲೆಯ ಉದ್ಯೋಗ ಉಳಿಯಲಾರದ್ದಕ್ಕೆ ವ್ಯಸನವಿದೆ ಎಂಬುದು ಅವರ ಅಭಿಮತ. ಆ ನೇಕಾರಿಕೆ ವೃತ್ತಿ ಈಗ ನೇಪಥ್ಯದತ್ತ ಸರಿಯುತ್ತಿದೆ. ಇವರ ಒಳಿತು ಕೆಡುಕುಗಳನ್ನು ನೋಡುವ ವಿಶಾಲ ಹೃದಯವಂತ ಮಾಲೀಕರೆಲ್ಲಾ ಮಣ್ಣಾಗಿದ್ದಾರೆ. ಆ ಸೋವಿಕಾಲ ಹೋಗಿ ಅಗತ್ಯ ವಸ್ತುಗಳೆಲ್ಲಾ ಗಗನ ಮುಟ್ಟಿವೆ. ದುರ್ದಿನದ ಕಾರ್ಮೋಡಗಳು ಸುತ್ತಿ ಈ ನೇಕಾರನಿಗೆ ಸದಾ ಬಡತನವೇ ಬಂಧುವಾಗಿದೆ. ಬಂಡವಾಳ ಹಾಕಿ ಮಾರುಕಟ್ಟೆಯಲ್ಲಿ ಸೆಣಸುವ ಸಾಹಸಿಗರು ಬಹುಪಾಲು ಈಗ ಉಳಿದಿಲ್ಲ. ಹೀಗಾಗಿ ಮಗ್ಗವೆಂಬುದೊಂದು ಮರೀಚಿಕೆಯಾಗುವ ಕಾಲ ಬಹು ದೂರವಿಲ್ಲ.

ನೇಕಾರನ ಈ ದುರಂತ ಕತೆಯಲ್ಲಿ ಸ್ವಕುಲ-ಸಾಳಿ ಎಂಬ ಜನಾಂಗದವರಲ್ಲಿ ಪುರಾಣ ಯುಗದ ಕತೆಯೊಂದಡಗಿದೆ, ಈ ಜನರ ಕುಲದೇವ ಜೀವ್ಹೇಶ್ವರ. ಶ್ರಾವಣ ಶುದ್ಧ ತ್ರಯೋದಶಿಯಂದು ಪ್ರತಿವರ್ಷ ಈ ಕುಲೋದ್ಧಾರಕರ ಜಯಂತಿ ಆಚರಿಸುವರು. 'ಜೀವ್ಹೆ'ಯಿಂದ (ನಾಲಿಗೆಯಿಂದ) ಜನಿಸಿದನೆಂಬುದು ಪ್ರತೀತಿ. ವಸ್ತ್ರವಿಹೀನ ಜಗತ್ತಿನ ಜನರ ಮಾನ ಮುಚ್ಚಲು ಅವತರಿಸಿದನೆಂಬುದು ಕತೆ. ಆ ಪುರಾಣ ಯುಗದ ಕತೆಯಂತೆ ಪಾರ್ವತಿ ನೇಕಾರನೋರ್ವನಿಗೆ ವಸ್ತ್ರ ನೇಯ್ದು ಕೊಡಲು ಹೇಳಿದಳಂತೆ. ಒಪ್ಪಿಕೊಂಡು ನೇಯಲು ಕುಳಿತಾಗ, ಪಾರ್ವತಿಯ ಆಜ್ಞೆಯಂತೆ ನೇಕಾರನಿಗೆ ದೂತನೊಬ್ಬ ಕರೆಯಲು ಬಂದನಂತೆ ಆಗ ಇನ್ನೂ ಸ್ವಲ್ಪ ನೇಯ್ದರೆ ಪೂರ್ಣವಾಗುವುದು ಅದನ್ನು ಮಾಡಿ ಮುಗಿಸಿಕೊಂಡು ಬರುವೆನೆಂದು ತಿಳಿಸಲು ಹೇಳಿದನಂತೆ. ಹಾಗೆಯೇ ದೂತನು ಪಾರ್ವತಿಗೆ ಅರುಹಲು ಅಷ್ಟರಲ್ಲಿ ಕಾಣಿಕೆಯನ್ನು (ವರವನ್ನು) ಹಿಡಿದು ಕಾಯ್ಕೊಂಡು ನಿಂತಿದ್ದ ಪಾರ್ವತಿಯಲ್ಲಿಗೆ ದಾನಕ್ಕಾಗಿ ಒಬ್ಬನು ಬಂದಾಗ ಕಾಯ್ದು ಬೇಸತ್ತ ಪಾರ್ವತಿ ಅದನ್ನೆ ಧಾರೆ ಎರೆದಳೆಂಬುದು ಪುರಾಣದಲ್ಲಿ ಹೇಳಿದೆ. ಆಮೇಲೆ ಹೋದ ನೇಕಾರ ಬರಿಗೈಲಿ ಬಂದನಂತೆ ಹೀಗಾಗಿ ಅಂದಿನಿಂದ ಇಂದಿನವರೆವಿಗೂ ವಂಚಿತನಾಗಿ ದಾರಿದ್ರ್ಯದಲ್ಲಿ ಮುಳುಗಿದ್ದಾನೆಂಬುದು ಆ ಕತೆಯ ಸ್ವರೂಪ. ಇಂದಿನ ಸ್ಥಿತಿಯಲ್ಲಿ ನೇಕಾರನಿಗೆ ಇದು ಅಕ್ಷರಶಃ ನಿಜ.

ಈಗಿನ ಖಾದಿ ಭಂಡಾರ ಮತ್ತು ಕಾರ್ಪೋರೇಶನ್ ಮಗ್ಗಗಳು ಸಾಕಷ್ಟು ಜನರಿಗೆ ಕೆಲಸ ಒದಗಿಸಿಲ್ಲ, ಕುಟುಕು ಜೀವ ಹಿಡಿದಿವೆ, ಏನೇನೋ ಕಾರಣದಿಂದ ನೇಕಾರನಿಗೆ ಅನೇಕ ದಿನಗಳು ಕೆಲಸವಿಲ್ಲದೆ ಖೋತಾ - ಖಾಲಿ ದಿನಗಳು ಕಳೆಯುತ್ತಿರುವಂತಾಗಿದೆ. ಆ ಸಂಸ್ಥೆ ಅಥವಾ ಕೇಂದ್ರಗಳು ನಡೆಸುವ ನೇಯಿಸುವ ಬಟ್ಟೆ ಬಹುಪಾಲು ಬೆಳೆದು, ಅದರಲ್ಲಾವ ಕಲಾ ಕುಸುರಿಯ ಕೆಲಸವಿರದೆ ಇವರ ಬದುಕಿನಂತೆ ಅದು ಕೂಡ ವರ್ಣರಹಿತವಾಗಿದೆ. ಈ ಬಟ್ಟೆಯನ್ನು ಮಾಪನ ಮಾಡುವವರು ಕೇಂದ್ರದಲ್ಲಿ ಕೆಲಸ ಮಾಡುವ ಅಧಿಕಾರಿ ಅಥವಾ ಸಿಬ್ಬಂದಿ ವರ್ಗದವರು ಯಾರೂ ಬಹುಪಾಲು ಎಳೆಯನ್ನೇ ಕಂಡಿರದವರಾಗಿದ್ದಾರೆನ್ನುವುದು ವಿಷಾದದಿಂದ ಹೇಳದೆ ಗತಿಯಿಲ್ಲ. ಏನೇನೊ ನೆಪದಿಂದ ಇಲ್ಲೂ ನೇಕಾರರ ಶೋಷಣೆ ನಿಂತಿಲ್ಲ. ಶೋಷಣೆಯ ಸಾಲಿನಲ್ಲಿ ಹುಟ್ಟಿದ ನೇಕಾರರಿಗೆ ಇದೇನು ಹೊಸದಲ್ಲ, ಇದರೊಂದಿಗೆ ರಾಜಿ ಮಾಡಿಕೊಂಡಿದ್ದಾರೆ. ದೇಹ ಎಲುಬಿನಾಗರವಾಗಿ ಹೊಟ್ಟೆ ಬೆನ್ನೊಳಗಡಗಿದಂತೆ ಕಾಡುವ ಪ್ರಾಮಾಣಿಕ ನೇಕಾರ ತನ್ನ ಅಸ್ತಿತ್ವಕ್ಕಾಗಿ ಅವಿರತ ಸಮರ ನಡೆಸಿದ್ದಾನೆ. 'ಶಿಶುವಿನಾಳ ಶರೀಫರ' ಹಗ್ಗ ಮಗ್ಗವ ನುಂಗಿ ಮಗ್ಗದ ಲಾಳಿಯ ನುಂಗಿ ಮಗ್ಗದಲಿರುವ ಅಣ್ಣನನ್ನೇ ಮಣಿಯ ನುಂಗಿತ್ತ ತಂಗಿ ಕೊಡಗನ ಕೋಳಿ ನುಂಗಿತ್ತ' ಎಂಬ ತತ್ವಪದದಂತೆ ದೈಹಿಕವಾಗಿ ನುಂಗಿಲ್ಲದಿದ್ದರೂ ಆರ್ಥಿಕವಾಗಿ ಮಾನಸಿಕವಾಗಿ ನೇಕಾರನು ಮೂಲೆಗುಂಪಾಗುವಂತೆ ಆಗಿದ್ದು ವಿಷಾದನೀಯ. ಇದಕ್ಕಿಂತ ಬೇರೆ ತರಹ ನುಂಗುವ ಆ ಕೊಡಗನ ಕೋಳಿಯುಂಟೆ?




ಸಿದ್ಧವಾಗುತ್ತಿರುವ ಹಾಸು

■ ಮಲ್ಲಿಕಾರ್ಜುನ ಗಚ್ಚಿ

ಉಸಿರಿನ ದುರ್ಗಂಧ

ಎಲ್ಲರ ಸಮಸ್ಯೆ, ಪರಿಹಾರ ಎಲ್ಲಿ?



ಉಸಿರಿನ ದುರ್ಗಂಧ ಹಲವರ ಸಮಸ್ಯೆ, ಹೇಳಿಕೊಳ್ಳಲಾಗದು. ಸುಮ್ಮನೆ ಅನುಭವಿಸಲೂ ಸಾಧ್ಯವಿರದು. ತೀರಾ ಹತ್ತಿರದವರು ತಾವಾಗಿ ಬಾಯಿಬಿಟ್ಟು ಹೇಳದಿದ್ದರೆ ಇಂಥ ತೊಂದರೆ ಇದೆ ಎಂಬುದೂ ಅರಿವಿಗೆಬಾರದು.

ಉಸಿರಿನ ದುರ್ಗಂಧ ದೊಡ್ಡ ಸಮಸ್ಯೆಯಲ್ಲ. ಆದರೆ ಅದರಿಂದ ಸಾಮಾಜಿಕ, ವ್ಯವಹಾರಿಕ ಸಂಪರ್ಕಕ್ಕೆ ಪೆಟ್ಟು ಬೀಳುತ್ತದೆ. ಈ ಸಮಸ್ಯೆಯಿಂದಾಗಿ ನಾಲ್ಕು ಜನ ಇರುವಲ್ಲಿ ಮಾತಾಡಲೂ ಹಿಂಜರಿಕೆ. ಇದಕ್ಕೆ ಪರಹಾರ ಇದೆಯೇ?

ಉಸಿರಿನ ದುರ್ಗಂಧಕ್ಕೆ ಇಂಗ್ಲಿಷ್‌ನಲ್ಲಿ 'ಹ್ಯಾಲಿಟೋಸಿಸ್' ಎಂದು ಹೆಸರು. ನಾವು ಸೇವಿಸುವ ಆಹಾರ, ಹಲ್ಲು ಮತ್ತು ವಸಡಿನ ತೊಂದರೆಗಳಿಂದ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ.

ನಾವು ಸೇವಿಸುವ ಪ್ರತಿ ಆಹಾರಕ್ಕೂ ಒಂದೊಂದು ಬಗೆಯ ವಾಸನೆ ಇರುತ್ತದೆ. ಆಹಾರ ಸೇವಿಸಿದ ಕೆಲವು ಸಮಯದವರೆಗೂ ಇದು ನಮ್ಮ ಬಾಯಿ, ಉಸಿರಿನಲ್ಲಿ ಇರುತ್ತದೆ. ಈರುಳ್ಳಿ, ಬೆಳ್ಳುಳ್ಳಿಯನ್ನು ಹಸಿಯಾಗಿ ಸೇವಿಸಿದಾಗ ಇಪ್ಪತ್ನಾಲ್ಕು ತಾಸಿನವರೆಗೆ ಅದರ ವಾಸನೆ ಬಾಯಲ್ಲಿ ಇರುವುದುಂಟು.

ಕೆಲವರಲ್ಲಿ ಕೆಲವು ಬಗೆಯ ಆಹಾರ ಸೇವನೆ ಉಸಿರಿನ ದುರ್ಗಂಧಕ್ಕೆ ಕಾರಣವಾಗಬಹುದು. ಊಟ ತಪ್ಪಿಸುವುದರಿಂದಲೂ ಇಂಥ ಸಮಸ್ಯೆ ತಲೆದೋರಬಹುದು.

ಸಾಮಾನ್ಯವಾಗಿ ಬೆಳಿಗ್ಗೆ ಎದ್ದಾಗ ಬಾಯಿ ಹೊಲಸು ನಾರುತ್ತದೆ. ಬಾಯಲ್ಲಿನ ಲಾಲಾರಸ ಬತ್ತಿ, ವಾಸನೆಗೆ ಕಾರಣವಾಗುವ ಬ್ಯಾಕ್ಟಿರಿಯಾಗಳು ವೃದ್ಧಿಯಾಗಲು ಸರಿಯಾದ ವಾತಾವರಣ ಸೃಷ್ಟಿಯಾಗಿರುತ್ತದೆ. ಹುಳಿ ತೇಗು, ಹೊಟ್ಟೆ ಉಬ್ಬರಿಸಿದಂತೆ ಆಗಿ ಬರುವ ತೇಗು ಕೂಡ ಉಸಿರಿನಲ್ಲಿ ವಾಸನೆಗೆ ಕಾರಣವಾಗುತ್ತವೆ.

ಆಹಾರ ಸೇವಿಸಿದ ನಂತರ, ಅದರಲ್ಲೂ ರಾತ್ರಿ ಊಟದ ನಂತರ ಹಲ್ಲಿನ ಸಂದಿಯಲ್ಲಿ ಸೇರುವ ಆಹಾರ ಕಣಗಳು ಕೊಳೆತು ದುರ್ವಾಸನೆ ಹಬ್ಬಿಸುತ್ತವೆ. ಸಿಗರೇಟು, ಬೀಡಿ ಸೇದುವವರ ವಿಚಾರವಂತೂ ಹೇಳುವುದೇ ಬೇಡ. ಬಹಳಷ್ಟು ಇಂಥ ಸಂದರ್ಭಗಳಲ್ಲಿ ಶ್ವಾಸಕೋಶಗಳಿಂದ ಹೊಮ್ಮುವ ಗಾಳಿಯಲ್ಲಿ ಇಂಥ ದುರ್ವಾಸನೆಯ ಪ್ರಮಾಣ ಕಮ್ಮಿ. ಬಾಯಿಯ ಮೂಲಕ ಬರುವ ಉಸಿರಲ್ಲಿಯೇ ವಾಸನೆ ಜಾಸ್ತಿ.

ಕೆಲವು ಸಲ ಪಯೋರಿಯಾದಂಥ ವಸಡಿನ ತೊಂದರೆಗಳಿಂದಲೂ ಉಸಿರಲ್ಲಿ ದುರ್ಗಂಧ ತುಂಬಿಕೊಳ್ಳುತ್ತದೆ. ಹಲ್ಲುನೋವು, ವಸಡಿನ ತೊಂದರೆಗೆ ಗಮನ ನೀಡದಿದ್ದರೆ ಇದು ವೃದ್ಧಿಸುತ್ತದೆ.

ಹಲವರು ಉಸುರಿನ ದುರ್ವಾಸನೆ ತಪ್ಪಿಸಲು ನಾನಾ ಕ್ರಮ ಕೈಗೊಳ್ಳುತ್ತಾರೆ. ಬಾಯಿ ವಾಸನೆ ಗೊತ್ತಾಗದಿರಲೆಂದು ಸಿಗರೇಟು ಸೇದುವ ಜನರಿದ್ದಾರೆ. ಇನ್ನು ಕೆಲವರು ಮಿಂಟ್ ಚಾಕಲೇಟ್‌ಗಳನ್ನು ಬಾಯಲ್ಲಿ ಇರಿಸಿಕೊಳ್ಳುತ್ತಾರೆ. ಎರಡೂ ಪರಿಹಾರವಲ್ಲ. ಬದಲಿಗೆ ಅದರಿಂದ ತೊಂದರೆಯೇ ಹೆಚ್ಚು. ಸಿಗರೇಟಿನ ನಿಕೋಟಿನ್ ಅಂಶ ಹಲ್ಲುಗಳ ಮೇಲೆ ಉಳಿದು ಕಲೆ ನಿರ್ಮಿಸುತ್ತದೆ. ಅದರಿಂದ ಶ್ವಾಸಕೋಶಕ್ಕೆ ಶಾಶ್ವತ ಹಾನಿ. ಮಿಂಟ್ ಚಾಕಲೇಟ್ ಬಾಯಲ್ಲಿ ಹಾಕಿಕೊಂಡಾಗ ಖಾರಖಾರವಾಗಿ ಇರುತ್ತದೆ. ಆಗ ದುರ್ವಾಸನೆಗೆ ಕಾರಣವಾಗುವ ಬ್ಯಾಕ್ಟೀರಿಯಾಗಳು ಸಾಯುತ್ತವೆ ಅಂದುಕೊಳ್ಳುತ್ತೇವೆ. ವಾಸ್ತವದಲ್ಲಿ ಹಾಗಾಗುವುದಿಲ್ಲ. ಬ್ಯಾಕ್ಟೀರಿಯಾಗಳು ಉಳಿಯುತ್ತವೆ. ಬಾಯಲ್ಲಿನ ಜೀವಕೋಶಗಳು ಹಾನಿಗೀಡಾಗುತ್ತವೆ. ದೀರ್ಘಕಾಲ ಮಿಂಟ್ ಬಳಕೆಯಿಂದ ತೊಂದರೆಯೇ ಜಾಸ್ತಿ.

ಯಾವ ಬಗೆಯ ಆಹಾರಗಳಿಂದ ದುರ್ಗಂಧ ಹೆಚ್ಚುತ್ತದೆ ಎಂಬುದು ಗಮನಿಸಿ ಅವುಗಳ ಸೇವನೆ ವರ್ಜಿಸುವುದು ಅಥವಾ ಆಹಾರ ಸೇವನೆ ನಂತರ ಚೆನ್ನಾಗಿ ಬಾಯಿ ಮುಕ್ಕಳಿಸುವುದು. ಬ್ರಷ್ ಮಾಡುವುದು ಇದಕ್ಕೆ ಪರಿಹಾರ.

ವಸಡಿನ ತೊಂದರೆ ದುರ್ವಾಸನೆಯ ಪ್ರಮುಖ ಕಾರಣ. ವಸಡು ಊದಿಕೊಂಡಿದ್ದರೆ, ರಕ್ತ ಸೋರುತ್ತಾ ಇದ್ದರೆ ಕೂಡಲೇ ಸೂಕ್ತ ಚಿಕಿತ್ಸೆಗೆ ಮುಂದಾಗಬೇಕು. ಪರಿಣಿತ ವೈದ್ಯರು ಮಾತ್ರ ಇಂಥ ಸಮಸ್ಯೆಗೆ ಪರಿಹಾರ ನೀಡಬಲ್ಲರು.

ಹಲ್ಲು, ವಸಡುಗಳ ಹಾಗೇ ನಾಲಿಗೆ ತಿಕ್ಕಿ ತೊಳೆಯುವುದು ಅತ್ಯಗತ್ಯ. ನಾಲಿಗೆಗೆ ಅಂಟಿ ಉಳಿಯುವ ಬ್ಯಾಕ್ಟೀರಿಯಾಗಳು ಶೀಘ್ರ ಬೆಳೆಯಬಲ್ಲವು. ಇದನ್ನು ನಿರ್ಲಕ್ಷಿಸುವುದು ಅಪಾಯಕರ.

ಶ್ವಾಸಕೋಶದ ಕೆಲವು ಕಾಯಿಲೆಗಳಿಂದಲೂ ಉಸಿರಿನ ದುರ್ಗಂಧ ಉಂಟಾಗುತ್ತದೆ. ಕ್ಷಯ, ಶ್ವಾಸನಾಳದ ಸೋಂಕು, ಡಯಾಬಿಟೀಸ್, ಮೂತ್ರಕೋಶದ ತೊಂದರೆ ಇದ್ದಾಗಲೂ ಉಸಿರಲ್ಲಿ ದುರ್ಗಂಧ ಮೂಡಬಹುದು. ವೈದ್ಯರಿಂದ ಸೂಕ್ತ ಚಿಕಿತ್ಸೆ ಇಂಥ ಪ್ರಕರಣಗಳಲ್ಲಿ ಅತ್ಯಗತ್ಯ.

ಇಷ್ಟಕ್ಕೂ ಇಂಥದೊಂದು ತೊಂದರೆ ಇರುವ ಅರಿವೇ ಕೆಲವರಿಗೆ ಇರದು. ಉಸಿರಿನ ದುರ್ಗಂಧ ಇದೆಯೇ ಎಂದು ಪರೀಕ್ಷಿಸಲು ಸರಳ ಮಾರ್ಗ ಇದೆ. ಬಾಯಿ, ಮೂಗಿಗೆ ಅಂಗೈಯನ್ನು ಅಡ್ಡ ಹಿಡಿದು ಜೋರಾಗಿ ಗಾಳಿಯೂದಿದರೆ ತಕ್ಷಣ ಉಸಿರಲ್ಲಿ ಇರುವ ಗಂಧ ಎಂಥದ್ದೆಂಬುದು ತಿಳಿಯುತ್ತದೆ. ತೊಂದರೆ ಕಂಡು ಹಿಡಿದಲ್ಲಿ ಪರಿಹಾರ ಸರಳ.

ಉಸಿರಿನ ದುರ್ಗಂಧದ ತೊಂದರೆ ತಪ್ಪಿಸಲು ಹಲವು ಸರಳ ಕ್ರಮಗಳಿವೆ. ದೀರ್ಘವಾಗಿ ಉಸಿರೆಳೆದು ಬಿಡುವುದು ಅಭ್ಯಾಸ ಮಾಡಿಕೊಳ್ಳಬೇಕು. ಹಲ್ಲುಗಳನ್ನು ಊಟ, ಉಪಹಾರದ ನಂತರ ಬ್ರಷ್ ಮಾಡಬೇಕು. ಸಾಕಷ್ಟು ಪ್ರಮಾಣದಲ್ಲಿ ನೀರು ಸೇವಿಸಬೇಕು. ಅಜೀರ್ಣದ ತೊಂದರೆ ತಟ್ಟದಂತೆ ನಿಗಾವಹಿಸಬೇಕು. ನಾರು ಹೆಚ್ಚಾಗಿರುವ ಕ್ಯಾರೆಟ್‌ನಂಥ ತರಕಾರಿ ಹಸಿಯಾಗಿ ಸೇವಿಸಬೇಕು.

ಹೆಚ್ಚು ಕಾಫಿ ಸೇವನೆ ಸರಿಯಲ್ಲ. ಅದರಿಂದ ಸಮಸ್ಯೆ ಉಲ್ಬಣಿಸುತ್ತದೆ. ಆಗಾಗ್ಗೆ ಮೌತ್‌ವಾಷ್‌ನಿಂದ ಬಾಯಿ ಮುಕ್ಕಳಿಸಬಹುದು. ಇದನ್ನು ಎಳೆಯ ಮಕ್ಕಳಿಗೆ ಕೊಡದಿರುವುದೇ ಒಳ್ಳೆಯದು. ಅವರು ಮೌತ್‌ವಾಷ್‌ನ್ನು ನುಂಗಿಬಿಡಬಹುದಾದ ಸಾಧ್ಯತೆ ಹೆಚ್ಚು.

ಇದೆಲ್ಲಕ್ಕಿಂತ ಮಿಗಿಲಾಗಿ, ಆಗಾಗ್ಗೆ ದಂತ ವೈದ್ಯರನ್ನು ಕಂಡು ಸಲಹೆ ಪಡೆಯಬೇಕು.

■ ಯಶೋಧಾ.ಜಿ.ಎಂ.



ಹುತ್ತ

ಕಥೆ

> ಬರ ಎನ್ನುವುದು ಕೇವಲ ಪ್ರಾಕೃತಿಕ ಸ್ಥಿತಿಯಲ್ಲ. ಅದು ಮನುಷ್ಯನ ಎಲ್ಲ ವ್ಯಾಪಾರ, ವ್ಯವಹಾರಗಳನ್ನೂ ಆವರಿಸಿ ನಿಲ್ಲಬಲ್ಲದು. ಹುಟ್ಟಿದ ಊರಿನಲ್ಲಿ ನೀರು, ಆಹಾರ, ದುಡಿಮೆಯ ಅಭಾವವಾದರೆ, ಇಂಥದ್ದೆಲ್ಲ ಸಮೃದ್ಧವಾಗಿ ದೊರಕಿಸಿಕೊಡಬಲ್ಲ ಬೃಹತ್ ನಗರ ಮುಂಬಯಿಯಲ್ಲಿ ಮನುಷ್ಯತ್ವದ್ದೇ ಅಭಾವ

ಚಪ್ಪಲಿನ ಪಟ್‌ಪಟ್ ಸದ್ದು ಕ್ಷೀಣಿಸುತ್ತಾ ಹೋಯಿತು. ಮಳೆಯ ತಂಪು ಗಾಳಿ ಗೋಣಿಚೀಲದ ಪರದೆಯನ್ನು ದಾಟಿ ಒಳಗೆ ಹೊಕ್ಕಿತು. ಗೋಣಿಯ ಜೀರ್ಣ ತೂತು ಕಂಪಿಸಿತು. ಜೋಪಡಿಯೊಳಗಿನ ಕತ್ತಲೆ ಹಿಚುಕಲ್ಪಟ್ಟಿತು. ಆ ಕಗ್ಗತ್ತಲೆಯ ರಾತ್ರಿ ಮಳೆಯಲ್ಲಿ ತೊಯ್ದು ತೊಪ್ಪಡಿಯಾಗಿತ್ತು.

'ಅಕ್ಕಾ! ಹ್ವಾದೇನ ಆ ಕುಡುಕ?' ಕತ್ತಲೆಯಲ್ಲಿ ಹುಟ್ಟಿದ ಆ ಪ್ರಶ್ನೆ ಬಾಣದಂತೆ ಚಿಮ್ಮಿತು. ಅದರಲ್ಲಿ ತುಚ್ಛತೆ, ಕೆರಳುವಿಕೆಯಂತೂ ಇದ್ದೇಯಿತ್ತು, ಜತೆಗೆ ಅಸಹಾಯಕತೆಯೂ ಇತ್ತು. ಕೈಕಾಲು ಮಡಚಿ, ತುಟಿಕಚ್ಚಿ ಮೂಲೆಯಲ್ಲಿ ಬಿದ್ದುಕೊಂಡಿದ್ದ ಆರೇಳು ವರ್ಷದ ಜಾಯಿ, ಮತ್ತೊಮ್ಮೆ ದಿಟ್ಟಿಸಿ ನೋಡಿದಳು. ಬಳಿಕ ನಿಟ್ಟುಸಿರು ಬಿಟ್ಟಳು.

ಕೆಲ ಕ್ಷಣ ಹಾಗೇ ಕಳೆಯಿತು. ಸುರಂಗದ ಬತ್ತಿಗೆ ಹಚ್ಚಿದ ಬೆಂಕಿ, ಸಿಡಿಯುವದನ್ನೇ ಕಾಯುವಂತಿತ್ತು ಆ ಕ್ಷಣ. ಆ ಕ್ಷಣ ಕಳೆಯಿತು. ಬಳಿಕ ಕತ್ತಲೆಯಲ್ಲಿ ವೇದನೆಯಿಂದ ಕನವರಿಸುವ, ಬಿಕ್ಕಳಿಸುವ ಸ್ವರ ಕೇಳಿ ಬಂತು. ಕೆಲ ಕ್ಷಣಗಳಲ್ಲಿ ಅದೂ ತಣ್ಣಗಾಯ್ತು. 'ಸೈತಾನ ವಸೂಲಿ ಮಾಡಿಕೊಂಡೇ ಹೊರಬಿದ್ದ' ಜಾಯಿಯನ್ನು ಅಪ್ಪಿಕೊಳ್ಳುತ್ತ ಪಾರೂ ಹೇಳಿದಳು. ಇದು ಆರಂಭ ಎನ್ನುವುದು ಆಕೆಗಷ್ಟೇ ಗೊತ್ತಿತ್ತು. ಆದರೆ ನಡೆಯುವದೆಲ್ಲ ಅಸಹಾಯಕತೆಯಿಂದ ನೋಡದೆ ವಿಧಿಯಿರಲಿಲ್ಲ.

ಕಳೆದ ನಾಲ್ಕು ತಿಂಗಳಿಂದ ಆ ಇಬ್ಬರೂ ಸೋದರಿಯರು ಮನೆ-ಮಾರು ಕಳಕೊಂಡು ನಿರ್ಗತಿಕರಾಗಿದ್ದರು. ಈ ಎರಡು ತಿಂಗಳಿಂದ ಅಂತೂ, ಪಾರೂನ ಆಯುಷ್ಯ ಕೈಯಲ್ಲೇ ಉಳಿದಿರಲಿಲ್ಲ. ಅವರಿಬ್ಬರ ಬದುಕೇ ಬದಲಾಗಿತ್ತು.

ಊರು ದೂರದ ನಗರಕಡೆಯ ಹಳ್ಳಿ, ಎರಡು ಮೂರು ವರ್ಷ ಮಳೆಯಿಲ್ಲದೆ ಬರಗಾಲ ಬಿದ್ದಿತ್ತು. ಅವ್ವ ಇರಲಿಲ್ಲ. ಕೈ ಕಾಲು ಕಳಕೊಂಡ ಅಪ್ಪ, ಕಾಕಾ-ಕಾಕು ಹೊಟ್ಟೆ ಹೊರೆದುಕೊಳ್ಳಲು ಹೋದವರು ಬನಗಾಂವಗೆ ಬರಲೇ ಇಲ್ಲ. ಊರಲ್ಲಿ ತರುಣ ವ್ಯಕ್ತಿ ಯಾರೂ ಇರಲಿಲ್ಲ. ಹತ್ತಿಪ್ಪತ್ತು ಮನೆಗಳಲ್ಲಿ ರಾತ್ರಿ ದೀಪವೂ ಉರಿಯುತ್ತಿರಲಿಲ್ಲ. ಹದಿನೈದಿಪ್ಪತ್ತು ಕೋಸಿನ ದೂರದಲ್ಲಿ ಮಜೂರಿ ಕೆಲಸ ಮಾಡುವ ನಾಗನಾಥ ವಾರಕ್ಕೊಮ್ಮೆ ಬನಗಾಂವಿಗೆ ಬರುತ್ತಿದ್ದ. ಅಪ್ಪನ ಮಾಲೀಶ ಎಣ್ಣೆ, ಸ್ವಲ್ಪ ಅಕ್ಕಿ, ಬೇಳೆ, ಸಕ್ಕರೆ, ಚಹಾ, ಉಪ್ಪು-ಮೆಣಸು ತರುತ್ತಿದ್ದ. ಅವನು ತನಗಾಗಿ ಬರುತ್ತಾನೆಂಬ ವಿಷಯ ನಯನಳಿಗೆ ಗೊತ್ತಿತ್ತು. ಒಂದೆರಡು ಸಲ ನಗರಕ್ಕೆ ಹೋಗಿ ಅವನಲ್ಲೇ ಉಳಿದುಕೊಂಡಿದ್ದಳು ನಯನ ಸ್ಪರ್ಶ. ಅವನ ಸಾಮಿಪ್ಯ ಆಕೆಗೂ ಬೇಕಾಗಿತ್ತು. ಮದುವೆ ಮಾಡಿಕೊಳ್ಳಬೇಕೆಂಬ ಪ್ರಬಲ ಇಚ್ಛೆಯೂ ಇತ್ತು. ಮನೆಯ ಹಾದಿ ಬಂದಾಗಿತ್ತು.... ಅರ್ಧಾಂಗ ವಾಯುವಿನಿಂದ ಮುದ್ದೆಯಾಗಿದ್ದ ತನ್ನ ಅಕ್ಕನನ್ನು ಬಿಟ್ಟು, ನಸುಕಿಗೇ ಬನಗಾಂವ ತೊರೆದು ಬಂದಿದ್ದಳು. ಅವನ ಹೇಳಿಕೆಯಂತೆ ಪಾರೂ, ಜಾಯಿ ಇಬ್ಬರೂ ಅಣ್ಣನ ಮಕ್ಕಳು. ಅವರನ್ನೂ ಜೊತೆಗೆ ಕರೆತಂದಿದ್ದಳು.

ನಾಗನಾಥನ ಒಬ್ಬ ಮಾವ ಮುಂಬೈಯಲ್ಲಿದ್ದ. ಆ ನಗರ ಎಲ್ಲರಿಗೂ ಆಶ್ರಯ ಕೊಡುತ್ತದೆ. ಮಾವನ ಸಹಾಯದಿಂದ ಎಲ್ಲಾದರೂ ಆಶ್ರಯ ಸಿಗುವ ಸಾಧ್ಯತೆಯಿತ್ತು. ನಾಗನಾಥನಿಗೆ, ಜತೆಗೆ ನಯನಳಿಗೂ ಕೆಲಸ ಸಿಗುವ ಸಾಧ್ಯತೆಯಿತ್ತು. ಜೋಪಡಿಯ ಹಾಗೂ ಮದುವೆಯ ಸಾಲ ತೀರಿಸಿಯೇ ಇನ್ನು

ಊರಿಗೆ ಮರಳಬೇಕೆಂದು ನಿಶ್ಚಯಿಸಿದ್ದರು.

ಧಾರಾವಿಯ ಚರ್ಮದ ಕಾರಖಾನೆಯಲ್ಲಿ ನಾಗನಾಥ ಹಾಗೂ ಆ ಮೂವರೂ ಸಾಕಷ್ಟು ಕೇಳಿದರು. ಮಾವನ ನೌಕರಿ ಹೋಗಿತ್ತು. ಇದ್ದ ತುಂಡು ಜಾಗವನ್ನು ಮಾರಿದ್ದನಂತೆ. ಮಾವನ ಆಧಾರ ಸಿಗುವ ಮೊದಲೇ ತಪ್ಪಿತ್ತು.



ಇದ್ದ ಒಂದು ಆಧಾರವೂ ತಪ್ಪಿದಾಗ ನಾಗನಾಥನ ಮುಖ ಕುಂದಿತು. ಭಯದಿಂದ ನಯನಳೂ ಕುಸಿದಳು. ಆ ದಿನ ಹತ್ತಾರು ಜನರ ಹತ್ತಿರ ಹರಕು-ಮುರುಕು ಹಿಂದಿಯಲ್ಲಿ ತನ್ನ ಸಮಸ್ಯೆ ತೋಡಿಕೊಂಡ. ಚಾಳಿನಲ್ಲಿ ವಾಸಿಸುವ ಜನರಿಗೆ ಇವರಿಗೆ ಆಶ್ರಯ ನೀಡುವುದೆಂದರೆ... ಜನ ಇವರ ಮಾತಿಗೆ ಕಿವಿಗೊಡಲಿಲ್ಲ. ಕೊನೆಗೆ ಹಳೇ ಸಾಮಾನು ಮಾರುವ ಅಂಗಡಿಯ ಮೂಲೆಯಲ್ಲಿ, ಅದೂ ಗುರ್ಖಾನಿಗೆ ಹತ್ತು ರೂಪಾಯಿ ನೀಡಿ ಆ ರಾತ್ರಿಕಳೆಯುವ ವ್ಯವಸ್ಥೆ ಮಾಡಿಕೊಂಡರು.

ಇಡೀ ರಾತ್ರಿಯ ಜಾಗರಣೆ, ಹಗಲಿಡೀ ಪ್ರವಾಸ, ಇಡೀ ದಿನ ಮಾಡಿದ ಓಡಾಟ, ಪಾವ್ ಭಾಜಿ ತಿಂದು ಹಸಿವು ನೀಗಿಸಿಕೊಂಡ ಪಾರೂ ಮತ್ತು ಜಾಯಿ ಇಬ್ಬರಿಗೂ ಬಿದ್ದ ತಕ್ಷಣ ಗಾಢ ನಿದ್ದೆ ಬಂತು. ಬಸ್ಸಿನಲ್ಲಿ ಬರುವಾಗ ಏನೇನೋ ಕನಸು ಕಾಣುತ್ತಿದ್ದ ನಾಗನಾಥ ಈಗ ಮೌನ ಧಾರಣ ಮಾಡಿದ್ದ. ನಯನಾ ಅವನಿಗೆ ಧೈರ್ಯ ತುಂಬುವ ಪ್ರಯತ್ನ ಮಾಡುತ್ತಿದ್ದಳು. ಅವನ ಮೈದಡವಿ, ಕೈಹಿಡಿದು ಉತ್ಸಾಹ ತುಂಬುವ ಪ್ರಯತ್ನ ಮಾಡುತ್ತಿದ್ದಳು. ಈಗಿರುವ ಎರಡು ನೂರು ರೂಪಾಯಿಯಲ್ಲಿ ಹತ್ತು ಹದಿನೈದು ದಿನ ಕಳೆಯಬಹುದು. ಅನಂತರ ಏನಾದರೂ ವ್ಯವಸ್ಥೆಯಾಗಬಹುದು ಎಂಬ ಭರವಸೆ ನೀಡುತ್ತಿದ್ದಳು. ಚರ್ಮ ಕಾರಖಾನೆಯಲ್ಲಿ ಏನಾದರೂ ಕೆಲಸ ಸಿಗಬಹುದೆಂಬ ಆಸೆ ಆಕೆಯದು. ಆದರೆ ಅವನು ಮಾತ್ರ ಉದಾಸೀನಗೊಂಡು ಕೂತಿದ್ದ.

ರಾತ್ರಿ ಸಾಕಷ್ಟಾಗಿತ್ತು. ಜನ ಸಂಚಾರ, ಲೋಕಲ್ ಗಾಡಿಯ ಓಡಾಟ ಕಡಿಮೆಯಾಗಿತ್ತು. ಗುರ್ಖಾ ಕೋಲು ಅಪ್ಪಳಿಸುತ್ತ ದೂರ ಹೋಗಿದ್ದ. ನಾಗನಾಥ ನಯನಾಳ ಮೇಲೆ ತನ್ನ ಹಕ್ಕು ಚಲಾಯಿಸಿದ. ಆಕೆ ತನ್ನ ಹೆಂಡತಿಯೆಂದೇ ಜನಗಳಿಗೆ ಹೇಳಿದ್ದ. ಆಕೆಯೂ ಎಲ್ಲವನ್ನು ತೊರೆದು ಸಾಕಷ್ಟು ಗಳಿಸಬೇಕೆಂಬ ಆಸೆಯಿಂದ ಮುಂಬೈಗೆ ಬಂದಿದ್ದಳು. ಆಕೆ ಮಾಡಿದ್ದು ಸರಿಯೇ, ತಪ್ಪೇ? ನಾಗನಾಥ ಮೌನಿಯಾಗಿರುವದನ್ನು ಕಂಡು ಆಕೆ ಕೆರಳಿದ್ದಳು. ಯೋಜನೆ ತಲೆಕೆಳಗಾಗಿತ್ತು. ಮೂರ್‍ನಾಲ್ಕು ಸಲ ವಿರೋಧಿಸಿದರೂ ಆಕೆ ಕೊನೆಗೆ ನಾಗನಾಥನಿಗೆ ಮಣಿದಳು. ಬೆಳಿಗ್ಗೆ ಅವರ ಶರೀರದ ಜಡತ್ವ ಆಯಾಸ ಮಾಯವಾಗಿತ್ತು.

ಧಡಧಡ ಎಂದೋಡುವ ಲೋಕಲ್, ಲಾರಿ, ಟ್ಯಾಕ್ಸಿಗಳು ಅವರನ್ನು ನಿರ್ಲಕ್ಷಿಸಿ ತಮ್ಮ ದೈನಂದಿನ ಕೆಲಸದಲ್ಲಿ ತೊಡಗಿದ್ದವು. ಯಾರದೇ ಸುಖ-ದುಃಖ ಕೇಳಲು ಮನುಷ್ಯರಿಗೆ, ಯಂತ್ರಕ್ಕೆ ಸಮಯವೆಲ್ಲಿದೆ?

ಪಾರೂ, ಜಾಯಿ ಇಬ್ಬರನ್ನೂ ಇಲ್ಲೇ ಎಲ್ಲಾದರೂ ಬಿಟ್ಟು ಹೋಗೋಣವೆಂದು ನಾಗನಾಥನ ವಿಚಾರ. ಆದರೆ ನಯನಾ ತೀವ್ರವಾಗಿ ವಿರೋಧಿಸಿದಳು. ಇದು ಪಾರೂಳ ಕಿವಿ ಮೇಲೆ ಬಿತ್ತು. ಆಕೆ ಒಂದು ಕ್ಷಣ ಗಾಬರಿಯಾದಳು. ಆದರೂ ಏನೂ ಗೊತ್ತಿಲ್ಲದವರಂತೆ ಮುಂಜಾನೆಯ ಪ್ರಾತರ್ವಿಧಿಗಳನ್ನು ಮುಗಿಸಿದರು. ಗಟ್ಟಿ ನೆಲದ ಮೇಲೆ ಮಲಗಿ ದೇಹವೆಲ್ಲ ನೋಯುತ್ತಿತ್ತು. ಏನೋ ಕನಸು ಹೊತ್ತು ಬಂದ ಆ ಮುಗ್ಧ ಹುಡುಗಿಯ ಮೈಮೇಲೆ ಬಂಡೆಗಲ್ಲು ಬಿದ್ದಂತಾಗಿತ್ತು. ಆದರೂ ಸೋದರತ್ತೆಯ ಬೆಂಗಾವಲು ಇತ್ತು.

ಎರಡೇ ದಿವಸದಲ್ಲಿ ಅಲ್ಲಿಂದ ತಳಕೀಳಬೇಕಾಯಿತು. ಒಂದೆರಡು ದಿನ ಬಾಂಬೇ ಸೆಂಟ್ರಲ್ ಡಿಪೋದಲ್ಲಿ, ಮತ್ತೊಮ್ಮೆ ಆರ್ಥರ್ ರೋಡ್ ಜೈಲ್ ಎದುರು ಕಳೆದರು. ಊರಿಗೆ ಮರಳಬೇಕೆಂದರೆ ಸಾಕಷ್ಟು ಹಣವೂ ಇರಲಿಲ್ಲ.

ಧಾರಾವಿಯಲ್ಲಿ ರಾತ್ರಿ ಕಳೆದಂದಿನಿಂದ ನಾಗನಾಥನಿಗೆ ನಯನಾಳ ಬಗೆಗಿನ ಆಸೆ ಇಮ್ಮಡಿಸಿತ್ತು. ಆದರೆ ಅದರ ನಂತರ ಎಲ್ಲೋ ಚಹಾ, ಎಲ್ಲೋ ಸಂಡಾಸ, ಎಲ್ಲೋ ಸ್ನಾನ, ಎಲ್ಲಿಯೋ ಮಲಗುವುದು ನಡೆದಿತ್ತು. ಮಿತವ್ಯಯದಲ್ಲಿ ಹಣ ಖರ್ಚು ಮಾಡಬೇಕಿತ್ತು. ಕೆಲಸ ಕೇಳಲು ಹೋದಲ್ಲೆಲ್ಲ ಎಲ್ಲರೂ ನಯನಳನ್ನೇ ಹಸಿದ ಕಂಗಳಿಂದ ನೋಡುತ್ತಿದ್ದರು. ಆಗವನು ಒಳಗಿಂದೊಳಗೇ ಕೆರಳುತ್ತಿದ್ದ. ಮುಖ ಮತ್ತಷ್ಟು ಉಗ್ರಗೊಳ್ಳುತ್ತಿತ್ತು. ಹೀಗಾಗಿ ಜನರ ಸಹಾನುಭೂತಿ ಕಳಕೊಳ್ಳುತ್ತಿದ್ದ.

ಆದರೂ ಅಣ್ಣಾ, ಕಾಕಾ ಎಂದು ವಾರ ಕಳೆದಿದ್ದ, ಈಗ ಬರೇ ಹದಿನೈದು ರೂಪಾಯಿ ಮಾತ್ರ ಉಳಿದಿತ್ತು. ಮಧ್ಯಾಹ್ನದ ಸಾದಾ ಊಟಕ್ಕೆ ಏಳೆಂಟು ರೂಪಾಯಿ ಬೇಕಾಗುತ್ತಿತ್ತು. ಹೀಗಾಗಿ ಅವನು ಮುಂಗೋಪಿಯಾಗಿದ್ದ.

ಸರಕಾರಿ ಕಾಲೇಜಿನ ವರಾಂಡಾದಲ್ಲಿ ಕೊನೆಯ ಎರಡು ದಿನ ಹೇಗೊ ಕಳೆದಿದ್ದ. ಹಣವೂ ಮುಗಿದಿತ್ತು. ಹೊಟ್ಟೆ ತುಂಬ ತಿಂಡಿಯೂ ಇಲ್ಲ. ಕಣ್ತುಂಬ ನಿದ್ದೆಯೂ ಇಲ್ಲ, ಜನರ ವರ್ತನೆ ನೋಡಿ ಮನಸ್ಸು ಕಲ್ಲಾಗಿತ್ತು. ಒಬ್ಬ ಡ್ರೈವರ್ ನೂರು ರೂಪಾಯಿ ಮುಂದೆ ಚಾಚಿ ತನ್ನಾಸೆ ವ್ಯಕ್ತಪಡಿಸಿದ. ನಾಗನಾಥಗೂ ಆಸೆ. ಆದರೆ ಮೂರು ಹೆಂಗಸರೂ ಕಠೋರವಾಗಿ ನಿರಾಕರಿಸಿದಾಗ ಕೆರಳಿ ಬಾಯಿಗೆ ಬಂದಂತೆ ಬಯ್ದು ಅಲ್ಲಿಂದ ಹೊರಟು ಹೋಗಿದ್ದ.

ಅವರು ನಾಗನಾಥನ ಹಾದಿ ಕಾದು-ಕಾದು ಬೇಸತ್ತರು. ಆದವರವನು ಬರಲೇ ಇಲ್ಲ. ಅಷ್ಟರಲ್ಲಿ ರಸ್ತೆಯ ಮೇಲೊಂದು ಜೀಪು ಬಂದು ನಿಂತಿತು. ಪೊಲೀಸರು ಕೆಳಗಿಳಿದರು. ವರಾಂಡದಲ್ಲಿ ಮಲಗಿದವರನ್ನು ಲಾಠಿಯಿಂದ ಥಳಿಸಿದರು. ತೂಕಡಿಸುತ್ತಿದ್ದ ಗಂಡಸರು, ಹೆಂಗಸರು ಸಿಕ್ಕಾಪಟ್ಟೆ ಚೀರುತ್ತ ಧಾವಿಸಿದರು. ಅದನ್ನು ಕಂಡು ಈ ಮೂರು ಹೆಂಗಸರೂ ತಮ್ಮ ಗಂಟು ಎತ್ತಿಕೊಂಡು ಮಗ್ಗಲಲ್ಲಿದ್ದ ಗಲ್ಲಿ ಹೊಕ್ಕು ಪಲಾಯನ ಮಾಡಿದರು. ನಯನಾಳ ಬದುಕಿನ ಹಣತೆ ಒಡೆದು ನುಚ್ಚು ನೂರಾಗಿತ್ತು.

ಡೇರಿವಾಲ ಯಾದವ, ಅಮದಾಬಾದಿ ಮೆಹತಾ, ಚಾಳಿನ ಮಾಲಿಕ ಪಟೇಲ ಇವರೆಲ್ಲ ಎಂಟ್ಹತ್ತು ದಿನ ನಯನಾಳ ಉಪಭೋಗಿಸಿದ್ದರು. ತಿನ್ನಲು-ಉಣ್ಣಲು ಕಡಿಮೆ ಬೀಳಲಿಲ್ಲ, ಆ ತಿಂಗಳು ಮುಂಬೈ ಯಾವ ಯಾವ ಭಾಗದಲ್ಲಿದ್ದರೆಂದು ಹೇಳುವದು ಕಷ್ಟ. ಈಗ ನಯನಾಳಿಗೆ ವ್ಯವಹಾರ ಮಾಡುವುದು ತಿಳಿದಿತ್ತು. ಅಣ್ಣನ ಮಕ್ಕಳನ್ನು ದಂಧೆಗೆ ಹಚ್ಚಿ ಹಣಗಳಿಸುವ ಸೌದಾ ಮಾಡುವ ಚಾಣಾಕ್ಷತನ ಬಂದಿತ್ತು. ಎಲ್ಲರಿಂದ ಹೊರಗೆ ದೂಡಲ್ಪಟ್ಟ ಮೂವರೂ ಕೊನೆಗೆ ಗುಲಾಬ ಬಾಯಿಯ ಕೋಠಿಗೆ ಬಂದು ಸೇರಿದ್ದರು. ಆ ದಿನ ನಯನಾ ಹಾಗೂ ಇಬ್ಬರೂ ಹುಡುಗಿಯರು ಸಾಕಷ್ಟು ಗೊಂದಲ ಹಾಕಿದ್ದರು. ಎರಡು ದಿನ ನಡೆದ ಆ ಗೊಂದಲಕ್ಕೆ ಇಡೀ ವಸತಿ ಬೇಸತ್ತು ಹೋಗಿತ್ತು. ಪೊಲೀಸರಿಗೆ ಹೆದರಿ ಅವರನ್ನು ಬೇರೆ ಕಡೆ ಸ್ಥಳಾಂತರ ಮಾಡಬೇಕೆಂದು ಅತ್ತಾರ ದಾದಾ ಯೋಚಿಸಿದ. ಅಲ್ಲದೆ ನಯನಾ ಈಗ ಘರವಾಲೀಯನ್ನು ಒಪ್ಪಿಕೊಂಡಿದ್ದಳು. ಪಾರೂ, ಜಾಯಿ ಇಬ್ಬರೂ ಅಪ್ರಾಪ್ತ ವಯಸ್ಕ ಹುಡುಗಿಯರಂತೆ ಕಾಣುತ್ತಿದ್ದರು.

ಅತ್ತಾರದಾದಾ ಧಾರಾವಿ ಡಿಪೋದ ಮೂಲೆಯ ಮೂರು

ಜೋಪಡಿಗಳನ್ನು ತನಗಾಗಿ ಕಾಯ್ದಿರಿಸಿದ್ದ. ಮೀರ, ಸಾಹಿಲ, ಮುಜಾಹಿದ ಎಂಬ ಮೂವರು ತನ್ನ ನೆಂಟರ ಹುಡುಗರನ್ನು ಹೊಟೇಲು, ಬೇಕರಿ ದಂಥೆಗೆ ಹಚ್ಚಿದ್ದ. ಪಾರೂ ಹಾಗೂ ಜಾಯಿಯನ್ನು ಆ ಜೋಪಡಿಗೆ ಕರೆ ತಂದಿದ್ದ. ನಯನಾ ಆಗೀಗ ಅವರನ್ನು ಭೆಟ್ಟಿಯಾಗಲು ಬರುವದಾಗಿ ಮಾತು ಕೊಟ್ಟಿದ್ದಳು. ತಿಂಗಳಿಗೆ ಇಪ್ಪತ್ತೈದು ರೂಪಾಯಿ ಅವರ ಖರ್ಚಿಗಾಗಿ ನೀಡುವ ವ್ಯವಸ್ಥೆಯೂ ಮಾಡಲಾಗಿತ್ತು. ಹೊಟೇಲಿನಿಂದ ಊಟದ ಡಬ್ಬಿಯೂ ಬರುತ್ತಿತ್ತು. ಅಂತೂ ನಯನಾ ಆ ಇಬ್ಬರು ಹೆಣ್ಣು ಮಕ್ಕಳ ವ್ಯವಸ್ಥೆ ತನಗೆ ತೋಚಿದಂತೆ ಮಾಡಿದಳು.

ಆಗಾಗ ನಯನಾಳಿಗೆ ನಾಗನಾಥನ ನೆನಪು ಬಂದು ಕಣ್ಣು ಹಸಿಯಾಗುತ್ತಿತ್ತು. ಆದರೀಗ ಕೊಳಚೆಯಿಂದ ಹೊರ ಬರುವ ಹಾಗಿಲ್ಲ. ಇನ್ನೂ ಮೂರ್‍ನಾಲ್ಕು ವರ್ಷದೊಳಗೆ ಆ ಇಬ್ಬರು ಹೆಣ್ಣು ಮಕ್ಕಳು ಗಳಿಸಲು ಆರಂಭಿಸುತ್ತಾರೆ. ತನಗೆ ಆಧಾರವಾಗುತ್ತದೆಂಬ ಯೋಚನೆ ಗುಲಾಬಬಾಯಿಯದು. ಒಂದರ್ಥದಲ್ಲಿ ನಗದು ಹಣಗಳಿಸುವ ಬ್ಯಾಂಕು ಇದ್ದಂತೆ. ಈ ನೆಲದಲ್ಲಿ ಸಂಬಂಧ ಎಂದೂ ಮೊಳಕೆಯೊಡೆಯುವದಿಲ್ಲ ಮೊಳಕೆ ಒಡೆದರೂ ತಾಳುವದಿಲ್ಲ, ತಾಳಿದರೂ ಹೂ-ಹಣ್ಣು ಬಿಡುವದಿಲ್ಲ - ಎನ್ನುವದೇ ಸತ್ಯ.

★ ★ ★

ನಾಲ್ಕೈದು ದಿನ ಆ ಜೋಪಡಿಯ ಪರಿಸರ ವಿಚಿತ್ರವೆನಿಸಿತು. ಮನೆ-ಮಾರು, ಊರು, ಪರಿಚಯದ ಜನ ಎಲ್ಲವೂ ಈಗ ದೂರವಾಗಿತ್ತು. ಮರುದಿನ ಸಾಹಿಲ ಭೆಟ್ಟಿಯಾಗಿ ಹೋಗಿದ್ದ. ಪಾತ್ರೆ, ಚಾಪೆ, ಬಕೇಟು ಕೊಟ್ಟು ಧೈರ್ಯ ನೀಡಿ ಹೋಗಿದ್ದ. ಯಾರಾದರೂ ಕೇಳಿದರೆ ತನ್ನ ಹೆಸರು ಹೇಳುವಂತೆ ಸೂಚಿಸಿದ್ದ.

ಎರಡು ದಿನಗಳಲ್ಲಿ ಅವರು ಅಲ್ಲಿ ಹೊಂದಿಕೊಂಡರು. ಅಲ್ಲೇ ಸನಿಹದಲ್ಲೇ ಲಾರಿಗಳು ನಗರದ ಕಸ-ಕಡ್ಡಿ ತಂದು ಚೆಲ್ಲುತ್ತಿದ್ದವು. ಕಾಗದ, ಪ್ಲಾಸ್ಟಿಕ್, ಬಟಾಟೆ, ಉಳ್ಳಾಗಡ್ಡಿ, ಹಾಳಾದ ಕಾಯಿಪಲ್ಲೆ - ಇದನ್ನು ಆರಿಸಲು ಹೆಂಗಸರ ಒಂದು ದೊಡ್ಡ ಗುಂಪೇ ಅಲ್ಲಿ ಸೇರುತ್ತಿತ್ತು. ಜತೆಗೆ ಹಂದಿ, ನಾಯಿಗಳೂ ಸಹ. ಅನಂತರ ಅದಕ್ಕೆ ಬೆಂಕಿ ಹಚ್ಚಿ ನಾಶ ಮಾಡುತ್ತಿದ್ದರು. ಪಾರೂ, ಜಾಯಿ ಆಗಾಗ ತೆಂಗಿನ ನಾರು ಸಂಗ್ರಹಿಸಲಾರಂಭಿಸಿದರು. ನೀರು ಕಾಯಿಸಲು ಅಡಿಗೆ ಮಾಡಲು ಇದು ಉಪಯೋಗಕ್ಕೆ ಬೀಳುತ್ತಿತ್ತು. ಇಂಥದರಲ್ಲೇ ಅವರು ಮೂರು ಕಲ್ಲು ಊರಿ ಬಚ್ಚಲ ಒಲೆ ತಯಾರಿಸಿದರು. ಹಳೇ ಗೋಣಿ ಚೀಲ ಬಾಗಿಲಿನ ಪರದೆಯಾಯಿತು.

ಈಗ ಈ ಇಬ್ಬರು ಹುಡುಗಿಯರು ಈ ಕೊಳಗೇರಿಗೆ ಬಂದು ಒಂದೂವರೆ ತಿಂಗಳು ಕಳೆದಿತ್ತು. ಸೋದರತ್ತೆ ನಯನಾಳ ಪತ್ತೆಯಿರಲಿಲ್ಲ. ಒಮ್ಮೆ ಮುಜಾಹಿದ್ ಹೇಳಿದ 'ಆಕೆಯ ಹಣೆಬರಹ ಚೆನ್ನಾಗಿದೆ. ಮದುವೆ ಮಾಡಿಕೊಂಡು ಅವಳು ಪರದೇಶಕ್ಕೆ ಹೋದಳು ನೀವೇನು ಕಾಳಜಿ ಮಾಡಬೇಡಿ. ಆರಾಮದಿಂದ ಇರಿ' ಈಗ ಹೂಂ ಅನ್ನದೇ ಗತ್ಯಂತರವಿರಲಿಲ್ಲ.


ಅವನು ಹೋದ ನಂತರ ಜಾಯಿ ಬಿಕ್ಕಿ ಬಿಕ್ಕಿ ಅತ್ತಳು. ಪಾರೂ ಆಕೆಗೆ ಸಮಾಧಾನ ಹೇಳುವ ಪ್ರಯತ್ನ ಮಾಡುತ್ತಿದ್ದಳು. ಈಗ ಭೀತಿ ಆವರಿಸಿತ್ತು. ಯಾರ ಆಶ್ರಯವೂ ಇರಲಿಲ್ಲ. ಇಡೀ ವಾರ ಹೆದರಿಕೆಯಲ್ಲೇ ಅವರು ಕಳೆದರು. ಆಗಾಗ ಜಾಯಿ ಕನಸಿನಲ್ಲೇ ಬೆಚ್ಚಿ ಬೀಳುತ್ತಿದ್ದಳು. ಏನೇನೋ ಭಯಾನಕ ಕನಸುಗಳಾಗಿ ಅಸಂಬದ್ಧವಾಗಿ ಬಡಬಡಿಸುತ್ತಿದ್ದಳು. ಪಕ್ಕದಲ್ಲಿ ಮಲಗಿದ ಪಾರೂಗೆ ಮಾತ್ರ ನಿದ್ದೆ ಬರುತ್ತಿರಲಿಲ್ಲ. ಅತ್ತೆ ತಮಗಾಗಿ ವೇಶ್ಯೆಯಾದಳು. ಹಣಕ್ಕಾಗಿ ಸೌದಾ ಮಾಡಿದಳು. ನಾಗನಾಥನಿಗಿಂತ ಇವಳೇ ಒಳ್ಳೆಯವಳು. ಹೀಗೆ ಏನೇನೋ ಯೋಚನೆಗಳು ಅವಳ ಮನಸ್ಸಿನಲ್ಲಿ ಸುಳಿದಾಡುತ್ತಿದ್ದವು.

ಯಾವಾಗ ಕಣ್ಣು ಹತ್ತಿತ್ತೋ ತಿಳಿಯಲಿಲ್ಲ. ಎಚ್ಚರವಾದಾಗ ಮಳೆ ರಪ ರಪ ಬೀಳುತ್ತಿತ್ತು. ಯಾವುದೋ ಲಾರಿ ಕಿರುಚುತ್ತ ಹೋಯಿತು. ನಾಯಿ ವಿಕಾರವಾಗಿ ಕೂಗಿತು. ಪಾರೂ ತಟ್ಟನೆ ಎದ್ದಳು. ಬಚ್ಚಲಿಗೆ ಹೋದಳು. ಆಕೆ ಅದರ ಬಗ್ಗೆ ಕೇಳಿದ್ದಳು. ಆದರೆ ತನ್ನ ನಂಬರ ಇಷ್ಟು ಬೇಗ ಬರುತ್ತದೆಂದು ಆಕೆಗೆ ಅನಿಸಿರಲಿಲ್ಲ. ಎದೆ ದಡದಡಿಸುತ್ತಿತ್ತು. ಉಸಿರು ವೇಗವಾಗಿ ಚಲಿಸುತ್ತಿತ್ತು. ಏನು ಮಾಡಬೇಕೆನ್ನುವದೇ ಹೊಳೆಯಲಿಲ್ಲ.


ನೆರೆಯ ಜೋಪಡಿಗಳಲ್ಲಿ ನಿತ್ಯ ನಡೆಯುವ ಅಂಥ ಪ್ರಕರಣಗಳನ್ನು ಆಕೆ ನೋಡಿದ್ದಳು. ಹೆಣ್ಣು ನೆರೆದಾಗ ಏನೇನು ಮಾಡುತ್ತಾರೆಂಬ ಕಲ್ಪನೆ ಆಕೆಗೆ ಅಲ್ಪಸ್ವಲ್ಪ ಇತ್ತು. ಹಳೇ ಚಿಂದಿಗಳನ್ನು ಸಂಗ್ರಹಿಸಿಕೊಂಡು ಬೇಕಾದ ವ್ಯವಸ್ಥೆ ಮಾಡಿಕೊಂಡು ಆಕೆ ಮಲಗಿದಳು. ಅನಂತರದ ಮೂರು ದಿನ ಪಾರೂ ಒತ್ತಡದಲ್ಲೇ ಕಳೆದಳು. ತನ್ನ ಹೊಸರೂಪ ಜಾಯಿಗೆ ಹೇಳಬಾರದೆಂದರೂ ಸಾಧ್ಯವೇ?

ನಾಲ್ಕನೇ ದಿನ ಸ್ನಾನ ಮುಗಿಸಿದಾಗ ಪಾರೂ ಅಧಿಕ ದಿಟ್ಟಳಾಗಿದ್ದಳು. ಎಂಥದೋ ಹೊಣೆಗಾರಿಕೆಯ ಅರಿವು ಆಕೆಗಾಗಿತ್ತು. ಧೈರ್ಯವೂ ಬಂದಿತ್ತು. ಪಾರೂ - ಜಾಯಿಯ ಜೋಪಡಿಯ ಹತ್ತಿರ ಒಬ್ಬ ಮದ್ರಾಸಿಯ ಜೋಪಡಿಯಿತ್ತು. ಅದರಲ್ಲಿ ಏಳೆಂಟು ಜನ ವಾಸಿಸುತ್ತಿದ್ದರು. ಯಜಮಾನ ಗೌಂಡಿ ಕೆಲಸ ಮಾಡುತ್ತಿದ್ದ. ದೂರದ ದುಬೈಯಲ್ಲಿ ವಾಸಿಸುತ್ತಿದ್ದನಂತೆ. ಮನೆಯಲ್ಲಿ ಐಷಾರಾಮ ವಸ್ತುಗಳು ಸಾಕಷ್ಟಿದ್ದವು. ಅಲ್ಲಿ ಬಂದು ಹೋಗುವ ಜನರ ಸಂಖ್ಯೆಯೂ ಅಧಿಕ. ಅಲ್ಲಿ ಸ್ಮಗ್ಲಿಂಗ್ ದಂಧೆ ನಡೆಯುತ್ತಿತ್ತು. ಪಾರೂ-ಜಾಯಿಗೆ ಇದನ್ನೆಲ್ಲ ನೋಡಿ ಎಂಥದೋ ಕೌತುಕ.

ಒಂದು ದಿನ ಮುಜಾಹಿದ ಒಬ್ಬ ಮನುಷ್ಯನನ್ನು ಕರೆತಂದ. ಅವನು ಒಳಗೆ ಬಂದ ತಕ್ಷಣ ಸೇಂದಿಯ ಉಗ್ರವಾಸನೆ ಬಂತು, ನಿಲ್ಲುವದು ಸಾಧ್ಯವಾಗದೇ ತೂರಾಡುತ್ತಿದ್ದ ಇಂಥ ಮನುಷ್ಯನನ್ನು ಅಪರಾತ್ರಿ ಹೊತ್ತಿನಲ್ಲಿ ಕರೆ ತಂದಿರುವದು ನೋಡಿ ಇಬ್ಬರಿಗೂ ಸಿಟ್ಟು ಬಂತು. ಆದರೆ ಏನೂ ಮಾಡುವ



ಏನು ಮೇಷ್ಟ್ರೇ ನಿಮ್ಮ ಮಕ್ಕಳೆಲ್ಲ ನೀವು ಕಲಿಸುತ್ತಿರುವ ಶಾಲೆಯಲ್ಲಿಯೇ ಓದತಾ ಇರಬೇಕಲ್ವಾ?



ಛೇ, ನನ್ನನ್ನೇನು ಮೂರ್ಖನೆಂದು ಕೊಂದಿರಾ? ನನ್ನದು ಸರಕಾರಿ ಶಾಲೆ ನೋಡಿ, ಅದಕ್ಕಾಗಿ ಮೂರು ಮಕ್ಕಳನ್ನು ಖಾಸಗಿ ಶಾಲೆಗೆ ಹಚ್ಚಿದ್ದೇನೆ.

ಹಾಗಿರಲಿಲ್ಲ.

''ಇಲ್ನೋಡಿ ಹುಡುಗಿಯರೇ, ಇವ್ನು ನನ್ನ ಊರಿನವನು, ಡ್ರೈವರ್. ಸ್ವಲ್ಪ ಹೆಚ್ಚು ಕುಡಿದಿದ್ದಾನಷ್ಟೇ ಆದ್ರೆ ಒಳ್ಳೆ ಮನುಷ್ಯ, ರಾತ್ರಿ ಇಲ್ಲೇ ಮಲಗುತ್ತಾನೆ. ಬೆಳಿಗ್ಗೆ ಎದ್ದು ಹೋಗುತ್ತಾನೆ. ಹೆದರಬೇಡಿ, ತಿಳೀತೇ?'' ಎಂದು ಮುಜಾಹಿದ ಅವರಿಗೆ ತಿಳಿಸಿ ಹೇಳಿದ.

ಪಾರೂ ತುಟಿ ಬಿಚ್ಚದೇ ಚಾಪೆ ಹಾಸಿದಳು. ಅದರ ಮೇಲೆ ಅವನು ಉರುಳಿದ. ಮುಜಾಹಿದ ಬಿಡುಗಡೆಗೊಂಡವನಂತೆ ಅಲ್ಲಿಂದ ಹೊರಬಿದ್ದ. ಇಬ್ಬರು ಹುಡುಗಿಯರು ನಿರ್ವಾಹವಿಲ್ಲದೆ ಅಲ್ಲೇ ರಾತ್ರಿ ಕಳೆಯಬೇಕಾಯಿತು.

ಮರುದಿನ ಬೆಳಿಗ್ಗೆ ಡ್ರೈವರ್ ಹೊರಟು ಹೋದ ಮೇಲೆ ಇಡೀ ಜೋಪಡಿಯನ್ನು ತಿಕ್ಕಿ ತೊಳೆದು ಶುಭ್ರಗೊಳಿಸಿದರು. ಆಕೆಗೆ ತನ್ನ ಮೇಲೆ, ಮುಜಾಹಿದ್ ಮೇಲೆ ಇಡೀ ಜಗತ್ತಿನ ಮೇಲೆ ಸಿಟ್ಟು ಬಂದಿತ್ತು. ಪಾರೂನ ಸಿಟ್ಟು ಜಾಯಿಗೂ ಅರ್ಥವಾಗಿತ್ತು.

ಇಫ್ತರ್ ಡ್ರೈವರ್‌ನಿಗೆ ಎರಡು ರೂಪವಿತ್ತು. ಎರಡನೇ ಸಲ ಬಂದಾಗ ಇಬ್ಬರೂ ಅಕ್ಕ-ತಂಗಿಯರಿಗಾಗಿ ಸ್ನೋ, ಪೌಡರ್, ಕನ್ನಡಿ, ಬಿಸ್ಕಿಟ್, ಮೂರ್‍ನಾಲ್ಕು ಪ್ಲಾಸ್ಟಿಕ್ ಬಟ್ಟೆ, ತಾಡಪತ್ರಿ ಎಲ್ಲವನ್ನೂ ತಂದಿದ್ದ. ನೀರೂ ಕುಡಿಯದೇ ಹಾಗೇ ಹೋಗಿದ್ದ. ಅನಂತರ ಮತ್ತೆ ಎರಡು ಸಲ ಬಂದು ಹೋದ. ಈ ಸಲವೂ ಚಹಾ, ಸಕ್ಕರೆ, ಕಡ್ಲೆಹಿಟ್ಟು, ನೈಲಾನ ಚಾಪೆ ಇತ್ಯಾದಿ ತಂದಿದ್ದ. ಹೀಗಾಗಿ ಪಾರೂ-ಜಾಯಿಗೆ ಅವನ ಮೇಲೆ ಅಭಿಮಾನ ಮೂಡಿತ್ತು. ಈ ಮೊದಲಿನ ಕುಡುಕನ ರೂಪ ಅವರು ಮರೆತಿದ್ದರು. ಅನಂತರ ಹತ್ತು ದಿನ ಇಫ್ತರಭಾಯಿಯ ಪತ್ತೆಯೇ ಇಲ್ಲ.

ಒಂದು ದಿನ ರಾತ್ರಿ ಪಾರೂನಿಗೆ ತಟ್ಟನೆ ಎಚ್ಚರವಾಯಿತು. ಯಾರೋ ಬಾಗಿಲ ಬಡಿಯುವ ಸದ್ದು. ಪಾರೂ ಚಿಮಣಿ ಹಚ್ಚಿದಳು. 'ಯಾರು?' ಎಂದು ಕೇಳಿದಳು. 'ನಾನು ಇಫ್ತರ್ ಭಾಯಿ!' ಆಕೆ ಬಾಗಿಲು ತೆರೆದಳು.

ಉಗ್ರ ಸೇಂದಿಯ ವಾಸನೆಯಲ್ಲೇ ಅವನು ಒಳಗೆ ಬರಲು ಪ್ರಯತ್ನಿಸುತ್ತಿದ್ದ.

'ನಿಲ್ಲು ಕೈ-ಕಾಲು ತೊಳೆದು ಒಳಗೆ ಬಾ' ಪಾರೂಳ ಮಾತಿನಿಂದ ಚಕಿತನಾದ.

'ಜಾ..ಯಿ ಮ..ಲ..ಗಿದ..ಳೇ? ಈ..ಗ..ಷ್ಟೇ.. ಹ..ನ್ನೇ..ರಡು..ವರೆ'' ತಡವರಿಸುತ್ತ ಮಾತಾಡಿದ.

ತಾನು ತಂದ ಚಾಪೆ ಮೇಲೆ ಅವನು ಉರುಳಿಕೊಂಡ ಪಾರೂ ಬಹಳ ಹೊತ್ತು ಎಚ್ಚರವಾಗಿಯೇ ಇದ್ದಳು. ಆಕೆ ಚಿಮಣಿ ಆರಿಸಿದಾಗ ಜೋಪಡಿಯಲ್ಲಿ ಕತ್ತಲೆ ಆವರಿಸಿತು. ಕತ್ತಲೆಯಲ್ಲಿ ಮತ್ತೆ ಸೇಂದಿಯ ವಾಸನೆ ಬಂತು. ಇಫ್ತರ ಕಿಸೆಯಿಂದ ಬಾಟಲ ಹೊರತೆಗೆದು ಉಳಿದ ಸೇಂದಿಯನ್ನೆಲ್ಲ ಗಂಟಲಿಗೆ ಸುರಿದುಕೊಂಡ ಇವನೆಂಥ ಮನುಷ್ಯನಪ್ಪ ಬರೇ ಕುಡಿಯುತ್ತಿರುತ್ತಾನೆ. ಇವನು



ನನಗೆ ನಿನ್ನ ಹಾಗೆ ಅಂಜಿಕೆಯೇ ಇಲ್ಲ ಕಣೇ....

ಯಾರೋ.. ಮುಜಾಹಿದಗೆ ಏನು ಸಂಬಂಧವೋ ಇವನಿಂದ ನಾವು ಇಲ್ಲಿಂದ ಹೊರಬೀಳುವ ಹಾಗಾಗದಿದ್ದರೆ ಸಾಕು.... ಎಂದೆಲ್ಲ ಪಾರೂ ಯೋಚಿಸುತ್ತಿದ್ದಳು. ಹೊರಗೆ ಮಳೆ ರಪರಪ ಸುರಿಯುತ್ತಿತ್ತು. ಇಡೀ ವಾತಾವರಣ ಶಾಂತವಾಗಿತ್ತು.

ತಟ್ಟನೆ ಇಫ್ತರ ಪಾರೂಳನ್ನು ಗಟ್ಟಿಯಾಗಿ ಹಿಡಿದು ಅಪ್ಪಿಕೊಂಡ. ಪಾರೂಳಿಗೆ ಉಸಿರುಗಟ್ಟಿದಂತಾಯ್ತು. ಆಕೆ ಬಿಡಿಸಿಕೊಳ್ಳುವ ಪ್ರಯತ್ನ ಮಾಡಿದಳು. ಅವನ ತುಟಿ, ಬೆರಳು ಹಪಾಪಿ ಮನುಷ್ಯನಂತೆ ಅವಳ ದೇಹದ ತುಂಬಾ ಚಲಿಸುತ್ತಿದ್ದವು. ಕೊನೆಗವನು ಅವಳ ಬಟ್ಟೆಯನ್ನು ಕಿತ್ತೊಗೆದ. ಆಕೆ ತುಟಿ ಕಚ್ಚಿ ಎಲ್ಲ ವೇದನೆಯನ್ನು ಜೀರ್ಣಿಸಿಕೊಂಡಳು ಆಕೆಯ ಪ್ರತಿಭಟನೆ ನಿರರ್ಥಕವಾಯಿತು. ಸಂಪೂರ್ಣ ಕುಸಿದಳು. ಇಡೀ ದೇಹ ಹೊತ್ತಿ ಉರಿಯುತ್ತಿತ್ತು. ಕೊನೆಗೊಮ್ಮೆ ಆಕೆ ಎದ್ದಳು. ಬಟ್ಟೆ ಸರಿಪಡಿಸಿಕೊಂಡಳು. ಗಟಗಟನೆ ನೀರು ಕುಡಿದಳು. ತಂಗಿಯನ್ನು ಅಪ್ಪಿಕೊಂಡು ಮಲಗಿದಳು. ಮನುಷ್ಯತ್ವದ ಮೇಲಿನ ಆಕೆಯ ವಿಶ್ವಾಸ ಇಂದು ಸತ್ತು ಹೋಗಿತ್ತು.

ಬೆಳಿಗ್ಗೆ ಎದ್ದಾಗ ಜೋಪಡಿ ಬರಿದಾಗಿತ್ತು. ಚಾಪೆ ಖಾಲಿಯಾಗಿತ್ತು. ಸೇಂದಿಯ ಬಾಟಲಿ ಮೂಲೆಯಲ್ಲಿ ಬಾಯ್ತೆರೆದು ಬಿದ್ದಿತ್ತು. ಜಾಯಿ ಇನ್ನೂ ಮಲಗಿಯೇ ಇದ್ದಳು. ಪಾರೂ ಬೆಂಕಿ ಹೊತ್ತಿಸಿ ನೀರು ಕಾಯಿಸಲು ಕೂತಳು.

ಆಕೆ ಬಟ್ಟೆ ಬದಲಾಯಿಸಿದಳು.... ಕೂದಲು ಒರೆಸಿಕೊಳ್ಳುವಾಗ ಜಾಯಿಗೆ ಎಚ್ಚರವಾಗಿತ್ತು 'ಅಕ್ಕಾ! ಜಳಕ ಮುಗೀತೇ? ಇಷ್ಟು ಬೇಗ? ಎಲ್ಲಾದರೂ ಹೊರಟಿಯಾ?'

'ಇಲ್ಲ! ನೀನು ಏಳು.... ಚಹಾ ಮಾಡ್ತೇನೆ....' ಪಾರೂ ತುಣುಕು ಮಾತಾಡಿದಳು.

ಎರಡು ಮೂರು ದಿನ ಜಾಯಿ ಅಕ್ಕನನ್ನು ಮಾತಾಡಿಸುವ ಪ್ರಯತ್ನ ಮಾಡಿದಳು. ವಾಕರಿಕೆಯ ದಿನಗಳು ಕ್ರಮೇಣ ಕಳೆಯುತ್ತಿದ್ದವು. ಮುಜಾಹಿದ್ ಹಣ ನೀಡಿ ಹೋಗಿದ್ದ ಒಂದೆರಡು ದಿನಗಳಲ್ಲಿ ಪಾರೂ ಇಲ್ಲಿಂದ ಹೊರ ಬೀಳುವ ವಿಚಾರ ಮಾಡುತ್ತಿದ್ದಳು.

ಇನ್ನೊಂದು ದಿನ ಮತ್ತೆ ಇಫ್ತರ್ ಭಾಯಿ ಬಂದ. ಅವನಿಗೆ ಚಾಪೆ ನೀಡಿ ಪಾರೂ ತಂಗಿಯೊಂದಿಗೆ ಮಲಗಿದಳು. ಇಫ್ತರ ಕುಡಿದು ಬಂದು ತೊಂದರೆ ಕೊಡುವ ವಿಷಯವನ್ನು ಸಾಹಿಲಗೆ ಹೇಳಬೇಕೆಂದು ನಿಶ್ಚಯಿಸಿದಳು. ಪಾರೂ ಇಫ್ತರ ಭಾಯಿ ಕಡೆ ಗಮನ ನೀಡದೆ ಮಲಗಿದ ನಟನೆ ಮಾಡಿದಳು. ಎಷ್ಟೋ ಹೊತ್ತಿನ ಬಳಿಕ ಆಕೆಗೆ ಗಾಢವಾದ ನಿದ್ದೆ ಬಂತು. ತನ್ನ ದೇಹದ ಮೇಲೆ ಯಾರೋ ಕೈಯಾಡಿಸುತ್ತಿರುವದೂ ಆಕೆಗೆ ತಿಳಿಯಲಿಲ್ಲ. ಗಾಳಿಯಲ್ಲಿ ತೇಲಿದಂತೆ ಭಾಸವಾಗಿ ಒಮ್ಮೆಲೆ ಎಚ್ಚರಗೊಂಡಳು. ಅವನು ಆಕೆಯನ್ನು ಎತ್ತಿ ತನ್ನ ಚಾಪೆ ಮೇಲೆ ಮಲಗಿಸಿ. ಬಟ್ಟೆ ಕಿತ್ತೊಗೆದ. ಪಾರೂ ತುಟಿ ಕಚ್ಚಿ ಎಲ್ಲವನ್ನೂ ಮೌನವಾಗಿ ಸಹಿಸಿಕೊಂಡಳು. ಸೇಂದಿಯ ಉಗ್ರ ವಾಸನೆಯ ಅಡಿಯಲ್ಲಿ ಸಿಕ್ಕ ಆಕೆಯ ಬದುಕು ಮಸಣವಾಗಿತ್ತು.

.... ಇಫ್ತರ ಭಾಯಿ ಆಗಲೇ ಹೊರಬಿದ್ದಿದ್ದ. ಅವನ ಚಪ್ಪಲಿನ ಸಪ್ಪಳ ಚಬೂಕಿನಂತೆ ಪ್ರಹಾರ ಮಾಡುತ್ತಿತ್ತು. ಪಾರೂನ ದೇಹ ವೇದನೆಯಿಂದ ಚೀರುತ್ತಿತ್ತು. ಯಾಂತ್ರಿಕ ಗೊಂಬೆಯಂತೆ ಆಕೆ ಬಟ್ಟೆ ಧರಿಸುತ್ತಿದ್ದಳು.

'ಅಕ್ಕಾ! ಹೋದನೇನು ಆ ಕುಡುಕ?' ಜಾಯಿ ಮಾತಿಗೆ ಆಕೆ ಹೊರಳಿದಳು ಗಲ್ಲದಿಂದ ಕಣ್ಣೀರು ಇಳಿಯುತ್ತಿತ್ತು. ಆಕೆಯನ್ನು ಅಪ್ಪಿಕೊಂಡ ಜಾಯಿಗೆ ಏನು ಮಾಡಬೇಕೋ ತೋಚಲಿಲ್ಲ. ಇನ್ನು ಇದಕ್ಕೆಲ್ಲ ವಿದಾಯ ಹೇಳಬೇಕೆಂದು ಪಾರೂ ನಿಶ್ಚಯಿಸಿದಳು. ಚಾಪೆಯ ಕೆಳಗಿಟ್ಟಿದ್ದ ಹಣ ಎತ್ತಿಕೊಂಡಳು. ಚೀಲದಲ್ಲಿ ಬಟ್ಟೆ ತುರುಕಿದಳು. ಇಬ್ಬರೂ ಆ ಜೋಪಡಿಯಿಂದ ಹೊರಬಿದ್ದರು.


ಮಳೆ ಇನ್ನೂ ಸುರಿಯುತ್ತಲೇ ಇತ್ತು. ಮೂರು ತಿಂಗಳ ಅಲ್ಲಿಯ ವಾಸಕ್ಕೆ ವಿದಾಯ ಹೇಳಿದಳು. ನಾಯಿಯ ಬೊಗಳುವಿಕೆಗೆ ಲಕ್ಷ್ಯ ಕೊಡದೇ ಅವರಿಬ್ಬರೂ ಸಯಾನ್ ಹಾಸ್ಪಿಟಲ್ ಹಾದಿ ಹಿಡಿದು ಹೊರಟರು. ಪುಣೆ, ನಗರಕ್ಕೆ ಹೋಗುವ ಯಾವುದೇ ಬಸ್ಸು ಹಿಡಿಯುವ ಯೋಚನೆ ಅವರದ್ದು. ಧಾರಾವಿಯ ಕತ್ತಲ ಕೂಪದಿಂದ ಅವರ ಕಾಲು ದೂರ ಹೊರಟಿತ್ತು. ಸುತ್ತಲೂ ಕತ್ತಲೆಯಿದ್ದರೂ ಮನಸ್ಸಿನಲ್ಲಿ ಮಾತ್ರ ಬೆಳಕಿತ್ತು.

■ ಮರಾಠಿ ಮೂಲ - ಕೇಶವ ಮೇಶ್ರಾಮ


ಅನುವಾದ - ಚಂದ್ರಕಾಂತ ಪೋಕಳೆ

ರಾಜಕೀಯ

ಸುರೇಶ್ ವಗ್ಗಾ


ನಾವು ನಿಮ್ಮ ಪಾರ್ಟಿ ಸೇರಲು ಬಂದಿಲ್ಲ; ನಿಮ್ಮ ಪಕ್ಷದ 'ಫಂಡ್'ನ್ನು ಕದಿಯಲು ಬಂದಿದ್ದೇವೆ....


ಕ್ರಿಮಿನಲ್ ಹಿನ್ನಲೆ ಇಲ್ಲ, ಹಗರಣಗಳ ಬೆಂಬಲವೂ ಇಲ್ಲ. ನಿಮಗ್ಯಾವ ಪಕ್ಷದವ್ರು ಟಿಕೇಟು ಕೊಡುತ್ತಾರೆ!


ಮತ್ತೆ ಆಶ್ವಾಸನೆ ಕೊಡೋದುಬೇಡ, ಹೋದ ವರ್ಷ ನೀವು ಕೊಟ್ಟ ಆಶ್ವಾಸನೆಗಳು ನಮಗೆ ಚನ್ನಾಗಿ ನೆನಪಿವೆ....


ಈ ಚುನಾವಣೆಗೆ ನಿಲ್ಲೋಕೆ ನನಗೊಂದು ನಿಮ್ಮ ಪಾರ್ಟಿಯ ಟಿಕೇಟ್ ಕೊಡಿ....



ನೀವೂ ಅತಿಥಿಗಳಾಗಿ

ದೈನಂದಿನ ಕೆಲಸ, ಕಾರ್ಯಗಳ ಏಕತಾನತೆಯಿಂದ ಬೇಸರಗೊಂಡ ಮನಸ್ಸು ಸ್ನೇಹಿತರನ್ನೋ ನೆಂಟರಿಷ್ಟರನ್ನೋ ಭೇಟಿಮಾಡಬಯಸುವುದು ಸಹಜ. ತಮಾಷೆಯಾಗಿ ನಾಲ್ಕಾರು ಮಾತನಾಡಿ ಬಂದರೆ ಬೇಸರಗೊಂಡ ಮನಕ್ಕೆ ಹಿತ.

ನೀವೊಬ್ಬರೇ ಅಥವಾ ನಿಮ್ಮ ಕುಟುಂಬ ಸಮೇತ ಹೋಗಿರಬಹುದು. ಹಾಗೆ ಹೋದಾಗ ನಮ್ಮ ನಡತೆ, ಮಾತಿನ ಶೈಲಿ, ಬಳಸುವ ಭಾಷೆ, ಮಾತನಾಡುವ ವಿಷಯ, ಬಂದವರು ಒಳ್ಳೆಯ ಅತಿಥಿಗಳು ಹೌದೋ ಅಲ್ಲವೋ ಎಂಬುದನ್ನು ನಿರ್ಧರಿಸುವ ಕೆಲವು ಅಂಶ ಮನಸ್ಸಿನಲ್ಲಿಟ್ಟುಕೊಳ್ಳ ಬೇಕಾದದ್ದು ಅತ್ಯವಶ್ಯ. ವ್ಯಕ್ತಿತ್ವದ ವಿಕಾಸಕ್ಕೂ ಇದು ಖಂಡಿತ ಸಹಕಾರಿ.

ಸಮಯ ಪರಿಪಾಲನೆ : ಭೇಟಿಯ ಕಾರ್ಯಕ್ರಮ ಮುಂಚೆಯೇ ತಿಳಿಸಿ. ಎಷ್ಟು ಸಮಯಕ್ಕೆ ಹೋಗಲಿರುವಿರಿ ಎಂಬುದನ್ನು ನಿರ್ಧರಿಸಿ ಅವರಿಗೆ ತಿಳಿಸಿ ಮತ್ತು ನೀವು ತಿಳಿಸಿದ ಸಮಯಕ್ಕೆ ಸರಿಯಾಗಿ ಹೋಗಿ. ಸ್ನೇಹಿತರಿಗೆ ಎಷ್ಟು ಜನ ಭೇಟಿ ಮಾಡಲಿರುವಿರಿ ಎಂಬುದನ್ನು ತಿಳಿಸಿದರೆ ಅನುಕೂಲ. ನೀವು ಮುಂಚೆಯೇ ತಿಳಿಸಿದುದಕ್ಕಿಂತ ಹೆಚ್ಚಿನ ಜನ ಕರೆದೊಯ್ಯಬೇಡಿ.

ಒಂದು ವೇಳೆ ಕಾರ್ಯಕ್ರಮ ರದ್ದು ಆಗುವುದಿದ್ದರೆ ಅಥವಾ ಭೇಟಿ ಸಮಯವನ್ನು ಮುಂದೂಡುವುದಿದ್ದರೆ ಮುಂಚಿತವಾಗಿಯೇ ಆತಿಥೇಯರಿಗೆ ತಿಳಿಸುವುದು ಒಳಿತು. ತಡಮಾಡಿ ಹೋಗುವುದಿದ್ದರೆ ಎಷ್ಟು ಸಮಯ ವಿಳಂಬ ವಾಗಬಹುದೆಂಬ ಅಂದಾಜು ವೇಳೆ ತಿಳಿಸಿ. ಆತಿಥೇಯರಿಗೆ ಬೇರೆ ಕೆಲಸ ಕಾರ್ಯಗಳು ಇದ್ದರೆ ತಿಳಿಸಲು ಹೇಳಿ. ಹಾಗೇನಾದರೂ ಇದ್ದರೆ ಕಾರ್ಯಕ್ರಮ ಮುಂದೂಡಿರಿ.

ಸ್ನೇಹಿತರ ಮನೆಯಲ್ಲಿ : ಭೇಟಿ ಸಮಯ ಕ್ಲುಪ್ತವಾಗಿರಲಿ, ವ್ಯರ್ಥವಾದ ಹಾಳು ಹರಟೆಯಿಂದ ನಿಮ್ಮ ಮತ್ತು ನಿಮ್ಮನ್ನು ಆಹ್ವಾನಿಸಿದವರ ಅಮೂಲ್ಯ ಸಮಯ ಹಾಳು ಮಾಡಬೇಡಿ. ಬೇರೊಬ್ಬರನ್ನು ನಿಂದಿಸುವುದೋ - ಹೊಗಳುವುದೋ ಮಾತುಕತೆಯ ವಿಷಯವಾಗಬಾರದು. ಸ್ನೇಹಿತರಿಗೆ ಇಷ್ಟವಾಗುವ ವಿಷಯ ಆರಿಸಿಕೊಂಡು ಮಾತನಾಡಿ.

ಮಾತಿನ ಶೈಲಿ, ಸ್ಪಷ್ಟತೆ, ಬಳಸುವ ಭಾಷೆ ಚೆನ್ನಾಗಿದ್ದು ಆಹ್ವಾನಿಸಿದವರಿಗೆ ಸಂತೋಷ, ತೃಪ್ತಿ ನೀಡುವಂತಿರಬೇಕು. ಭೇಟಿಯ ಕಾರ್ಯಕ್ರಮ ಸುಂದರ ನೆನಪಾಗಬೇಕು. ''ಇನ್ನೂ ಸ್ವಲ್ಪ ಸಮಯ ಇವರು ಇದ್ದರೆ ಚೆನ್ನಾಗಿತ್ತು'' ಎಂದವರು ಅಂದುಕೊಳ್ಳಬೇಕೇ ಹೊರತು ''ಯಾಕಾದರೂ ಇವರನ್ನು ಆಹ್ವಾನಿಸಿದೆವಪ್ಪಾ.... ಕೊರೆಯುತ್ತಾರೆ'' ಎನ್ನಬಾರದು.

ನಡವಳಿಕೆ : ಆಹ್ವಾನಿಸಿದವರ ಮನೆಯಲ್ಲಿ ಟೇಬಲ್ ಅಥವಾ ಟೀಪಾಯಿಯ ಮೇಲೆ ಪತ್ರಿಕೆಗಳನ್ನು ಮ್ಯಾಗಜಿನ್‌ಗಳನ್ನಿಟ್ಟಿದ್ದರೆ ಅವುಗಳನ್ನು ಓದಿದ ತರುವಾಯ ಮೊದಲಿದ್ದ ಜಾಗದಲ್ಲಿ ಓರಣವಾಗಿ ಜೋಡಿಸಿಡುವುದನ್ನು ಮರೆಯಬಾರದು.

ತುಂಬಾ ತಂಟೆ ಮಾಡುವ ಚಿಕ್ಕ ಮಕ್ಕಳನ್ನು ಕರೆದೊಯ್ಯದಿರುವುದೇ ಒಳಿತು ಆತಿಥೇಯರ ಮನೆಯಲ್ಲಿ ಟಿ.ವಿ. ಟೇಪ್ ರೇಕಾರ್ಡರ್ ರೇಡಿಯೋದಂತಹ ಅಮೂಲ್ಯ ವಸ್ತುಗಳಿರಬಹುದು. ಅವುಗಳನ್ನು ಮಕ್ಕಳು ಹಾಳು ಮಾಡುವ ಸಂದರ್ಭವಿದೆ. ಲೈಬ್ರರಿಯಿಂದ ಪುಸ್ತಕಗಳನ್ನು ಪತ್ರಿಕೆಗಳನ್ನು ತಂದಿರುತ್ತಾರೆ. ಮಕ್ಕಳು ಅವುಗಳನ್ನು ಹಾಳುಮಾಡಿದರೆ ಅವರಿಗೆ ಖಂಡಿತ ಕಿರಿಕಿರಿಯಾಗುತ್ತದೆ.

ತಿಂಡಿ ತಿನಿಸು ನೀಡಿದರೆ ಅಗತ್ಯವಿರುವಷ್ಟೇ ಹಾಕಿಸಿಕೊಳ್ಳಿ ವೇಸ್ಟ್ ಆಗುವುದನ್ನು ತಡೆಗಟ್ಟಿ. ಮಕ್ಕಳಿಗೂ ಸಹ (ಹಠ ಮಾಡಿದರೆ ಸಮಾಧಾನ ಪಡಿಸಿ) ಎಷ್ಟು ಬೇಕೋ ಅಷ್ಟನ್ನು ಮಾತ್ರ ಹಾಕಿಸಿ. ಭೇಟಿಯ ಸಮಯದಲ್ಲಿ ಮಕ್ಕಳು ತುಂಟತನ ಮಾಡಿ ಬೆಲೆಬಾಳುವ ವಸ್ತುಗಳನ್ನು ಹಾಳು ಮಾಡಿರ ಬಹುದು ಅಥವಾ ಪೇಪರನ್ನೋ ಪುಸ್ತಕಗಳನ್ನೋ ಹರಿದು ಹಾಕಿರಬಹುದು.

ಇಂತಹ ಸಂದರ್ಭದಲ್ಲಿ ಆತಿಥೇಯರ ಕ್ಷಮೆ ಕೇಳುವುದು ಸೌಜನ್ಯ ಹಾಳುಗೆಡವಿದ ಅಥವಾ ನಾಶಪಡಿಸಿದ ವಸ್ತುಗಳನ್ನು ಅವರಿಗೆ ಖರೀದಿಸಿ ಹೊಸತನ್ನು ಕೊಡಿಸಿ ಅಥವಾ ಅದನ್ನೇ ರಿಪೇರಿಯನ್ನಾದರೂ ಮಾಡಿಸಿಕೊಡುತ್ತೇನೆಂದು ನಿಮ್ಮ ಸ್ನೇಹಿತರಿಗೆ ಹೇಳಿ ಮತ್ತು ಈ ಕಾರ್ಯ ಶೀಘ್ರವೇ ಮಾಡಿ.

ಹೊರಡುವ ಮುಂಚೆ ಧನ್ಯವಾದ : ಆಹ್ವಾನಿಸಿದವರ ಮನೆಯಿಂದ ಹೊರಡುವಾಗ ಅವರು ನೀಡಿದ ಅತಿಥ್ಯಕ್ಕೆ ಧನ್ಯವಾದ ಅರ್ಪಿಸುವುದು ನಿಮ್ಮ ಆದ್ಯ ಕರ್ತವ್ಯ. ಅಂತೆಯೇ ಅವರನ್ನು ಮನೆಗೆ ಆಹ್ವಾನಿಸಲು ಮರೆಯಬೇಡಿ.

ಮುಖ್ಯವಾಗಿ ಆತಿಥೇಯರ ಮನೆಯಲ್ಲಿ ಸಭ್ಯತೆ, ನಮ್ರತೆ, ವಿನಯಪೂರ್ವಕ ನಡತೆ, ನಡವಳಿಕೆ ವ್ಯಕ್ತಿತ್ವವನ್ನು ಬೆಳೆಸುತ್ತದೆ.

■ ಹನುಮಂತರಾವ್ ಭಜಂತ್ರಿ

ಬೈನರಿ ಸಂಸ್ಥೆ ಬೆಳೆಸಿದ ಮಹಿಳೆ

ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಒಂದು ಪುಟ್ಟ ಕಚೇರಿ ತೆರೆದು ಒಂದು ಕಂಪ್ಯೂಟರ್‌ನೊಂದಿಗೆ ಕೆಲಸ ಶುರುವಾಯಿತು. ಕಚೇರಿ ಸ್ಥಾಪನೆಗೆ ಅವರಿಗೆ ಆಗ ತಗುಲಿದ ವೆಚ್ಚ ಕಂಪ್ಯೂಟರ್ ಬೆಲೆಯನ್ನು ಹೊರತು ಪಡಿಸಿ ಸುಮಾರು 25-30 ಸಾವಿರ ರೂಪಾಯಿ. 'ಬೈನರಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್' ಎಂಬ ಹೆಸರಿನಲ್ಲಿ ಶುರುವಾದ ಈ ಸಂಸ್ಥೆ ಈಗ ಕಂಪ್ಯೂಟರ್, ನೆಟ್‌ವರ್ಕಿಂಗ್, ಸಂಪರ್ಕ ಹಾಗು ಆರ್ಥಿಕ ಸೇವೆಯ ಕ್ಷೇತ್ರದಲ್ಲಿ ಭಾರತದಲ್ಲೇ ಮುಂಚೂಣಿಯಲ್ಲಿರುವ ಸಂಸ್ಥೆಗಳಲ್ಲಿ ಒಂದಾಗಿ ಬೆಳೆದಿದೆ

ಅದು ಎಂಬತ್ತರ ದಶಕ. ಭಾರತ ಆಗ ತಾನೇ ಪಾಶ್ಚಾತ್ಯ ದೇಶಗಳಲ್ಲಿ ಆಗುತ್ತಿದ್ದ ಕಂಪ್ಯೂಟರ್ ಕ್ರಾಂತಿಯನ್ನು ಬೆಕ್ಕಸ ಬೆರಗಾಗಿ ನೋಡುತ್ತಿದ್ದ ಸಮಯ. ಭಾರತದಲ್ಲೂ ಕೆಲ ಜನರಿಗೆ ಕಂಪ್ಯೂಟರ್ ಜ್ವರ ಹತ್ತಿಕೊಂಡು ಅದನ್ನು ತಯಾರಿಸಲಾರಂಭಿಸಿದರು. ಆಗ ಕಂಪ್ಯೂಟರನ್ನು ದೊಡ್ಡ ಸಂಸ್ಥೆಗಳಷ್ಟೇ ಖರೀದಿಸುತ್ತಿದ್ದು ಸಾಮಾನ್ಯ ಜನರಿಗೆ ಅದಿನ್ನೂ ಕೈ ಗೆಟುಕದಷ್ಟು ದುಬಾರಿಯಾಗಿತ್ತು.

ಅದೇ ಸಮಯಕ್ಕೆ ಉಡುಪಿಯ ಸಮೀಪದ ಪೆರುಡೂರ್ ಹಳ್ಳಿಯ ತುಳು ಯುವತಿ. ಕಲಾ ವಿಭಾಗದಲ್ಲಿ ಪದವಿ ಹೊಂದಿ ಬೆಂಗಳೂರಿನಲ್ಲಿ ತನ್ನ ಪತಿಯೊಂದಿಗೆ ನೆಲೆಸಲು ಬಂದಿದ್ದಳು. ಪತಿ ಹರೀಶ್ ಕುಮಾರ್ ಶೆಟ್ಟಿ ಚಾರ್ಟಡ್ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಆಗ ಮನೆಯಲ್ಲಿ ಸುಮ್ಮನೆ ಕುಳಿತು ಬೇಸರವೆನಿಸಿದ್ದ ಈ ಯುವತಿಗೆ ತಾನು ಸುಮ್ಮನೆ ಮನೆಯಲ್ಲಿದ್ದು ನಿಂತ ನೀರಾಗುತ್ತಿದ್ದೇನೆಂಬ ಯೋಚನೆ ಕಾಡ ತೊಡಗಿತು ಆಗ ತಾನೇ ಜನರಲ್ಲಿ ಕಂಪ್ಯೂಟರ್ ಬಗ್ಗೆ ಆಸಕ್ತಿ ಮೂಡುತ್ತಿದ್ದುದರಿಂದ ಆ ಕ್ಷೇತ್ರದಲ್ಲಿ ಏನಾದರೂ ಮಾಡಿದರಾಗದೇ ಎಂದು ಆರು ತಿಂಗಳ ಕೋರ್ಸಿಗೆ ಸೇರಿದಳು. ಅನಂತರ ಎದುರಾದ ಪ್ರಶ್ನೆ ಮುಂದೇನು? ಎಂಬುದು.

ಹರೀಶ್ ತಮ್ಮ ಗಿರಾಕಿಗಳಿಗೆ ಕೆಲವೊಂದು ಲೆಕ್ಕ ಪತ್ರಗಳನ್ನು ಕಂಪ್ಯೂಟರ್‌ನಲ್ಲಿ ಸೇರಿಸುವ ಅಗತ್ಯವಿರುವುದರಿಂದ ಅವರಿಗೆ ಡೇಟಾ ಪ್ರೊಸೆಸಿಂಗ್ ಕೆಲಸವನ್ನು ಮಾಡುವ ವಿಚಾರ ತೆಗೆದಿದ್ದರು. ಈ ಯುವತಿಯೂ ಅದಕ್ಕೆ ಸಮ್ಮತಿಸಿದಾಗ ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಒಂದು ಪುಟ್ಟ ಕಚೇರಿ ತೆರೆದು ಒಂದು ಕಂಪ್ಯೂಟರ್‌ನೊಂದಿಗೆ ಕೆಲಸ ಶುರುವಾಯಿತು. ಕಚೇರಿ ಸ್ಥಾಪನೆಗೆ ಅವರಿಗೆ 86ರಲ್ಲಿ ತಗುಲಿದ ವೆಚ್ಚ ಕಂಪ್ಯೂಟರ್ ಬೆಲೆಯನ್ನು ಹೊರತು ಪಡಿಸಿ ಸುಮಾರು 25-30 ಸಾವಿರ ರೂಪಾಯಿ. 'ಬೈನರಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್' ಎಂಬ ಹೆಸರಿನಲ್ಲಿ ಶುರುವಾದ ಈ ಸಂಸ್ಥೆ ಈಗ ಕಂಪ್ಯೂಟರ್, ನೆಟ್‌ವರ್ಕಿಂಗ್, ಸಂಪರ್ಕ ಹಾಗು ಆರ್ಥಿಕ ಸೇವೆಯ ಕ್ಷೇತ್ರದಲ್ಲಿ ಭಾರತದಲ್ಲೇ ಮುಂಚೂಣಿಯಲ್ಲಿರುವ ಸಂಸ್ಥೆಗಳಲ್ಲಿ ಒಂದಾಗಿ ಬೆಳೆದಿದೆ.

ಸಣ್ಣ ಬಂಡವಾಳದೊಂದಿಗೆ ಸಿಕ್ಕ ಅವಕಾಶಗಳನ್ನು ತನ್ನ ತೋಳ್ತೆಕ್ಕೆಗೆ ಬಾಚಿಕೊಂಡು ಈಗ ಈ ಸ್ಥಿತಿಗೆ ತಲುಪಿದ ಈ ಮಹಿಳೆಯ ಯಶೋಗಾಥೆ ಬಹಳಷ್ಟು ಮಂದಿಗೆ ತಿಳಿದಿರಲಿಕ್ಕಿಲ್ಲ. ವಿದ್ಯಾ ಹೆಚ್. ಶೆಟ್ಟಿ ಎಂಬ ಈ ಉತ್ಸಾಹದ ಉದ್ಯಮಿಯ ನೆಲೆ ಇರುವುದು ಬೆಂಗಳೂರಿನ ಬ್ಯುಸಿ ತಾಣಗಳಲ್ಲಿ ಒಂದಾದ ಕನ್ನಿಂಗ್ ಹ್ಯಾಮ್ ರಸ್ತೆಯ ಒಂದು ಪ್ಲಾಟ್‌ನಲ್ಲಿ. ಅವರ ಕಚೇರಿಗಳೀಗ ಒಂದೆರಡಲ್ಲ. ಹೊಸ ಅವಕಾಶಗಳನ್ನು ಪರಿಗಣಿಸುತ್ತಿದ್ದಂತೆಲ್ಲಾ ಅಗತ್ಯಗಳಿಗೆ ಅನುಗುಣವಾಗಿ ಹೊಸ ವಿಭಾಗಗಳು ತೆರೆಯುತ್ತಲೇ ಇವೆ. ಕೆಲಸದ ಒತ್ತಡವೂ ಜಾಸ್ತಿ ಇರುವುದರಿಂದ ಇದಕ್ಕೆ ತಮ್ಮ ಸಂಪೂರ್ಣ ಗಮನವನ್ನು ಹರಿಸಬೇಕಾಗಿತ್ತು. ಪತಿ ಹರೀಶ್ ಅವರೂ ಸಹ ತಮ್ಮ ಚಾಟರ್ಡ್ ಅಕೌಂಟೆಂಟ್ ಕೆಲಸವನ್ನು ಬಿಟ್ಟು ಇಲ್ಲಿಯೇ ಗಮನ ಕೇಂದ್ರೀಕರಿಸತೊಡಗಿದ್ದು ವಿದ್ಯಾ ಅವರ ಮೇಲಿನ ಭಾರವನ್ನು ಸ್ವಲ್ಪ ಕಡಿಮೆಗೊಳಿಸಿದೆ.

ಸೇವೆ, ಖರೀದಿ ಮತ್ತು ಆಡಳಿತ ವಿಭಾಗವನ್ನು ಈಗ ವಿದ್ಯಾ ನೋಡಿಕೊಳ್ಳುತ್ತಿದ್ದರೆ ಮಾರಾಟ ವಿಭಾಗ ಹರೀಶ್ ಅವರ ನೇತೃತ್ವಕ್ಕೆ ಬಿಡಲಾಗಿದೆ.

ಹೀಗೆ ಒಂದು ಕಂಪ್ಯೂಟರ್‌ನಿಂದ ಶುರುವಾದ ಸಂಸ್ಥೆಯಲ್ಲಿ ನಂತರ ಬೇಡಿಕೆ ಹೆಚ್ಚುತ್ತಲೇ ನಾಲ್ಕು ಕಂಪ್ಯೂಟರ್‌ಗಳಿಗೆ ಹೋಗಿತ್ತು. ಸಂಪರ್ಕಗಳೂ ಜಾಸ್ತಿಯಾದವು. ವಿಸ್ತರಿಸುವ ಬೆಳೆಯುವ ದೃಢ ಮನಸ್ಸಿದ್ದರೆ ಹಿಂದಕ್ಕೆ ನೋಡಬೇಕಾಗಿಯೇ ಇಲ್ಲ. ಕಂಪ್ಯೂಟರ್ ತಯಾರಿಸುತ್ತಿದ್ದ ಸಂಸ್ಥೆಗಳೊಂದಿಗೆ ಸಂಪರ್ಕ ಬಂದಾಗ ಅದರ ಫ್ಲಾಪಿ, ರಿಬ್ಬನ್ ಮುಂತಾದ ಭಾಗಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ವಿಚಾರ ಚಲೋ ಆಗಿ ಕಂಡಿತ್ತು. ಥೇಮ್ಸ್ ಟೆಕ್ನಾಲಜಿ ಲಿಮಿಟೆಡ್ ಕಂಪನಿಯ ಆಮ್ಕೆಟ್ ಫ್ಲಾಪಿಗಳನ್ನು ಸರಬರಾಜು ಮಾಡಲು ಒಪ್ಪಿಕೊಂಡು ಈ ಕ್ಷೇತ್ರಕ್ಕೆ ಮೊದಲು ಕಾಲಿಟ್ಟರು. 87ರಲ್ಲಿ ಜನರಿಗೂ ಕಂಪ್ಯೂಟರ್‌ನ ಬಳಕೆ ಹಾಗೂ ಪ್ರಾಮುಖ್ಯದ ಅರಿವಾಗತೊಡಗಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ಸೂಕ್ತ ಗಾಳಿ ಬೀಸತೊಡಗಿತ್ತು.

ಬೈನರಿ ಸಿಸ್ಟಮ್ಸ್ ಸಂಸ್ಥೆ ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳ ಆದಾಯ ಗಳಿಸುವ ಸಂಸ್ಥೆಯಾಗಲು ಬೇಕಾದ ಮಹತ್ವದ ಬ್ರೇಕ್ ಈ ಸಂದರ್ಭದಲ್ಲೇ ಸಿಕ್ಕಿತು. ಕಂಪ್ಯೂಟರ್‌ಗಳನ್ನು ತಯಾರಿಸುವ ಹೆಸರಾಂತ ವಿಪ್ರೋ ಸಂಸ್ಥೆಯೊಂದಿಗೆ ಮಾರಾಟ ಕುರಿತು ಮಾಡಿಕೊಂಡ ಒಪ್ಪಂದ ಸಂಸ್ಥೆಯು ಭದ್ರ ತಳಹದಿಯ ಮೇಲೆ ನೆಲೆಯೂರಲು ಅಡಿಪಾಯ ಹಾಕಿತು.

ಬೈನರಿ ಸಿಸ್ಟಮ್ಸ್ ಮಾರಾಟಕ್ಕಾಗಿಯೇ ಪ್ರತ್ಯೇಕ ಮಂದಿಯನ್ನು ನೇಮಕ ಮಾಡಿ ಜನರು ಕೊಂಡುಕೊಳ್ಳುವಂತೆ ಪ್ರೇರೇಪಿಸುವಲ್ಲಿ ಯಶಸ್ವಿಯಾದರೂ ಅದಕ್ಕೆ ಬರಬೇಕಾದ ದುಡ್ಡಿನ ಸಮಸ್ಯೆ ಇದ್ದೇ ಇತ್ತು. ಲಕ್ಷಾಂತರ ರೂಪಾಯಿಗಳ ವ್ಯವಹಾರವೆಂದ ಮೇಲೆ ಸದಾ ಹಣದ ಮೇಲೆ ನಿಗ್ರಹ ಇಟ್ಟುಕೊಳ್ಳಬೇಕು. ಆಗ ಕಂಪ್ಯೂಟರ್ ಕ್ಷೇತ್ರದಲ್ಲಿ ಇಬ್ಬರೇ ಡೀಲರ್‌ಗಳಿದ್ದುದರಿಂದ ಪರವಾಗಿರಲಿಲ್ಲ. ಅದಲ್ಲದೆ ವಿಪ್ರೋ ಸಂಸ್ಥೆಗೆ ತನ್ನದೇ ಹೆಸರಿತ್ತು. ಇಂದಿನ ಪರಿಸ್ಥಿತಿಯಲ್ಲಿ ಈ ಕ್ಷೇತ್ರದಲ್ಲಿ ಸ್ಪರ್ಧೆಯೂ ಜಾಸ್ತಿಯಾಗಿದೆ. ಸ್ಪರ್ಧೆ ಹೆಚ್ಚಾದಂತೆಲ್ಲಾ ತಮ್ಮ ಪದಾರ್ಥವನ್ನು ಮಾರಾಟ ಮಾಡಲು ತಮಗೆ ದೊರಕುವ ಲಾಭದಂಶವನ್ನು ಕಡಿಮೆಗೊಳಿಸಬೇಕಾದುದೇ. ನಂತರ ಮೋದಿ ಜೆರಾಕ್ಸ್ ಸಂಸ್ಥೆಯೊಂದಿಗೂ ಡೀಲರ್‌ಶಿಪ್ ಕುದುರಿತು.

ಅನಂತರ ಈ ದಂಪತಿ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಕಡೆ ಗಮನ ಹರಿಸಲಾರಂಭಿಸಿದರು. ತಾನು ಮಾರಾಟ ಮಾಡಿದ ಕಂಪ್ಯೂಟರ್‌ಗಳಲ್ಲಿ ಏನಾದರೂ ತೊಂದರೆ ಸಂಭವಿಸಿದರೆ ಅದನ್ನು ರಿಪೇರಿ ಮಾಡುವ ಸೇವಾ ಕಾರ್ಯವನ್ನು ಬೈನರಿ ಸಿಸ್ಟಮ್ಸ್ ಒಂದು ವರ್ಷ ಕಾಲ ನಡೆಸುತ್ತದೆ. ಗ್ರಾಹಕರು ಮತ್ತು ವಿಪ್ರೋ ಸಂಸ್ಥೆಯ ನಡುವೆ ಈ ನಿಟ್ಟಿನಲ್ಲಿ ಸದಾ ಸಂಪರ್ಕವಿಟ್ಟುಕೊಂಡು ಮುಂದುವರಿಯಬೇಕಾದ ಕೆಲಸವಿದು. ಗ್ರಾಹಕರು ಸೇವೆಯ ಕುರಿತು ತೃಪ್ತರಾದರೆ ವ್ಯವಹಾರವೂ ಕುದುರುತ್ತದೆ. ಸಂಸ್ಥೆಯೂ

ಬೆಳೆಯುತ್ತದೆ.

''ಈ ನಿಟ್ಟಿನಲ್ಲಿ ಸಂಸ್ಥೆಯ ಆಯಾ ವಿಭಾಗಗಳ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನೂ ಆಗಾಗ ನಡೆಸಿಕೊಡಲಾಗುತ್ತದೆ'' ಎನ್ನುತ್ತಾರೆ ವಿದ್ಯಾ. ''ಈ ಕಾರ್ಯಕ್ರಮಗಳನ್ನು ನಾವು ಡೀಲರ್‌ಶಿಪ್ ತೆಗೆದುಕೊಂಡ ಸಂಸ್ಥೆಗಳ ಅಧಿಕಾರಿಗಳು ನಡೆಸಿಕೊಡುವುದಿದೆ. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸದಾ ಬೆಳೆಯುತ್ತಲೇ ಇರಬೇಕು. ಇಲ್ಲದಿದ್ದರೆ ಮುಖ್ಯ ವಾಹಿನಿಯಿಂದ ಹೊರಗೆ ಬರಬೇಕಾಗುತ್ತೆ. ಸಾರ್ವಜನಿಕರಲ್ಲಿ, ಮಾರುಕಟ್ಟೆಯಲ್ಲಿ ಸದಾ ಒಳ್ಳೆಯ ಹೆಸರು ಪಡೆಯಬೇಕು. ಅದಕ್ಕೆ ಉತ್ತಮ ರೀತಿಯ ಸೇವೆ ಹಾಗೂ ಸಂಪರ್ಕ ಮುಖ್ಯವಾಗುತ್ತದೆ. ವಸ್ತುವನ್ನು ಹೇಗೆ ಮಾರಾಟ ಮಾಡಬೇಕು, ಈ ವಸ್ತು ಇತರದಕ್ಕಿಂತ ಹೇಗೆ ಉತ್ತಮ, ವಸ್ತು ಕುರಿತು ಮಾಹಿತಿ ಬಗ್ಗೆ ತರಬೇತಿ ನೀಡುವುದರಿಂದ ಸಿಬ್ಬಂದಿಗಳಿಗೆ ಯಾವ ರೀತಿಯಲ್ಲಿ ಸಂದರ್ಭವನ್ನು ನಿರ್ವಹಿಸಬೇಕು, ವಸ್ತುವಿಗೆ ಹೇಗೆ ಪ್ರಚಾರ ನೀಡಬೇಕೆಂಬುದು ತಿಳಿಯುತ್ತದೆ.''

ಹೀಗೆಯೇ ಬೆಳೆಯುತ್ತಾ ಈ ದಂಪತಿ ಅಗತ್ಯಗಳಿಗನುಸಾರವಾಗಿ ತಮ್ಮ ಮಾರುಕಟ್ಟೆ ವಿಸ್ತರಿಸುವಾಗ ರಾಜ್ಯದ ಇತರೆಡೆಗಳಲ್ಲೂ ವಿಭಾಗಗಳನ್ನು ತೆರೆಯುವ ಅನಿವಾರ್ಯತೆ ಮೂಡಿತು. ಹೀಗಾಗಿ ಬೆಂಗಳೂರಲ್ಲದೆ ಮಂಗಳೂರು, ಮೈಸೂರುಗಳಿಗೂ ತಮ್ಮ ಬಾಹುಗಳನ್ನು ಚಾಚಲಾಗಿದೆ.

''ಯಾವ ಜಿಲ್ಲೆಗಳಲ್ಲಿ ತಾವು ವಸ್ತುವಿನ ಮಾರಾಟದಲ್ಲಿ ನ್ಯಾಯ ದೊರಕಿಸಲಾರೆವೋ ಆ ಜಿಲ್ಲೆಗಳಿಗೆ ಮಾರಾಟ ಮಾಡುವ ಬಗ್ಗೆ ಗಮನಹರಿಸಲು ಹೋಗುವುದಿಲ್ಲ'' ಎಂದೂ ತಮ್ಮ ಸಂಸ್ಥೆಯ ಧ್ಯೇಯೋದ್ದೇಶಗಳ ಬಗ್ಗೆ ವಿದ್ಯಾ ಬೆಳಕು ಚೆಲ್ಲುತ್ತಾರೆ. ಆದರೂ ಭವಿಷ್ಯದಲ್ಲಿ ವಿಸ್ತರಿಸುವ ಬಗ್ಗೆ ಯೋಜನೆಗಳಿವೆ ಎನ್ನುವ ಇವರು ಈಗಾಗಲೇ ಇತರ ಹೆಸರಾಂತ ಸಂಸ್ಥೆಗಳೊಂದಿಗೆ ಡೀಲರ್‌ಶಿಪ್ ಒಪ್ಪಂದಗಳನ್ನು ಮಾಡಿರುವುದರಿಂದ ಕರ್ನಾಟಕದಾದ್ಯಂತ ಇವರ ಸಂಸ್ಥೆಯ ವಿಭಾಗಗಳನ್ನು ತೆರೆಯುವ ದಿನಗಳು ದೂರವಿಲ್ಲವೆನಿಸುತ್ತದೆ.

ಕಂಪ್ಯೂಟರ್ ಮತ್ತು ಸಂಪರ್ಕ ಕುರಿತು ಏನೇ ಹೊಸದು ಮಾರುಕಟ್ಟೆಗೆ ಬಂದರೂ ಇವರು ಡೀಲರ್‌ಶಿಪ್ ತೆಗೆದುಕೊಳ್ಳಲು ಸದಾ ಸಿದ್ಧರೆ. ಈಗ 'ಬೈನರಿ ಸಿಸ್ಟಮ್ಸ್ ಸಂಸ್ಥೆ' ತನ್ನ ಕ್ಷೇತ್ರದಲ್ಲಿ ಮಾನ್ಯತೆ ಪಡೆದಿರುವುದರಿಂದ ಅಂತರರಾಷ್ಟ್ರ ಅಥವಾ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ಸಂಸ್ಥೆಗಳು ಹೊಸ ವಸ್ತುಗಳನ್ನು ಬಿಡುಗಡೆ ಮಾಡುವಾಗ ಬೈನರಿ ಸಿಸ್ಟಮ್ಸ್ ಜೊತೆ ಡೀಲರ್‌ಶಿಪ್ ಒಪ್ಪಂದ ಮಾಡಿಕೊಳ್ಳತೊಡಗಿವೆ. ಸೆಲ್ಯೂಲರ್ ಫೋನ್ ವಿಷಯದಲ್ಲಿ ಮುಖ್ಯ ಡೀಲರ್ ಆಗಿ ಬೈನರಿ ಸಿಸ್ಟಮ್ಸ್ ಜವಾಬ್ದಾರಿ ತೆಗೆದುಕೊಂಡರೂ ಅಡರಿಡಿ ಇನ್ನೂ ಕೆಲವು ಸಣ್ಣ ಸ್ಥಳೀಯ ಡೀಲರ್‌ಗಳಿರುವ ಬಗ್ಗೆ ಮಾತು ಬಂದಾಗ ವಿದ್ಯಾ ಅವರು 'ಅಧಿಕ ಜನರನ್ನು ಈ ಮೂಲಕ ತಲುಪಬಹುದೆಂದು' ವಿವರಿಸುತ್ತಾರೆ.

ಈಗ ಈ ಕಾರ್ಯಕ್ಷೇತ್ರಗಳನ್ನು ವಿಸ್ತರಿಸುತ್ತಿದ್ದಂತೆಯೇ ಎರಡು ಸಂಸ್ಥೆಗಳಾಗಿ ಮೂಲ ಸಂಸ್ಥೆಯ ಕಾರ್ಯಗಳನ್ನು ವಿಭಜಿಸಲಾಗಿದೆ. 'ಬೈನರಿ ಸಿಸ್ಟಮ್ಸ್' ಅಡಿ ಕಂಪ್ಯೂಟರ್ ಮತ್ತು ಅಮೇರಿಕನ್ ಎಕ್ಸ್‌ಪ್ರೆಸ್ ಅಮೆಕ್ಸ್ ಕಾರ್ಡ್ ಮಾರಾಟ ಕಾರ್ಯ ನಿರ್ವಹಣೆ ನಡೆದರೆ; 'ಬೈನರಿ ಇನ್ಫೋಟೆಕ್ ಸಂಸ್ಥೆ'ಯಡಿ ಸ್ಪೈಸ್ ಟೆಲಿಕಾಂನ ಸೆಲ್ಯೂಲರ್ ಫೋನ್ ಹಾಗೂ ಸಿಮ್ ಕಾರ್ಡ್, ಹಾಟ್‌ಲೈನ್‌ನಿಂದ ಪೇಜರ್ ಮಾರಾಟ ಚಟುವಟಿಕೆ, ಮೋದಿ ಜೆರಾಕ್ಸ್ ಡೀಲರ್‌ಶಿಪ್ ಕಾರ್ಯ ನಡೆಯುತ್ತದೆ.

ಹನ್ನೆರಡು ವರ್ಷಗಳಲ್ಲಿ ಈ ಹಂತಕ್ಕೆ ಬಂದ ಸಂಸ್ಥೆಯ ಯಶಸ್ಸಿಗೆ ವಿದ್ಯಾ ಅವರು ಎಲ್ಲರ ಸಹಕಾರ, ಸಹಾಯವೇ ಕಾರಣವೆನ್ನುತ್ತಾರೆ. ತನ್ನ ಪತಿ ಹರೀಶ್ ಅವರ ಪ್ರೋತ್ಸಾಹ ಹಾಗೂ ತನ್ನ ವಿಚಾರಣೆಗಳಿಗೆ 'ಬೇಡ'ವೆನ್ನದ ಸ್ವಭಾವವಲ್ಲದೆ ಸಂಸ್ಥೆಯ ಎಲ್ಲಾ ವಿಭಾಗಗಳಲ್ಲೂ ಪರಿಣತ ಮ್ಯಾನೇಜರ್‌ಗಳಿರುವುದರಿಂದ ತಾವು ಗುರಿಯನ್ನು ತಲುಪುವುದು ಸಾಧ್ಯವಾಯ್ತು ಎಂದು ಹೇಳುವುದರೊಂದಿಗೆ ತಮ್ಮ ಸಿಬ್ಬಂದಿಗಳಿಗೆ ನೀಡುವ ಸ್ವಾತಂತ್ರ್ಯ ಕುರಿತೂ ಹೇಳಲು ಮರೆಯಲಿಲ್ಲ.

''ಮ್ಯಾನೇಜರ್‌ಗಳಿಗೆ ಜವಾಬ್ದಾರಿ ತೆಗೆದುಕೊಳ್ಳಲು ಬಿಡುವುದಲ್ಲದೆ ಅವರು ತಮ್ಮ ಕ್ಷೇತ್ರದಲ್ಲಿ ಕಾರ್ಯದಕ್ಷತೆ ಹೊಂದಿರುವುದರಿಂದ ನಮ್ಮ ಮೇಲಿನ ಭಾರ ಕಡಿಮೆಯಾಗುತ್ತದೆ, ತರಬೇತಿ ಕುರಿತು ಈ ದಕ್ಷ ಮ್ಯಾನೇಜರ್‌ಗಳೇ ನೋಡಿಕೊಳ್ಳುವರು. ಆದರೂ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವ ಮುನ್ನ ನಮ್ಮೊಂದಿಗೆ ಚರ್ಚಿಸುತ್ತಾರೆ''.


ಈ ಯಶಸ್ಸಿಗೆ ವೈಯಕ್ತಿಕ ಕಾರಣಗಳೇನಾದರೂ ಇದೆಯೇ ಎಂದಾಗ ವಿದ್ಯಾ ಕೊಂಚ ಆಲೋಚನಾಮಗ್ನರಾಗುತ್ತಾರೆ. ''ನಾವು ಈ ಸಂಸ್ಥೆ ಪ್ರಾರಂಭ ಮಾಡುವ ಮುನ್ನ ದುಡ್ಡು ಮಾಡಬೇಕೆಂಬ ಉದ್ದೇಶವಿರಲಿಲ್ಲ. ನನ್ನಷ್ಟಕ್ಕೆ ನಾನು ಬ್ಯುಸಿಯಾಗಿರಬೇಕೆಂದು ಕೈಹಾಕಲಾಯಿತು. ಆಮೇಲೆ 86ರಲ್ಲಿ 'ಅವೇಕ್' ಸಂಸ್ಥೆಯಿಂದ ಒಂದು ತಿಂಗಳು ತರಬೇತಿ ಪಡೆದಾಗ ಸಿಬ್ಬಂದಿಯನ್ನು ನಿರ್ವಹಿಸುವ ಬಗ್ಗೆ, ಹಣಕಾಸು ಇತ್ಯಾದಿ ಬಗ್ಗೆ ಮಾಹಿತಿಗಳು ಸಿಕ್ಕವು. ಈಗಲೂ ಹೊಸ ಡೀಲರ್‌ಶಿಪ್ ತೆಗೆದುಕೊಂಡಾಗಲೆಲ್ಲಾ ವಿವಿಧ ತರಬೇತಿ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಅದು ನನಗೆ ಖುಷಿ ನೀಡುತ್ತದೆ'' ಎಂದು ನಕ್ಕಾಗ ಅವರ ಈ ಕಲಿಯಬೇಕೆಂಬ ಉತ್ಸಾಹವೇ ಪ್ರಗತಿಗೆ ದಾರಿ ತೋರಿಸಿರಬಹುದೆಂಬ ವಿಚಾರವೂ ಮೂಡುತ್ತದೆ.

''ನಾವು ಶೇಕಡಾ ನೂರರಷ್ಟು ಸರಿಯಾಗಿರಲಾರೆವು. ಆದರೂ ಪ್ರಯತ್ನಿಸುತ್ತೇವೆ. ಗ್ರಾಹಕರ ತೃಪ್ತಿಯ ಕುರಿತು ಸದಾ ಚಿಂತಿತರಾಗಿರುತ್ತೇವೆ. ಅದರ ಪ್ರಕಾರ ನಮ್ಮ ಕಾರ್ಯ ನಿರ್ವಹಣಾ ವಿಧಾನವನ್ನು ಬದಲಾಯಿಸಿಕೊಳ್ಳುತ್ತೇವೆ. ಇತರರ ಒಳ್ಳೆಯ ಅಂಶಗಳನ್ನು ಕಲಿತು ಅಳವಡಿಸಿಕೊಳ್ಳುತ್ತೇವೆ. ನಾವೀಗ ಮುಂದೆ ಬಂದಿರುವೆವೆಂದರೆ ಅದು ನಮ್ಮ ದೃಢ ನಿರ್ಧಾರದಿಂದ'' ಎಂದಾಗ ತುಳುನಾಡಿನ ಬಂಟ್ ಸಮುದಾಯದವರ ಮನೋಭಾವವನ್ನು ಪ್ರತಿನಿಧಿಸಿದಂತೆ ಕಂಡಿತು.

ಹೆಗಲಿಗೆ ಹೆಗಲು ಕೊಟ್ಟು ನಡೆಯುವ ಈ ಜೋಡಿಯ ಯಶಸ್ಸು ಕರ್ನಾಟಕದ ಜನತೆಗೆ ಹೆಮ್ಮೆ ಎನಿಸದಿರದು.


■ಸುಭಾ

ಚುನಾವಣೆ - ಕಲ್ಲು ತೂರಾಟ



ಪ್ರಚಾರಕ್ಕೆ ನಿಮ್ಮ 'ಡ್ಯೂಪ್'ನ್ನು ಬಳಸಿದರೆ ಉತ್ತಮ ಸಾರ್....

ಬೆಂದ ಕಾಳೂರಿನ ನೊಂದ ಕಥೆ



ಲಾಲ್‌ಬಾಗ್‌ನ ಪಶ್ಚಿಮ ದ್ವಾರದಿಂದ ಒಳ ಹೋದರೆ ಒಂದೆರಡು ಫರ್ಲಾಂಗ್ ದೂರದಲ್ಲೇ ಎಡಕ್ಕೆ ಒಂದು ದೈತ್ಯಾಕಾರದ ಮರವಿದೆ. ಸುಮಾರು ನೂರು ವರ್ಷಗಳೇ ಸಂದಿರುವ ಈ ಮರ ನಮ್ಮ ನಗರದ ಗತಕಾಲದ ವೈಭವಕ್ಕೆ ಸಾಕ್ಷಿಯಾಗಿ ಉಳಿದುನಿಂತಿದೆ. ಇಂದು ಲಾಲ್‌ಬಾಗ್ ತೋಟದಲ್ಲಿ ನನಗೆ ತುಂಬಾ ಕುತೂಹಲ ಕೆರಳಿಸುವ ಮರ ಇದು. ನಮ್ಮ ಇಂದಿನ ಯುವ ಪ್ರೇಮಿಗಳು ತಮ್ಮ ಪ್ರಿಯರ ಹೆಸರುಗಳನ್ನು ಕೆತ್ತಿ ಇಡೀ ಮರವನ್ನು ಹಾಳುಮಾಡಿದ್ದಾರೆ

ನಿತ್ಯ ಹರಿದ್ವರ್ಣ ಕಾಡು, ವಿವಿಧ ಪ್ರಾಣಿಗಳು, ಅಲ್ಲಲ್ಲಿ ಹರಿವ ಸಣ್ಣ ನದಿ, ತೊರೆಗಳು ನೂರಕ್ಕೆ ನೂರರಷ್ಟು ಆಮ್ಲಜನಕ ಉತ್ಪಾದಿಸುವ ಪರಿಸರ, ಚಂಡಮಾರುತದ, ನೆರೆಯ, ಬಿಸಿಲ ಬೇಗೆಯ ಆತಂಕಗಳಿಲ್ಲದ ನಿರುಮ್ಮಳವಾದ ತಾಣ, ಫಲವತ್ತಾದ ಮಣ್ಣು, ನೀರು ಹವಾಗುಣವಿರುವ ಇಂತಹ ಸ್ಥಳಗಳಲ್ಲಿ ಬೆಳೆವ ಸ್ವಾದಿಷ್ಟ ರುಚಿಕರ ಹಣ್ಣು, ತರಕಾರಿಗಳು ಇತ್ಯಾದಿಗಳಿರುವ ಪರಿಸರ ನಮ್ಮದಾಗಿದ್ದರೆ ಎಷ್ಟು ಚೆನ್ನ! ಬದುಕು ಸುಂದರ ಸ್ವರ್ಗವಾಗಲು ಇದಕ್ಕಿಂತಲೂ ಇನ್ನೇನು ಬೇಕು. ಎಲ್ಲಿದೆ ಅಂತಹ ಸ್ಥಳ ಎನ್ನುವಿರಾ? ನಿಮ್ಮ ಊಹೆ ಸರಿ, ನಮ್ಮ ನಿಮ್ಮ ಕನಸಿನ ನಗರವಾದ ಬೆಂಗಳೂರು ಹಿಂದೆ ಹೇಗಿತ್ತು. ಇಂತಹ ಸುಂದರವಾದ ನಗರವನ್ನು ಮೂರು ಲಕ್ಷಕ್ಕೆ ಮಾರಾಟಕ್ಕಿತ್ತು ಎಂದರೆ ನಂಬುತ್ತಿರಾ! ಈಗಿನ ಬೆಂಗಳೂರಿನ ಸಣ್ಣ ಬಾಡಿಗೆ ಮನೆಯ ಅಡ್ವಾನ್ಸ್ ಮೊತ್ತ. ಆದರೆ ನಿಜ, 1690ರಲ್ಲಿ ಬೆಂಗಳೂರು ನಗರ 3 ಲಕ್ಷ ರೂಗಳಿಗೆ ಮಾರಾಟವಾದ ಚರಿತ್ರೆ ಇದೆ.

ಈಚೆಗೆ ನನ್ನ ಪುಟ್ಟ ಪುಸ್ತಕ ಸಂಗ್ರಹದಲ್ಲಿ ಒಂದು ಪುಸ್ತಕ ಹುಡುಕುವಾಗ ಅನಿರೀಕ್ಷಿತವಾಗಿ ನನ್ನ 1985ರ ಹಳೆಯ ಡೈರಿ ಕಣ್ಣಿಗೆ ಬಿತ್ತು. ಅದರಲ್ಲಿ ಅಂತಹ ಮುಖ್ಯ ಎನಿಸುವ ನನ್ನ ಜೀವನದ ಯಾವ ದಾಖಲೆಗಳು ಇಲ್ಲದಿದ್ದರೂ ಆಗ ನಾನು ಬರೆದುಕೊಂಡಿದ್ದ ಬೆಂಗಳೂರು ನಗರದ ಐತಿಹಾಸಿಕ ದಾಖಲೆಗಳು ನನ್ನ ಕುತೂಹಲ ಕೆರಳಿಸಿತು. ಸುಮಾರು 15 ವರ್ಷಗಳ ಹಿಂದೆ ಎಲ್ಲಿಂದಲೋ ಸಂಗ್ರಹಿಸಿದ್ದ ಈ ದಾಖಲೆಗಳು ಬೆಂಗಳೂರು ನಗರವನ್ನು ಆಗ ಅನುಭವಿಸಿದ ವರಿಗೂ ಈಗ ಅನುಭವಿಸುತ್ತಿರುವವರಿಗೂ ಆಸಕ್ತಿ ಕೆರಳಿಸುವಂತಹವು;

ಈ ಬೆಂಗಳೂರು ನಗರವನ್ನು ಮಾಗಡಿ ಕೆಂಪೇಗೌಡ 1537ರಲ್ಲಿ ಕಟ್ಟಿಸಿದ. ನಂತರ ಶಾಜೀ ಬೋಂಸ್ಲೆ ಎಂಬುವವನಿಗೆ ಜಹಗೀರಾಗಿ ಸ್ವಾಧೀನಕ್ಕೆ ಬರುತ್ತದೆ. ಅದೇ ಸಂದರ್ಭದಲ್ಲಿ ಬಿಜಾಪುರದ ಸುಲ್ತಾನರು ಬೆಂಗಳರನ್ನು ತಮ್ಮ ವಶಪಡಿಸಿಕೊಳ್ಳುತ್ತಾರೆ. ಅಲ್ಲಿಂದ ಸರಿಸುಮಾರು 50 ವರ್ಷಗಳ ನಂತರ 1687ರಲ್ಲಿ ಬೆಂಗಳೂರು ಮೊಗಲರ ವಶವಾಗುತ್ತದೆ. 1690ರಲ್ಲಿ ಚಿಕ್ಕ ದೇವರಾಜ ಒಡೆಯವರಿಗೆ ಮೊಗಲರು ಬೆಂಗಳೂರನ್ನು 3 ಲಕ್ಷ ರೂಗಳಗೆ ಮಾರುತ್ತಾರೆ. 1759ರಲ್ಲಿ ಹೈದರಾಲಿಯು ಈ ನಗರವನ್ನು ತನ್ನ ಖಾಸಗೀ ಜಹಗೀರಾಗಿ ಇರಿಸಿಕೊಳ್ಳುತ್ತಾನೆ. ಅನಂತರ ಟಿಪ್ಪುವಿನ ಆಡಳಿತಕ್ಕೆ ಒಳಪಡುತ್ತದೆ.

1791ರಲ್ಲಿ ಬ್ರಿಟೀಷರು ಟಿಪ್ಪುವನ್ನು ಸೋಲಿಸಿ ಬೆಂಗಳೂರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. 1792ರಲ್ಲಿ ಶ್ರೀರಂಗ ಪಟ್ಟಣದ ಒಪ್ಪಂದದ ಮೇರೆಗೆ ಮತ್ತೆ ಟಿಪ್ಪುವಿಗೆ ಹಿಂತಿರುಗಿಸುತ್ತಾರೆ. ಟಿಪ್ಪುವಿನ ಮರಣದ ನಂತರ ಮತ್ತೆ ಬ್ರಿಟೀಷರು ವಶಪಡಿಸಿಕೊಂಡು 1799ರಲ್ಲಿ ಮೈಸೂರು ರಾಜ ಒಡೆಯರ

ಸುಪರ್ದಿಗೆ ನೀಡುತ್ತಾರೆ.

1831ರಲ್ಲಿ ಬೆಂಗಳೂರು ಬ್ರಿಟಿಷರ ಆಡಳಿತದ ಮುಖ್ಯ ಕೇಂದ್ರವಾಗಿ ಗುರುತಿಸಲ್ಪಟ್ಟಿದ್ದು; ಸಾರ್ವಜನಿಕ ಹಿತಾಸಕ್ತಿಯಿಂದ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ....

ಇಷ್ಟೆಲ್ಲಾ ಚರಿತ್ರೆಯ ಸಂಘರ್ಷದಲ್ಲಿ ನಮ್ಮ ಬೆಂಗಳೂರಿನ ಪರಿಸರ ಎಲ್ಲೂ ಕಲುಷಿತವಾಗಿರಲಿಲ್ಲ; ನೂರಾರು ವರ್ಷಗಳಿಂದಾದ ಘರ್ಷಣೆಗಳಿಂದ ಉಳಿದು ಸುರಕ್ಷಿತವಾಗಿ ನಮ್ಮ ಕೈಸೇರಿದ ಈ ನಗರವನ್ನು ಹೇಗೆ ಇರಿಸಿ ಕೊಂಡಿದ್ದೇವೆ? ದಾಳಿ ಮಾಡಿ ಪಡೆದುಕೊಂಡವರು ರಕ್ಷಿಸಿ, ಬೆಳೆಸಿದ್ದರೆ - ನಾವು, ನಮ್ಮ ಸ್ವಾಧೀನಕ್ಕೆ ಬಂದ ಕೂಡಲೇ ನಗರದ ಸ್ವರೂಪ ಬದಲಾಯಿಸಿದ್ದೇವೆ ಹೊರತು, ಅದರ ಪರಿಸರವನ್ನು ತುಂಬಾ ಯಶಸ್ವಿಯಾಗಿ, ವ್ಯವಸ್ಥಿತವಾಗಿ ಹಾಳುಗೆಡವಿದ್ದೇವೆ.

ಈವತ್ತಿಗೂ ಹಿಂದಿನಂತೆಯೇ ಬೆಂಗಳೂರು ನಗರ ಇಡೀ ದೇಶದಲ್ಲಿ ಪ್ರಮುಖವಾದ ಸ್ಥಾನವನ್ನು ಎಲ್ಲ ರೀತಿಯಿಂದಲೂ ಪಡೆದುಕೊಂಡಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲೂ ನ್ಯೂಯಾರ್ಕ್, ಪ್ಯಾರಿಸ್ ನಗರಗಳ ಸಮಕ್ಕೆ ಗುರುತಿಸುವಷ್ಟು ಗಮನಾರ್ಹವಾದ ಮಹಾನಗರವಾಗಿದೆ. ನಮ್ಮ ದೇಶದ ಅನೇಕ ಮಹಾನಗರಗಳಿಗೆ ಹೋಲಿಸಿದಲ್ಲಿ ಇಂದಿಗೂ ಇದು ಸುಂದರವಾದ ಹಸಿರು ನಗರವೇ. ಎರಡು ದಶಕಗಳ ಹಿಂದೆ ಈ ನಗರದ ಸುತ್ತಲೂ ಮೂರ್‍ನಾಲ್ಕು ಕಿ.ಮೀ. ದೂರದಲ್ಲಿ ಅನೇಕ ಹಳ್ಳಿಗಳಿದ್ದವು. ಈಗಿನ ಹೊಸ ಬಡಾವಣೆಗಳಾದ ಜೆ.ಪಿ.ನಗರ, ಬನಶಂಕರಿ, ಆರ್.ಟಿ.ನಗರ, ಡಾಲರ್ ಕಾಲೋನಿ, ಆಡುಗೋಡಿ, ಗಿರಿನಗರ, ರಾಜೇಶ್ವರಿ ನಗರ ಬಾವಿ, ಕೆರೆ, ಹೊಲಗದ್ದೆಗಳಾಗಿದ್ದವು; ನಾನು ಆಗ 'ಲ್ಯಾಂಡ್ ಸ್ಕೇಪ್' (ಪ್ರಕೃತಿ ಚಿತ್ರ) ಮಾಡಲು ಸೂಕ್ತವಾದ ಸ್ಥಳಗಳ ಅನ್ವೇಷಣೆ ಮಾಡುತ್ತಿದ್ದೆ. ಅಂದಿನ ನಗರದ ಹೊರವಲಯಗಳಲ್ಲಿ ಹಸಿರು ಪೈರುಗಳ ಹೊದಿಕೆಯು, ಅಲ್ಲಲ್ಲಿ ಕೃಷಿಕರು, ದನಕರುಗಳು, ಇತ್ಯಾದಿಗಳ ವರ್ಣಮಯ ದೃಶ್ಯ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಮೆಜೆಸ್ಟಿಕ್‌ನಲ್ಲಿ ಈಗಿನ ಬಸ್‌ನಿಲ್ದಾಣದ ಜಾಗದಲ್ಲಿ 'ದರ್ಮಾಂಬುದಿ ಕೆರೆ' ಇತ್ತು. ಊರಿಗೆ ಹೋಗುವಾಗ, ಊರಿಂದ ಹಿತಿರುಗುವಾಗ ಈ ಕೆರೆಯ ದಂಡೆಯ ಮೇಲೆ ಬಸ್ ಸಾಗುತ್ತಿತ್ತು. ಕೊಕ್ಕರೆಗಳು, ಅನೇಕ ಇತರೆ ಪಕ್ಷಿಗಳು ಅಲ್ಲಿರುತ್ತಿದ್ದವು. ಕ್ರಮೇಣ ಕೊಳಚೆ ನೀರು ಕೆರೆಗೆ ಬಿಟ್ಟದ್ದು, ನಂತರ ಕರೆಯನ್ನು ಮುಚ್ಚಿ ಬಸ್ ನಿಲ್ದಾಣ ಕಟ್ಟಿಸಿದ್ದೂ ನಿಮಗೆಲ್ಲಾ ತಿಳಿದ ವಿಚಾರವೇ. ನಾವು ವಾಸಿಸುತ್ತಿದ್ದ ಚಾಮರಾಜಪೇಟೆಯ ಹತ್ತಿರವೆ ಇದ್ದ ಒಂದು ದೊಡ್ಡ ಕೆರೆ 'ಕೆಂಪಾಂಬುದಿ ಕೆರೆ' ಇದೂ ಕೂಡ ಪ್ರಕೃತಿಯ ಸುಂದರವಾದ ಪರಿಸರಕ್ಕೆ ಹೊಂದಿಕೊಂಡಿತ್ತು. ಕೆಂಪೇಗೌಡ ಬೆಂಗಳೂರು ನಗರದ ಗಡಿ ಗುರುತಿಗಾಗಿ ನಾಲ್ಕು ಗೋಪುರಗಳಲ್ಲಿ ಪಶ್ಚಿಮದ ಕೊನೆ ಗಡಿಯ ಗುರುತಾಗಿ ಈ ಕೆರೆಯ ದಂಡೆಯ ಮೇಲೆ ಕಟ್ಟಿಸಿದ ಗೋಪುರವನ್ನು ಇಂದಿಗೂ ಕಾಣಬಹುದು. ಹಾಗೆ ನೋಡಿದರೆ ಅಲಸೂರಿನ ಕೆರೆ ಇಂದಿಗೂ ಸ್ವಲ್ಪ ಮಟ್ಟಿಗೆ ಸುಸ್ಥಿತಿಯಲ್ಲಿ ಉಳಿದಿರುವ ಕೆರೆ ಎನ್ನಬಹುದು. ಬಸವನ ಗುಡಿಯ 'ಬುಲ್‌ಟೆಂಪಲ್' ಹಿಂಭಾಗದಲ್ಲಿ ಒಂದು ಸಣ್ಣ ಕೆರೆ ಇದ್ದುದು ನನಗೆ ನೆನಪಿದೆ. ಅದೇ ಪ್ರದೇಶದಲ್ಲಿ 'ವೃಷಬಾವತಿ' ಎಂಬ ಹೆಸರಿನ ಒಂದು ಸಣ್ಣ ನದಿ ಹರಿಯುತ್ತಿತ್ತು ಎಂದು ಇಲ್ಲಿನ ಅನೇಕರು ಹೇಳಿದ್ದನ್ನು ಕೇಳಿದ್ದೇನೆ. ಹಾಗೆಯೇ ಇಂದಿನ ಗಾಂಧಿ ಬಜಾರ್‌ನಲ್ಲಿ ಕೂಡ ಒಂದು ದೊಡ್ಡ ಕೊಳವಿದ್ದು ಆ ಕೊಳದ ಸುತ್ತಲೂ ಸ್ಮಶಾನವಿತ್ತೆಂದೂ ಹೇಳುತ್ತಾರೆ. ಗಾಂಧಿಬಜಾರ್‌ನ ಯಾವುದೇ ಮೂಲೆಯಲ್ಲಿ ಕಟ್ಟಡ ಕಟ್ಟಲು ಅಡಿಪಾಯಕ್ಕೆ ಐದಾರು ಅಡಿ ನೆಲ ಅಗೆದರೂ ನೀರು ಚಿಮ್ಮುತ್ತಿತ್ತು. ಭೂಮಿಯಿಂದ ಕ್ಷಣಕ್ಷಣಕ್ಕೂ ಚಿಮ್ಮುವ ನೀರನ್ನು ಮೋಟಾರು ಇಟ್ಟು ತೆಗೆದು ಹೊರ ಚೆಲ್ಲುತ್ತಲೇ ಕಟ್ಟಡ ಕಟ್ಟಲು ಇಂಜಿನೀಯರ್‌ಗಳು ಹೆಣಗುವುದನ್ನು ನಾನು ಕಂಡಿದ್ದೇನೆ. ದಟ್ಟ ಹಸಿರು ಕಾಡಾಗಿದ್ದ ಹಳೆಯ ಬೆಂಗಳೂರಿನ ಪಳೆಯುಳಿಕೆಗಳು ಇನ್ನೂ ಜೀವಂತವಾಗಿರುವುದನ್ನು ಲಾಲ್‌ಬಾಗ್‌ನಲ್ಲಿ ಮತ್ತು ಅಲ್ಪಸ್ವಲ್ಪ ಕಬ್ಬನ್‌ಪಾರ್ಕ್‌ನಲ್ಲೂ ನೋಡಬಹುದು. ಲಾಲ್‌ಬಾಗ್‌ನ ಪಶ್ಚಿಮ ದ್ವಾರದಿಂದ ಒಳ ಹೋದರೆ ಒಂದೆರಡು ಫರ್ಲಾಂಗ್ ದೂರದಲ್ಲೇ ಎಡಕ್ಕೆ ಒಂದು ದೈತ್ಯಾಕಾರದ ಮರವಿದೆ. ಸುಮಾರು ನೂರು ವರ್ಷಗಳೇ ಸಂದಿರುವ ಈ ಮರ ನಮ್ಮ ನಗರದ ಗತಕಾಲದ ವೈಭವಕ್ಕೆ ಸಾಕ್ಷಿಯಾಗಿ ಉಳಿದುನಿಂತಿದೆ. ಇಂದು ಲಾಲ್‌ಬಾಗ್ ತೋಟದಲ್ಲಿ ನನಗೆ ತುಂಬಾ ಕುತೂಹಲ ಕೆರಳಿಸುವ ಮರ ಇದು. ನಮ್ಮ ಇಂದಿನ ಯುವ ಪ್ರೇಮಿಗಳು ತಮ್ಮ ಪ್ರಿಯರ ಹೆಸರುಗಳನ್ನು ಕೆತ್ತಿ ಇಡೀ ಮರವನ್ನು ಹಾಳುಮಾಡಿದ್ದಾರೆ. ಈ ಪ್ರವೃತ್ತಿ ಎಲ್ಲಾ ಕಡೆಗೂ ಸಾಮಾನ್ಯವಾಗಿದೆ ಆದರೆ ಇಷ್ಟು ಹಳೆಯ ಮರವನ್ನು ಅಲ್ಲಿನ ಸಿಬ್ಬಂದಿ ಯಾವ ನಿಷ್ಠೆಯಿಂದ ಕಾಯುತ್ತಿದ್ದಾರೆ ಎನ್ನುವುದಕ್ಕೆ ಇಂತಹ ಅನಾಹುತಗಳು ಸಾಕ್ಷಿ. ಈ ಪ್ರಸಂಗವನ್ನು ಒತ್ತು ಕೊಟ್ಟು ಹೇಳಲು ಕಾರಣ.

ಮೊನ್ನೆ ಮೊನ್ನೆ ತಾನೆ ಲಾಲ್‌ಬಾಗ್, ಕಬ್ಬನ್‌ಪಾರ್ಕ್ ತೋಟಗಳು ಅನೇಕ ರೀತಿಯಲ್ಲಿ ಹಾಳಾಗುತ್ತಿವೆ ಎನ್ನುವ ಕಾರಣಕ್ಕಾಗಿ ಅನೇಕ ನಿರ್ಬಂಧಗಳನ್ನು ಸರಕಾರ ಹಾಕಿದೆ ಈ ನಿಯಮ ನಿರ್ಬಂಧಗಳು ಎಷ್ಟು ಯಶಸ್ವಿಯಾಗಿದೆ ಎನ್ನುವುದು ಬೇರೆ ವಿಚಾರ? ಆದರೆ ಈಗ ಸಾರ್ವಜನಿಕರು ಈ ತೋಟಗಳನ್ನು ಯಾವ ಕಾರಣಕ್ಕೆ ಪ್ರವೇಶ ಮಾಡಿದರೂ ಪ್ರವೇಶ ಶುಲ್ಕ ನೀಡಬೇಕೆಂಬ ಕಾನೂನು ಜಾರಿಗೆ ಬರಲಿದೆ. ಕಬ್ಬನ್ ಪಾರ್ಕ್, ಲಾಲ್‌ಬಾಗ್‌ನಲ್ಲಿ ಅನೇಕರು ಮುಂಜಾನೆ ಸಂಜೆ ವಾಯು ವಿಹಾರಕ್ಕೆ ಬರುತ್ತಿದ್ದರು. ಅದೊಂದು ಅನುಭವಕ್ಕೂ ಈಗ ಹಣ ತೆರಬೇಕಾಗಿದೆ. ಈ ರೀತಿ ವಸೂಲು ಮಾಡುವ ಹಣವನ್ನು ತೋಟದ ಅಭಿವೃದ್ಧಿಗಾಗಿ ವಿನಿಯೋಗಿಸುವುದು ಎನ್ನುವ ಕಾರಣ ಸರಕಾರ ನೀಡುತ್ತಿದೆ. ಬೆಂಗಳೂರಿನ ಪ್ರತಿಯೊಬ್ಬ ನಾಗರಿಕರ ತಲೆಯ ಮೇಲೆ ಈಗಾಗಲೇ ಇರುವ ತೆರಿಗೆಯ ಪ್ರತಿಯಾಗಿ ಅವರಿಗೆ ಸರಕಾರ ಯಾವ ಸವಲತ್ತನ್ನು ನೀಡಿದೆ? ಕೇವಲ ತೆರಿಗೆ ವಸೂಲಿಯನ್ನು ಕಟ್ಟು ನಿಟ್ಟಾಗಿ ಮಾಡಿದ್ದಾರೆಯೇ ಹೊರತೂ ನಾಗರಿಕರಿಗೆ ಯಾವ ಸವಲತ್ತನ್ನೂ ಸರಕಾರ ನೀಡಿಲ್ಲ ನಮ್ಮ ಸರಕಾರಗಳು ನುಂಗಿ ನೀರು ಕುಡಿಯುವ ಹಣದ ಮೊತ್ತದಿಂದ ಮುಖ್ಯವಾದ ಅನೇಕ ಅಗತ್ಯ ಸವಲತ್ತುಗಳನ್ನು ಖಂಡಿತಾ ಮಾಡಲು ಸಾಧ್ಯವಿದೆ. ಎಲ್ಲ ಮಕ್ಕಳೂ ಓದಬೇಕೆಂದು ಜಾಹೀರಾತು ನೀಡುವ ಬದಲು ಶಾಲೆಗೆ ಹೋಗುವ ಎಲ್ಲ ಮಕ್ಕಳಿಗೂ ಉಚಿತ ಬಸ್ ವ್ಯವಸ್ಥೆ ಮಾಡಲು ಸಾಧ್ಯವಿಲ್ಲವೇ? ಸಹಜವಾಗಿ ಪ್ರಕೃತಿದತ್ತವಾಗಿ ಇರುವ ಈ ಕೊಡುಗೆಯನ್ನು ನೂರಾರು ವರ್ಷಗಳಿಂದ ಇಲ್ಲಿ ಬದುಕಿ, ಉಳಿದ ಜನರು ಉಚಿತವಾಗಿ ಅನುಭವಿಸುತ್ತಿದ್ದರು. ಈ ಜನರಿಂದ ಅಲ್ಪ ಪ್ರವೇಶ ಶುಲ್ಕ ವಸೂಲಿ ಮಾಡಿ ತೋಟದ ಖರ್ಚನ್ನು ತೂಗಿಸಬೇಕೇ? ಬದಲು ಒಬ್ಬ ಮಂತ್ರಿ ಸರಕಾರದ ಹಣ ಉಪಯೋಗಿಸುವುದರಲ್ಲಿ ಕಿಂಚಿತ್ ತ್ಯಾಗ ಮಾಡಿದರೂ ಇಡೀ ಬೆಂಗಳೂರಿನ ತೋಟಗಳನ್ನು ಸುಂದರವಾಗಿಡಬಹುದು. ಈಗ ಈ ನಗರದಲ್ಲಿಯ ಉಚಿತವಾಗಿ ಸಿಗುವ ಒಂದೇ ಒಂದು ಆಹ್ಲಾದಕರ ವಾತಾವರಣ ಎಂದರೆ ನಮ್ಮ ಈ ತೋಟಗಳು ಅವುಗಳನ್ನು ನಮ್ಮ ಜನತೆಗಾಗಿ ಸುಂದರವಾಗಿ, ಶುಚಿಯಾಗಿರಿಸುವುದು. ಸರಕಾರದ ಜವಾಬ್ದಾರಿ. ಅವುಗಳನ್ನು ಉಚಿತವಾಗಿ ಅನುಭವಿಸುವುದು. ಈ ನಗರದ ಪ್ರತಿಯೊಬ್ಬ ನಾಗರೀಕನ ಹಕ್ಕು. ನಮ್ಮ ಪರಿಸರವಾದಿಗಳು ಕೇವಲ ಸುದ್ದಿ ಮಾಡುವುದನ್ನು ಬಿಟ್ಟು ಇಂತಹ ಕೆಲವು ಅಗತ್ಯ ಕೆಲಸಗಳು ಆಗುವಲ್ಲಿ ತ್ವರೆಗೊಳ್ಳಬೇಕು. ಅದಕ್ಕಾಗಿ ಈ ಅವ್ಯವಸ್ಥೆಯನ್ನು ವ್ಯವಸ್ಥೆಗೊಳಿಸುವ ನಿರ್ಧಾರ ಕೈಗೊಳ್ಳಬೇಕಾದ ನ್ಯಾಯಾಲಯ, ಸರಕಾರ, ನಮ್ಮ ಜನರು ಒಂದಾಗಬೇಕು. ಅದೂ ಕೂಡ ನಮ್ಮ ಹಿಂದಿನ ಬೆಂಗಳೂರಿನಂತೆ ಒಂದು ಕನಸಾಗದಿರಲಿ.


■ ಎಂ.ಎಸ್. ಮೂರ್ತಿ

ಗುರುಗಳು: ನೋಡಿ ಮಕ್ಕಳೇ, ನಾವು ಜೀವನದಲ್ಲಿ ಕಷ್ಟ ಪಟ್ಟು ದುಡಿಯಬೇಕು. 'ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು? ತಿಳಿಯಿತೆ!'

ಶಿಷ್ಯ : ಹಾಗಾದರೆ ಎದ್ದು ನಿಂತು ಊಟ ಮಾಡಿದರಾಯ್ತು ಬಿಡಿ ಸರ್.

ಬೂಷ್ಟು

ಬೂಷ್ಟು - ಅದೊಂದು ಜೀವಿ. ಬೂಷ್ಟು, ಶಿಲೀಂಧ್ರ, ನಾಯಿಕೊಡೆ, ಅಣಬೆ, ರಸ್ಟ್ ಮುಂತಾದ ಈ ಎಲ್ಲ ಜೀವಿಗಳಿಗೂ ಒಟ್ಟಾಗಿ ಫಂಗಸ್‌ಗಳೆಂದೇ ಹೆಸರು.



ಬೂಷ್ಟು ಒಂದು ಬಗೆಯ ಅತಿ ಪ್ರಾಚೀನ ಸಸ್ಯ ವರ್ಗ. ಧರೆಯಲ್ಲಿ ನೆಲೆಸಿರುವ ಈ ಸಸ್ಯವರ್ಗವನ್ನು 'ಥಾಲೋಫೈಟ್ಸ್' ಎಂದೇ ಸಸ್ಯ ವಿಜ್ಞಾನಿಗಳು ವರ್ಗೀಕರಿಸಿದ್ದಾರೆ. ಸಸ್ಯ ಸಾಮ್ರಾಜ್ಯದಲ್ಲಿ ಬೂಷ್ಟುಗಳದು ಬೇರಾವ ಸಸ್ಯವರ್ಗಕ್ಕೂ ಕಿಂಚಿತ್ತೂ ಹೋಲದ ವೈಲಕ್ಷಣ್ಯ. ಅವಕ್ಕೆ ನಿಜವಾದ ಬೇರುಗಳಿಲ್ಲ, ಕಾಂಡ ಇಲ್ಲ, ಎಲೆಗಳಿಲ್ಲ, ಈ ಸಸ್ಯಗಳು ಹೂ ಬಿಡುವುದಿಲ್ಲ. ಬೀಜಗಳನ್ನು ರೂಪಿಸುವುದಿಲ್ಲ. ಇತರ ಸಕಲ ಸಸ್ಯಗಳ ಮೂಲಭೂತ ಲಕ್ಷಣವಾದ ತಮ್ಮ ಆಹಾರವನ್ನು ತಾವೆ ತಯಾರಿಸಿಕೊಳ್ಳುವ ಗುಣವೂ ಬೂಷ್ಟುಗಳಿಗಿಲ್ಲ. ಎಷ್ಟೊಂದು ವಿಭಿನ್ನ, ವಿಚಿತ್ರ, ವಿಲಕ್ಷಣ ಸಸ್ಯಗಳು ನೋಡಿದಿರಾ?

ಬೂಷ್ಟುಗಳು ಆಹಾರಕ್ಕಾಗಿ ಪ್ರಾಣಿಗಳ ಕ್ರಮವನ್ನೆ ಹಿಡಿದಿವೆ. ಆಹಾರಕ್ಕಾಗಿ ಇತರ ಜೀವಿಗಳನ್ನು ಎಂದರೆ ಜೀವಂತ ಪ್ರಾಣಿಗಳನ್ನು ಅಥವಾ ಸಸ್ಯಗಳನ್ನು ಅವಲಂಬಿಸಿವೆ. ಇಂತಹ ಪರಾವಲಂಬೀ ಬದುಕನ್ನು ನಡೆಸಿದ ಬೂಷ್ಟುಗಳು ಸಸ್ಯಗಳನ್ನು ಆವರಿಸಿ, ಅವನ್ನು ಕೊಳೆಯಿಸಿ ಪೋಷಣೆ ಪಡೆಯುತ್ತವೆ. ಆದ್ದರಿಂದಲೇ ಅವುಗಳ ಆಹಾರಕ್ರಮವನ್ನಾಧರಿಸಿ 'ಪ್ಯಾರಾಸೈಟ್ಸ್' ಮತ್ತು 'ಸ್ಯಾಪ್ರೋಫೈಟ್ಸ್' ಎಂದು ಎರಡು ಬಗೆಯಲ್ಲಿ ವಿಂಗಡಿಸಲಾಗಿದೆ.

ಬೂಷ್ಟುಗಳದು ಅತಿ ವೈವಿಧ್ಯಮಯ ಆಕಾರ - ಗಾತ್ರ. ಬಲೆಯಂತೆ, ಗೋಜಲು ದಾರದಂತೆ, ಹಿಂಜಿದ ಹತ್ತಿಯಂತ, ಕೊಡೆಯಂತೆ, ಚೆಂಡಿನಂತೆ.... ಇತ್ಯಾದಿ. ಪರಾವಲಂಬಿ ಬೂಷ್ಟುಗಳು ಒಂದು ಬಗೆಯ ಆರ್ಮಿಲೇರಿಯಾ ಬಲ್ಬೋಸಾದ ಒಂದು ಸಸ್ಯ 37 ಎಕರೆ ಪ್ರದೇಶವನ್ನಾವರಿಸಿ, 10 ಟನ್‌ಗಿಂತ ಹೆಚ್ಚು ತೂಕ ಇದ್ದುದು ಪತ್ತೆಯಾಗಿದೆ!

ಪ್ರಕೃತಿಯಲ್ಲಿ ಬೂಷ್ಟುಗಳದು ಬಹು ಮಹತ್ವದ ಕಾರ್ಯಕ್ರಮ.

ಬೂಷ್ಟುಗಳದು ಅತಿ ವೈವಿಧ್ಯಮಯ ಆಕಾರ - ಗಾತ್ರ. ಬಲೆಯಂತೆ, ಗೋಜಲು ದಾರದಂತೆ, ಹಿಂಜಿದ ಹತ್ತಿಯಂತೆ, ಕೊಡೆಯಂತೆ, ಚೆಂಡಿನಂತೆ.... ಇತ್ಯಾದಿ. ಪರಾವಲಂಬಿ ಬೂಷ್ಟುಗಳು ಒಂದು ಬಗೆಯ ಆರ್ಮಿಲೇರಿಯಾ ಬಲ್ಬೋಸಾದ ಒಂದು ಸಸ್ಯ 37 ಎಕರೆ ಪ್ರದೇಶವನ್ನಾವರಿಸಿ, 10 ಟನ್‌ಗಿಂತ ಹೆಚ್ಚು ತೂಕ ಇದ್ದುದು ಪತ್ತೆಯಾಗಿದೆ!

ಪ್ರಮುಖವಾಗಿ ಅಡವಿಗಳಲ್ಲೂ ಇತರೆಡೆಗಳಲ್ಲೂ ನೆಲಕ್ಕೆ ಬೀಳುವ ಎಲೆ ಮತ್ತಿತರ ಕಸಗಳನ್ನು ಕೊಳೆಯಿಸಿ ಮಣ್ಣನ್ನು ಫಲವತ್ತಾಗಿ ಉಳಿಸುವ ಕೆಲಸ ಶಿಲೀಂಧ್ರಗಳದೇ, ಮೃತ ಪ್ರಾಣಿಗಳನ್ನು, ಸಸ್ಯಭಾಗಗಳನ್ನು, ಕೊಳೆಯುವಂತೆ ಮಾಡಿ ಶುದ್ಧೀಕರಿಸಿ ಪರಿಸರವನ್ನು ಸ್ವಚ್ಛವಾಗಿಸುವ ಸಂರಕ್ಷಿಸುವ ಕಾರ್ಯಭಾರ ಈ ಸಸ್ಯಗಳದು.

ಮನುಷ್ಯರಿಗೆ ಬೂಷ್ಟುಗಳಿಂದ ವಿವಿಧ ರೀತಿಯ ಪ್ರಯೋಜನಗಳಾಗುತ್ತವೆ. ಅಂತಹ ಕೆಲವು ಅತಿ ಮುಖ್ಯ ಉಪಯೋಗಗಳು.

ವಿಷರಹಿತವಾದ ಅಣಬೆ ಪ್ರಬೇಧಗಳು ಜಗತ್ತಿನಾದ್ಯಂತ ಜನಪ್ರಿಯ ಆಹಾರವಾಗಿದೆ. ಹಾಗಾಗಿ ಬೇಸಾಯದ ಬೆಳೆಯಾಗಿದೆ. ಪ್ರತಿವರ್ಷ ಹಾಗೆ ಬಳಕೆಯಾಗುತ್ತಿರುವ ಅಣಬೆಗಳ ಪ್ರಮಾಣ ಮೂರು ದಶಲಕ್ಷ ಟನ್‌ಗಿಂತ ಹೆಚ್ಚು!


ಮನುಷ್ಯರ ಆರೋಗ್ಯ ರಕ್ಷಣೆಯಲ್ಲಿ ಕ್ರಾಂತಿಕಾರಿ ಪಾತ್ರ ವಹಿಸಿರುವ 'ಜೀವರೋಧ'ಕಗಳಿಗೆ ಬೂಷ್ಟುಗಳೇ ಮೂಲ. ಪೆನಿಸಿಲಿನ್, ಆ್ಯಂಪಿಸಿಲಿನ್‌ಗಳಂಥ ಮಾಯಾಮಯ ಜೀವರಕ್ಷಕ ಔಷಧಿಗಳೆಲ್ಲ ಶಿಲೀಂಧ್ರ ಮೂಲದವೇ? ಎಂದು ಅರಿತಾಗ ಎಂಥ ಅದ್ಭುತ ಎನಿಸುವುದಿಲ್ಲವೆ? ■

ಅಂಚೆ ಸೇವೆ

ಹದಿನೇಳನೇ ಶತಮಾನದಲ್ಲಿಯೇ ಮೈಸೂರು ರಾಜ್ಯದಲ್ಲಿ ಸ್ಥಳೀಯ ಅಂಚೆ ವ್ಯವಸ್ಥೆ ಇದ್ದಿತು. ಅರಸರಾಗಿದ್ದ ಚಿಕ್ಕದೇವರಾಯರೇ ಅಂಚೆ ಪದವನ್ನು ಜನಪ್ರಿಯಗೊಳಿಸಿದರು. ಅಂಚೆಯು ಹಂಸ ಎಂಬುದರ ಮೂಲ ರೂಪದ ಪದ. ಪುರಾಣ ಪ್ರಸಿದ್ಧ ನಳ ದಮಯಂತಿ ಸಂಬಂಧದಲ್ಲಿ ಹಂಸ ದೂತನ ಕಾರ್ಯ ಮಾಡುತ್ತದೆ. ಅಂಚೆ ಸೇವೆಯು ಬೇಹುಗಾರಿಕೆ ಇಲಾಖೆಯ ಭಾಗವಾಗಿದ್ದು, ಮುಖ್ಯಸ್ಥನಾದ ಅಂಚೆ ಭಕ್ಷಿಯ ಅಧೀನದಲ್ಲಿತ್ತು. ಚಕ್ರಾಧಿಪತ್ಯದ ಅಂಚೆ ಕಛೇರಿಗಳು (ಇಂಪೀರಿಯಲ್ ಪೋಸ್ಟ್ ಆಫೀಸು.) ಶ್ರೀರಂಗಪಟ್ಟಣ, ಹುಣಸೂರು ಮತ್ತು ತುಮಕೂರುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು ಮತ್ತು ಅವುಗಳನ್ನು ಅಂಚೆ ಇಲಾಖೆಗೆ ಸೇರ್ಪಡೆ ಮಾಡಲಾಯಿತು. ಸಾಮ್ರಾಜ್ಯದ ಎರಡು ಅಂಚೆ ವ್ಯವಸ್ಥೆಗಳಲ್ಲಿ ಒಂದು ಬೆಂಗಳೂರಿನಿಂದ ಮುಂಬಯಿ ಮಾರ್ಗದ ವ್ಯವಸ್ಥೆ, ಚಿತ್ರದುರ್ಗ ಮತ್ತು ಹರಿಹರದ ಮೂಲಕ ಸಾಗುತ್ತಿತ್ತು. ಹಾಗೆಯೇ ಇನ್ನೊಂದು ಅಂಚೆಯ ವ್ಯವಸ್ಥೆ ಬೆಂಗಳೂರಿನಿಂದ-ಮೈಸೂರು ಮೂಲಕ ಮಂಗಳೂರಿಗೆ ಸಾಗುತ್ತಿತ್ತು. ಬೆಂಗಳೂರು, ಮೈಸೂರು, ಹರಿಹರ, ಪಾಂಡವಪುರಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಅಂಚೆ ಕಛೇರಿಗಳಿದ್ದವು. ■

ರಜನೀಶ್ ಕತೆಗಳು

ರಜನೀಶ್ ಈ ಯುಗದ ಮಹಾ ವಿವಾದಿತ ವ್ಯಕ್ತಿ.
ಫಿಲಾಸಫಿಯಲ್ಲಿ ಸ್ನಾತಕೋತ್ತರ ಪದವಿ, ಚಿನ್ನದ ಪದಕ. ಅದೇ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ. ಇದ್ದಕ್ಕಿದ್ದ ಹಾಗೆ ಅದು ತೊರೆದು ತಾವು ಕಂಡುಕೊಂಡ ವಿಚಾರ ಜನಕ್ಕೆ ತಿಳಿಸಲು ನಿಂತರು. ಆಗಿಂದಲೂ ನಾನಾ ವಿವಾದಗಳಿಗೆ ಕೇಂದ್ರವಾದರು. ಅವರ 'ಸೆಕ್ಸ್ ಟು ಸೂಪರ್ ಕಾನ್ಷಿಯಸ್‌ನೆಸ್' ಪುಸ್ತಕ ಮಡಿವಂತರನ್ನು ಕೆರಳಿಸಿತು. ರಜನೀಶ್ ಮಾತಿಗೆ ಕಿವಿಗೊಟ್ಟರೆ ಜನ ಹಾಳಾಗುವುದು ಖಂಡಿತ ಎಂಬುದು ಅಂಥವರ ಅಭಿಪ್ರಾಯ.
ಹುಟ್ಟಿನಿಂದ ಜೈನರಾದ ಇವರು ವೇದ, ಬುದ್ಧಧರ್ಮ, ಜೈನಸಿದ್ಧಾಂತದ ಹಾಗೆ ಸೂಫಿ, ಝೆನ್, ಯಹೂದಿ, ಕ್ರಿಶ್ಚಿಯನ್ ಪಂಥಗಳನ್ನೆಲ್ಲ



ವ್ಯಾಖ್ಯಾನಿಸುತ್ತಾ ಹೋದರು. ವಿದೇಶಿ ಹಿಂಬಾಲಕರ ಸಂಖ್ಯೆ ಬೆಳೆಯಿತು. ಜಗತ್ತಿನಾದ್ಯಂತ ರಜನೀಶ್ ಕೇಂದ್ರಗಳು ತಲೆ ಎತ್ತಿದವು. ಒರೆಗಾನ್‌ನಲ್ಲಿ ಆಶ್ರಮದ ಸ್ಥಾಪನೆ ಆಯಿತು.
ಐವತ್ತಾರು ರೋಲ್ಸ್ ರಾಯ್ಸ್ ಕಾರು ಹೊಂದಿದ್ದ ಅತ್ಯಂತ ಶ್ರೀಮಂತ

ಸನ್ಯಾಸಿ ಎನಿಸಿದರು. ಅಮೇರಿಕಾದಲ್ಲಿ ತೊಂದರೆ ಕಾಣಿಸಿದವು. ಜೈಲುವಾಸ ಅನುಭವಿಸಿದರು. ಭಾರತಕ್ಕೆ ಹಿಂದಿರುಗಿ ಪುಣೆ ಹೊರವಲಯದ ಕೋರೆಗಾಂವ್‌ನಲ್ಲಿ ನೆಲೆಸಿದರು. ಇತ್ತೀಚೆಗೆ ಅಲ್ಲೇ ಕೊನೆಯ ಉಸಿರೆಳೆದರು. ಅವರ ಸಮಾಧಿ ಕಲ್ಲಿನ ಮೇಲೆ

'ಓಶೋ ಹುಟ್ಟಲಿಲ್ಲ, ಸಾಯಲೂ ಇಲ್ಲ
ಈ ಗ್ರಹಕ್ಕೆ ಕೊಂಚ ಕಾಲ ಭೇಟಿ ನೀಡಿದ್ದರು'

ಎಂದು ಅವರ ಜೀವಿತಾವಧಿಯನ್ನು ಸೂಚಿಸಲಾಗಿದೆ.

ಭಾರತದ ಬಹುಪಾಲು ಜನಕ್ಕೆ ರಜನೀಶ್ ಕುರಿತು ಊಹೆ, ಕಲ್ಪನೆಗಳಿವೆ. ಅವರನ್ನು ಹತ್ತಿರದಿಂದ ಕಂಡವರು ಕಡಿಮೆ. ಹಾಗೆ ಅವರನ್ನು ಬಹುಕಾಲ ಹತ್ತಿರದಿಂದ ನೋಡಿ, ಅವರ ವಿಚಾರಗಳಿಗೆ ಕಿವಿಗೊಡುತ್ತಾ ಬಂದಿದ್ದ ವ್ಯಕ್ತಿಯೊಬ್ಬರು ಇಲ್ಲಿನ ಕತೆಗಳನ್ನು ಆರಿಸಿದ್ದಾರೆ. ತಮ್ಮದೇ ಕಾರಣಗಳಿಗಾಗಿ ಅಜ್ಞಾತವಾಗಿ ಇರಲು ಬಯಸುವ ಅವರು, ರಜನೀಶ್ ಇಂಥ ಕತೆಗಳನ್ನು ತಮ್ಮ ವಿಚಾರಗಳ ವ್ಯಾಖ್ಯಾನಕ್ಕೆ ಸಮರ್ಥವಾಗಿ ದುಡಿಸಿಕೊಂಡಿದ್ದರು ಎಂದೂ ಅವರು ಹೇಳುತ್ತಾರೆ.

ಜಿಪುಣರು

ಯಹೂದಿ ಮಹಿಳೆ ತನ್ನ ಮಗನೊಡನೆ ಸಮುದ್ರ ದಂಡೆಯಲ್ಲಿ ನಡೆಯುತ್ತಾ ಇದ್ದಳು. ಇದ್ದಕ್ಕಿದ್ದ ಹಾಗೆ ದೊಡ್ಡ ಅಲೆ ಬಂದು ಅಪ್ಪಳಿಸಿತು. ಅಲೆ ಹಿಂದೆ ಸರಿದಾಗ ನೋಡಿದರೆ, ಮಗ ನಾಪತ್ತೆಯಾಗಿದ್ದ.

'ಓ! ಕರುಣಾಮಯಿ ದೇವರೆ,' ಮಹಿಳೆ ಆರ್ತಳಾಗಿ ದೇವರಲ್ಲಿ ಮೊರೆ ಇಡಲಾರಂಭಿಸಿದಳು.

'ದಯವಿಟ್ಟು ನನ್ನ ಸುಂದರ ಮಗು ಹಿಂದಿರುಗಿಸು. ನಾನು ಜೀವನವಿಡೀ ಆಭಾರಿ ಆಗಿರುತ್ತೇನೆ. ಅಷ್ಟೇ ಅಲ್ಲ ಇನ್ನು ಮುಂದೆ ಸರ್ಕಾರಕ್ಕೆ ವರಮಾನ ತೆರಿಗೆ ವಂಚಿಸುವುದಿಲ್ಲ. ಗಂಡನಿಗೆ ಮೋಸ ಮಾಡುವುದಿಲ್ಲ. ಸಿಗರೇಟು ಸೇದುವುದು ಬೇಕಾದರೆ ಬಿಡುತ್ತೇನೆ. ಏನು.. ಏನು ಬೇಕದಾರೂ ಹೇಳು, ಮಾಡುತ್ತೇನೆ. ಆದರೆ ನನ್ನ ಸುಂದರ ಮಗು ಮರಳಿ ತಂದು ಕೊಡು..'' ಎಂದು ಆಗಸದತ್ತ ತಲೆ ಎತ್ತಿ ಆರ್ದ್ರವಾಗಿ ಪ್ರಾರ್ಥಿಸಿದಳು.


ಅದೇ ಹೊತ್ತಿಗೆ ಇನ್ನೊಂದು ಪ್ರಚಂಡ ಅಲೆ ಕಾಣಿಸಿತು. ನೋಡು ನೋಡುತ್ತಾ ಇದ್ದಂತೆ ಆಕೆಯ ಮಗ ದಂಡೆಗೆ ಬಂದು ನಿಂತ. ಆಕೆ ಓಡಿ ಹೋಗಿ ಕಳೆದು ಸಿಕ್ಕಿದ್ದ ಮಗನನ್ನು ತಬ್ಬಿಕೊಂಡಳು. ಮುದ್ದಾಡಿದಳು. ಒಂದು ಕ್ಷಣ ಕಳೆದು ಮಗ ಸಿಕ್ಕಿದ ಸಂಭ್ರಮದಲ್ಲಿ ಮೈಮರೆತಿದ್ದವಳಿಗೆ ಥಟ್ಟನೆ ಅರಿವಾಯಿತು. ಮಗುವಿನ ತಲೆಯಲ್ಲಿ ಹ್ಯಾಟ್ ಇರಲಿಲ್ಲ. ತಕ್ಷಣ ಆಕೆ ಆಗಸದತ್ತ ಮೊಗವೆತ್ತಿ ದೇವರನ್ನು ಪ್ರಶ್ನಿಸಿದಳು. ''ಓ! ದೇವರೇ, ಮಗನನ್ನೇನೋ ತಂದುಕೊಟ್ಟೆ, ಆದರೆ ಅವನ ಹ್ಯಾಟ್ ಎಲ್ಲಿ?''

ಅಲೆಕ್ಸಾಂಡರ್‌ನ ಬರಿಗೈ

ಅಲೆಕ್ಸಾಂಡರ್ ಮಹಾನ್ ಚಕ್ರವರ್ತಿ. ಪೂರ್ವದ ದೇಶಗಳನ್ನು ಜಯಿಸಿ ಹಿಂದಿರುಗುತ್ತಾ ಇದ್ದಾಗ ಕಾಯಿಲೆ ಮಲಗಿದ. ಊರು ತಲುಪಲು ಇನ್ನೆರಡು ದಿನಗಳಾದರೂ ಬೇಕು. ಆದರೆ ವೈದ್ಯರು ಇಪ್ಪತ್ನಾಲ್ಕು ತಾಸು ಬದುಕಿದರೆ ಹೆಚ್ಚು,ಅಷ್ಟು ದೀರ್ಘಕಾಲ ಉಳಿಯುವುದೂ ಕಷ್ಟವೇ, ಇದೆಲ್ಲ ಕೆಲವು ತಾಸಿನ ಅವಧಿ ಅಷ್ಟೇ ಅಂದುಬಿಟ್ಟರು.

ಅಲೆಕ್ಸಾಂಡರ್ ದೀನನಾಗಿ ವೈದ್ಯರನ್ನು ಬೇಡಿಕೊಂಡ. ''ಯುದ್ಧದಲ್ಲಿ ಜಯಿಸಿ ಹಿಂದಿರುಗಿ ಬಂದು ಮುಖ ತೋರಿಸುತ್ತೇನೆ ಅಂತ ತಾಯಿಗೆ ಮಾತು ಕೊಟ್ಟಿದ್ದೆ. ಏನಾದರೂ ಮಾಡಿ ಇನ್ನೊಂದು ದಿನ ಬದುಕುವ ಹಾಗೆ ಮಾಡಿಬಿಡಿ. ತಾಯಿಗೆ ಮುಖ ತೋರಿಸಿ ಆನಂದದಿಂದ ಸಾಯುತ್ತೇನೆ. ಬದಲಾಗಿ ನಿಮಗೆ ಬೇಕಾದರೆ ಇಡೀ ರಾಜ್ಯ ಕೊಡುತ್ತೇನೆ'' ಎಂದು ಪರಿಪರಿಯಾಗಿ ವಿನಂತಿಸಿದ. ಆದರೂ ಪ್ರಯೋಜನ ಆಗಲಿಲ್ಲ. ವೈದ್ಯರು ಆಯುಷ್ಯ ಹೆಚ್ಚಿಸುವುದು ತಮ್ಮ ಕೈಯಲ್ಲಿಲ್ಲ ಎಂದು ಕೈ ಚೆಲ್ಲಿಬಿಟ್ಟರು.

ಸಾಯಲು ಕೆಲವೇ ತಾಸುಗಳು ಅಲೆಕ್ಸಾಂಡರ್ ವಿಚಿತ್ರ ಕೋರಿಕೆ



ಮುಂದಿಟ್ಟ. ಸತ್ತಮೇಲೆ ನನ್ನನ್ನು ಶವಪೆಟ್ಟಿಗೆಯಲ್ಲಿ ಇರಿಸುತ್ತೀರ ಅಲ್ಲವೇ? ಆಗ ದಯಮಾಡಿ ನನ್ನ ಎರಡೂ ಕೈಗಳು ಪೆಟ್ಟಿಗೆಯಿಂದ ಹೊರಚಾಚಿರಲಿ. ಬರಿದಾದ ನನ್ನ ಕೈಗಳು ಜನಕ್ಕೆ ಕಾಣಿಸಲಿ....''

ಆತನ ಜೊತೆ ಇದ್ದ ಸೇನಾನಿಗಳು, ದಂಡನಾಯಕರು ಬೆಚ್ಚಿಬಿದ್ದರು. ಇದೇನು ಚಕ್ರವರ್ತಿ ಕೊನೆಗಾಲಕ್ಕೆ ಹೀಗೆ ಹುಚ್ಚುಚ್ಚು ಮಾತಾಡುತ್ತಿದ್ದಾನೆ, ಯಾರಾದರೂ ಸಂಪ್ರದಾಯ ಮುರಿದು ಶವಪೆಟ್ಟಿಗೆಯಿಂದ ಹೊರಗೆ ಕೈ ಬರುವಂತೆ ಇಡುತ್ತಾರೆಯೇ? ತಾವು ಹತ್ತಿರ ನಿಂತು ಇದನ್ನು ಚಕ್ರವರ್ತಿಗೆ ವಿವರಿಸಿದರು. ಶವ ಕೊಂಡೊಯ್ಯುವ ಸಂಪ್ರದಾಯ ಮುರಿಯದಿರಲು ವಿನಂತಿಸಿದರು. ಅಲೆಕ್ಸಾಂಡರ್ ಹೇಳಿದ.

''ನನ್ನ ಆಸೆ ಇಷ್ಟೇ. ನಾನೊಬ್ಬ ಮಹಾನ್ ಚಕ್ರವರ್ತಿ. ನನಗೆ ಸಮಾನ ಯಾರೂ ಇಲ್ಲ ಅಂತ ಮೆರೆದೆ. ಅಂಥವನು ಕೂಡ ನಾಯಿ ಹಾಗೆ, ಗತಿಗೆಟ್ಟವನ ಹಾಗೆ ಇಂಥ ಸಾವು ದಾರೀಲೇ ಕಾಣಬೇಕಾಯಿತು. ಅಷ್ಟೈಶ್ವರ್ಯ ಇದ್ದರೂ ನಾನು ಬರಿಗೈ... ಇದು ಜನಕ್ಕೆ ತಿಳಿಯಲಿ ಅಂತ ಶವ ಪೆಟ್ಟಿಗೆಯಿಂದ ಕೈಗಳೆರಡೂ ಹೊರಗಿಡಿ. ಬರಿದಾದ ಅಂಗೈ ಆಕಾಶ ನೋಡುತ್ತಿರಲಿ ಅಂದೆ'' ಜೊತೆಯವರು ಕಣ್ಣೀರಿಟ್ಟರು. ಇಪ್ಪತ್ನಾಲ್ಕು ತಾಸಿನೊಳಗೆ ಸಾಯಬಹುದು ಅಂದುಕೊಂಡಿದ್ದ ಅಲೆಗ್ಸಾಂಡರ್ ಕೇವಲ ಆರು ತಾಸಿನಲ್ಲಿ, ಊರಿಗೆ ಹೋಗುವ ದಾರಿಯಲ್ಲೇ ಸತ್ತ.

ಆತನ ಕೊನೆಯ ಆಸೆಯಂತೆಯೇ ಶವಪೆಟ್ಟಿಗೆಯಲ್ಲಿ ಅವನನ್ನು ಇಟ್ಟು ಕೊಂಡಯ್ಯಲಾಯಿತು ಎನ್ನುತ್ತಾರೆ.

ಸತ್ಯಾಗ್ರಹ

ಅಹಿಂಸೆ ಕೂಡ ಅಸ್ತ್ರವಾಗಬಹುದು. ಮನುಷ್ಯನಿಗೆ ಅಸಾಧ್ಯ ಎಂಬುದೇ ಇಲ್ಲ.

ತರುಣ ಗಾಂಧೀವಾದಿ ಒಬ್ಬಳನ್ನು ಪ್ರೀತಿಸಿದ. ಅವನನ್ನು ಕಂಡರೇ ಆ ತರುಣಿಗಾಗುತ್ತಾ ಇರಲಿಲ್ಲ. ಆಕೆಯ ತಂದೆಗೂ ಇವನ ಸಂಬಂಧ ಬೇಡವಿತ್ತು. ತರುಣನಿಗೆ ಛಲ. ಏನೇ ಆಗಲಿ ಆಕೆಯನ್ನೇ ಮದುವೆ ಆಗಬೇಕು. ಹಾಗಂತ ಗೂಂಡಾಗರ್ದಿ ಮಾಡುವುದಿಲ್ಲ. ಅಹಿಂಸೆಯಿಂದಲೇ ತಂದೆ, ಮಗಳನ್ನು ಒಪ್ಪಿಸಲು ಮನಸ್ಸು ಮಾಡಿಬಿಟ್ಟ.

ತರುಣಿಯ ಮನೆ ಬಾಗಿಲಿಗೆ ಹೋಗಿ ಕುಳಿತ. ಮದುವೆ ಆಗದೇ ಇದ್ದರೆ ಅಲ್ಲೇ ಕುಳಿತು ಆಮರಣಾಂತ ಉಪವಾಸ ಮಾಡುವುದಾಗಿ ಹೇಳಿಬಿಟ್ಟ. ಅದು ಅಹಿಂಸೆಯ ದಾರಿ. ಬೇರೆಯವರಿಗೆ ಇದರಿಂದ ತೊಂದರೆ ಏನಿಲ್ಲ. ಈತ ನರಳಿ ನರಳಿ ಸಾಯುತ್ತಾನೆ.

ಈ ಮಾತು ಕೇಳಿ ತರುಣಿಗೆ ದಿಗ್ಭ್ರಮೆಯಾಯಿತು. ಏನು ಮಾಡುವುದು? ಈತ ಸತ್ತರೆ ಜೀವನವಿಡೀ ಪಾಪ ಪ್ರಜ್ಞೆ ಕಾಡುತ್ತದೆ. ಇಂಥವನ ಸಾವಿಗೆ ತಾನು ಕಾರಣನಾದೆ ಎಂಬುದು ಬದುಕಿನುದ್ದಕ್ಕೂ ಕೊರಗಾಗಿ ಉಳಿಯುತ್ತದೆ. ಆಕೆಯ ತಂದೆಗೂ ದಿಕ್ಕು ತೋಚದಾಯಿತು.

'ತರುಣ ಉಪವಾಸ ಕುಳಿತದ್ದು ದೊಡ್ಡ ಸುದ್ದಿಯಾಯಿತು. ಪೇಪರುಗಳು ಮೆಚ್ಚಿ ಬರೆಯಲಾರಂಭಿಸಿದವು. ಗಾಂಧೀವಾದಿಯ ಅಹಿಂಸಾತ್ಮಕ ಹೋರಾಟ ಅಲ್ಲವೆ! ಹಾಗಾಗಿ ಅವರೆಲ್ಲ ಮೆಚ್ಚಿ ಬರೆಯುತ್ತಲೇ ಹೋದರು.

ಹುಡುಗಿಯ ತಂದೆ ಕೈ ಕೈ ಹಿಸುಕಿಕೊಳ್ಳುವಂತಾಯಿತು. ಏನು ಮಾಡಿದರೂ ತಪ್ಪು. ಏನೂ ಮಾಡದೇ ಇದ್ದರೂ ತಪ್ಪು. ಸುಮ್ಮ ಸುಮ್ಮನೆ ಮನೆ ಬಾಗಿಲಲ್ಲಿ ತರುಣನೊಬ್ಬ ಸಾಯುವುದೆಂದರೆ, ನಾಳೆ ಜನ ತನ್ನ ಬಗ್ಗೆ, ಇಡೀ ಮನೆಯವರ ಬಗ್ಗೆ ಯಾವ ರೀತಿ ಪ್ರತಿಕ್ರಿಯಿಸಬಹುದು. ಆತನ ಸಂಕಟ ನೋಡಲಾರದೇ ಪರಿಚಿತರೊಬ್ಬರು 'ಇನ್ಯಾರಾದರೂ ಹಿರಿಯ ಗಾಂಧೀವಾದಿಗಳಿದ್ದರೆ ಕಂಡು ಸಮಸ್ಯೆ ವಿವರಿಸಿ. ಅವರಲ್ಲಿ ಇದಕ್ಕೆ ಪರಿಹಾರ ಇದ್ದರೂ ಇರಬಹುದು'' ಎಂದರು.


ಆದದ್ದು ಆಗಲಿ ಎಂದು ಹುಡುಗಿಯ ತಂದೆ ಊರೆಲ್ಲ ಹುಡುಕಾಡಿ ಹಿರಿಯ ಗಾಂಧೀವಾದಿ ಒಬ್ಬರನ್ನು ಪತ್ತೆ ಹಚ್ಚಿದರು. ಅವರಲ್ಲಿ ಸಮಸ್ಯೆ ಹೇಳಿಕೊಂಡರು. ತಾಳ್ಮೆಯಿಂದ ಎಲ್ಲ ವಿಚಾರಿಸಿಕೊಂಡ ಆ ಹಿರಿಯ 'ಏನೂ ಯೋಚನೆ ಬೇಡ. ಇಂಥದ್ದಕ್ಕೆಲ್ಲ ಪರಿಹಾರ ಇಲ್ಲದೇ ಇರುತ್ತದೆಯೇ?' ಎಂದು ಹುಡುಗಿಯ ತಂದೆಯ ಕಿವಿಯಲ್ಲಿ ಗುಟ್ಟಾಗಿ ಪರಿಹಾರ ಹೇಳಿದರು.

ಹುಡುಗಿಯ ತಂದೆಗೆ ಸಂತೋಷವೋ ಸಂತೋಷ. ಖುಷಿಯಿಂದ ಮನೆಗೆ ಹಿಂದಿರುಗಿದ ಆತ, ಹಿರಿಯರು ಹೇಳಿದಂತೆ ಮಾಡಿದರು. ಉಪವಾಸ ಕುಳಿತಿದ್ದ ಪೀಡೆ ತನ್ನಿಂದ ತಾನೇ ಸತ್ತೆನೋ ಕೆಟ್ಟೆನೋ ಎಂಬಂತೆ ಬೆಳಗಾಗುವ ಮುನ್ನ ಪರಾರಿ ಆಗಿತ್ತು.

ಹಿರಿಯರು ಹೇಳಿದ್ದು ಇಷ್ಟೇ 'ಇಲ್ಲೊಬ್ಬ ವಯಸ್ಸಾದ ವೇಶ್ಯೆ ಇದ್ದಾಳೆ. ಆಕೆ ನಿಮ್ಮ ಮನೆಗೆ ಬರಲಿ. ಉಪವಾಸ ಕುಳಿತವನ ಹತ್ತಿರ ಆಕೆಯೂ ಉಪವಾಸ ಕುಳಿತುಕೊಳ್ಳಲಿ. ಯಾರೇ ಕೇಳಿದರೂ ಈ ತರುಣನನ್ನು ಮದುವೆಯಾಗಲು ನಿಶ್ಚಯಿಸಿದ್ದೇನೆ. ಆತ ಮದುವೆ ಆಗದೇ ಇದ್ದರೆ ಉಪವಾಸ ಮಾಡಿ ಸಾಯುತ್ತೇನೆ ಎಂದು ಹೇಳಲಿ'

ಆ ತರುಣ ಅವತ್ತು ನಾಪತ್ತೆ ಆದವನು ಮತ್ತೆಂದೂ ಆ ಊರಲ್ಲಿ ಕಾಣಿಸಲಿಲ್ಲ.

ಪವಾಡ



ಒಬ್ಬ ಸೇವಕ. ಬಹಳ ವರ್ಷ ಯಜಮಾನನ ಸೇವೆ ಮಾಡಿದ. ಆ ಸೇವೆಗೊಂದು ಉದ್ದೇಶ ಇತ್ತು. ಯಜಮಾನ ಪವಾಡ ಮಾಡಬಲ್ಲ. ಅದರ ಗುಟ್ಟು ತಿಳಿಯಬೇಕು.

ಎಷ್ಟೋ ವರ್ಷದ ನಂತರ ಯಜಮಾನ ಹೇಳಿದ ''ನಾನೂ ನೋಡ್ತಾನೇ ಇದೀನಿ. ನಿನ್ನ ಮನಸಲ್ಲಿ ಏನೋ ಇದೆ. ಏನೋ ಉದ್ದೇಶದಿಂದ ನೀನು ನನ್ನ ಸೇವೆಗೆ ಬಂದು ಸೇರಿಕೊಂಡಿದೀಯ. ಪ್ರೀತಿಯಿಂದ ನೀನು ಯಾವ ಕೆಲಸಾನೂ ಮಾಡಿದ್ದು ಇಲ್ಲ. ಮನಸಲ್ಲಿ ಅದೇನು ಇದೆಯೋ ಹೇಳಿಬಿಡು....''

ಇಂಥ ಅವಕಾಶಕ್ಕಾಗಿ ಹಂಬಲಿಸುತ್ತಿದ್ದ ಸೇವಕ

''ಸ್ವಾಮೀ, ತಾವು ಪವಾಡ ಮಾಡಬಲ್ಲಿರಿ ಅಂತ ಕೇಳಿದೀನಿ. ಅದರ ಗುಟ್ಟು ತಿಳಿಸಿಕೊಟ್ಟರೆ ಸಾಕು....'' ಸೇವಕ ವಿನೀತನಾಗಿ ಬೇಡಿಕೊಂಡ. ''ಅಷ್ಟೇನೇನಯ್ಯಾ? ಬಂದ ದಿನಾನೇ ಬಾಯಿಬಿಟ್ಟು ಹೇಳಿದ್ದರೆ ಇಷ್ಟು ದಿನ ನೀನು ಕಷ್ಟಪಡೋ ಅಗತ್ಯಾನೇ ಇರಲಿಲ್ಲ. ಸುಮ್ಮನೇ ನನ್ನ ಹಿಂದೆ ಮುಂದೆ ಸುಳೀತಾ, ನನಗೂ ಮುಜುಗರ ಮಾಡಿದೆ'' ಎಂದ ಯಜಮಾನ ''ಯಾವುದೇ ಉದ್ದೇಶದಿಂದ ನನ್ನ ಸುತ್ತ ಸುಳಿಯೋರನ ಕಂಡರೆ ನನಗೆ ತುಂಬಾ ಮುಜುಗರ ಕಣಯ್ಯ. ಪವಾಡ ಮಾಡೋಕ್ಕೆ ತುಂಬಾ ಸರಳ ವಿಧಾನ ಇದೆ. ಅದನ್ನ ಕೇಳೋಕ್ಕೆ ಇಷ್ಟು ಒದ್ದಾಡಿದೆಯೋ?'' ಎನ್ನುತ್ತ ಪವಾಡ ಸಿದ್ಧಿಯ ಮಂತ್ರದ ಸಾಲುಗಳನ್ನು ಒಂದು ಹಾಳೆಯಲ್ಲಿ ಬರೆದು ಕೈಗಿಡುತ್ತಾ ಹೇಳಿದ.



''ಈ ಮಂತ್ರ ಐದು ಸಲ ಹೇಳಿದರೆ ಸಾಕು. ಎಂಥ ಪವಾಡ ಆದರೂ ನಡೆಯುತ್ತೆ. ತಗೋ....''

ಸೇವಕ ಖುಷಿಯಾದ. ಮಂತ್ರದ ಚೀಟಿ ಕೈಗೆತ್ತಿಕೊಂಡು ಕಾಲು ಕೀಳಬೇಕು. ಯಜಮಾನ ಅವನನ್ನು ತಡೆದು ಹೇಳಿದ.

''ಮಂತ್ರ ಹೇಳಬೇಕಾದರೆ ಕೆಲವು ನಿಯಮ ಅನುಸರಿಸಬೇಕು. ಮಂತ್ರ ಪಠಿಸೋಕ್ಕೆ ಮುಂಚೆ ಸ್ನಾನ ಮಾಡಿ ಶಾಂತಿವಾಗಬೇಕು. ಯಾರೂ ಇರದ ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಕುಳಿತು ಮಂತ್ರ ಐದೇ ಐದು ಸಲ ಹೇಳಿದರೆ ಸಾಕು....''

ಅಷ್ಟರಲ್ಲಿ ಸೇವಕನಿಗೆ ಆತುರ. ಆಗಲೇ ಹೊರಡಲು ತಯಾರಾಗಿ ನೆಗೆದು ಓಡಲು ತುದಿಗಾಲಲ್ಲಿ ನಿಂತಿದ್ದ. ಯಜಮಾನ ಅವನ ಕೈಹಿಡಿದು ''ಜ್ಞಾಪಕ ಇರಲಿ. ಮಂತ್ರ ಹೇಳೋವಾಗ ಯಾವುದೇ ಕಾರಣಕ್ಕೆ ಕೋತಿಗಳನ್ನು ನೆನಪು ಮಾಡಿಕೋಬಾರದು.. ಇಷ್ಟೇ..''

''ಅಷ್ಟೇನಾ ಬಿಡಿ ಯಜಮಾನರೇ. ನನ್ನ ಜನ್ಮದಲ್ಲೇ ನಾನ್ಯಾವತ್ತೂ ಕಪಿಗಳನ್ನು ನೆನಪು ಮಾಡಿಕೊಂಡಿಲ್ಲ. ಇನ್ನು ಮಂತ್ರ ಹೇಳೋವಾಗ ಎಲ್ಲ ಬಿಟ್ಟು ಆ ಕಪಿಗಳನ್ನು ನೆನಪಿಸ್ಕೋತೀನಾ? ನೀವೂ ಒಳ್ಳೆ ಚೆನ್ನಾಗಿ ಹೇಳಿದಿರಿ....''

ಅಷ್ಟು ಹೇಳಿದವನೇ, ಪವಾಡ ಮಂತ್ರ ಸಿಕ್ಕಿ ಖುಷಿಯಲ್ಲಿ ಮನೆಯತ್ತ ಧಾವಿಸಿದ. ವಿಚಿತ್ರ. ದಾರೀಲಿ ಹೋಗತಾ ಇದ್ದರೆ ತಲೆ ತುಂಬಾ ಬರೀ ಕೋತಿಗಳದೇ ಚಿತ್ರ. ಮನೆಗೆ ಹೋಗಿ ನಿಂತರೂ ಅದೇ, ಕುಂತರೂ ಅದೇ

ಮಲಗಿದರೆ ಕನಸಲ್ಲೂ ಕೋತಿಗಳೇ. ಇನ್ನು ಅವನು ಬಾಗಿಲು ಹಾಕಿಕೊಂಡು ಮಂತ್ರ ಹೇಳಬೇಕು ಎಂದುಕೊಂಡ ಗಳಿಗೇಲಂತೂ ಇಡೀ ಕಪಿಸೈನ್ಯ ಅವನ ಮನಸ್ಸಿನ ಮೇಲೆ ಲಗ್ಗೆ ಹಾಕಿ ಮಿಡೀತಾ ಇತ್ತು.

ದಿನಕಳೆದ ಹಾಗೆ ಈ ಕೋತಿಗಳ ಚಿಂತೆಯಿಂದ ಬಿಡಿಸಿಕೊಳ್ಳೋದೇ ದೊಡ್ಡ ಕಷ್ಟ ಆಗಿ ಹೋಯಿತು. ಕೊನೆಗೆ ಹುಚ್ಚು ಹಿಡಿಯೋದೊಂದು ಬಾಕಿ. ಇನ್ನು ತಾಳೋಕ್ಕೆ ಸಾಧ್ಯವೇ ಇಲ್ಲ ಅನ್ನಿಸಿದಾಗ, ಯಜಮಾನನ ಹತ್ತಿರ ಓಡಿ ಹೋದ.

''ಯಜಮಾನರೇ, ತಗೊಳ್ಳಿ ನಿಮ್ಮ ಮಂತ್ರ ನಿವೇ ಇಟ್ಕೊಳ್ಳಿ, ಮೊದಲು ಈ ಕೋತಿಗಳ ಹಿಂಡಿನಿಂದ ನಾನು ಪಾರಾಗೋ ವಿಧಾನ ಹೇಳಿಕೊಡಿ....''

ಅವರು ಹೇಳಿಕೊಟ್ಟಿದ್ದು ಒಂದೇ ಮಂತ್ರ 'ಬುದ್ಧಂ ಶರಣಂ ಗಚ್ಛಾಮಿ'.

ಕಮ್ಯುನಿಸಂ

ಕಮ್ಯುನಿಸ್ಟನೊಬ್ಬ ರೈತನನ್ನು ಕೇಳುತ್ತಿದ್ದ.

''ನಿನಗೆ ಕಮ್ಯುನಿಸಂನಲ್ಲಿ ನಂಬಿಕೆ ಇದೆಯೋ ಇಲ್ಲವೋ?''

''ಹೌದು ಕಮ್ಯುನಿಸಂನಲ್ಲಿ ನನಗೆ ಪೂರ್ಣ ನಂಬಿಕೆ ಇದೆ''

''ನಿನ್ನ ಹತ್ತಿರ ಎರಡು ಕಾರು ಇವೆ ಅಂತ ಇಟ್ಟುಕೋ. ಅದರಲ್ಲಿ ಒಂದು ಕಾರಿಲ್ಲದೇ ಇರೋನಿಗೆ ಕೊಡ್ತೀಯ ಅಲ್ಲವಾ?''

''ಖಂಡಿತ. ಖಂಡಿತ..''

''ನಿನ್ನ ಹತ್ತಿರ ಎರಡು ಮನೆ ಇದೆ ಅಂತಿಟ್ಕೋ, ಆಗ ನೀನು ಮನೆ ಇಲ್ಲದೊನಿಗೆ ನಿನ್ನದೊಂದು ಮನೆ ಕೊಡ್ತೀಯ ಅಲ್ಲವಾ?''

''ಕೊಡದೇ ಏನು? ಖಂಡಿತ ಕೊಡ್ತೀನಿ''

''ನಿನ್ನ ಹತ್ತಿರ ಎರಡು ಹಸು ಇದೆ ಅಂತಿಟ್ಕೋ, ಹಸೂನೇ ಇಲ್ಲದೇ ಇರೋನಿಗೆ ನಿನ್ನದೊಂದು ಹಸು ಕೊಡ್ತೀಯ ಅಲ್ಲವಾ?''



ಆರಾಮವಾಗಿಯೇ ಇದ್ದ ಡಾಕ್ಟ್ರೆ....
ನಾಟಕ ನೋಡಿ ಹೊರಗೆ ಬಂದಮೇಲೆ....

''ನಾನ್ಯಾಕೆ ಕೊಡಬೇಕು! ಇದೊಳ್ಳೆ ಚೆನ್ನಾಗಿದೆ....'' ರೈತ ರೇಗಿದ

''ಅಲ್ಲಯ್ಯಾ ಕಮ್ಯುನಿಸಂನಲ್ಲಿ ನಂಬಿಕೆ ಇದೆ ಅಂದೆ. ಎರಡು ಕಾರಿದ್ದರೆ ಒಂದು ಕೊಡ್ತೀನಿ, ಎರಡುಮನೆ ಇದ್ದರೆ ಬೇರೇಯವರಿಗೆ ಕೊಡ್ತೀನಿ ಅಂದೆ ಈಗ ಹಸು ವಿಚಾರಕ್ಕೆ ಬಂದಾಗ ಹೀಗ್ಯಾಕೆ ಆಡ್ತೀಯ?''

''ನೋಡಿ ಸ್ವಾಮಿ ನನ್ನ ಹತ್ತಿರ ಎರಡು ಕಾರೂ ಇಲ್ಲ. ಎರಡು ಮನೇನೂ ಇಲ್ಲ. ಇಲ್ಲದೇ ಇರೋದು ಕೊಡ್ತೀನಿ ಅಂತ ಹೇಳಿದರೆ ನಮ್ಮಪ್ಪನ ಗಂಟೇನೂ ಹೋಗಲ್ಲ. ಅಲ್ಲದೇ ನೀವು ಕಮ್ಯುನಿಸ್ಟ್ ಲೀಡರ್ರು. ಹಾಗೆ ಹೇಳಿದರೆ ಖುಷೀನೂ ಪಟ್ಟುಕೋತೀರ. ಹಸು ವಿಚಾರ ಹಾಗಲ್ಲ ನೋಡಿ. ನನ್ನ ಹತ್ತಿರ ಎರಡು ಹಸು ಇದೆ. ಇವತ್ತು ನಾನು ಕೊಡ್ತೀನಿ ಅನ್ನೋದು. ನಾಳೆ ದಿನ ನೀವು ಬಂದು ಅವತ್ತು ಎರಡು ಹಸೂಲಿ ಒಂದು ಕೊಡ್ತೀನಿ ಅಂದಿದ್ದೆಯಲ್ಲ ಕೊಡು ಅಂದರೆ ನಾನೆಲ್ಲಿ ಹೋಗಲಿ!'' ಮುಗ್ಧವಾಗಿ ಪ್ರಶ್ನಿಸಿದ ರೈತ.

ಸ್ವರ್ಗ-ನರಕ

ಮುಲ್ಲಾ ನಸರುದ್ದೀನ್ ಸತ್ತಮೇಲೆ ಸ್ವರ್ಗಕ್ಕೆ ಹೋದ. ಕೆಲವು ದಿನ ಅಲ್ಲಿದ್ದು ಬೇಸರ ಆಯಿತು. ದೇವರ ಬಳಿ ಹೋಗಿ 'ನಾನು ನರಕ ಕಂಡಿಲ್ಲ. ಯಾರಿಗೆ ಗೊತ್ತು? ಅಲ್ಲಿ ಇಲ್ಲಿಗಿಂತ ಚೆನ್ನಾಗೇ ಇರಬಹುದು! ನನಗೆ ಸಿಕ್ಕಿರೋ ಸುದ್ದಿ ಪ್ರಕಾರ ಅಲ್ಲೆಲ್ಲ ಏರ್‌ಕಂಡೀಷನ್ ಮಾಡಿಕೊಂಡಿದ್ದಾರಂತೆ. ದಿನಾ ಅವರೆಲ್ಲ ಕುಡಿದು, ಕುಣಿದು ಕುಪ್ಪಳಿಸ್ತಾರೆ ಅಂತ ಕೇಳಿದೀನಿ. ಸುಂದರವಾದವರೆಲ್ಲ ಅಲ್ಲೇ ಇದಾರೆ ಅಂತಲೂ ಹೇಳ್ತಾರೆ. ಇಲ್ಲೋ ಬರೀ ಪೆಚ್ಚುಮುಖದ ಸನ್ಯಾಸಿಗಳು. ಕೆಲಸವಿಲ್ಲದೆ ಮರದ ಕೆಳಗೆ ಧೂಳಲ್ಲಿ ಸದಾ ಕೂತಿರ್ತಾರೆ. ಒಂದು ಹಾಡಿಲ್ಲ. ಒಂದು ಪೇರ್ ಇಲ್ಲ. ಟಿವಿ ಇಲ್ಲ. ಅಲ್ಲಿ ನರಕದಲ್ಲಿ ರಾಜಕಾರಣಿಗಳು, ವಿಜ್ಞಾನಿಗಳು ಸೇರಿಕೊಂಡು ಎಲ್ಲಾ ಅದ್ಭುತ ಮಾಡಿ ಹಾಕಿದಾರಂತೆ....''

''ನಿನಗೆ ನಕರ ನೋಡಬೇಕು ಅಂತ ಅಷ್ಟು ಆಸೆ ಆದರೆ ಹೋಗಿ ಬಾ. ಅದಕ್ಕೇನಂತೆ! ಎರಡು ದಿವಸ ಅಲ್ಲಿ ಇರೋದಕ್ಕೆ ನಿನಗೆ ಅನುಮತಿಕೊಟ್ಟಿದ್ದೀನಿ....'' ದೇವರು ಹೇಳಿದ.

ಅದರಂತೆ ಮುಲ್ಲಾ ನರಕಕ್ಕೆ ಬಂದ. ಅಲ್ಲಿ ಸಂಭ್ರಮದ ಸ್ವಾಗತ ಸಿಕ್ಕಿತು. ನಿಜಕ್ಕೂ ನರಕ ಸುಂದರವಾಗಿತ್ತು. ಹೀಗಿರಬಹುದು ಅಂತ ಆತ ಕನಸಲ್ಲೂ ಕಲ್ಪನೆ ಮಾಡಿಕೊಂಡಿರಲಿಲ್ಲ.

''ಎಂಥಾ ವಿಚಿತ್ರ! ಇಂಥ ವಾತಾವರಣ ಅಂದರೆ ದೇವರೂ ಓಡಿ ಬಂದಾನು. ನರಕ ಹೀಗೆಲ್ಲ ಬದಲಾಗಿದೆ ಅಂತಾನೇ ಯಾರಿಗೂ ಗೊತ್ತಾಗಿಲ್ಲ. ಹಳೇ ಪುಸ್ತಕದ ಬದನೇಕಾಯಿ ಓದಿ, ನರಕ ಅಂದರೆ ಏನೇನೋ ಕೆಟ್ಟ ಕಲ್ಪನೆ ಮಾಡಿಕೊಂಡಿರ್ತಾರೆ ಜನ. ಸ್ವರ್ಗ, ನರಕ ಅಂದುಕೊಂಡು ಬಿಟ್ಟಿರ್ತಾರೆ....'' ಅನ್ನಿಸಿತು ಮುಲ್ಲಾ ನಸರುದ್ದೀನ್‌ಗೆ.

ಎರಡು ದಿನ ಮುಲ್ಲಾ ಖುಷಿಯಾಗಿ ಕಳೆದ ಜೂಜಾಡಿದ, ಕುಡಿದ, ಕುಣಿದು ಕುಪ್ಪಳಿಸಿದ. ಕ್ಲಿಯೋ ಪಾತ್ರಳಿಂದ ಹಿಡಿದು ಮರ್ಲಿನ್ ಮನ್ರೋವರೆಗೆ ಎಲ್ಲ ಸುಂದರಿಯರೂ ನರಕದಲ್ಲೇ ಇದ್ದರು ಅಂದ ಮೇಲೆ ಕೇಳಬೇಕೇ? ಹೀಗಾಗಿ ಎರಡು ದಿನ ಅನ್ನೋದು ಎರಡು ಸೆಕೆಂಡಿನ ಹಾಗೆ ಕಳೆದೇ ಹೋಯಿತು.

ಸ್ವರ್ಗಕ್ಕೆ ಹಿಂದಿರುಗಿದ ಮೇಲೆ ಮುಲ್ಲಾ ದೇವರ ಹತ್ತಿರ ಹೋಗಿ ತಕರಾರು ಮಾಡಿದ.

''ನಾನು ಸ್ವರ್ಗದಲ್ಲಿ ಇರೊದಿಲ್ಲ. ನರಕಕ್ಕೆ ಕಳಿಸಿಕೊಡಿ....''

''ನೋಡು, ಯೋಚನೆ ಮಾಡು. ಒಂದು ಸಲ ಅಲ್ಲಿಗೆ ಹೋದ ಮೇಲೆ ವಾಪಸು ಇಲ್ಲಿ ಬರಬೇಕು ಅಂದರೂ ಬರೋಕ್ಕಾಗಲ್ಲ....''

ಮುಲ್ಲಾ ನಸರುದ್ದೀನ್ ನಕ್ಕು ಬಿಟ್ಟ'' ಯಾರು ಸ್ವಾಮಿ, ಅಂಥ ಸುಖದ ಸುಪ್ಪತ್ತಿಗೆ ಬಿಟ್ಟು ಈ ಸ್ವರ್ಗದ ಬರಡು ಜೀವನಕ್ಕೆ ವಾಪಸ್ ಬರ್ತಾರೆ? ನಿವೇನೂ ಯೋಚನೆ ಮಾಡಬೇಡಿ. ನನ್ನನ್ನು ಸೀದಾ ನರಕಕ್ಕೆ ಕಳಿಸಿಬಿಡಿ....''

ದೇವರು ಏನೇನು ಹೇಳಿದರೂ ಮುಲ್ಲಾ ಕೇಳಲಿಲ್ಲ. ಆತನದು ಒಂದೇ ಹಟ. ನರಕಕ್ಕೆ ತನ್ನ ವರ್ಗಾಯಿಸಬೇಕು. ಹೇಳುವಷ್ಟು ಹೇಳಿದ ದೇವರು ''ಹಾಳಾಗಿ ಹೋಗು'' ಅಂತ ಮುಲ್ಲಾ ನಸರುದ್ದೀನ್‌ನ ನರಕಕ್ಕೆ ಕಳಿಸಿಕೊಟ್ಟ.

ನರಕಕ್ಕೆ ಕಾಲಿರಿಸಿದ. ಹತ್ತಾರು ಪಿಶಾಚಿಗಳು ನೆಗೆದುಬಂದುಅವನ್ನ ಮುತ್ತಿಕೊಂಡವು. ಮನಸ್ಸು ಬಂದಂತೆ ಬಡಿಯಲಾರಂಭಿಸಿದವು. ''ಅರೇ! ಏನಿದು? ಏನು ಮಾಡ್ತಾ ಇದೀರ?'' ಕಿರುಚಿಕೊಂಡು ಸುತ್ತ ನೋಡ್ತಾನೆ. ಅವತ್ತು ಕಂಡಿದ್ದ ಸ್ವರ್ಗ ಸಮಾನವಾದ ನರಕ ಇಲ್ಲವೇ ಇಲ್ಲ. ಎಲ್ಲಿ

ನೋಡಿದರೂ ಉರಿಯುವ ಬೆಂಕಿ. ಕುದಿಯುವ ಎಣ್ಣೆ. ತಾನು ಪುಸ್ತಕಗಳಲ್ಲಿ ಓದಿದ್ದ ನರಕ ಕಣ್ಣ ಮುಂದೇ ಇದೆ.

''ನಾನೇನಾದರೂ ದಾರಿ ತಪ್ಪಿ ಬಂದೆನಾ?'' ಕೇಳಿದ.

''ಇಲ್ಲ... ಇಲ್ಲ... ಸರಿಯಾದ ಜಾಗಕ್ಕೆ ಬಂದಿದೀಯ....'' ಕಿರುಚಿದವು ಪಿಶಾಚಿಗಳು.

''ಇದೇನು ಹೀಗೆ ಹೇಳ್ತಾ ಇದೀರ? ಎರಡು ದಿನ ಇಲ್ಲೇ ಬಂದು ಇದ್ದೆನಲ್ಲ. ಆಗ ನರಕ ಎಷ್ಟು ಮಜವಾಗಿತ್ತು..!''

''ಹೌದಪ್ಪ ಹೌದು.. ಒಂದು ಎರಡು ದಿನಕ್ಕೆ ಬಂದು ಹೋಗೋರಿಗೆ ನರಕದ ಶೋ ಪೀಸ್ ಮಾತ್ರ ನಾವು ತೋರಿಸ್ತೀವಿ. ಇದು ನಿಜವಾದ ನರಕ.. ಬಾ ಈಗ ಸುಮ್ಮನೆ....'' ಎಂದು ಪಿಶಾಚಿಗಳು ಕುದಿಯುವ ಎಣ್ಣೆಯ ಕೊಪ್ಪರಿಗೆಯಲ್ಲಿ ಅದ್ದಲು ಮುಲ್ಲಾನ ಎತ್ತಿಕೊಂಡೇ ಹೋಗಿಬಿಟ್ಟವು.

ಹಿರಿತನ

ವಯಸ್ಸಿನ ಮೋಹ ಹಲವರಿಗೆ. ಹೆಣ್ಣುಮಕ್ಕಳು ವಯಸ್ಸು ಕಡಿಮೆ ಹೇಳುವ ಹಾಗೆ ಯೋಗಿ, ಸನ್ಯಾಸಿಗಳು ವಯಸ್ಸು ಹೆಚ್ಚಿಸಿ ಹೇಳುತ್ತಾರಂತೆ. ಇದು ರೂಢಿ. ನಮ್ಮಲ್ಲಿ ಕೆಲವು ಸನ್ಯಾಸಿಗಳು ಇನ್ನೂರು ವರ್ಷವಾಗಿದೆ ಮುನ್ನೂರು ವರ್ಷವಾಗಿದೆ ಎಂದೆಲ್ಲ ಹೇಳಿಕೊಳ್ಳುತ್ತಾರೆ. ಇನ್ನೂರಾಗಲೀ, ನಾಲ್ಕು ನೂರಾಗಲೀ ಒಂದಲ್ಲ ಒಂದು ದಿನ ಸಾಯಲೆ ಬೇಕಲ್ಲವೇ! ಆದರೂ ಈ ಜನಕ್ಕೆ ಹುಚ್ಚು. ವಯಸ್ಸು ಹೆಚ್ಚು ಹೇಳಿಕೊಂಡಷ್ಟೂ ಹೆಚ್ಚು ಬೆಲೆ ಎಂಬ ಭ್ರಮೆ.

ಅಂಥ ಒಬ್ಬ ಯೋಗಿ ತನಗೆ ಏಳು ನೂರು ವರ್ಷವಾಗಿದೆ ಎನ್ನುತ್ತಿದ್ದ. ಜನ ಭಯ, ಭಕ್ತಿಯಿಂದ ತಲೆದೂಗುತ್ತಾ ಇದ್ದರು. ಒಮ್ಮೆ ಆ ಯೋಗಿಯ ಶಿಷ್ಯರ ಹಿಂಡಿನಲ್ಲಿ ಪಾಶ್ಚಿಮಾತ್ಯನೊಬ್ಬ ಸೇರಿಕೊಂಡ. ಆತ ಪ್ರವಾಸಿ, ಕುತೂಹಲಕ್ಕೆ ಬಂದವನು. ಯೋಗಿ ಹೇಳುವುದನ್ನು ಕೇಳಿ ಆಶ್ಚರ್ಯ, ನಂಬಿಕೆ ಆಗಲಿಲ್ಲ. ಹೆಚ್ಚೆಂದರೆ ಈ ಮನುಷ್ಯ ಎಪ್ಪತ್ತು ವರ್ಷ ವಯಸ್ಸಾದ ಹಾಗೆ ಕಾಣುತ್ತಾನೆ. ಇದೇನು ರಹಸ್ಯ ತಿಳಿಯಬೇಕು ಅನ್ನಿಸಿತು.

ಆ ಯೋಗಿಗೊಬ್ಬ ಪರಮಾಪ್ತ ಶಿಷ್ಯ. ಆತನೇ ಅವರ ಬೇಕು ಬೇಡ ಎಲ್ಲ ನೋಡಿಕೊಳ್ಳುತ್ತಾ ಇದ್ದ. ಶಿಷ್ಯನನ್ನು ಕಂಡು ಮಾತಾಡಿಸಿ, ಸ್ವಲ್ಪ ಲಂಚ ಕೊಟ್ಟ ಕೂಡಲೇ ಬಹಳ ಖುಷಿಯಾದ. 'ಏನು ಬೇಕು ಹೇಳಿ?' ಎಂದು ಕೇಳಿದ.

ಪ್ರವಾಸಿ ಹೇಳಿದ, 'ನಿಮ್ಮ ಗುರುಗಳಿಗೆ ನಿಜವಾಗಿಯೂ ಏಳು ನೂರು ವರ್ಷಗಳೇ! ನೀನು ಯಾವಾಗಲೂ ಅವರ ಹತ್ತಿರಾನೇ ಇರ್ತೀಯ. ನೀನು ನಿಜ ಹೇಳಬಹುದು

''ನಾನು ಒಂದು ವಿಷಯ ಹೇಳಬಲ್ಲೆ. ಅದಕ್ಕಿಂತ ನನಗೆ ಜಾಸ್ತಿ ತಿಳೀದು. ಅದರ ಮೇಲೇ ಲೆಕ್ಕ ಹಾಕಿಕೋ. ನಾನು ಗುರುಗಳ ಸೇವೇನ ಬರಿ ಮುನ್ನೂರು ವರ್ಷಗಳಿಂದ ಮಾಡತಾ ಇದ್ದೀನಿ''

ಆ ಶಿಷ್ಯನ ಮುಖ ನೋಡಿದರೆ ಬರೀ ಮೂವತ್ತು ವರ್ಷದವನ ಹಾಗೆ ಕಾಣುತ್ತಿದ್ದ

ತನ್ನಂತೆ ಕಾಣುವ ಫೋಟೋ

ಆದಿವಾಸಿಗಳ ದೊರೆ ಒಬ್ಬ ಒಮ್ಮೆ ಪಟ್ಟಣಕ್ಕೆ ಬರಲೇಬೇಕಾಯಿತು. ಅಲ್ಲಿ ಬಂದ ಮೇಲೆ ಅವನಿಗೆ ಫೋಟೋ ತೆಗೆಸಿಕೊಳ್ಳುವ ಆಸೆಯಾಯಿತು. ಒಂದು ಸ್ಟುಡಿಯೋ ಹುಡುಕಿ ಹೋದ. ಸ್ಟುಡಿಯೋದ ಮಾಲೀಕ ಎಂಥ ಫೋಟೋ ಬೇಕು? ಎಂದು ಕೇಳಿದ. ಆದಿವಾಸಿ ದೊರೆಗೆ ಆಶ್ಚರ್ಯ. ಫೋಟೋಗಳಲ್ಲಿ ಕೂಡ ಎಂಥೆಂಥ ಫೋಟೋಗಳಿವೆಯೆ! ಎಂದು ಬೆರಗು.

ಮಾಲೀಕ ಇವನ ಬಗ್ಗೆ ಅನುಕಂಪದಿಂದ ವಿವರಿಸಿದ ''ನಿಮಗೆ ಓದೋದಕ್ಕೆ ಬರೋದಿಲ್ಲ, ಬಂದಿದ್ದರೆ ಅಲ್ಲೇ ಬೋರ್ಡು ಹಾಕಿರೋದು ಓದಿ ತಿಳಕೋತಾ ಇದ್ದಿರಿ. ಹೋಗಲಿ ಬಿಡಿ. ನಿಮಗೆ ನೂರು ರೂಪಾಯಿ ಫೋಟೋ ಬೇಕೋ? ಎಪ್ಪತ್ತೈದು ರೂಪಾಯಿಯದು ಬೇಕೋ ಅಥವಾ ಐವತ್ತು ರೂಪಾಯಿ ಯದೋ?'' ಆದಿವಾಸಿ ದೊರಗೆ ಇನ್ನು ಅಶ್ಚರ್ಯ.

ಅದೇನು ಅಂಥ ವ್ಯತ್ಯಾಸ?'' ಕೇಳಿದ.

''ವ್ಯತ್ಯಾಸ ಇದೆ. ಇಲ್ಲದೇ ಜನ ಸುಮ್ಮನೆ ದುಡ್ಡು ಕೊಡ್ತಾರಾ? ಈಗ ನೂರು ರೂಪಾಯಿ ಫೋಟೋ ನೋಡಿ. ಬೆರೆಯವರ ಕಣ್ಣಿಗೆ ಹ್ಯಾಗೆ ಕಾಣಬೇಕು ಅಂತ ಬಯಸ್ತಿರೋ ಅಂಥದ್ದು ತೆಗೆದುಕೊಡ್ತೀವಿ. ಇಂಥ ಫೋಟೋಗೆ ಬಹಳ ಡಿಮ್ಯಾಂಡು....''

''ಎರಡನೇದು?''

''ನಿಮಗೆ ನೀವು ಹ್ಯಾಗೆ ಕಾಣಬೇಕೆಂದು ಬಯಸ್ತೀರೊ ಹಾಗೆ. ಇದಕ್ಕೆ ಡಿಮ್ಯಾಂಡು ಕಮ್ಮಿ. ಹುಡುಗರು, ಹುಡುಗಿಯರು, ಕವಿಗಳು ಮಾತ್ರ ತೆಗೆಸ್ಕೋತಾರೆ....''

''ಕೊನೇದು?''

''ಅದಾ ಬಿಡಿ, ನೀವು ಹ್ಯಾಗಿದೀರೋ ಹಾಗೆ ತಕ್ಕೊಡತೀವಿ. ಇದುವರೆಗೂ ಯಾರೂ ಅಂಥ ಫೋಟೋ ತೆಗೆಸಿಕೊಂಡೇ ಇಲ್ಲ ಬಿಡಿ. ಇರಲಿ ನಿಮಗ್ಯಾವುದು ಬೇಕು ಹೇಳಿ'' ಅಂದ ಸ್ಟುಡಿಯೋ ಮಾಲೀಕ.

ಯಾವತ್ತೂ ನಾವು ನಾವೇ ಅಂತ ಒಪ್ಪಿಕೊಳ್ಳೋದು ಕಷ್ಟ ಅಲ್ಲವೆ?

ದಿವ್ಯ ಗಾನ

ಇಬ್ಬರು ಬೌದ್ಧ ಭಿಕ್ಷುಗಳಿದ್ದರು. ಅವರಲ್ಲಿ ಒಬ್ಬ ಮಹಾ ದುರಾಸೆಯ ಮನುಷ್ಯ. ಅವನ ದುರಾಸೆ ಕಂಡೇ, ಹೀಗೇ ಇದ್ದರೆ ನೀನು ಹಾಳಾಗತೀಯ. ಸನ್ಯಾಸಿ ಆಗಿಬಿಡು ಅಂತ ಎಲ್ಲರೂ ಹೇಳಿದ್ದರು. ಆದರೂ ಅವನು ಕೊಸರಾಡುತ್ತಲೆ ಇದ್ದ. ಕೊನೆಗೊಬ್ಬ ಗುರುವನ್ನು ಕಂಡ. ಆದರೂ ಸನ್ಯಾಸಿ ಆಗಲು ಇಷ್ಟವಿಲ್ಲ. ದಿನವೂ ಏನಾದರೊಂದು ನೆಪ. ಗುರುವಿಗೂ ಸಿಟ್ಟು ಬಂದು, ಕೊನೆಗಾಲಕ್ಕೆ ಹೇಳಿದ.

''ನಾನು ನಾಳೆ ಸಾಯ್ತಾ ಇದೀನಿ. ನೀನು ಸನ್ಯಾಸಿ ಆಗೋದಾದರೆ ಇವತ್ತು ಆಗಬೇಕು. ಇಲ್ಲದಿದ್ದರೆ ನೀನು ಯಾವತ್ತೂ ಸನ್ಯಾಸಿ ಆಗೋದು ಸಾಧ್ಯವೇ ಇಲ್ಲ. ಇದೇ ನಿನಗೆ ಕಡೆಯ ಅವಕಾಶ'' ಹೀಗೆ ಬೆದರಿಕೆಯಿಂದಾಗಿ ಮನಸ್ಸಿಲ್ಲದ ಮನಸಿಂದ ಅವನು ಸನ್ಯಾಸ ಸ್ವೀಕರಿಸಿದ.

ಆದರೆ ದುರಾಸೆ ಬೇರೆಯ ಸ್ವರೂಪ ತಾಳಿತು. ಜಗತ್ತಿನ ಎಲ್ಲ ಧರ್ಮಗ್ರಂಥಗಳನ್ನು ಸಂಗ್ರಹಿಸುವುದು ಅವನ ಗೀಳಾಯಿತು. ಅವನ ಜೊತೆ ಸನ್ಯಾಸಿಗೆ ಇಂಥ ಗೋಜಿಲ್ಲ. ಆತನು ತನ್ನ ಪಾಡಿಗೆ ತಾನು ಇರತಾ ಇದ್ದ. ಒಂದು ದಿನ ಇಬ್ಬರೂ ಪೇಟೇಲಿ ನಡಕೊಂಡು ಬರ್ತಾ ಇದ್ದರು. ಜನ ಅಂದರೆ ಜನ. ನೂರಾರು ಥರದ ವಸ್ತುಗಳ ವ್ಯಾಪಾರ. ಪೈಪೋಟಿಯಿಂದ ಒಬ್ಬರಿಗಿಂತ ಇನ್ನೊಬ್ಬರು ಜೋರಾಗಿ ಕಿರುಚ್ತಾ ಗಿರಾಕಿಗಳನ್ನು ಕರೀತಾ ಇದ್ದರು. ಅಲ್ಲದೇ ಭಾರೀ ನೂಕು ನುಗ್ಗಲು. ಅಲ್ಲಿ ಯಾರಾದರೂ ಏನಾದರೂ ಹೇಳಿದರೆ ಇನ್ನೊಬ್ಬರಿಗೆ ಕೇಳಿಸ್ತಾ ಇರಲಿಲ್ಲ. ಅಂಥ ಸಂತೆಯ ಗದ್ದಲ. ಅದರ ನಡುವೆ ಬರ್ತಾ, ಯಾರೊ ಪುಣ್ಯಾತ್ಮ ಒಂದು ನಾಣ್ಯ ಬೀಳಿಸ್ಕೊಂಡುಬಿಟ್ಟ. ಅದು ದುರಾಸೆಯ ಸನ್ಯಾಸಿಗೆ ಸ್ಪಷ್ಟವಾಗಿ ಕೇಳಿಸಿತು. ಆತನ ನಾಣ್ಯ ಬಿದ್ದ ಜಾಗಕ್ಕೆ ಇನ್ನೊಬ್ಬನ್ನ ಕರೆದೊಯ್ದು ''ನಾನೇನು ಹೇಳಿದೆ! ಒಂದು ನಾಣ್ಯ ಬಿತ್ತು ಅಂತ ಹೇಳಿದೆ ಅಲ್ಲವಾ? ನಿನಗೆ ನಂಬಿಕೆ ಆಗಲಿಲ್ಲ. ನೋಡಿಲ್ಲಿ....'' ಅಂತ ಬಾಗಿ ಅದನ್ನ ಸಂತೋಷದಿಂದ ಎತ್ತಿಕೊಂಡು ಖುಷಿಯಿಂದ ಬೀಗಿದ.

ಇನ್ನೊಬ್ಬನಿಗೆ ಬಹಳ ಬೇಸರ ಆಯಿತು. ಗೆಳೆಯ ಎಷ್ಟೊಂದು ಸೂಕ್ಷ್ಮ. ಅಂಥ ಸಂತೆಯ ಗದ್ದಲದಲ್ಲೂ ಒಂದು ನಾಣ್ಯ ಬಿದ್ದ ಸದ್ದು ಕೂಡ ಕೇಳಿಸಿಕೊಳ್ಳಬಲ್ಲ. ತನಗೆ ಸೂಕ್ಷ್ಮತೆ ಹೊರಟು ಹೋಗಿದೆ. ಇನ್ನು ಏನು ಪ್ರಯೋಜನ? ಎಂಬ ಬೇಸರ.

ಇದು ಮನಸ್ಸು ಕಾಡಲು ಶುರುವಾಯಿತು. ತಡೆಯಲಾಗದೇ ಗುರುಗಳ ಬಳಿ ಹೋಗಿ ವಿವರಿಸಿದ. ಅವರು ನಕ್ಕು ಹೇಳಿದರು. ''ನಿನ್ನ ಸೂಕ್ಷ್ಮತೆ ನಾಶ ಆಗಿಲ್ಲ. ಅವನು ಹಣದ ವಿಷಯದಲ್ಲಿ ಬಹಳ ಸೂಕ್ಷ್ಮ. ಸನ್ಯಾಸಿ ಆಗಿದ್ದರೂ, ಸಂತೆ ನಡುವೆ ಸಣ್ಣದೊಂದು ನಾಣ್ಯ ಬಿದ್ದರೂ, ಯಾವುದೋ ದಿವ್ಯಗಾನದ ಹಾಗೆ ಅವನ ಕಿವಿಗೆ ಕೇಳಿಸಿ ಬಿಡುತ್ತೆ. ನೀನು ಚಿಂತೆ ಮಾಡಬೇಡ ಬಿಡು. ನಿಜವಾಗಲೂ ಚಿಂತೆ ಮಾಡಬೇಕಾದ್ದು ಅವನು....''

■

ಮುದ್ರಣ: ರಾಜ್‌ಹನ್ಸ್ ಎಂಟರ್‌ಪ್ರೈಸಸ್, ಬೆಂಗಳೂರು - 44, ✆ 3357070

BISILA BADUKU Kannada Monthly SEPTEMBER 1999 RNI No. 67406 / 97 Regd. BGW / 394

